ಭಾನುವಾರ, ಏಪ್ರಿಲ್ 11, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಪದಕ ಸಂಭ್ರಮ**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಬಿ.ಎ ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದ 70 ವರ್ಷದ ರಾಮಯ್ಯ ಅನಸೂಯಾ. ಬೆಂಗಳೂರಿನಲ್ಲಿ ಶನಿವಾರ ನಡೆದ ಘಟಿಕೋತ್ಸವದಲ್ಲಿ ಅವರಿಗೆ ಪದಕ ಪ್ರದಾನ ಮಾಡಲಾಯಿತು

Prestige GROUP
Add Prestige to your life

ನಮ್ಮ ಹಬ್ಬ ಕೊಡುಗೆ

ಭರ್ಜರಿಯಾಗಿ ಮಾರಾಟವಾಗುತ್ತಿರುವ ಪ್ರಾಪರ್ಟಿಗಳ ಮೇಲೆ
ಪ್ರಸ್ತುತಪಡಿಸಲಾಗುತ್ತಿದೆ ವರ್ಷಾಂತ್ಯದ ಬ್ಲಾಕ್-ಬಸ್ಟರ್ ಕೊಡುಗೆಗಳು

13ನೇ ಏಪ್ರಿಲ್ 2021, ಯುಗಾದಿವರೆಗೆ ಮಾತ್ರ

PRESTIGE FINSBURY PARK
A LIVING EXPERIENCE LIKE NO OTHER
BAGALUR
BENGALURU NORTH
1200+ Units Sold
ZERO PRE-EMI TILL SEPT 2023
Under construction
1, 2 & 3 BR Apartments
85489 85489

PRESTIGE PRIMROSE HILLS
BANASHANKARI 6TH STAGE
OFF KANAKAPURA ROAD
A PLACE CALLED HOME
ZERO PRE-EMI FOR 36 MONTHS
Under construction
1 & 2 BR Apartments
84960 84960

PRESTIGE JINDAL CITY
MARK OF GREAT LIVING
TUMKUR ROAD
2700+ Units Sold
50:50 ADVANTAGE
Under construction
1, 2, 3 & 4 BR Apartments
84950 84950

PRESTIGE LAKE RIDGE
WHERE HOME IS NOT A PLACE. IT'S A FEELING
Uttharahalli, off Kanakapura Road
40:60 ADVANTAGE
Ready 1, 2 & 3 BR Apartments
99000 37440

Nearing Completion
PRESTIGE PARK SQUARE
STYLE MEETS SUBSTANCE
BANNERGHATTA ROAD
50:50 ADVANTAGE
Under construction
2 & 3 BR Apartments
70263 70263

PRESTIGE ELYSIAN
PARADISE FEELS LIKE HOME
BANNERGHATTA MAIN ROAD
50:50 ADVANTAGE ON 2 BR
Under construction
2 & 3 BR Apartments
89708 89708

Nearing Completion
PRESTIGE MISTY WATERS
VISTA TOWER
HEBBAL
50:50 ADVANTAGE
Under construction
2.5 & 3 BR Apartments
85469 85469

PRESTIGE SONG OF THE SOUTH
WHERE LIFE PLAYS OUT IN FULL COLOR
Off Bannerghatta Road
PHASE - 2
NO PRE-EMI FOR 18 MONTHS
Under construction
3 & 4 BR Apartments
87225 87225

PRESTIGE WILLOW TREE
A HOME AFTER YOUR HEART.
VIDYARANYAPURA
40:60 ADVANTAGE
Under construction
1, 2 & 3 BR Apartments
81399 81399

PRESTIGE FAIRFIELD
A GRAND VISION OF LUXURY LIVING
Dollars Colony
NO PRE-EMI FOR 24 MONTHS
Under construction
3, 3.5 & 4 BR Apartments
91082 95173

PRESTIGE WOODLAND PARK
A PATH TO JOYFUL LIVING
Cooke Town
40:60 ADVANTAGE
Under construction
2.5, 3 & 3.5 BR Apartments
99450 39194

Last Few Apartments
PRESTIGE PINE WOOD
A BEAUTIFUL HAVEN AWAITS YOU
Koramangala
NO EMI FOR 12 MONTHS ON 2 BR
Ready 2, 3 & 4 BR Apartments
63649 15162

ಭಾನುವಾರ, ಏಪ್ರಿಲ್ 11, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಿದ್ಧತೆ**

ದೆಹಲಿಯ ಆರೋಗ್ಯ ಕೇಂದ್ರವೊಂದರಲ್ಲಿ ವೈದ್ಯಕೀಯ ಸಿಬ್ಬಂದಿಯೊಬ್ಬರು ಶನಿವಾರ ಕೋವಿಶೀಲ್ಡ್ ಲಸಿಕೆ ನೀಡಲು ಸಿದ್ಧತೆ ನಡೆಸಿದರು

ಮೇಲ್ಸೇತುವೆಗಳಲ್ಲಿ ಸಂಚಾರ ಬಂದ್ • ವಾಹನ ಸವಾರರಿಗೆ ಪೊಲೀಸರ ಎಚ್ಚರಿಕೆ

# ರಾತ್ರಿ ಕರ್ಫ್ಯೂ; ಅಲ್ಲಲ್ಲಿ ಬ್ಯಾರಿಕೇಡ್, ಗಸ್ತು

ಪ್ರಜಾವಾಣಿ ವಾರ್ತೆ

ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದರೂ ಪಿಇಎಸ್ ಕಾಲೇಜಿನ ವೀರಭದ್ರನಗರ ಸಿಗ್ನಲ್ ಸಮೀಪ ಅನಗತ್ಯವಾಗಿ ತಿರುಗಾಡುತ್ತಿದ್ದವರನ್ನು ಪೊಲೀಸ್ ಸಿಬ್ಬಂದಿ ಶನಿವಾರ ರಾತ್ರಿ ತಡೆದು ವಿಚಾರಿಸಿದರು –ಪ್ರಜಾವಾಣಿ ಚಿತ್ರ

**ಬೆಂಗಳೂರು:** ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಶನಿವಾರದಿಂದಲೇ ನಗರದಲ್ಲಿ ರಾತ್ರಿ ಕರ್ಫ್ಯೂ ಜಾರಿಯಾಗಿದ್ದು, ಮೊದಲ ದಿನ ಪೊಲೀಸರು ಪ್ರಮುಖ ರಸ್ತೆಗಳಲ್ಲಿ ಗಸ್ತು ತಿರುಗಿದರು. ವಾಹನಗಳು ಸಂಚರಿಸದಂತೆ ಪ್ರಮುಖ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಿದ್ದು ಕಂಡುಬಂತು.

**ಮೊದಲ ದಿನ ಎಚ್ಚರಿಕೆ:** ರಾತ್ರಿ ಕರ್ಫ್ಯೂ ಜಾರಿ ಬಗ್ಗೆ ಮಾಹಿತಿ ಇದ್ದರೂ ಹಲವರು ರಾತ್ರಿ 10 ಗಂಟೆ ನಂತರವೂ ನಗರದಲ್ಲಿ ಸಂಚರಿಸುತ್ತಿದ್ದರು. ಅವರನ್ನು ತಡೆದಿದ್ದ ಪೊಲೀಸರು, ಎಚ್ಚರಿಕೆ ನೀಡಿ ಕಳುಹಿಸಿದರು. ಮಾಸ್ಕ್ ಧರಿಸದ ಕೆಲವರಿಗೆ ದಂಡವನ್ನೂ ವಿಧಿಸಿದರು.ಏಪ್ರಿಲ್20ರವರೆಗೆರಾತ್ರಿ10ಗಂಟೆಯಿಂದ ಮರುದಿನ ನಸುಕಿನ 5 ಗಂಟೆಯವರೆಗೂ ಕರ್ಫ್ಯೂ ಜಾರಿಯಲ್ಲಿರಲಿದೆ.

ಹೆಚ್ಚು ಜನ ಸೇರುವ ಮೆಜೆಸ್ಟಿಕ್, ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಬಳ್ಳಾರಿ ರಸ್ತೆಗಳಲ್ಲಿ ಪೊಲೀಸರು ಶನಿವಾರ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್, ಇಂದಿರಾನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿದ್ದ ಹೋಟೆಲ್‌ಗಳು, ಪಬ್, ಬಾರ್, ರೆಸ್ಟೋರೆಂಟ್‌ಗಳು ರಾತ್ರಿ 10 ಗಂಟೆಗೆ ಬಂದ್ ಆಗಿದ್ದವು. ಪೊಲೀಸರು ಈ ಪ್ರದೇಶಗಳಲ್ಲಿ ವಿಶೇಷವಾಗಿ ಪರಿಶೀಲನೆ ನಡೆಸಿದರು. ಅನಗತ್ಯವಾಗಿ ವಾಹನ ನಿಲ್ಲಿಸಿಕೊಂಡಿದ್ದ ವಾಹನ ಚಾಲಕರನ್ನು ಸ್ಥಳದಿಂದ ಕಳುಹಿಸಿದರು.

ಚಿಕ್ಕಪೇಟೆ, ಬಳೇಪೇಟೆ, ಉಪ್ಪಾರಪೇಟೆ, ಕಾಟನ್‌ಪೇಟೆ, ಕೆ.ಆರ್.ಮಾರುಕಟ್ಟೆ, ಎಸ್.ಪಿ. ರಸ್ತೆ ಹಾಗೂ ಸುತ್ತಮುತ್ತಲ ಸ್ಥಳಗಳಲ್ಲೂ ಪೊಲೀಸರು ವಿಶೇಷ ನಿಗಾ ವಹಿಸಿದ್ದರು. ಕಾರ್ಪೊರೇಷನ್ ವೃತ್ತ, ಹೆಬ್ಬಾಳ, ಇಂದಿರಾನಗರ, ಪಶ್ಚಿಮ ಕಾರ್ಡ್ ರಸ್ತೆ, ಮಾಗಡಿ ರಸ್ತೆ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿ ಪೊಲೀಸರು ವಾಹನಗಳ ಪರಿಶೀಲನೆ ನಡೆಸಿದರು.

ತುರ್ತು ಸೇವೆ ಸಲ್ಲಿಸುವ ಹಾಗೂ ಕಚೇರಿಗೆ ಹೊರಟಿದ್ದ ವ್ಯಕ್ತಿಗಳ ಗುರುತಿನ ಚೀಟಿ ಪರಿಶೀಲಿಸಿ ಬಿಟ್ಟು ಕಳುಹಿಸಿದರು.

**ಮೇಲ್ಸೇತುವೆಗಳಲ್ಲಿ ಸಂಚಾರ ಬಂದ್:** ಮೆಜೆಸ್ಟಿಕ್ ಬಳಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ, ಮೈಸೂರು ರಸ್ತೆಯ ಬಿಜಿಎಸ್ ಮೇಲ್ಸೇತುವೆ, ಹೆಬ್ಬಾಳ ಮೇಲ್ಸೇತುವೆ, ರಿಚ್ಮಂಡ್ ವೃತ್ತದ ಮೇಲ್ಸೇತುವೆ, ತುಮಕೂರು ರಸ್ತೆಯ ಹಾಗೂ ಸುತ್ತಮುತ್ತಲ ಪ್ರಮುಖ ಮೇಲ್ಸೇತುವೆಗಳಲ್ಲಿ ವಾಹನಗಳ ಸಂಚಾರವನ್ನು ಬಂದ್ ಮಾಡಲಾಗಿದೆ.

ಮೇಲ್ಸೇತುವೆ ಆರಂಭವಾಗುವ ಹಾಗೂ ಅಂತ್ಯಗೊಳ್ಳುವ ಸ್ಥಳಗಳಲ್ಲಿ ರಸ್ತೆಗೆ ಅಡ್ಡವಾಗಿ ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿತ್ತು. ಸಂಚಾರ ಪೊಲೀಸರು, ವಾಹನಗಳು ಹೋಗದಂತೆ ತಡೆದರು. ಕೆಲವರ ವಾಹನಗಳಲ್ಲಿ ಜಪ್ತಿ ಸಹ ಮಾಡಿದರು.

ಎರಡು ಬದಿಯ ಸಂಚಾರಕ್ಕೆ ಅವಕಾಶವಿದ್ದ ರಸ್ತೆಗಳಲ್ಲಿ, ಒಂದು ಬದಿಯಲ್ಲಿ ಮಾತ್ರ ತುರ್ತು ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು.

### ‘ಆಹಾರ ಸೇವಾ ವಲಯಕ್ಕೆ ವಿನಾಯಿತಿ ನೀಡಿ’

ನಗರದಲ್ಲಿ ರಾತ್ರಿ ವೇಳೆ ಜಾರಿಯಾಗಿರುವ ಕರ್ಫ್ಯೂನಿಂದ ಆಹಾರ ಸೇವಾ ವಲಯಕ್ಕೆ ವಿನಾಯಿತಿ ನೀಡಬೇಕು ಎಂದು ನ್ಯಾಷನಲ್ ರೆಸ್ಟೋರೆಂಟ್ ಅಸೋಸಿಯೇಷನ್ ಆಫ್ ಇಂಡಿಯಾ (ಎನ್‌ಆರ್‌ಎಐ) ಮನವಿ ಮಾಡಿದೆ.

‘ಕೋವಿಡ್ ನಿಯಂತ್ರಿಸುವ ಉದ್ದೇಶದಿಂದ ರಾತ್ರಿ ಕರ್ಫ್ಯೂ ಜಾರಿಗೊಳಿಸಿರುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಆದರೆ, ಕೋವಿಡ್ ಬಿಕ್ಕಟ್ಟಿನಿಂದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ಈಗಾಗಲೇ ಆರ್ಥಿಕವಾಗಿ ಸಾಕಷ್ಟು ನಷ್ಟ ಅನುಭವಿಸಿವೆ. ರಾತ್ರಿ ಕರ್ಫ್ಯೂ ಮೂಲಕ ಸಮಯದ ಮಿತಿ ಹಾಕಿರುವುದು ಈ ವಲಯವನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ’ ಎಂದು ಸಂಸ್ಥೆಯ ಬೆಂಗಳೂರು ಘಟಕದ ಅಧ್ಯಕ್ಷ ಮನು ಚಂದ್ರ ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ರಾತ್ರಿ 10ಗಂಟೆಯಿಂದ ಕರ್ಫ್ಯೂ ವಿಧಿಸಲಾಗಿದೆ. ಆದರೆ, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಬರುವುದೇ ರಾತ್ರಿ 9ರ ನಂತರ. ಆಹಾರ ಸೇವಾ ವಲಯಕ್ಕೆ ಸೀಮಿತಗೊಳಿಸಿ, ಕರ್ಫ್ಯೂ ಅವಧಿಯಲ್ಲಿ ವಿನಾಯಿತಿ ನೀಡಬೇಕು. ರಾತ್ರಿ 10ರ ಬದಲು 11ರಿಂದ ನಿರ್ಬಂಧ ವಿಧಿಸಬೇಕು’ ಎಂದು ಒತ್ತಾಯಿಸಿ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

### ಹಗಲಿನಲ್ಲೇ ಮಾಹಿತಿ ನೀಡಿದ ‘ಹೊಯ್ಸಳ’ ಸಿಬ್ಬಂದಿ

ನಗರದಲ್ಲಿ ಹಲವು ಠಾಣೆ ವ್ಯಾಪ್ತಿಗಳಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ಸುತ್ತಾಡಿದ ಹೊಯ್ಸಳ ವಾಹನದ ಸಿಬ್ಬಂದಿ, ರಾತ್ರಿ ಕರ್ಫ್ಯೂ ಬಗ್ಗೆ ಜನರಿಗೆ ಮಾಹಿತಿ ನೀಡಿದರು.

ಮೈಕ್ ಹಿಡಿದು ಕೂಗಿದ ಸಿಬ್ಬಂದಿ, ‘ಕೊರೊನಾದಿಂದ ಜನರನ್ನು ರಕ್ಷಿಸಲು ರಾತ್ರಿ ಕರ್ಫ್ಯೂ ಜಾರಿ ಮಾಡಲಾಗಿದೆ. ಜನರು ಸಹಕರಿಸಬೇಕು. ರಾತ್ರಿ 10 ಗಂಟೆಯೊಳಗೆ ಮನೆ ಸೇರಿ. ಅಂಗಡಿ, ಮಳಿಗೆಗಳನ್ನು ಬಂದ್ ಮಾಡಿ. ಪೊಲೀಸರ ಜೊತೆ ಸಹಕರಿಸಿ’ ಎಂದು ಕೋರಿದರು.

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ




## ಪುನರ್ವಸತಿ ಕೇಂದ್ರ: ಶೇ 10ರಷ್ಟು ಮಂದಿಗೆ ಸಮಸ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಕಾಯಿಲೆಯಿಂದ ಚೇತರಿಸಿಕೊಂಡವರಲ್ಲಿ ಶೇ 10ರಷ್ಟು ಮಂದಿಯು ಉಸಿರಾಟ ಸೇರಿದಂತೆ ವಿವಿಧ ಸಮಸ್ಯೆಗಳ ಕಾರಣ ಕೋವಿಡ್ ಪುನರ್ವಸತಿ ಕೇಂದ್ರದಲ್ಲಿ ತಪಾಸಣೆಗೆ ಒಳಪಡುತ್ತಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡವರಲ್ಲಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವ ಕಾರಣ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಕೋವಿಡ್ ಪುನರ್ವಸತಿ ಕೇಂದ್ರವನ್ನು ನಡೆಸಲಾಗುತ್ತಿದೆ.

ಈವರೆಗೆ ಅಲ್ಲಿ 1,630 ಕೋವಿಡ್ ಪೀಡಿತರು ಚಿಕಿತ್ಸೆಗೆ ಒಳಗಾಗಿದ್ದಾರೆ. ಆಸ್ಪತ್ರೆಯಿಂದ ಮನೆಗೆ ತೆರಳಿದ ಬಳಿಕವೂ ಕೆಲದಿನಗಳವರೆಗೆ ಅವರ ಆರೋಗ್ಯವನ್ನು ದೂರವಾಣಿಯ ಮೂಲಕ ವಿಚಾರಿಸಲಾಗುತ್ತಿದೆ. ಈ ವೇಳೆ ಕೆಲವರಲ್ಲಿ ಉಸಿರಾಟದ ಸಮಸ್ಯೆ, ಮೈಕೈ ನೋವು, ಕೆಮ್ಮು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಿರುವುದು ತಿಳಿದುಬಂದಿದೆ. 160 ಮಂದಿ ಪುನರ್ವಸತಿ ಕೇಂದ್ರಕ್ಕೆ ಬಂದು, ಚಿಕಿತ್ಸೆ ಪಡೆದುಕೊಂಡಿದ್ದಾರೆ.

‘ಪುನರ್ವಸತಿ ಕೇಂದ್ರಕ್ಕೆ ಬಂದವರಲ್ಲಿ ಶೇ 3ರಷ್ಟು ಮಂದಿಯನ್ನು ದಾಖಲಿಸಿಕೊಂಡು, ಹೆಚ್ಚಿನ ಚಿಕಿತ್ಸೆ ನೀಡಲಾಗಿದೆ. ಉಳಿದವರು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಹೆಚ್ಚಿನವರಲ್ಲಿ ಉಸಿರಾಟದ ಸಮಸ್ಯೆ, ಕೆಮ್ಮು ಹಾಗೂ ಶ್ವಾಸಕೋಶದ ಸಮಸ್ಯೆ ಕಾಣಿಸಿಕೊಂಡಿದೆ’ ಎಂದು ಕೇಂದ್ರದ ವೈದ್ಯರು ತಿಳಿಸಿದರು.

ಸಚಿವ ಆರ್‌.ಅಶೋಕ ಹೇಳಿಕೆ: ಪ್ರತಿದಿನ 70 ಸಾವಿರ ಮಂದಿಗೆ ಕೋವಿಡ್ ಲಸಿಕೆ ಗುರಿ

# ನಿಯಮ ಉಲ್ಲಂಘಿಸುವ ಕಲ್ಯಾಣ ಮಂಟಪಗಳಿಗೆ ಬೀಗ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಸಚಿವ ಆರ್‌.ಅಶೋಕ ಮತ್ತು ಸಂಸದ ತೇಜಸ್ವಿ ಸೂರ್ಯ ಸಮಾಲೋಚನೆ ನಡೆಸಿದರು

**ಬೆಂಗಳೂರು:** ‘ನಗರದಲ್ಲಿ ಕೋವಿಡ್ ನಿಯಮಗಳನ್ನು ಉಲ್ಲಂಘಿಸುವ ಕಲ್ಯಾಣ ಮಂಟಪಗಳಿಗೆ 6 ತಿಂಗಳು ಬೀಗ ಹಾಕಲಾಗುವುದು. ಈ ಕುರಿತು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ’ ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ದಕ್ಷಿಣ ವಲಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ರವಿ ಸುಬ್ರಹ್ಮಣ್ಯ, ಕೃಷ್ಣಪ್ಪ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಹಿರಿಯ ಅಧಿಕಾರಿಗಳು ಹಾಗೂ ಖಾಸಗಿ ಆಸ್ಪತ್ರೆಗಳ ಪ್ರಮುಖರ ಜೊತೆ ಸಚಿವರು ಶನಿವಾರ ಸಮಾಲೋಚನೆ ನಡೆಸಿದರು.

‘ದಕ್ಷಿಣ ವಲಯದಲ್ಲಿ 45 ವರ್ಷ ಮೇಲ್ಪಟ್ಟ 7.5 ಲಕ್ಷ ಮಂದಿ ಇದ್ದಾರೆ. ಈ ಪೈಕಿ 2.5 ಲಕ್ಷ ಜನ ಈಗಾಗಲೇ ಲಸಿಕೆ ಪಡೆದಿದ್ದಾರೆ. ಉಳಿದ 5 ಲಕ್ಷ ಮಂದಿಗೆ ಮುಂದಿನ 15 ದಿನಗಳಲ್ಲಿ ಲಸಿಕೆ ಸಿಗುವಂತಾಗಬೇಕು. ಈ ಉದ್ದೇಶ ಈಡೇರಬೇಕಾದರೆ ಪ್ರತಿದಿನ 70 ಸಾವಿರ ಜನರಿಗೆ ಲಸಿಕೆ ಕೊಡಲೇಬೇಕು. ನಗರದಲ್ಲಿ ಈಗ 500 ಲಸಿಕಾ ಕೇಂದ್ರಗಳಿವೆ. ಇವುಗಳ ಸಂಖ್ಯೆಯನ್ನು 1 ಸಾವಿರಕ್ಕೆ ಹೆಚ್ಚಿಸಬೇಕು. ಇದಕ್ಕಾಗಿ ನನ್ನ ಕಚೇರಿಯನ್ನೂ (ಶಾಸಕರ) ಬಳಸಿಕೊಳ್ಳಿ’ ಎಂದು ದಕ್ಷಿಣ ವಲಯದ ಉಸ್ತುವಾರಿಯೂ ಆಗಿರುವ ಅಶೋಕ ಅವರು ಅಧಿಕಾರಿಗಳಿಗೆ ಸೂಚಿಸಿದರು.

‘ಕೋವಿಡ್ ಲಸಿಕೆಯ ಮಹತ್ವದ ಬಗ್ಗೆ ಎಲ್ಲೆಲ್ಲಿ ಲಸಿಕಾ ಕೇಂದ್ರಗಳಿವೆ ಎಂಬ ಕುರಿತು ಜನರಲ್ಲಿ ಅರಿವು ಮೂಡಿಸಬೇಕು. ಈ ಸಂಬಂಧ ಕರಪತ್ರಗಳನ್ನು ಮುದ್ರಿಸಿ ಪ್ರತಿಯೊಬ್ಬರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು. ಪತ್ರಿಕೆಗಳಿಗೂ ಕಡ್ಡಾಯವಾಗಿ ಜಾಹೀರಾತು ನೀಡಬೇಕು. ಜೊತೆಗೆ ಆಟೊಗಳ ಮೂಲಕ ಬೀದಿ ಬೀದಿಗಳಲ್ಲಿ ಪ್ರಚಾರ ಮಾಡಬೇಕು. ಇನ್ನೆರಡು ದಿನಗಳೊಳಗೆ ಈ ಕೆಲಸ ಆಗಬೇಕು’ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

> **ರಾತ್ರಿ ಪಾರ್ಟಿಗಳಿಂದಾಗಿ ಕೊರೊನಾ ಹರಡುವ ಅಪಾಯವಿದೆ. ಹೀಗಾಗಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಲಾಕ್‌ಡೌನ್ ಹೇರುವ ಯಾವ ಆಲೋಚನೆಯೂ ಸರ್ಕಾರದ ಎದುರಿಗಿಲ್ಲ**
> **ಆರ್.ಅಶೋಕ,** ಕಂದಾಯ ಸಚಿವ

‘ಕೊರೊನಾ ಸೋಂಕಿತರು ಗಾಬರಿಪಡುವ ಅಗತ್ಯವಿಲ್ಲ. ಅವರನ್ನು ಆಸ್ಪತ್ರೆಗೆ ದಾಖಲು ಮಾಡಿ ಗುಣಮಟ್ಟದ ಚಿಕಿತ್ಸೆ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಸೋಂಕಿತರ ಪೈಕಿ ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ತಿರುಗಾಡುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ಅಂತಹವರ ಕೈ ಮೇಲೆ ಮುದ್ರೆ ಹಾಕಬೇಕೆ, ಬೇಡವೆ ಎಂಬುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದೇವೆ. ಎಲ್ಲರೂ ತಮ್ಮ ಮನೆಗಳಲ್ಲೇ ಯುಗಾದಿ ಹಬ್ಬ ಆಚರಿಸಬೇಕು. ಹಬ್ಬದ ನೆಪ ಹೇಳಿ ಗುಂಪು ಸೇರಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ಖಾಸಗಿ ಆಸ್ಪತ್ರೆಯವರು ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಸರ್ಕಾರದ ಜೊತೆ ಕೈಜೋಡಿಸಬೇಕು. ಹೆಚ್ಚಿನ ಹಾಸಿಗೆಗಳನ್ನು ಮೀಸಲಿಡಬೇಕು. ಹಾಸಿಗೆ ಇಲ್ಲ ಎಂಬ ಕಾರಣ ನೀಡಿ ಯಾವ ರೋಗಿಯನ್ನೂ ಬೇರೆಡೆಗೆ ಕಳುಹಿಸಕೂಡದು. ಆಸ್ಪತ್ರೆಯ ಸಿಬ್ಬಂದಿ ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಏನೇ ಸಮಸ್ಯೆಗಳಿದ್ದರೂ ಅವುಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತರ, ಸಂಸದರ ಹಾಗೂ ಸಂಬಂಧಪಟ್ಟ ಶಾಸಕರ ಗಮನಕ್ಕೆ ತಂದು ಪರಿಹರಿಸಿಕೊಳ್ಳಬೇಕು’ ಎಂದು ತಿಳಿಸಿದರು.

ಸಂಸದ ತೇಜಸ್ವಿ ಸೂರ್ಯ, ‘ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಜನರಿರುವ ಪ್ರದೇಶಗಳಲ್ಲಿ ಲಸಿಕಾ ಕಾರ್ಯಕ್ರಮ ಯಶಸ್ವಿಯಾಗಿಲ್ಲ. ಅಂತಹ ಪ್ರದೇಶಗಳಿಗೆ ಭೇಟಿ ನೀಡಿ ಅರಿವು ಮೂಡಿಸಬೇಕು. ಖಾಸಗಿ ಆಸ್ಪತ್ರೆಗಳು ಹತ್ತಿರದಲ್ಲಿರುವ ಅಪಾರ್ಟ್‌ಮೆಂಟ್ಸ್ ಸಮುಚ್ಚಯ ನಿವಾಸಿ ಸಂಘಗಳ ಸಹಕಾರದೊಂದಿಗೆ ಅಲ್ಲಿನ ನಿವಾಸಿಗಳಿಗೆ ಲಸಿಕೆ ನೀಡಲು ಮುಂದಾಗಬೇಕು’ ಎಂದು ಸಲಹೆ ನೀಡಿದರು.

### ‘ರಾತ್ರಿ ಕರ್ಫ್ಯೂ ನಿರ್ಲಕ್ಷಿಸಬೇಡಿ’

‘ಕೋವಿಡ್‌ಗೆ ಕಡಿವಾಣ ಹಾಕುವ ಸಲುವಾಗಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಇದನ್ನು ಹಗುರವಾಗಿ ಪರಿಗಣಿಸಬೇಡಿ. ನಗರದಲ್ಲಿ ದಿನಕ್ಕೆ ಆರು ಸಾವಿರ ಪ್ರಕರಣಗಳು ವರದಿಯಾಗುತ್ತಿವೆ. ಸಾವಿನ ಪ್ರಮಾಣವೂ ಏರುತ್ತಿದೆ. ಹೀಗಾಗಿ, ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಲಸಿಕೆ ವಿತರಣೆ ಕಾರ್ಯ ಚುರುಕುಗೊಳಿಸಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

‘ಪಾಲಿಕೆ ವ್ಯಾಪ್ತಿಯ ಎಲ್ಲ ಎಂಟು ವಲಯಗಳಲ್ಲೂ ಆರೈಕೆ ಕೇಂದ್ರ ತೆರೆಯಲಾಗುವುದು. ಈ ಬಗ್ಗೆ ಖಾಸಗಿ ಆಸ್ಪತ್ರೆಗಳ ಜೊತೆ ನಿರಂತರ ಚರ್ಚೆ ನಡೆಸಲಾಗುತ್ತಿದೆ. ಅವರು ನಮ್ಮ ಜೊತೆ ಕೈ ಜೋಡಿಸಿದ್ದಾರೆ’ ಎಂದು ಹೇಳಿದರು.

# ಆಸ್ಪತ್ರೆಗಳಿಗೆ ಅಲೆದಾಟ: 33 ವರ್ಷದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ 33 ವರ್ಷದ ಕೋವಿಡ್ ಪೀಡಿತ ವ್ಯಕ್ತಿಯೊಬ್ಬರು ಎರಡು ಆಸ್ಪತ್ರೆಗಳಿಗೆ ಅಲೆದು, ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದೆಯೇ ಶನಿವಾರ ಕೊನೆಯುಸಿರೆಳೆದಿದ್ದಾರೆ.

ಶಿವಾಜಿನಗರದ ನಿವಾಸಿ ಆಗಿರುವ ಅವರು, ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡ ಕಾರಣ ಮಡಿವಾಳದ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಅವರಿಗೆ ಶುಕ್ರವಾರ (ಏ.9) ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಸೋಂಕು ತಗುಲಿರುವುದು ದೃಢಪಟ್ಟಿತ್ತು. ಇದರಿಂದಾಗಿ ಆಸ್ಪತ್ರೆಯ ವೈದ್ಯರು ಕೋವಿಡ್ ಚಿಕಿತ್ಸೆ ಸಂಬಂಧ ಬೇರೆ ಆಸ್ಪತ್ರೆಗೆ ತೆರಳುವಂತೆ ಸೂಚಿಸಿದರು. ಸೋಂಕಿತ ವ್ಯಕ್ತಿಯನ್ನು ಕುಟುಂಬದ ಸದಸ್ಯರು ಎರಡು ಆಸ್ಪತ್ರೆಗಳಿಗೆ ಕರೆದೊಯ್ದರೂ ದಾಖಲಿಸಿಕೊಳ್ಳಲಿಲ್ಲ. ಪರಿಣಾಮ ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗಿ ಮೃತಪಟ್ಟಿದ್ದಾರೆ.

‘ಸರ್ಕಾರಿ ಸಹಾಯವಾಣಿಗೆ ಸಂಪರ್ಕಿಸಿದಾಗ ವಸಂತನಗರದ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸುವುದಾಗಿ ಸಿಬ್ಬಂದಿ ತಿಳಿಸಿದರು. ಆದರೆ, ಅಲ್ಲಿ ಹೆಚ್ಚಿನ ಚಿಕಿತ್ಸೆಗೆ ಹಾಸಿಗೆ ಇಲ್ಲ ಎಂಬ ಕಾರಣ ನೀಡಿ, ದಾಖಲಿಸಿಕೊಳ್ಳಲು ವೈದ್ಯರು ನಿರಾಕರಿಸಿದರು. ಬಳಿಕ ಗಿರಿನಗರದ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸಿರುವುದಾಗಿ ಸಿಬ್ಬಂದಿ ಹೇಳಿದರು. ಆದರೆ, ಅಲ್ಲಿ ಕೂಡ ಹಾಸಿಗೆ ಇಲ್ಲ ಎಂಬ ಕಾರಣ ನೀಡಿ, ದಾಖಲಿಸಿಕೊಂಡಿಲ್ಲ’ ಎಂದು ಮೃತ ವ್ಯಕ್ತಿಯ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

‘ಗಿರಿನಗರಕ್ಕೆ ಹೋದಾಗಲೇ ರಾತ್ರಿ 10 ಗಂಟೆಯಾಗಿತ್ತು. ಆ ವೇಳೆ ವ್ಯಕ್ತಿಯ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಶೇ 25ಕ್ಕೆ ಇಳಿಕೆಯಾಗಿತ್ತು. ಬಳಿಕ ಕೋರಮಂಗಲದ ಖಾಸಗಿ ಆಸ್ಪತ್ರೆಯೊಂದಕ್ಕೆ ಕರೆದೊಯ್ಯಲಾಯಿತು. ಆದರೆ, ಚಿಕಿತ್ಸೆ ಫಲಿಸದೆಯೇ ಶನಿವಾರ ಬೆಳಿಗ್ಗೆ 4 ಗಂಟೆಗೆ ಮೃತಪಟ್ಟರು. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡಿದಲ್ಲಿ ಅವರನ್ನು ನಾವು ಕಳೆದುಕೊಳ್ಳುತ್ತಿರಲಿಲ್ಲ’ ಎಂದು ಕುಟುಂಬಸ್ಥರು ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಮಹಾವೀರ್ ಜೈನ್ ಆಸ್ಪತ್ರೆಯ ನೋಡಲ್ ಅಧಿಕಾರಿ ಡಾ. ನಿಶಾಂತ್ ಹಿರೇಮಠ್ ಪ್ರತಿಕ್ರಿಯಿಸಿದ್ದು, ‘ರೋಗಿಯನ್ನು ಆಸ್ಪತ್ರೆಗೆ ಕರೆತರುವ ಬಗ್ಗೆ 108 ಸಹಾಯವಾಣಿ ಅಥವಾ ಬಿಬಿಎಂಪಿಯಿಂದ ನಮಗೆ ಸೂಚನೆಯೇ ಬಂದಿಲ್ಲ. ಹೀಗಾಗಿ, ವಸಂತನಗರದ ಶಾಖೆಯಲ್ಲಿ ದಾಖಲಿಸಿಕೊಳ್ಳಲು ಸಾಧ್ಯವಾಗಲಿಲ್ಲ’ ಎಂದರು.

### ಮಹಾವೀರ್ ಜೈನ್ ಆಸ್ಪತ್ರೆಗೆ ನೋಟಿಸ್

ಆಸ್ಪತ್ರೆಗಳಲ್ಲಿನ ಹಾಸಿಗೆಗಳ ನಿರ್ವಹಣೆಯ ಕೇಂದ್ರೀಕೃತ ವ್ಯವಸ್ಥೆ (ಸಿಎಚ್‌ಬಿಎಂಎಸ್) ಮೂಲಕ ಹಾಸಿಗೆ ಕಾಯ್ದಿರಿಸಿದ್ದರೂ, ರೋಗಿಯನ್ನು ದಾಖಲಿಸಿಕೊಳ್ಳದ್ದಕ್ಕೆ ವಿವರಣೆ ಕೋರಿ ವಸಂತನಗರದಲ್ಲಿನ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಗೆ ಬಿಬಿಎಂಪಿಯು ಶನಿವಾರ ನೋಟಿಸ್ ನೀಡಿದೆ.

25 ಗಂಟೆಗಳ ಒಳಗೆ ವಿವರಣೆ ನೀಡದಿದ್ದರೆ 2005ರ ವಿಕೋಪ ನಿರ್ವಹಣೆ ಕಾಯ್ದೆ ಮತ್ತು 2007ರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ ಅಡಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಬಿಬಿಎಂಪಿ ಎಚ್ಚರಿಕೆ ನೀಡಿದೆ.

‘ಕೋವಿಡ್ ರೋಗಿಗಳಿಗೆ ಶೇ 50ರಷ್ಟು ಹಾಸಿಗೆ ಮೀಸಲು ಇಡಬೇಕು ಎಂದು ಸರ್ಕಾರ ಆದೇಶ ನೀಡಿದ್ದರೂ ಅದನ್ನು ಪಾಲಿಸಿಲ್ಲ. ಸಕಾಲಕ್ಕೆ ಚಿಕಿತ್ಸೆ ಸಿಗದೆ ವ್ಯಕ್ತಿ ಸಾವಿಗೀಡಾಗಿದ್ದಾರೆ. ಇದಕ್ಕೆ ವಿವರಣೆ ನೀಡಿ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

# 40 ವರ್ಷದೊಳಗಿನವರಲ್ಲಿ ಪಾರ್ಕಿನ್ಸನ್ ಹೆಚ್ಚಳ: ವೈದ್ಯರ ಕಳವಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೋವಿಡ್ ಕಾಣಿಸಿಕೊಂಡ ಬಳಿಕ 40 ವರ್ಷದೊಳಗಿನ ವ್ಯಕ್ತಿಗಳಲ್ಲಿ ಕೂಡ ಪಾರ್ಕಿನ್ಸನ್ ಕಾಯಿಲೆಯ ಲಕ್ಷಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ’ ಎಂದು ವಿಕ್ರಮ್ ಆಸ್ಪತ್ರೆಯ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

‘ರಾಜ್ಯದಲ್ಲಿ ಪ್ರತಿ ಲಕ್ಷ ಜನರಲ್ಲಿ 300ರಿಂದ 350 ಮಂದಿಗೆ ವಯೋಸಹಜ ಕಾಯಿಲೆಯಾಗಿ ಇದು ಕಾಡುತ್ತಿದೆ. ಈ ರೋಗದ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಈ ಕಾಯಿಲೆಯು ನರಸಂಬಂಧಿ ಸಮಸ್ಯೆ. 50 ವರ್ಷ ಮೀರಿದ ವ್ಯಕ್ತಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಯುವಕರಲ್ಲೂ ಕಾಣಿಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದು ಮಿದುಳಿನ ಕೆಲ ಭಾಗಗಳಿಗೆ ಹಾನಿಯುಂಟು ಮಾಡುತ್ತದೆ. ಪ್ರತಿ 20 ರೋಗಿಗಳ ಪೈಕಿ ಒಬ್ಬರು 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಎಂಬ ಮಾಹಿತಿಯೂ ಇದೆ’ ಎಂದು ಆಸ್ಪತ್ರೆ ತಿಳಿಸಿದೆ.

ಆಸ್ಪತ್ರೆಯ ನರರೋಗ ತಜ್ಞ ಡಾ. ಪ್ರಶಾಂತ್ ಎಲ್‌.ಕೆ. ಗುಪ್ತಾ, ‘40 ವರ್ಷದೊಳಗಿನವರಲ್ಲೂ ಪಾರ್ಕಿನ್ಸನ್ ರೋಗದ ಲಕ್ಷಣಗಳು ಗೋಚರಿಸುತ್ತಿವೆ. ಈ ಕಾಯಿಲೆಗೆ ನಿಖರ ಕಾರಣ ಪತ್ತೆಯಾಗಲಿಲ್ಲ. ನಿಮ್ಹಾನ್ಸ್ ಸೇರಿದಂತೆ ವಿವಿಧ ರಾಷ್ಟ್ರೀಯ ಸಂಸ್ಥೆಗಳ ಜತೆಗೆ ವಿಕ್ರಮ್ ಆಸ್ಪತ್ರೆಯೂ ಕೈಜೋಡಿಸಿದ್ದು, ಈ ಕಾಯಿಲೆಯ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ’ ಎಂದರು.

‘ಪಾರ್ಕಿನ್ಸನ್ ರೋಗಿಗಳ ಮೇಲೆ ಕೋವಿಡ್ ಮತ್ತು ಲಾಕ್‌ಡೌನ್ ಗಮನಾರ್ಹವಾದ ಪರಿಣಾಮ ಬೀರಿದೆ. ಹಲವರು ಆತಂಕ, ಖಿನ್ನತೆಗೆ ಒಳಗಾದರು. ನಿದ್ರೆಯ ಸಮಸ್ಯೆಗಳು ಕೂಡ ಕಾಣಿಸಿಕೊಂಡವು. ವೈದ್ಯರನ್ನು ಭೇಟಿ ಮಾಡಲು ಕೂಡ ಸಾಧ್ಯವಾಗಲಿಲ್ಲ. ಈ ಕಾಯಿಲೆಗೆ ಮಾತ್ರೆಗಳು, ಶಸ್ತ್ರಚಿಕಿತ್ಸೆ, ಪಂಪ್ ಥೆರಪಿಯಂತಹ ಆಯ್ಕೆಗಳಿವೆ. ಆದರೆ, ರೋಗ ನಿರೋಧಕ ಆಯ್ಕೆ ಇನ್ನೂ ಲಭ್ಯವಿಲ್ಲ’ ಎಂದು ಆಸ್ಪತ್ರೆಯ ನರರೋಗ ತಜ್ಞ ಡಾ. ಕಿರಣ್ ಎಸ್. ಖಾನಾಪುರೆ ತಿಳಿಸಿದ್ದಾರೆ.

### ರೋಗಿಗಳಿಗೆ ಪೂರಕ ಆರೈಕೆ

‘ಪಾರ್ಕಿನ್ಸನ್ ರೋಗಿಗಳಿಗೆ ಆನ್‌ಲೈನ್ ಮೂಲಕ ಪೂರಕ ಆರೈಕೆ ಬಗ್ಗೆ ಸಲಹೆ ನೀಡುವ ಕಾರ್ಯಕ್ರಮವನ್ನು ಪ್ರಮೇಯ ಹೆಲ್ತ್ ಪ್ರಾರಂಭಿಸಿದೆ.

‘ಮಿದುಳಿನ ಭಾಗದ ಮೇಲೆ ಪಾರ್ಕಿನ್ಸನ್ ಕಾಯಿಲೆಯು ಪರಿಣಾಮ ಬೀರುತ್ತದೆ. ಇದಕ್ಕೆ ಪೂರಕವಾದ ಚಿಕಿತ್ಸೆ ಅತ್ಯಗತ್ಯ. ಈ ನಿಟ್ಟಿನಲ್ಲಿ ನಮ್ಮ ತಜ್ಞರ ತಂಡವು ಕಾರ್ಯಕ್ರಮವನ್ನು ರೂಪಿಸಿದೆ. ನ್ಯೂರೋಫಿಸಿಯೋಥೆರಪಿಸ್ಟ್ ಡಾ. ಸ್ನೇಹಾ ಬಿ.ಎಸ್. ನೇತೃತ್ವದ ತಂಡವು ಈ ಕಾರ್ಯಕ್ರಮವನ್ನು ಮುನ್ನಡೆಸಲಿದೆ. ಫಿಸಿಯೋಥೆರಪಿ, ಯೋಗ, ಧ್ಯಾನ, ಮಾತಿನ ಚಿಕಿತ್ಸೆ, ಆಹಾರ ನಿಯಂತ್ರಣ, ಅಧ್ಯಾತ್ಮ ಸೇರಿದಂತೆ ವಿವಿಧ ಪದ್ಧತಿಗಳನ್ನು ಆನ್‌ಲೈನ್ ಮೂಲಕ ಹೇಳಿಕೊಡಲಾಗುತ್ತದೆ’ ಎಂದು ಪ್ರಮೇಯ ಹೆಲ್ತ್ ತಿಳಿಸಿದೆ.

‘ಕ್ರಿಯಾತ್ಮಕ, ಭಾವನಾತ್ಮಕ, ಪೌಷ್ಟಿಕ ಹಾಗೂ ಆಧ್ಯಾತ್ಮಿಕ ವಿಭಾಗಗಳಲ್ಲಿ ಪಾರ್ಕಿನ್ಸನ್ ರೋಗಿಗಳಿಗೆ ಅರಿವು ಮೂಡಿಸಲಾಗುತ್ತದೆ. ಆಸಕ್ತರು www.prameyahealth.comಗೆ ಭೇಟಿ ನೀಡಬಹುದು’ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಡಾ. ಸಂಧ್ಯಾ ರವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ನಗರದ ಕೆ.ಸಿ. ಜನರಲ್ ಆಸ್ಪತ್ರೆಗೆ ಶನಿವಾರ ರಾತ್ರಿ ದಿಢೀರ್ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು.

# ‘ಲಸಿಕೆ ವಿತರಣೆ ಹೆಚ್ಚಿಸಲು ಕ್ರಮ’

ಪ್ರಜಾವಾಣಿ ವಾರ್ತೆ

ಆಡುಗೋಡಿಯ ಲಸಿಕೆ ವಿತರಣಾ ಕೇಂದ್ರಕ್ಕೆ ಶನಿವಾರ ಭೇಟಿ ನೀಡಿದ ಗೌರವ್ ಗುಪ್ತ ಅವರು ಸಿಬ್ಬಂದಿ ಮತ್ತು ಸಾರ್ವಜನಿಕರಿಂದ ಮಾಹಿತಿ ಪಡೆದರು

**ಬೆಂಗಳೂರು:** ‘ನಗರದಲ್ಲಿ ಕೋವಿಡ್ ಲಸಿಕೆ ವಿತರಿಸಲು ಸುಮಾರು 500 ಸ್ಥಳಗಳಿವೆ. ಈ ಪ್ರತಿ ಸ್ಥಳದಲ್ಲಿ ಕನಿಷ್ಠ 100ರಿಂದ 150 ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಗೌರವ್ ಗುಪ್ತ ಹೇಳಿದರು.

ನಗರದ ಕೋವಿಡ್ ಆರೈಕೆ ಕೇಂದ್ರಗಳಲ್ಲಿನ ಸಿದ್ಧತೆ, ಲಸಿಕೆ ವಿತರಣೆ ಕೇಂದ್ರ ಹಾಗೂ ಕೋವಿಡ್ ಪರೀಕ್ಷಾ ಕೇಂದ್ರಗಳ ಕಾರ್ಯಗಳನ್ನು ಅವರು ಶನಿವಾರ ಪರಿಶೀಲಿಸಿದರು.

‘ಈಗಿರುವ ಲಸಿಕೆ ಕೇಂದ್ರಗಳ ಜೊತೆಗೆ ಅಗತ್ಯವಿರುವ ಕಡೆ ಹೆಚ್ಚುವರಿಯಾಗಿ ಹೊಸ ಕೇಂದ್ರ ತೆರೆಯಲಾಗುವುದು. ಲಸಿಕೆ ಪಡೆಯುವವರಿಗೆ ಅವಶ್ಯಕವಿರುವ ಕಡೆ ವಾಹನಗಳ ವ್ಯವಸ್ಥೆಯನ್ನು ಆಯಾ ವಲಯ ಆಯುಕ್ತರ ಮಟ್ಟದಲ್ಲಿ ಒದಗಿಸಲಾಗುವುದು’ ಎಂದರು.

**ಔಷಧಾಲಯಕ್ಕೆ ಭೇಟಿ:** ನಗರದ ಆಡುಗೋಡಿ ಔಷಧಾಲಯವನ್ನು ಮುಖ್ಯ ಆಯುಕ್ತರು ಪರಿಶೀಲಿಸಿದರು. ಈ ವೇಳೆ ಲಸಿಕೆ ಪಡೆಯಲು ಬಂದವರನ್ನು ಮಾತನಾಡಿಸಿ ಲಸಿಕೆ ನೀಡುವ ವ್ಯವಸ್ಥೆ ಬಗ್ಗೆ ಹಾಗೂ ಪಡೆದ ನಂತರದ ಅನುಭವಗಳ ಬಗ್ಗೆ ಮಾಹಿತಿ ಪಡೆದರು.

**ಆರೈಕೆ ಕೇಂದ್ರಗಳ ಸ್ಥಾಪನೆ ಶೀಘ್ರ:** ‘ಬಾಷ್ ಸಂಸ್ಥೆಯು ಸಹಭಾಗಿತ್ವದಲ್ಲಿ ಕೋವಿಡ್ ಆರೈಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದನ್ನು ಪಾಲಿಕೆ ತೆಕ್ಕೆಗೆ ಪಡೆಯಲಿದ್ದೇವೆ. ಈ ಸಂಬಂಧ ಬಾಷ್ ಸಂಸ್ಥೆ ಹಾಗೂ ಪಾಲಿಕೆ ಜೊತೆ ಚರ್ಚೆ ನಡೆಯುತ್ತಿದೆ. ಕೋವಿಡ್ ಆರೈಕೆ ಕೇಂದ್ರ ಪ್ರಾರಂಭಿಸಲು ಇನ್ನೆರಡು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯ ಆಯುಕ್ತರು ತಿಳಿಸಿದರು.

‘ಪಾಲಿಕೆಯ ಎಲ್ಲ ವಲಯಗಳಲ್ಲಿ 50 ಹಾಸಿಗೆಗಳ ಸಾಮರ್ಥ್ಯದ ಎರಡು ಅಥವಾ ಮೂರು ಕೋವಿಡ್ ಆರೈಕೆ ಕೇಂದ್ರಗಳನ್ನು ಶೀಘ್ರವಾಗಿ ಸ್ಥಾಪಿಸಲು ಉದ್ದೇಶಿಸಲಾಗಿದೆ’ ಎಂದು ಹೇಳಿದರು.

### ಪರೀಕ್ಷಿಸದೆಯೇ ಮಾಹಿತಿ ಭರ್ತಿ: ಅಮಾನತು

ಕೋವಿಡ್ ಪರೀಕ್ಷೆಯನ್ನು ಸರಿಯಾಗಿ ಮಾಡದೆ, ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು, ಟೆಸ್ಟಿಂಗ್ ಸಾಮಗ್ರಿಯನ್ನು ಭರ್ತಿ ಮಾಡುತ್ತಿದ್ದ ಇಬ್ಬರು ನೌಕರರನ್ನು ಗೌರವ್ ಗುಪ್ತ ಅಮಾನತು ಮಾಡಿದರು.

ಯಲಹಂಕ ವಲಯದ ಕೊಡಿಗೇಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಪರೀಕ್ಷೆ ಮಾಡದೆ ಟೆಸ್ಟಿಂಗ್ ಸಾಮಗ್ರಿಗಳನ್ನು ಭರ್ತಿ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದನ್ನು ಗಮನಿಸಿದ ಬಿಬಿಎಂಪಿ, ಗಂಟಲು ದ್ರವ ಸಂಗ್ರಹದಲ್ಲಿ ಕರ್ತವ್ಯ ಲೋಪ ಎಸಗಿದ ಇಬ್ಬರ ವಿರುದ್ಧ ಕ್ರಮಕೈಗೊಂಡಿದೆ. ‘ವಿಚಾರಣೆ ನಡೆಸಿದ ಬಳಿಕ ಸಂಬಂಧಪಟ್ಟ ಅಧಿಕಾರಿಗಳನ್ನೂ ಅಮಾನತುಗೊಳಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯ ಆಯುಕ್ತರು ತಿಳಿಸಿದರು.

ಮಣಿಪಾಲ ಆಸ್ಪತ್ರೆಯ ವೈದ್ಯರ ಅಭಿಮತ • ಕೋವಿಡ್ ಬಳಿಕದ ಬದಲಾವಣೆ ಬಗ್ಗೆ ಚರ್ಚೆ

# ‘ವರ್ತನೆ ಅರಿತ ಕಾರಣ ಚಿಕಿತ್ಸೆ ಸುಲಭ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೋವಿಡ್ ಮೊದಲನೆ ಅಲೆಯ ಅವಧಿಯಲ್ಲಿ ಕಾಯಿಲೆಯ ಬಗ್ಗೆ ಅಷ್ಟಾಗಿ ಸಂಶೋಧನೆಗಳು ನಡೆದಿರಲಿಲ್ಲ. ಹಾಗಾಗಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವುದು ಸವಾಲಾಗಿತ್ತು. ಆದರೆ, ಈಗ ಕೋವಿಡ್ ರೋಗಾಣು ಯಾವ ರೀತಿ ವರ್ತಿಸುತ್ತದೆ ಎಂಬ ಬಗ್ಗೆ ಸ್ಪಷ್ಟತೆ ಸಿಕ್ಕಿದೆ. ಹೀಗಾಗಿ, ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡರೂ ಚಿಕಿತ್ಸೆಯಲ್ಲಿ ಸಮಸ್ಯೆಯಾಗುವುದಿಲ್ಲ’ ಎಂದು ಮಣಿಪಾಲ ಆಸ್ಪತ್ರೆಯ ವೈದ್ಯರು ತಿಳಿಸಿದರು.

ವಿಶ್ವ ಆರೋಗ್ಯ ದಿನದ ಅಂಗವಾಗಿ ಮಣಿಪಾಲ ಆಸ್ಪತ್ರೆಗಳ ಸಮೂಹವು ‘ಪ್ರಜಾವಾಣಿ’ ಮತ್ತು ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಶನಿವಾರ ಆಯೋಜಿಸಿದ ವೆಬಿನಾರ್‌ನಲ್ಲಿ ‘ಕೋವಿಡ್ ಹಾಗೂ ಕೋವಿಡ್ ನಂತರ ಪರಿಸ್ಥಿತಿಯ ಬದಲಾವಣೆಗೆ ಹೊಂದಿಕೊಳ್ಳುವುದು’ ಎಂಬ ವಿಷಯದ ಕುರಿತು ತಜ್ಞರು ಚರ್ಚಿಸಿದರು.

‘ಕಳೆದ ವರ್ಷ ಕೊರೊನಾ ಸೋಂಕು ಕಾಣಿಸಿಕೊಂಡ ಬಳಿಕ ಕೋವಿಡೇತರ ರೋಗಿಗಳು ಆಸ್ಪತ್ರೆಗಳಿಗೆ ಬರಲು ಹಿಂದೇಟು ಹಾಕಿದರು. ಚಿಕಿತ್ಸೆಗಳನ್ನು ಮುಂದೂಡಿದ ಪರಿಣಾಮ ಹಲವರಲ್ಲಿ ಆರೋಗ್ಯ ಸಮಸ್ಯೆ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಜೀವನ ವಿಧಾನ ಏಕಾಏಕಿ ಬದಲಾಗಿದ್ದರಿಂದ ಜೀವನಶೈಲಿಗೆ ಸಂಬಂಧಿಸಿದ ಕಾಯಿಲೆಗಳೂ ಹೆಚ್ಚಳವಾದವು.

ಅಷ್ಟಾಗಿಯೂ ಹಲವರಿಗೆ ಆನ್‌ಲೈನ್ ಸಮಾಲೋಚನೆ ಮೂಲಕ ಸೂಕ್ತ ಮಾರ್ಗದರ್ಶನ ನೀಡಲಾಯಿತು. ಈಗ ಕೋವಿಡ್ ಎರಡನೇ ಅಲೆ ಪ್ರಾರಂಭವಾಗಿದ್ದು, ಪ್ರಕರಣಗಳು ಹೆಚ್ಚಳವಾಗುತ್ತಿವೆ. ಪರಿಸ್ಥಿತಿಯನ್ನು ಎದುರಿಸಲು ನಾವು ಸನ್ನದ್ಧರಾಗಿದ್ದೇವೆ’ ಎಂದು ವೈಟ್‌ಫೀಲ್ಡ್‌ನ ಮಣಿಪಾಲ ಆಸ್ಪತ್ರೆಯ ಶ್ವಾಸಕೋಶ ತಜ್ಞೆ ಡಾ.ಶೀತಲ್ ಚೌರಾಸಿಯಾ ತಿಳಿಸಿದರು.

ಆಸ್ಪತ್ರೆಯ ನರರೋಗ ತಜ್ಞ ಡಾ.ಅಭಿನವ್ ರೈನಾ, ‘ಲಾಕ್‌ಡೌನ್, ಆರ್ಥಿಕ ಅಸ್ಥಿರತೆ, ಉದ್ಯೋಗ ಕಳೆದುಕೊಳ್ಳುವಿಕೆ ಸೇರಿದಂತೆ ವಿವಿಧ ಅನಿರೀಕ್ಷಿತ ಬೆಳವಣಿಗೆಗಳು ಮಾನಸಿಕ ಸಮಸ್ಯೆಗಳ ಹೆಚ್ಚಳಕ್ಕೆ ಕಾರಣವಾದವು. ವಿವಿಧ ಕಾರಣಗಳಿಂದಾಗಿ ಹಲವರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಈಗ ಮತ್ತೆ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಕೋವಿಡ್ ಮೊದಲನೇ ಅಲೆಯಲ್ಲಿ ಹಲವು ಪಾಠಗಳನ್ನು ಕಲಿತಿದ್ದೇವೆ. ಈಗ ಸೋಂಕಿತರಿಗೆ ಆದಷ್ಟು ಬೇಗ ಚಿಕಿತ್ಸೆ ಒದಗಿಸಬೇಕಿದೆ. ವೆಂಟಿಲೇಟರ್, ತೀವ್ರ ನಿಗಾ ಘಟಕ, ಹಾಸಿಗೆ ಕೊರತೆ ಆಗದಂತೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ’ ಎಂದು ಹೇಳಿದರು.

**ಸದ್ಯ ಕಚೇರಿ ಸುರಕ್ಷಿತವಲ್ಲ:** ‘ಎರಡನೇ ಅಲೆಯಲ್ಲಿ ವೈರಾಣು ವೇಗವಾಗಿ ಹರಡುತ್ತಿದೆ. ಮಹಾರಾಷ್ಟ್ರದಲ್ಲಿ ಕೋವಿಡ್ ಗಂಭೀರ ಸ್ವರೂಪ ಪಡೆದಿದೆ. ರಾಜ್ಯದಲ್ಲಿಯೂ ರಾತ್ರಿ ಕರ್ಫ್ಯೂ ಜಾರಿ ಮಾಡಲಾಗಿದೆ. ಹಾಗಾಗಿ, ಇನ್ನೂ ಕೆಲ ದಿನ ಕಚೇರಿ ಕೆಲಸವನ್ನು ಮನೆಯಲ್ಲಿಯೇ ನಿರ್ವಹಿಸಬೇಕು. ಕಚೇರಿಗಳಲ್ಲಿ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡರೂ ಕೋವಿಡ್ ಪೂರ್ವದ ಸ್ಥಿತಿ ಬರುವವರೆಗೆ ಕಾಯುವುದು ಉತ್ತಮ’ ಎಂದು ಕ್ಯಾಪ್ಜೆಮಿನ್ ಟೆಕ್ನಾಲಜಿ ಸರ್ವಿಸ್ ಇಂಡಿಯಾ ಲಿಮಿಟೆಡ್‌ನ ಹಣಕಾಸು ಅಧಿಕಾರಿ ಅಂಕಿತ್ ಮಹೇಶ್ವರಿ ಹೇಳಿದರು.

ಗ್ಲೋಬಲ್ ಡಿಜಿಟಲ್‌ನ ಮುಖ್ಯ ಹಣಕಾಸು ಅಧಿಕಾರಿ ದಿವ್ಯಾ ಕುಮಾರ್, ‘ಕೋವಿಡ್ ಕಾಣಿಸಿಕೊಂಡ ಬಳಿಕ ವ್ಯಾಪಾರ ವ್ಯವಹಾರಕ್ಕೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಸಂಪರ್ಕ ಕಾಯ್ದುಕೊಳ್ಳುವುದು ಸವಾಲಾಗಿತ್ತು. ವಿದೇಶಿ ಪ್ರತಿನಿಧಿಗಳನ್ನು ಭೇಟಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆನ್‌ಲೈನ್ ಸಂವಾದಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಯಿತು. ಕಚೇರಿ ಕೆಲಸವನ್ನು ಮನೆಯಿಂದಲೇ ನಿರ್ವಹಿಸುವ (ವರ್ಕ್ ಫ್ರಮ್ ಹೋಮ್) ಸಂಸ್ಕೃತಿ ಜಾರಿಯಾದ ಬಳಿಕ ಕಾರ್ಯನಿರ್ವಹಣೆ ಸ್ವರೂಪ ಬದಲಾಗಿದೆ. ಕೆಲ ಮಹಿಳೆಯರಿಗೆ ಕಚೇರಿ ಕೆಲಸ ಹಾಗೂ ಕುಟುಂಬ ನಿರ್ವಹಣೆ ಎರಡನ್ನೂ ಮಾಡಬೇಕಾದ ಪರಿಣಾಮ ಮಾನಸಿಕ ಒತ್ತಡ ಸೃಷ್ಟಿಯಾಗುತ್ತಿದೆ. ಪತಿ ಹಾಗೂ ಕುಟುಂಬದ ಸದಸ್ಯರು ಮನೆ ಕೆಲಸವನ್ನು ಹಂಚಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

### ವೇಳಾಪಟ್ಟಿ ಅಳವಡಿಕೆ ಅಗತ್ಯ

‘ಕಚೇರಿ ಕೆಲಸವನ್ನು ಮನೆಯಿಂದಲೇ ನಿರ್ವಹಿಸುವ ಸಂಸ್ಕೃತಿ ಪ್ರಾರಂಭವಾದ ಬಳಿಕ ಹಲವರ ಜೀವನವಿಧಾನದಲ್ಲಿ ವ್ಯತ್ಯಾಸಗಳಾಗಿವೆ. ಊಟ–ತಿಂಡಿ ಹಾಗೂ ನಿದ್ದೆ ಸಮಯಕ್ಕೆ ಸರಿಯಾಗಿ ಆಗುತ್ತಿಲ್ಲ. ಇದರಿಂದ ಮಾನಸಿಕ ಒತ್ತಡ ಹೆಚ್ಚುತ್ತಿದೆ. ಕಚೇರಿಯಲ್ಲಿ ನಿರ್ದಿಷ್ಟ ಅವಧಿ ಕೆಲಸ ನಿರ್ವಹಿಸಿದ ಬಳಿಕ ವಿಶ್ರಾಂತಿ ದೊರೆಯಲಿದೆ. ಆದರೆ, ಮನೆಯಲ್ಲಿ ಹೆಚ್ಚಿನ ಅವಧಿ ಕೆಲಸ ನಿರ್ವಹಿಸುವುದರಿಂದ ಬೊಜ್ಜು, ಅಧಿಕ ತೂಕ ಹಾಗೂ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಹಾಗಾಗಿ, ಮನೆಯಿಂದಲೇ ಕಾರ್ಯನಿರ್ವಹಿಸುವಾಗಲೂ ವೇಳಾಪಟ್ಟಿ ರೂಪಿಸಿಕೊಳ್ಳಬೇಕು. ಯೋಗ, ಧ್ಯಾನದಂತಹ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು’ ಎಂದು ಡಾ. ಅಭಿನವ್ ರೈನಾ ಸಲಹೆ ನೀಡಿದರು.

ಡಿಜಿಟಾಪ್ ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ಕನ್ಸಲ್ಟಿಂಗ್ ಸರ್ವೀಸಸ್ ಇಂಡಿಯಾ ಲಿಮಿಟೆಡ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಅತುಲ್ ಮನೋಹರ್ ಸಿಂಕರ್, ‘ಮನೆಯಲ್ಲಿಯೇ ಕಚೇರಿ ಕೆಲಸ ನಿರ್ವಹಣೆಯಿಂದ ಉತ್ಪಾದನೆಯಲ್ಲಿ ಯಾವುದೇ ರೀತಿಯ ಸಮಸ್ಯೆಯಾಗಲಿಲ್ಲ. ಆದರೆ, ಕೆಲಸದ ಒತ್ತಡ ಪ್ರಾರಂಭಿಕ ದಿನಗಳಲ್ಲಿ ಸ್ವಲ್ಪ ಜಾಸ್ತಿಯಾಗಿತ್ತು. ಕೆಲಸವನ್ನು ಪ್ರೀತಿಸಿದಲ್ಲಿ ಕಚೇರಿ ಮತ್ತು ಮನೆಯಲ್ಲಿ ಅಂತಹ ವ್ಯತ್ಯಾಸ ಇರುವುದಿಲ್ಲ. ವಿದೇಶಗಳಲ್ಲಿ ಇದು ಸಾಮಾನ್ಯ’ ಎಂದರು.

ಭಾನುವಾರ, ಏಪ್ರಿಲ್ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 101 | ಪುಟ 24

• www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭಾನುವಾರದ ಪುರವಣಿ**

ಜನಜೀವನ ಈ ಯುಗಾದಿಗಾದರೂ ಸರಿದಾರಿಗೆ ಹೊರಳಲಿದೆ ಎಂದು ಕೊಳ್ಳುವಾಗ ಕೊರೊನಾದ ಎರಡನೇ ಅಲೆ ಮೇಲೆದ್ದಿದೆ. ಯುಗಾದಿ ಮರಳುವಾಗ ಹೊಸ ವರುಷ, ಹೊಸ ಹರುಷ ತರುತ್ತದೆ ಎನ್ನುವುದು ಕಾವ್ಯದ ಸಾಲು ಮಾತ್ರವೇ?

ಕೆಲವು ರಾಜ್ಯಗಳಲ್ಲಿ ಲಸಿಕೆ ಅಭಾವ 13

ಘಟನೆಗೆ ಖಂಡನೆ: ಆನ್‌ಲೈನ್‌ನಲ್ಲಿ ₹ 6 ಲಕ್ಷ ನಿಧಿ ಸಂಗ್ರಹ 4

ನಂಬಿಕೆದ್ರೋಹ: ಅಲಿಬಾಬಾಗೆ ₹ 20,774 ಕೋಟಿ ದಂಡ 12

ಸುಟ್ಟ ಕನ್ನಡ ಗ್ರಂಥಾಲಯ ಮತ್ತೆ ಕಟ್ಟಲು ಪಣ 4

| ಚಿನ್ನ (Std. 10g) | ಶುದ್ಧ ಬೆಳ್ಳಿ (kg) |
|---|---|
| ₹47,920 (ಬೆಂಗಳೂರು) | ₹69,000 (ಬೆಂಗಳೂರು) |

ಪಡಿತರಧಾನ್ಯ ಅಕ್ರಮ ದಾಸ್ತಾನು • ಬಡವರ ಅಕ್ಕಿ ಅನ್ಯರ ಪಾಲು

# ಅನ್ನಭಾಗ್ಯಕ್ಕಿಲ್ಲ ಕಣ್ಗಾವಲು!

• ರಾಜೇಶ್ ರೈ ಚಟ್ಲ

**ಬೆಂಗಳೂರು:** 'ಅನ್ನಭಾಗ್ಯ' ಯೋಜನೆಯಡಿ ಬಡವರಿಗೆ ವಿತರಿಸಬೇಕಿದ್ದ ಅಕ್ಕಿ ಸೇರಿದಂತೆ ಆಹಾರಧಾನ್ಯ ದಾಸ್ತಾನು, ಕಳ್ಳಸಾಗಣೆಯಿಂದ ಕಾಳಸಂತೆಯಲ್ಲಿ ರಾಜಾರೋಷವಾಗಿ ಅನ್ಯರ ಪಾಲಾಗುತ್ತಿದೆ. ಹಸಿದವರು ಪಡಿತರ ಸಿಗದೆ ಸಂಕಟ ಪಡುತ್ತಿದ್ದರೆ, ಹೊಟ್ಟೆ ತುಂಬಿದವರು ದುರ್ಬಳಕೆಯಿಂದ ದುಡ್ಡು ಮಾಡುತ್ತಿದ್ದಾರೆ. ಈ ಕಳ್ಳ ದಂಧೆ ತಡೆಗೆ ಕಣ್ಗಾವಲೇ ಇಲ್ಲ!

ಆಹಾರ ಇಲಾಖೆಯ ಮಾಹಿತಿ ಪ್ರಕಾರ, 2020-21ರಲ್ಲಿ 'ಅನ್ನಭಾಗ್ಯ' ಯೋಜನೆಯಡಿ ಅಕ್ರಮವಾಗಿ ಸಂಗ್ರಹಿಸಿದ ಪಡಿತರ ದಾಸ್ತಾನಿಗೆ ಸಂಬಂಧಿಸಿ 300 ಪ್ರಕರಣಗಳು ದಾಖಲಾಗಿವೆ. ರಾಜ್ಯದಾದ್ಯಂತ 33,092 ಕ್ವಿಂಟಲ್ ಅಕ್ಕಿ ವಶಪಡಿಸಲಾಗಿದೆ. 111 ಕ್ವಿಂಟಲ್ ಗೋಧಿ, 562 ಕ್ವಿಂಟಲ್ ರಾಗಿ ಜಪ್ತಿ ಮಾಡಲಾಗಿದೆ. ಬಳ್ಳಾರಿ, ಚಾಮರಾಜನಗರ, ಮೈಸೂರು, ಕಲಬುರ್ಗಿಯಲ್ಲಿ ಅತೀ ಹೆಚ್ಚು ಪ್ರಕರಣಗಳು ದಾಖಲಾಗಿದೆ.

ಪಡಿತರಧಾನ್ಯ ಪ್ರತಿ ತಿಂಗಳು ನೇರವಾಗಿ, ನೈಜ ಫಲಾನುಭವಿಗೇ ತಲುಪಬೇಕು. ಆ ಉದ್ದೇಶದಿಂದ ಹಂಚಿಕೆಗೆ ಹಲವು ಸುಧಾರಣಾ ಕ್ರಮಗಳನ್ನು ಸರ್ಕಾರ ಜಾರಿಗೆ ತಂದಿದೆ. ಪಡಿತರ ಚೀಟಿಗೆ ಫಲಾನುಭವಿಗಳ ಆಧಾರ್ ಜೋಡಿಸಲಾಗಿದೆ. ಪಾರದರ್ಶಕ ಹಂಚಿಕೆಗೆ ನ್ಯಾಯಬೆಲೆ ಅಂಗಡಿಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯಿದೆ. ಬಿಲ್ಲಿಂಗ್ ಆನ್‌ಲೈನ್‌ಗೊಳಿಸಲಾಗಿದೆ. ಆದರೆ, ಧಾನ್ಯಗಳ ದಾಸ್ತಾನು ಗೋದಾಮು, ಅಲ್ಲಿಂದ ನ್ಯಾಯಬೆಲೆ ಅಂಗಡಿಗೆ ಸಾಗಿಸುವ ವಾಹನಗಳ ಮೇಲೆ 'ನಿಗಾ' ಇಲ್ಲದಿರುವುದನ್ನೇ ಅಕ್ಕಿ ಕಳ್ಳರು ಬಂಡವಾಳ ಮಾಡಿಕೊಂಡಿದ್ದಾರೆ.

**ಕಳವಿನ ಕೈ ಚಳಕ:** ಗೋದಾಮಿನಿಂದಲೇ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸಿ ಕಾಳಸಂತೆಯಲ್ಲಿ ಮಾರುವ ಬಹುದೊಡ್ಡ ಜಾಲವಿದೆ. ಈ ಕಳವಿನ ಕರಾಮತ್ತಿನಲ್ಲಿ ಪ್ರಭಾವಿಗಳು, ಆಹಾರ ಇಲಾಖೆಯ ಅಧಿಕಾರಿಗಳು, ಉಗ್ರಾಣದ ಸಿಬ್ಬಂದಿ, ಅಕ್ಕಿ ಸಾಗಿಸುವ ಲಾರಿಯವರು, ಎತ್ತುವಳಿ ಮಾಡುವ ಸಗಟು ಮಾರಾಟಗಾರರು, ರೈಸ್ ಮಿಲ್ ಮಾಲೀಕರು, ನ್ಯಾಯಬೆಲೆ ಅಂಗಡಿಯವರು ಶಾಮೀಲಾಗಿದ್ದಾರೆ. ಗೋದಾಮುಗಳಲ್ಲಿ ಸಿ.ಸಿ. ಟಿವಿ ಕ್ಯಾಮೆರಾ ಕಣ್ಣಿಲ್ಲ. ಉಗ್ರಾಣಕ್ಕೆ ಬಂದ ಪಡಿತರದ ಪ್ರಮಾಣ, ಬಂದುಹೋಗುವ ವಾಹನಗಳ ಸಂಖ್ಯೆ ದಾಖಲಾಗುತ್ತಿಲ್ಲ. ಹೀಗಾಗಿ, ಮೂಟೆಗಟ್ಟಲೆ ಅಕ್ಕಿ ರೈಸ್‌ಮಿಲ್ ತಲುಪಿ, ಪಾಲಿಶ್ ಪಡೆದು ರಾಜ್ಯದ ಗಡಿ ದಾಟಿ ಆಂಧ್ರ, ತೆಲಂಗಾಣ, ಮಹಾರಾಷ್ಟ್ರ ಪಾಲಾಗುತ್ತಿದೆ. ರೈಸ್‌ಮಿಲ್‌ಗಳು ಹೆಚ್ಚು ಇರುವ ಕೊಪ್ಪಳ, ರಾಯಚೂರು, ಯಾದಗಿರಿ, ದಾವಣಗೆರೆ, ಮೈಸೂರು, ಶಿವಮೊಗ್ಗ ಜಿಲ್ಲೆಗಳಲ್ಲಿ 'ಅನ್ನಭಾಗ್ಯ'ದ ಅಕ್ಕಿ ವಶ ಪ್ರಕರಣಗಳು ಈ ಅಕ್ರಮ ಜಾಲವನ್ನು ತೆರೆದಿಡುತ್ತವೆ.

ಹೀಗೆ 'ಸೋರಿಕೆ'ಗೆ ಬ್ರೇಕ್ ಹಾಕಲು ಲಾರಿಗಳಿಗೆ ವಿಶೇಷವಾದ 'ಸಂವೇದಿ ಜಿಪಿಎಸ್' (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ) ಅಳವಡಿಸಬೇಕೆಂಬ ಚಿಂತನೆ 'ಅನ್ನಭಾಗ್ಯ' ಯೋಜನೆ ಜಾರಿ ಆದಂದಿನಿಂದಲೂ ಇದೆ. 2014ರಲ್ಲಿ ಅಂದಿನ ಆಹಾರ ಇಲಾಖೆ ಆಯುಕ್ತರಾಗಿದ್ದ ಹರ್ಷ ಗುಪ್ತ, ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಗೋದಾಮುಗಳಿಂದ ಸಗಟು ಮಳಿಗೆಗಳಿಗೆ ಪಡಿತರ ಸಾಗಿಸುವ ಎಲ್ಲ ಲಾರಿಗಳಿಗೆ ಜಿಪಿಎಸ್ ಅಳವಡಿಸಲು ಮುಂದಾಗಿದ್ದರು. 2018ರಲ್ಲಿ ಕರೆದ ಟೆಂಡರ್‌ನಲ್ಲಿ ಗೋಲ್‌ಮಾಲ್ ನಡೆದಿದೆ ಎಂಬ ಆರೋಪದ ಮೇಲೆ ಅಂದಿನ ಆಯುಕ್ತ ಟಿ.ಎಚ್.ಎಂ. ಕುಮಾರ್, ಭ್ರಷ್ಟಾಚಾರ ನಿಗ್ರಹ ದಳ ಮತ್ತು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಈ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ.

'ಪಡಿತರ ಅಕ್ರಮ ತಡೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಿಗಾ ಸಮಿತಿ ರಚಿಸಿದ್ದೇವೆ. ಸಾಗಣೆ ವೇಳೆ ನಡೆಯುವ ಅಕ್ರಮಗಳಿಗೆ ಕಡಿವಾಣ ಹಾಕಲು ಲಾರಿಗಳಿಗೆ ಜಿಪಿಎಸ್, ಗೋದಾಮುಗಳಲ್ಲಿ ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಬೇಕೆಂಬ ಪ್ರಸ್ತಾವ ಹಲವು ವರ್ಷಗಳಿಂದ ಇದೆ. ಆದರೆ, ಅನುದಾನ ಇಲ್ಲ. ಎಲ್ಲ ಗೋದಾಮುಗಳಲ್ಲಿ ಸಿ.ಸಿ.ಟಿವಿ ಕ್ಯಾಮೆರಾ ಮತ್ತು ಎಲ್ಲ ವಾಹನಗಳಿಗೆ ಜಿಪಿಎಸ್ ಅಳವಡಿಸಿ, ಅದನ್ನು ಜಿಲ್ಲೆ ಮತ್ತು ಕೇಂದ್ರ ಕಚೇರಿಯಲ್ಲಿರುವ ನಿಗಾ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಪ್ರಸ್ತಾವವನ್ನು ಈ ವರ್ಷ ಕೂಡಾ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ' ಎನ್ನುತ್ತಾರೆ ಆಹಾರ ಇಲಾಖೆಯ ಆಯುಕ್ತರಾದ ಶಮ್ಲಾ ಇಕ್ಬಾಲ್.

**ಒಳನೋಟ**

ಅಕ್ಕಿ ಗೋದಾಮಿಗೆ ಕನ್ನ

ಪ್ರತಿಕ್ರಿಯಿಸಿ: 9606038256

**ಪಡಿತರ ದಾಸ್ತಾನಿಡುವ ಗೋದಾಮುಗಳಲ್ಲಿ ಸಿ.ಸಿ.ಟಿವಿ ಕ್ಯಾಮೆರಾ, ಸಾಗಣೆ ವಾಹನಗಳಿಗೆ ಜಿಪಿಎಸ್ ಅಳವಡಿಸುವ ಪ್ರಸ್ತಾವ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ.**

**ಶಮ್ಲಾ ಇಕ್ಬಾಲ್,** ಆಯುಕ್ತರು, ಆಹಾರ ಇಲಾಖೆ

ಗಂಗಾವತಿ ನಗರದ ರೈಸ್ ಮಿಲ್ ವೊಂದರ ಮೇಲೆ ಅಧಿಕಾರಿಗಳು ದಾಳಿ ಮಾಡಿ ವಶಪಡಿಸಿಕೊಂಡಿದ್ದ ಪ್ರಸಿದ್ಧ ಬ್ರ್ಯಾಂಡ್‌ನಲ್ಲಿದ್ದ ಅನ್ನಭಾಗ್ಯ ಅಕ್ಕಿ (ಸಂಗ್ರಹ ಚಿತ್ರ)

**ಪಡಿತರ 'ಅಕ್ರಮ ದಾಸ್ತಾನು' 2020-21 (ಕ್ವಿಂಟಲ್‌ಗಳಲ್ಲಿ)***

| ಜಿಲ್ಲೆ | ಪ್ರಕರಣ | ಅಕ್ಕಿ | ಗೋಧಿ |
|---|---|---|---|
| ಬಳ್ಳಾರಿ | 68 | 6741.73 | 9.71 |
| ಚಾಮರಾಜನಗರ | 25 | 514.37 | - |
| ಮೈಸೂರು | 23 | 1381 | 4.06 |
| ಕಲಬುರ್ಗಿ | 20 | 3395.26 | 85.61 |
| ಗದಗ | 18 | 2326.22 | - |
| ರಾಯಚೂರು | 14 | 795.25 | - |
| ಧಾರವಾಡ | 13 | 2262.66 | - |
| ದಾವಣಗೆರೆ | 13 | 806.13 | - |
| ಶಿವಮೊಗ್ಗ | 13 | 769.68 | - |

(* ಹೆಚ್ಚು ಪ್ರಕರಣ ದಾಖಲಾದ ಜಿಲ್ಲೆಗಳು)

## 'ಹೊಸ ಬ್ರ್ಯಾಂಡ್'

'ಗೋದಾಮಿನಿಂದ ಅಕ್ಕಿ ತುಂಬಿದ ಲಾರಿ ಹೊರಟ ಲೆಕ್ಕ ಇರುತ್ತದೆಯೇ ವಿನಾ ಅಕ್ಕಿ ತಲುಪಿದ ಖಾತ್ರಿ ಇರುವುದಿಲ್ಲ. ಹೀಗಾಗಿಯೇ ಅಕ್ಕಿ ಸಲೀಸಾಗಿ ನ್ಯಾಯಬೆಲೆ ಅಂಗಡಿ ಬದಲು ರೈಸ್‌ಮಿಲ್‌ಗೆ ಸೇರುತ್ತದೆ. ಉಗ್ರಾಣದಲ್ಲಿ ಸಿ.ಸಿ. ಕ್ಯಾಮರಾ ಇಲ್ಲದಿರುವುದು ಈ ದಂಧೆಗೆ ದಾರಿಮಾಡಿಕೊಟ್ಟಿದೆ. ರೈಸ್‌ಮಿಲ್ ತಲುಪಿದ ಅಕ್ಕಿಯನ್ನು 'ಅನ್ನಭಾಗ್ಯ'ದ ಮುದ್ರೆಯಿರುವ ಚೀಲದಿಂದ ಹೊರತೆಗೆದು, ಮರು ಪಾಲಿಶ್ ಮಾಡಿ, ಸ್ಟೀಮ್ ಮಾಡಿದರೆ ಸೋನಾ ಮಸೂರಿಯಂತಾಗುತ್ತದೆ. ಆ ಅಕ್ಕಿಯನ್ನು ಹೊಸ ಚೀಲಕ್ಕೆ ತುಂಬಿಸಿ 'ಹೊಸ ಬ್ರ್ಯಾಂಡ್' ಸೃಷ್ಟಿಸಲಾಗುತ್ತದೆ. ಅದನ್ನು ಅಕ್ರಮವಾಗಿ ಸಾಗಿಸಿದರೆ ಯಾರಿಗೂ ಅನುಮಾನವೇ ಬಾರದು' ಎನ್ನುತ್ತಾರೆ ಅಕ್ಕಿ ಸಾಗಣೆ ಗುತ್ತಿಗೆ ಪಡೆದ ಗುತ್ತಿಗೆದಾರ.

6ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 6




## ಕೆ-ಸೆಟ್ ಪರೀಕ್ಷೆ ಮುಂದೂಡಿಕೆ

ಮೈಸೂರು: ಭಾನುವಾರ (ಏಪ್ರಿಲ್ 11) ನಿಗದಿಯಾಗಿದ್ದ, ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯನ್ನು (ಕೆ-ಸೆಟ್)ಮುಂದೂಡಲಾಗಿದೆ.

## 'ಪದವಿ: ಪರೀಕ್ಷೆ ಖಚಿತ'

ಬೆಂಗಳೂರು: 'ಕೋವಿಡ್ ಪರಿಸ್ಥಿತಿಯ ಕಾರಣಕ್ಕೆ ಈ ವರ್ಷದ ಪದವಿ ತರಗತಿಗಳ ಪರೀಕ್ಷೆ ಹಾಗೂ ಶೈಕ್ಷಣಿಕ ಚಟುವಟಿಕೆ ಸ್ಥಗಿತಗೊಳಿಸುವುದಿಲ್ಲ. ನಿಗದಿಯಾಗಿರುವ ವೇಳಾಪಟ್ಟಿಯಂತೆ ಎಲ್ಲವೂ ನಡೆಯಲಿದೆ' ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು. 4

ಪಶ್ಚಿಮ ಬಂಗಾಳ 4ನೇ ಹಂತದ ಮತದಾನ: ಗೋಲಿಬಾರ್

# ಹಿಂಸಾಚಾರ: ಐದು ಬಲಿ

ಪ್ರಜಾವಾಣಿ ವಾರ್ತೆ

**ಕೋಲ್ಕತ್ತ:** ಪಶ್ಚಿಮ ಬಂಗಾಳ ವಿಧಾನ ಸಭೆಗೆ ಶನಿವಾರ ನಡೆದ ನಾಲ್ಕನೇ ಹಂತದ ಮತದಾನವು ಭಾರಿ ಹಿಂಸಾಚಾರಕ್ಕೆ ಸಾಕ್ಷಿಯಾಗಿದೆ. ಕೂಚ್ ಬಿಹಾರ್ ಜಿಲ್ಲೆಯ ಸೀತಾಲಕುಚಿ ಕ್ಷೇತ್ರದ 126ನೇ ಸಂಖ್ಯೆಯ ಮತಗಟ್ಟೆಯಲ್ಲಿ ಸಿಐಎಸ್‌ಎಫ್ (ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ) ಸಿಬ್ಬಂದಿ 'ಸ್ವರಕ್ಷಣೆ'ಗಾಗಿ ನಡೆಸಿದ ಗೋಲಿಬಾರ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಇದೇ ಕ್ಷೇತ್ರದ 85ನೇ ಸಂಖ್ಯೆಯ ಮತಗಟ್ಟೆಯಲ್ಲಿ ಆನಂದ್ ಬರ್ಮನ್ ಎಂಬ ಯುವಕರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ.

ಐದು ಜಿಲ್ಲೆಗಳ 44 ಕ್ಷೇತ್ರಗಳಿಗೆ ಮತದಾನ ನಡೆಯಿತು. ಶೇ 76.16ರಷ್ಟು (ಸಂಜೆ 5 ಗಂಟೆವರೆಗಿನ ಅಂದಾಜು) ಮತದಾನ ದಾಖಲಾಗಿದೆ.

126ನೇ ಸಂಖ್ಯೆಯ ಮತಗಟ್ಟೆಯಲ್ಲಿ ವ್ಯಕ್ತಿಯೊಬ್ಬರು ಕುಸಿದು ಬಿದ್ದರು. ಸಿಐಎಸ್‌ಎಫ್ ಸಿಬ್ಬಂದಿ ಅವರಿಗೆ ಶುಶ್ರೂಶೆ ಒದಗಿಸುತ್ತಿದ್ದರು. ಆದರೆ, ಕೇಂದ್ರೀಯ ಪಡೆಯು ಹಾರಿಸಿದ ಗುಂಡಿಗೆ ಆ ವ್ಯಕ್ತಿ ಅಸ್ವಸ್ಥರಾದರು ಎಂಬ ವದಂತಿ ಆ ಪ್ರದೇಶದಲ್ಲಿ ಹರಡಿತು ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ವಲ್ಪ ಹೊತ್ತಿನಲ್ಲಿಯೇ 300ರಿಂದ 400 ಜನರಿದ್ದ ಗುಂಪು ಮತಗಟ್ಟೆಯ ಸಮೀಪ ಜಮಾಯಿಸಿತು. ಈ ಗುಂಪು ಮತ್ತು ಸಿಐಎಸ್‌ಎಫ್ ಸಿಬ್ಬಂದಿ ನಡುವೆ ಸಂಘರ್ಷ ಏರ್ಪಟ್ಟಿತು. ಸಿಐಎಸ್‌ಎಫ್ ಸಿಬ್ಬಂದಿಯ ಬಂದೂಕು ಕಸಿದುಕೊಳ್ಳಲು ಯತ್ನಿಸಲಾಯಿತು. ಹಾಗಾಗಿ, ಸಿಬ್ಬಂದಿಯು ಗುಂಡು ಹಾರಿಸಿದರು. ಗುಂಪಿನಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ. ನಾಲ್ವರು ಗಾಯಗೊಂಡಿದ್ದಾರೆ. ಒಬ್ಬರ ತೊಡೆಗೆ ಗುಂಡಿನ ಗಾಯವಾಗಿದೆ. ಇತರರು ತಳ್ಳಾಟದಲ್ಲಿ ಗಾಯಗೊಂಡಿದ್ದಾರೆ. ಗಾಯಗೊಂಡವರಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೇಂದ್ರೀಯ ಪಡೆಯು 'ಸ್ವ ರಕ್ಷಣೆ'ಗಾಗಿ ಗುಂಡು ಹಾರಾಟ ನಡೆಸಿದೆ ಎಂದು ವಿಶೇಷ ಪೊಲೀಸ್ ವೀಕ್ಷಕ ವಿವೇಕ್ ದುಬೆ ಅವರು ಚುನಾವಣಾ ಆಯೋಗಕ್ಕೆ ಕೊಟ್ಟ ಆರಂಭಿಕ ವರದಿಯಲ್ಲಿ ಹೇಳಿದ್ದಾರೆ. ಕೂಚ್‌ಬಿಹಾರ್ ಜಿಲ್ಲೆಗೆ ಮುಂದಿನ 72 ತಾಸು ರಾಜಕಾರಣಿಗಳ ಪ್ರವೇಶಕ್ಕೆ ಆಯೋಗ ನಿಷೇಧ ಹೇರಿದೆ.

## ಮೋದಿ–ಮಮತಾ ಆರೋಪ, ಪ್ರತ್ಯಾರೋಪ

ಹಿಂಸಾಚಾರಕ್ಕೆ ಸಂಬಂಧಿಸಿ ಬಿಜೆಪಿ ಮತ್ತು ಟಿಎಂಸಿ ನಡುವೆ ವಾಕ್ಸಮರ ನಡೆದಿದೆ. ಕೇಂದ್ರೀಯ ಪಡೆಗಳ ವಿರುದ್ಧ ಜನರನ್ನು ಎತ್ತಿಕಟ್ಟುವ ಕೆಲಸವನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಹಿಂಸಾಚಾರಕ್ಕೆ ಹೊಣೆ ಎಂದು ಮಮತಾ ಆಪಾದಿಸಿದ್ದಾರೆ. ಶಾ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 7

**ಚಿನಕುರಳಿ**

ಪ್ರಕಾಶ್ ಶೆಟ್ಟಿ

# ಮುಷ್ಕರ ಮುರಿಯಲು 'ವರ್ಗಾಸ್ತ್ರ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೇತನ ಪರಿಷ್ಕರಣೆಗೆ ಆಗ್ರಹಿಸಿ ಮುಷ್ಕರ ಆರಂಭಿಸಿರುವ ಸಾರಿಗೆ ನಿಗಮಗಳ ನೌಕರರು ಮತ್ತು ಸರ್ಕಾರ ತಮ್ಮ ನಿಲುವನ್ನು ಶನಿವಾರವೂ ಸಡಿಲಗೊಳಿಸಿಲ್ಲ. ಇದರಿಂದಾಗಿ ದಿನನಿತ್ಯದ ಓಡಾಟಕ್ಕೆ ಸರ್ಕಾರಿ ಬಸ್ಸುಗಳನ್ನೇ ನೆಚ್ಚಿಕೊಂಡವರ ಸಂಕಷ್ಟ ಮುಂದುವರಿದಿದೆ.

ಮುಷ್ಕರಕ್ಕೆ ಮಣಿಯದಿರುವ ಪಟ್ಟನ್ನು ಬಿಗಿಗೊಳಿಸಿರುವ ಸರ್ಕಾರ ಹಾಗೂ ಸಾರಿಗೆ ನಿಗಮಗಳು, ಕೆಲಸಕ್ಕೆ ಹಾಜರಾಗದೇ ಇದ್ದರೆ 55 ವರ್ಷ ವಯಸ್ಸಾದವರನ್ನು ಕಡ್ಡಾಯ ನಿವೃತ್ತಿಗೊಳಿಸುವ ಎಚ್ಚರಿಕೆಯನ್ನೂ ರವಾನಿಸಿದೆ. ಅಲ್ಲದೇ, ಅಂತರ ನಿಗಮ ವರ್ಗಾವಣೆ ಅಸ್ತ್ರವನ್ನು ಪ್ರಯೋಗಿಸಿ ಮುಷ್ಕರ ಮುರಿಯುವ ಯತ್ನಕ್ಕೂ ಕೈಹಾಕಿದೆ.

ಹೋರಾಟದ ಮುಂದಿನ ನಡೆ ಕುರಿತು ಚರ್ಚಿಸಲು ಬೆಳಗಾವಿಯಲ್ಲಿ ನಿಗದಿಯಾಗಿದ್ದ ಸಾರಿಗೆ ನಿಗಮಗಳ ನೌಕರರ ಸಭೆಯನ್ನು ಪೊಲೀಸರ ಮಧ್ಯಪ್ರವೇಶದ ಮೂಲಕ ತಡೆಯಲಾಗಿದೆ. ಸಭೆಯಲ್ಲಿ ಭಾಗವಹಿಸಲು ಬೆಳಗಾವಿಗೆ ತೆರಳಿದ್ದ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಹೋಟೆಲ್‌ನಿಂದಲೇ ವಶಕ್ಕೆ ಪಡೆದು ಜಿಲ್ಲೆಯ ಹೊರಕ್ಕೆ ಕಳುಹಿಸಲಾಗಿದೆ.

5ನೇ ಪುಟ ನೋಡಿ

## 'ಮುಷ್ಕರದಲ್ಲಿ ರಾಜಕೀಯ ಬೇಡ'

ಬೆಂಗಳೂರು: ಸಾರಿಗೆ ನಿಗಮಗಳ ನೌಕರರು ನಡೆಸುತ್ತಿರುವ ಮುಷ್ಕರದ ವಿಚಾರದಲ್ಲಿ ವಿರೋಧ ಪಕ್ಷಗಳು ರಾಜಕೀಯ ಮಾಡಬಾರದು ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಹೇಳಿದ್ದಾರೆ.

5ನೇ ಪುಟ ನೋಡಿ

## 22,000 ಖಾಸಗಿ ವಾಹನ ಸಂಚಾರ

ಖಾಸಗಿ ಬಸ್, ಮಿನಿ ಬಸ್, ಮ್ಯಾಕ್ಸಿ ಕ್ಯಾಬ್‌ಗಳ ಸಂಚಾರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಸಾರಿಗೆ ಇಲಾಖೆ ಮೂಲಗಳ ಪ್ರಕಾರ ಶನಿವಾರ ರಾಜ್ಯದಾದ್ಯಂತ 22,000 ಖಾಸಗಿ ಪ್ರಯಾಣಿಕ ವಾಹನಗಳು ಸಂಚಾರ ನಡೆಸಿವೆ.

## ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಸರ್ಕಾರದೊಂದಿಗೆ ಕಾರ್ಯನಿರ್ವಹಿಸಲು ಉತ್ಸಾಹವಿರುವ ಹಿರಿಯ ವೃತ್ತಿಪರರಿಗೆ 'ಭಾರತೀಯ ಆಡಳಿತ ಫೆಲೋಶಿಪ್' ನೀಡಲು ದಿ ನಡ್ಜ್ ಫೌಂಡೇಷನ್ ಅರ್ಜಿ ಆಹ್ವಾನಿಸಿದೆ.

ಫೆಲೋಷಿಪ್‌ಗೆ ಆಯ್ಕೆಯಾಗುವವರು 11 ಇಲಾಖೆಗಳ ಕಾರ್ಯದರ್ಶಿಗಳೊಂದಿಗೆ ಕಾರ್ಯನಿರ್ವಹಿಸಬೇಕು. ಫೆಲೋಷಿಪ್‌ನ ಅವಧಿ 18 ತಿಂಗಳು.

ಅಭ್ಯರ್ಥಿಗಳು ಫೆಲೋಷಿಪ್ ಅವಧಿಯಲ್ಲಿ ವಾರ್ಷಿಕ ₹20 ಲಕ್ಷ ವೇತನ ಪಡೆಯಲಿದ್ದಾರೆ. ಫೆಲೋಶಿಪ್‌ನ ಮಾಹಿತಿ ಮತ್ತು ಅರ್ಜಿ ಸಲ್ಲಿಸಲು https://iaf.thenudge.org ಅನ್ನು ಬಳಸಬಹುದು. ಅರ್ಜಿಗಳನ್ನು ಸಲ್ಲಿಸಲು ಏಪ್ರಿಲ್ 15 ಕೊನೆಯ ದಿನ.

ವಿವರಗಳಿಗೆ iaf@thenudge.org ಅಥವಾ aceokea@karnataka.gov.in ಅನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

## ಹಿಂದೂಯೇತರರಿಗೆ ದೇವಸ್ಥಾನ ಪ್ರವೇಶ ನಿಷೇಧಿಸಿ: ಅಭಿಯಾನ

ಮಂಗಳೂರು: ದೈವಸ್ಥಾನಗಳಲ್ಲಿ ಅವಹೇಳನಕಾರಿ ವಸ್ತುಗಳು ಮತ್ತು ಬರಹ ಹಾಕಿದ ಪ್ರಕರಣ ನಡೆದಿರುವುದನ್ನು ಖಂಡಿಸಿ, #TemplesOnlyForHindus ಟ್ವಿಟರ್ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದನ್ನು ಬೆಂಬಲಿಸಿ, ಹಲವರು ಟ್ವೀಟ್ ಮಾಡಿದ್ದಾರೆ.

ಹಿಂದೂ ಜನಜಾಗೃತಿ ಸಮಿತಿಯಿಂದ ಶನಿವಾರ ಸಂಜೆ ಇದೇ ವಿಷಯವಾಗಿ ವಿಶೇಷ ಸಂವಾದವನ್ನು ವರ್ಚ್ಯುವಲ್ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಅದಕ್ಕೆ ಬೆಂಬಲವಾಗಿ ಟ್ವಿಟರ್ ಅಭಿಯಾನ ನಡೆಸಲಾಗುತ್ತಿದೆ.


**PUBLIC NOTICE**

Public are hereby inform you that my client **M/s DS-Max Properties Pvt. Ltd.**, rep; by its Authorized Signatory, **Sri. Shivashankar Chikkeri**, having its office at # 1854, 17th Main, 30th 'B' Cross, HBR Layout, 1st stage, 5th Block, Bangalore - 560 043, intend to enter into a **Absolute Sale Deed** with **M/S. MITRAVINDA TRUST, Bangalore**, Represented by its Trustee **Sri. A.G. Panduranga** S/o Sri. A.S. Gopalakrishna is the absolute owner of converted land property bearing **Sy. No. 116**, which measuring **4 Acres 12 Guntas**, situated at **Ballur Village**, Attibele Hobli, Anekal Taluk, Bangalore Urban District, in vide; Conversion Order No. **ALN (A)(A)SR -49/2012-2013**, dated **25-05-2012**, for residential use, issued by Deputy Commissioner, Bangalore District, and bounded on:
**East by** : Land in Sy. No. 118 and Sy. No. 102,
**West by** : Land in Sy. No. 117,
**North by** : Sy. No. 115,
**South by** : Remaining Land in Sy. No. 116,
and Whereas converted land property bearing **Sy. No. 116**, which measuring **1 Acre 26 Guntas**, situated at **Ballur Village**, Attibele Hobli, Anekal Taluk, Bangalore Urban District, in vide; Conversion Order No. **ALN (A)(A)SR -105/2012-2013**, dated **30-07-2012**, for residential use, issued by Deputy Commissioner, Bangalore District, and bounded on:
**East by** : Land in Sy. No. 118,
**West by** : Land in Sy. No. 117,
**North by** : Remaining Land in Sy. No. 116,
**South by** : Land in Sy. No. 118,
which total measuring **4 Acres 12 Guntas + 1 Acre 26 Guntas = 5 acres 38 guntas**, which is subject matter property and commonly bounded on:
**East by** : Land in Sy. No. 118 and Sy. No. 102,
**West by** : Road,
**North by** : Sy. No. 115,
**South by** : Land in Sy. No. 118.

AND Further:
my client **M/s DS-Max Properties Pvt. Ltd.**, rep; by its Authorized Signatory, **Sri. Shivashankar Chikkeri**, having its office at # 1854, 17th Main, 30th 'B' Cross, HBR Layout, 1st stage, 5th Block, Bangalore - 560 043, intend to enter into a **Absolute Sale Deed** with **M/S. MITRAVINDA TRUST, Bangalore**, Represented by its Trustee **Sri. A.G. Panduranga** S/o Sri. A.S. Gopalakrishna is the absolute owner of converted land property bearing **Sy. No. 117**, which measuring **3 Acres 39 Guntas**, situated at **Ballur Village**, Attibele Hobli, Anekal Taluk, Bangalore Urban District, in vide; Conversion Order No. **ALN (A)(A)SR -47/2012-2013**, dated **25-05-2012**, for residential use, issued by Deputy Commissioner, Bangalore District, and bounded on:
**East by** : Land in Sy. No. 116,
**West by** : Road,
**North by** : Sy. No. 113 and Sy. No. 114,
**South by** : Remaining Land in Sy. No. 117.

And in furtherance **Sy. No. 116**, which measuring **5 acres 38 guntas + Sy. No. 117** which measuring **03 acres 39 guntas = 9 acres 37 guntas**, which is commonly subject matter of property and commonly bounded on:
**East by** : Land in Sy. No. 118 and Sy. No. 102,
**West by** : Road,
**North by** : Sy. No. 113, 114 and 115,
**South by** : Land in Sy. No. 118
and referred to as **"composite schedule property"**.

Any person or Any other Government Authority or Any Acquisition Authority or Any Agreement Holder / Promoters having any asserting right, title, interest and claims to oppose for Absolute Sale Deed of the composite schedule property and further having any manner of right, title, claims, etc., and may lodge their objections, claims over the property along with relevant papers in support of their claims, to the below address within **10** days from the date of this notice, if any objections fails to comply for claims, my client shall take further steps and shall be entering into Absolute Sale Deed, before registering authority.

**LINGARAJ. S. NADA GOUDA., ADVOCATE**
#1854, 17th Main, 30th 'B' Cross
HBR Layout, 1st Stage, 5th Block,
Bangalore - 560 043.
**Mob : 96204 74780 , 94481 35970**


### ಸೊಣ್ಣಪ್ಪನಹಳ್ಳಿ: ಭೂಕಬಳಿಕೆದಾರರ ವಿರುದ್ಧ ಕ್ರಮಕ್ಕೆ ಗ್ರಾಮಸ್ಥರ ಆಗ್ರಹ

# ಸರ್ಕಾರಿ ಜಮೀನು ಕಬಳಿಕೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ಸೊಣ್ಣಪ್ಪನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಜಮೀನನ್ನು ಕೆಲವರು ಕಬಳಿಸಿ, ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಕಬಳಿಕೆಯಾಗಿರುವ ಎಕರೆಗಟ್ಟಲೆ ಸರ್ಕಾರಿ ಜಮೀನನ್ನು ಕೂಡಲೇ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

'ಸೊಣ್ಣಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 20ರಲ್ಲಿರುವ ಒಂದು ಎಕರೆ 34 ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನು ಕಬಳಿಕೆಯಾಗಿದೆ. ಗ್ರಾಮದ ಸುನೀಲ್ ಎಂಬುವರು ಈ ಜಾಗದಲ್ಲಿ ಶೆಡ್, ಮಳಿಗೆ, ಕ್ಲಬ್ ಹಾಗೂ ಸಿಮೆಂಟ್ ಇಟ್ಟಿಗೆ ತಯಾರಿಸುವ ಕಾರ್ಖಾನೆ ನಿರ್ಮಿಸಿ, ಅವುಗಳಿಂದ ಬಾಡಿಗೆ ಪಡೆಯುತ್ತಿದ್ದಾರೆ. ಇವೆಲ್ಲವೂ ಅಕ್ರಮ' ಎಂದು ಗ್ರಾಮದ ನಿವಾಸಿ ಕೆ.ಮುನಿರಾಜು ಆರೋಪಿಸಿದರು.

ಸೊಣ್ಣಪ್ಪನಹಳ್ಳಿಯ ಸರ್ಕಾರಿ ಜಮೀನಿನಲ್ಲಿ ಶೆಡ್ ಹಾಗೂ ಮಳಿಗೆಗಳ ನಿರ್ಮಾಣ

'ಗ್ರಾಮದ ಮೂಲ ನಕ್ಷೆ ಹಾಗೂ ದಾಖಲೆಗಳಲ್ಲಿ ಈ ಜಮೀನು ಸರ್ಕಾರಕ್ಕೆ ಸೇರಿದ್ದು ಎಂದೇ ಉಲ್ಲೇಖವಾಗಿದೆ. ಆದರೂ, ಜಮೀನನ್ನು ಕಬಳಿಸಿ ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದಾರೆ. ಇದನ್ನು ಪ್ರಶ್ನಿಸಿದಾಗ 'ಅದೆಲ್ಲ ಕೇಳಲು ನೀನ್ಯಾರು? ಎಂದು ಏರುಧ್ವನಿಯಲ್ಲಿ ಕೇಳುತ್ತಾರೆ. ಈ ರೀತಿ ಅಕ್ರಮವಾಗಿ ಸರ್ಕಾರಿ ಜಮೀನನ್ನು ದುರ್ಬಳಕೆ ಮಾಡಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

> **ಸರ್ಕಾರಿ ಜಮೀನು ಕಬಳಿಕೆ ಕುರಿತು ಗ್ರಾಮಸ್ಥರಿಂದ ದೂರು ಬಂದಿದೆ ಸ್ಥಳ ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ**
> **ಮಹೇಶ್,** ಉಪ ತಹಶೀಲ್ದಾರ್

'ಈ ಜಮೀನು ಒತ್ತುವರಿಯಾಗಿರುವ ಕುರಿತು 2001ರಲ್ಲೇ ಅಂದಿನ ವಿಶೇಷ ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದಿತ್ತು. ಸ್ಥಳ ಪರಿಶೀಲಿಸಿದ್ದ ಅಧಿಕಾರಿಗಳು, ಬೋಗಸ್ ದಾಖಲೆ ರದ್ದುಗೊಳಿಸಿ, ಇದು ಸರ್ಕಾರದ ಸ್ವತ್ತು ಎಂದು ಆದೇಶಿಸಿದ್ದರು. ಅದಾದ ಬಳಿಕ ಯಾರೂ ಈ ಜಾಗದ ಕಡೆಗೆ ಬಂದಿರಲಿಲ್ಲ. ಹಾಗಾಗಿ, ಇಲ್ಲಿ ರಾಜಾರೋಷವಾಗಿ ಒತ್ತುವರಿ ನಡೆದಿದೆ. ಒತ್ತುವರಿದಾರರು ಜನರ ಬಾಯಿ ಮುಚ್ಚಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಆದರೆ, ಮೂಲ ದಾಖಲೆಗಳಲ್ಲಿ ಇದು ಸರ್ಕಾರದ ಜಮೀನು ಎಂದೇ ಇದೆ' ಎಂದು ಗ್ರಾಮಸ್ಥ ಲಕ್ಷ್ಮಣ್ ವಿವರಿಸಿದರು.

'ಸರ್ಕಾರಿ ಜಮೀನು ಕಬಳಿಕೆ ಆಗಿರುವ ಕುರಿತು ಗ್ರಾಮ ಲೆಕ್ಕಾಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಈ ಬಗ್ಗೆ ಸ್ಥಳ ಪರಿಶೀಲಿಸಿ, ಸರ್ಕಾರಿ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಈ ವ್ಯಾಪ್ತಿಯ ಉಪ ತಹಶೀಲ್ದಾರ್ ಅವರಿಗೂ ದಾಖಲೆಗಳ ಸಹಿತ ಮನವಿ ಸಲ್ಲಿಸಿದ್ದೇವೆ. ಇದಕ್ಕೆ ಸ್ಪಂದಿಸಿರುವ ಉಪ ತಹಶೀಲ್ದಾರ್ ಅವರು ಒತ್ತುವರಿ ತೆರವುಗೊಳಿಸಿ, ಜಾಗಕ್ಕೆ ಕಾಂಪೌಡ್ ನಿರ್ಮಿಸುವ ಭರವಸೆ ನೀಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಅನ್ಯಾಯವನ್ನು ತಡೆಯಬೇಕು. ಸರ್ಕಾರಿ ಜಮೀನನ್ನು ಅಕ್ರಮವಾಗಿ ಬಳಕೆ ಮಾಡಿಕೊಂಡವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಗ್ರಾಮದ ನಿವಾಸಿ ಕುಮಾರ್ ಮನವಿ ಮಾಡಿದರು.

ಪೊಲೀಸ್ ಇಲಾಖೆಯಲ್ಲಿ ಗಣನೀಯ ಸೇವೆ ಸಲ್ಲಿಸಿ ಮುಖ್ಯಮಂತ್ರಿ ಪದಕ ಪಡೆದ ಕೆ.ಆರ್.ಪುರ ಸಂಚಾರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಎಂ.ಎ.ಮೊಹಮ್ಮದ್ ಅವರನ್ನು ಎಸಿಪಿ ತಿಪ್ಪೇಸ್ವಾಮಿ ಸನ್ಮಾನಿಸಿದರು. ಠಾಣೆಯ ಸಿಬ್ಬಂದಿ ಇದ್ದರು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

# 'ಜಗತ್ತಿಗೇ ಮಾನವ ಸಂಪನ್ಮೂಲ ಪೂರೈಸಲು ಭಾರತ ಸಶಕ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭವಿಷ್ಯದಲ್ಲಿ ಜಗತ್ತಿಗೇ ಮಾನವ ಸಂಪನ್ಮೂಲ ನೀಡುವ ಸಾಮರ್ಥ್ಯ ಇರುವ ದೇಶ ಭಾರತ. ವಿದ್ಯಾಕ್ಷೇತ್ರಕ್ಕೆ ಹೊಸ ದಿಕ್ಸೂಚಿ ನೀಡಲು ರಾಷ್ಟ್ರೀಯ ಶಿಕ್ಷಣ ನೀತಿ ಸಜ್ಜಾಗಿದೆ' ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಅಭಿಪ್ರಾಯಪಟ್ಟರು.

ಕನಕಪುರ ರಸ್ತೆ ಬಳಿಯ 'ಪ್ರಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ'ಯ ಉದ್ಘಾಟನೆ ಸಲುವಾಗಿ ವರ್ಚುವಲ್ ರೂಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಶನಿವಾರ ಮಾತನಾಡಿದರು.

'ಕರ್ನಾಟಕ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಕೇಂದ್ರವಾಗಿದೆ. ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು' ಎಂದು ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

'ಆರ್ಥಿಕವಾಗಿ ಹಿಂದುಳಿದ ಹಾಗೂ ವಿಜ್ಞಾನದ ಬಗ್ಗೆ ಹೆಚ್ಚು ಒಲವು ಹೊಂದಿರುವ ಮಕ್ಕಳಿಗೆ 'ಪ್ರಯೋಗ'ದಂತಹ ಲಾಭರಹಿತ ಶಿಕ್ಷಣ ಸಂಸ್ಥೆಗಳು ಒಂದು ಬಲವಾದ ತಳಪಾಯ ಒದಗಿಸುತ್ತವೆ. ವೈಜ್ಞಾನಿಕ ಆಸಕ್ತಿಯುಳ್ಳ ಮಕ್ಕಳಿಗೆ ಗುಣಮಟ್ಟದ ಹಾಗೂ ಪ್ರಯೋಗಾತ್ಮಕ ಶಿಕ್ಷಣ ಒದಗಿಸಲು ಇದು ಉತ್ತಮ ವೇದಿಕೆಯಾಗಲಿದೆ' ಎಂದರು.

ಕನಕಪುರ ರಸ್ತೆ ಬಳಿಯ ಪ್ರಯೋಗ ಶಿಕ್ಷಣ ಸಂಶೋಧನಾ ಸಂಸ್ಥೆಯ ನೂತನ ಕಟ್ಟಡ –ಪ್ರಜಾವಾಣಿ ಚಿತ್ರ

ಪ್ರಯೋಗ ಸಂಸ್ಥೆಯ ಸ್ಥಾಪಕ ಎಚ್.ಎಸ್.ನಾಗರಾಜ್, 'ಈಗಿನ ಶಿಕ್ಷಣ ವ್ಯವಸ್ಥೆ ಮಕ್ಕಳಲ್ಲಿ ವೈಜ್ಞಾನಿಕ ಪ್ರಜ್ಞೆ ಬೆಳೆಸುವುದರಲ್ಲಿ ಹಾಗೂ ಮೂಲ ತತ್ವಗಳನ್ನು ಅರ್ಥೈಸುವಲ್ಲಿ ವಿಫಲವಾಗಿವೆ. ಮಕ್ಕಳು ಬಾಲ್ಯದಲ್ಲಿ ಕಲಿಯುವ ನೈಜ ಜೀವನದ ಕಲಿಕೆಗಳೇ ಅವರ ಭವಿಷ್ಯದ ಶಿಕ್ಷಣಕ್ಕೆ ಆಧಾರ. ಈ ವಿಧಾನದ ಕಲಿಕೆಯು ಅವರ ಜೀವನದ ದೃಷ್ಟಿಕೋನ ಹಾಗೂ ಸಾಮರ್ಥ್ಯಕ್ಕೆ ಅಡಿಪಾಯ' ಎಂದರು.

ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ, ಶಿಕ್ಷಣ ತಜ್ಞ ಎಂ.ಆರ್.ದೊರೆಸ್ವಾಮಿ, ಸಂಸದ ತೇಜಸ್ವಿಸೂರ್ಯ, ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತ ಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

## ತಹಶೀಲ್ದಾರ್ ಮಧ್ಯಸ್ಥಿಕೆಯಲ್ಲಿ ಅಂತ್ಯಸಂಸ್ಕಾರ

ಮಧುಗಿರಿ: ತಹಶೀಲ್ದಾರ್ ಮಧ್ಯಪ್ರವೇಶದಿಂದ ಮೃತ ದೇಹವನ್ನು ಅಂತ್ಯ ಸಂಸ್ಕಾರ ಮಾಡಿದ ಘಟನೆ ತಾಲ್ಲೂಕಿನ ವಡೇರಹಳ್ಳಿಯಲ್ಲಿ ಶನಿವಾರ ಬೆಳಿಗ್ಗೆ ನಡೆಯಿತು.

ತಾಲ್ಲೂಕಿನ ಕಸಬಾ ವ್ಯಾಪ್ತಿಯ ಬಸವನಹಳ್ಳಿ ಗ್ರಾಮದ ನರಸಪ್ಪ (56) ಅನಾರೋಗ್ಯದಿಂದಾಗಿ ಶುಕ್ರವಾರ ರಾತ್ರಿ ಮೃತಪಟ್ಟಿದ್ದರು. ಅವರ ಮೃತದೇಹವನ್ನು ಪಕ್ಕದ ಗ್ರಾಮ ವಡೇರಹಳ್ಳಿಯ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ಮಾಡಲು ಹೋದಾಗ, ವಡೇರಹಳ್ಳಿ ಗ್ರಾಮಸ್ಥರು ತಡೆದರು. ಈ ವಿಚಾರವಾಗಿ ಎರಡು ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆಯಿತು.

ಈ ವಿಷಯ ತಿಳಿದು ಮಧ್ಯಪ್ರವೇಶಿಸಿದ ತಹಶೀಲ್ದಾರ್ ಸ್ಟೆಲ್ಲಾ ವರ್ಗೀಸ್ ಅವರು,'ಎರಡು ಗ್ರಾಮಕ್ಕೂ ಸೇರಿಕೊಂಡು 20 ಗುಂಟೆ ಜಾಗವನ್ನು ರುದ್ರಭೂಮಿಗಾಗಿ ಜಿಲ್ಲಾಧಿಕಾರಿ ಮಂಜೂರು ಮಾಡಿದ್ದಾರೆ' ಎಂದು ತಿಳಿಸಿದ್ದಾರೆ.

'ಬಸವನಹಳ್ಳಿಗೆ 10ಗುಂಟೆ, ವಡೇರಹಳ್ಳಿ ಗ್ರಾಮಕ್ಕೆ 10 ಗಂಟೆ ಜಾಗ ಮಂಜೂರಾಗಿದೆ ಎಂದರು. ಸ್ಥಳದಲ್ಲಿ ಸಿಪಿಐ ಎಂ.ಎಸ್.ಸರ್ದಾರ್, ಪಿಎಸ್‌ಐ ಮಂಗಳಗೌರಮ್ಮ, ಪಿಡಿಒ ಗೌಡಪ್ಪ, ಸಿದ್ದಾಪುರ ರಂಗಶಾಮ್ಯಣ್ಣ ಇದ್ದರು.

- ನಿಯಮ ಮೀರಿ ಟೋಯಿಂಗ್ ಮಾಡಲಾಗುತ್ತಿದೆಯಾ ?
- ಟೋಯಿಂಗ್ ವಾಹನದ ಸಿಬ್ಬಂದಿ ಅನುಚಿತವಾಗಿ ವರ್ತಿಸುತ್ತಿದ್ದಾರಾ ?
- ದಾಖಲೆ ಸರಿ ಇದ್ದರೂ ಪೊಲೀಸರು ದಂಡ ವಿಧಿಸುತ್ತಿದ್ದಾರಾ ?
- ನಿಯಮ ಪಾಲಿಸಿದರೂ ವಾಹನ ಅಡ್ಡಗಟ್ಟಿ ದಂಡ ವಸೂಲಿ ಮಾಡುತ್ತಿದ್ದಾರಾ?
- ಸಂಚಾರ ಪೊಲೀಸರ ಕಾರ್ಯವೈಖರಿ ಬಗ್ಗೆ ದೂರುಗಳು ಇವೆಯಾ?

ನಿಮ್ಮ ಸಮಸ್ಯೆಗಳನ್ನು ಆಲಿಸಲಿದ್ದಾರೆ **ಬಿ.ಆರ್. ರವಿಕಾಂತೇಗೌಡ,** ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್

**12.04.2021, ಸೋಮವಾರ**
**ಬೆಳಿಗ್ಗೆ 11 ರಿಂದ ಮಧ್ಯಾಹ್ನ 12**

ಕರೆಮಾಡಿ **080-4555 7230**

facebook LIVE fb.com/prajavani.net

ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಭೀಮಸೇನ ಅವರು ಕಲಾ ನಿರ್ದೇಶಕ ಶಶಿಧರ ಅಡಪ ಅವರಿಗೆ ಯುಗಾದಿ ರಂಗ ಪುರಸ್ಕಾರ ಪ್ರದಾನ ಮಾಡಿದರು. (ಎಡದಿಂದ) ಮಾಲೂರು ವಿಜಿ, ಎಚ್.ಎಸ್.ಶಿವಪ್ರಕಾಶ್, ಸುನೇತ್ರಾ ಪಂಡಿತ್ ಹಾಗೂ 'ಮುಖ್ಯಮಂತ್ರಿ' ಚಂದ್ರು ಇದ್ದಾರೆ

# ಯುವಕರು ನಾಟಕ ಕ್ಷೇತ್ರಕ್ಕೆ ಬರಲಿ: ಶಿವಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ನಾಟಕ ಕ್ಷೇತ್ರಕ್ಕೆ ಬರಬೇಕು. ಅವರನ್ನು ನಾಟಕ ರಂಗದತ್ತ ಸೆಳೆಯುವ ಪ್ರಯತ್ನ ಆಗಬೇಕು. ಅವರಿಗೆ ಸಮಾಜದ ಆಗುಹೋಗುಗಳ ಬಗ್ಗೆ ತಿಳಿಸಿ ಹೇಳುವ ಕೆಲಸ ನಡೆಯಬೇಕು' ಎಂದು ನಾಟಕಕಾರ ಎಚ್.ಎಸ್.ಶಿವಪ್ರಕಾಶ್ ಹೇಳಿದರು.

ರಂಗ ವಿಜಯಾ ನಾಟಕೋತ್ಸವ–2021ರ ಅಂಗವಾಗಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಯುಗಾದಿ ರಂಗ ಪುರಸ್ಕಾರ–2020 ಸಮಾರಂಭದಲ್ಲಿ ಅವರು ಮಾತನಾಡಿದರು.

'ಈಗಿನ ಪರಿಸ್ಥಿತಿಯಲ್ಲಿ ಸಮಾಜಕ್ಕೆ ತಲುಪುವಂತಹ ನಾಟಕಗಳು ಹೆಚ್ಚಿನ ಸಂಖ್ಯೆಯಲ್ಲಿ ಮೂಡಿಬರಬೇಕು. ಎಲ್ಲಾ ಬಡಾವಣೆಗಳಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನಸಾಮಾನ್ಯರಲ್ಲಿ ನಾಟಕದ ಅಭಿರುಚಿ ಮೂಡಿಸಬೇಕು' ಎಂದರು.

ಇದಕ್ಕೂ ಮುನ್ನ ನಡೆದ 'ರಂಗ ಸಂವಾದ'ದಲ್ಲಿ ಮಾತನಾಡಿದ ರಂಗ ನಿರ್ದೇಶಕ ಶಶಿಧರ ಭಾರಿಘಾಟ್ 'ಪ್ರಸ್ತುತ ಹವ್ಯಾಸಿ ರಂಗಭೂಮಿಯಲ್ಲಿ 70ರ ಹಾಗೂ 80ರ ದಶಕದಲ್ಲಿದ್ದಂತಹ ವೈಭವ ಕಾಣಸಿಗುತ್ತಿಲ್ಲ. ಜನರನ್ನು ನಾಟಕದತ್ತ ಸೆಳೆಯುವುದು ಹೇಗೆ ಎಂಬ ಸವಾಲು ಎದುರಾಗಿದೆ' ಎಂದು ಅಭಿಪ್ರಾಯಪಟ್ಟರು.

ರಂಗ ನಿರ್ದೇಶಕ ಬಿ.ವಿ.ರಾಜಾರಾಂ, 'ನಾವು ಪ್ರೇಕ್ಷಕರನ್ನು ಕಳೆದುಕೊಳ್ಳುತ್ತಿದ್ದೇವೆ. ಬಡಾವಣೆ ರಂಗಭೂಮಿಗ ಳತ್ತ ಹೆಚ್ಚಿನ ಗಮನ ಹರಿಸಬೇಕು. ಆಗ ಮಾತ್ರ ಜನರನ್ನು ಸೆಳೆಯಲು ಸಾಧ್ಯ' ಎಂದರು.

ಜಿ.ಪಿ.ಒ. ಚಂದ್ರು, ರಾಜಕುಮಾರ, ರಾಜಗುರು ಹೊಸಕೋಟೆ ಇದ್ದರು.

### ನಿಧನ ವಾರ್ತೆ

## ಸರಸ್ವತಿ ವಿ.ಆರ್. ರಾಮಯ್ಯ

ಬೆಂಗಳೂರು: ಜಯನಗರದ ಸರಸ್ವತಿ ವಿ.ಆರ್. ರಾಮಯ್ಯ (83) ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ನಿಧನರಾದರು.

ಅವರಿಗೆ ಐದು ಮಂದಿ ಮಕ್ಕಳು ಇದ್ದಾರೆ. ಅವರು ಕಾಂಗ್ರೆಸ್‌ನ ಹಿರಿಯ ಮುಖಂಡ ಎಂ.ಆರ್.ಸೀತಾರಾಮ್ ಅವರ ಅತ್ತೆ.

ಲಕ್ಷ್ಮೀಪುರದ ಚಿತಾಗಾರದಲ್ಲಿ ಸರಸ್ವತಿ ಅವರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಪೈಲ್ವಾನ್ ಎಂ. ಜಯರಾಂ

ಬೆಂಗಳೂರು: ತಿಗಳರಪೇಟೆಯ ಪೈಲ್ವಾನ್ ಎಂ. ಜಯರಾಂ (73) ಅವರು ಶುಕ್ರವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ ಇದ್ದಾರೆ. ಕುಂಜಣ್ಣ ಗರಡಿ ಮುಂಭಾಗದಲ್ಲಿ ಶನಿವಾರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಜಯರಾಂ ಅವರು ಬಿಬಿಎಂಪಿ ವತಿಯಿಂದ ನೀಡುವ ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರಾಗಿದ್ದರು.

### ನಗರದಲ್ಲಿ ಇಂದು

**ಲಸಿಕೆ ಸಂಭ್ರಮಾಚರಣೆ ಕಾರ್ಯಕ್ರಮ ಹಾಗೂ ಮಹಿಳಾ ಸಬಲೀಕರಣ ಕಾರ್ಯಕ್ರಮ:** ಉದ್ಘಾಟನೆ–ಸಚಿವ ಕೆ.ಸುಧಾಕರ್, ಆಯೋಜನೆ–ವೈದ್ಯಕೀಯ ಶಿಕ್ಷಣ ಇಲಾಖೆ, ಸ್ಥಳ–ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು, ಶಿವಾಜಿನಗರ, ಬೆಳಿಗ್ಗೆ 9.30

**ಇಮಾ ಎಮಾಕ್ಯುಲೇಟ್ ಅವರಿಂದ 'ಹಳೆಯ ಕಾಲದ ಬಂಗಾರದಂತಹ ಆಟಗಳು' ಮಕ್ಕಳಿಗೆ ಆಟಗಳ ಕಾರ್ಯಾಗಾರ:** ಆಯೋಜನೆ–ಇಮಾ ರಿಕ್ರಿಯೇಷನ್ಸ್, ಸ್ಥಳ–ರಾಗಿಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

**ಅತ್ಯಂತ ಪೋಷಕಾಂಶಗಳುಳ್ಳ ಸೂಕ್ಷ್ಮ ಸೊಪ್ಪುಗಳನ್ನು ಬೆಳೆಯುವ ಕುರಿತು 'ಮೈಕ್ರೊ ಗ್ರೀನ್ಸ್' ಕಾರ್ಯಾಗಾರ:** ಆಯೋಜನೆ–ಸ್ವಾಸ್ಥ್ಯ ಮೈಕ್ರೊ ಗ್ರೀನ್ಸ್, ಸ್ಥಳ–ರಾಗಿಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

**ಜ್ಯೋತಿಬಾ ಫುಲೆ ಜಯಂತಿಯ ಅಂಗವಾಗಿ ಜ್ಞಾನ ಪ್ರಸಾರ ಐಕ್ಯತಾ ಕಾರ್ಯಕ್ರಮ:** ಉದ್ಘಾಟನೆ–ಜ್ಞಾನಪ್ರಕಾಶ ಸ್ವಾಮೀಜಿ, ಮಾಲಾರ್ಪಣೆ–ನಿವೃತ್ತ ನ್ಯಾ.ಎಚ್.ಎನ್. ನಾಗಮೋಹನ್ ದಾಸ್, ಅಧ್ಯಕ್ಷತೆ–ಎಚ್.ಮಾರಪ್ಪ, ಅತಿಥಿಗಳು–ಪಿ.ಆರ್. ರಮೇಶ್, ಕೆ.ಎಸ್. ಭಗವಾನ್, ಎಚ್.ಆರ್.ವಿಶ್ವನಾಥ್, ಕಲೈ ಸೆಲ್ವಿ, ಆಯೋಜನೆ–ದಲಿತ ಸಂಘರ್ಷ ಸಮಿತಿ, ಸ್ಥಳ–ಬಾಪೂ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 11



ನಾಗಮೋಹನ್ ದಾಸ್

**ಸಾಧಕರಿಗೆ ಅಭಿನಂದನೆ:** ಅಧ್ಯಕ್ಷತೆ–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಕೆ.ಎನ್. ವೆಂಕಟನಾರಾಯಣ್, ಅತಿಥಿಗಳು–ಶಾಸಕರಾದ ಆರ್.ವಿ.ದೇಶಪಾಂಡೆ, ಎಲ್.ಎ. ರವಿಸುಬ್ರಹ್ಮಣ್ಯ, ಉದಯ್ ಬಿ. ಗರುಡಾಚಾರ್, ಅಭಿನಂದನೆ–ಕೆ.ವೈ. ವೆಂಕಟೇಶ್, ಸಚ್ಚಿದಾನಂದ ಮೂರ್ತಿ, ಸುನೀಲ್ ಪುರಾಣಿಕ್, ಎಚ್. ವಿ.ರಾಜೀವ್, ಫಣೀಶ್, ಎಸ್. ದತ್ತಾತ್ರಿ, ಸಿ.ಎ.ಕಿಶೋರ್, ಆಯೋಜನೆ–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ–ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಮಧ್ಯಾಹ್ನ 2



ಸುನೀಲ್ ಪುರಾಣಿಕ್

**ಅಂಬೇಡ್ಕರ್ ಹಬ್ಬ–ವಿಶೇಷ ವೆಬಿನಾರ್ ಉಪನ್ಯಾಸ ಸರಣಿ:** ವಿಷಯ–ರಾಷ್ಟ್ರೀಯತೆಯನ್ನು ಸಶಕ್ತಗೊಳಿಸುವಲ್ಲಿ ತಳಸಮುದಾಯಗಳ ಪಾತ್ರ–ಸಮಸ್ಯೆ ಮತ್ತು ವಿಮೋಚನೆಯ ವಿಧಾನಗಳು, ಮಾತನಾಡುವವರು–ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷತೆ–ಬಾನು ಮುಷ್ತಾಕ್, ಸಂಜೆ 6.30 (ಆನ್‌ಲೈನ್ ಕಾರ್ಯಕ್ರಮ)

## 'ಮುದ್ರಾ' ಸಾಲ: ₹ 6.03 ಲಕ್ಷ ವಂಚನೆ

ಬೆಂಗಳೂರು: ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ಸಾಲ ಕೊಡಿಸುವುದಾಗಿ ಹೇಳಿ ನಗರದ ನಿವಾಸಿಯೊಬ್ಬರಿಂದ ₹ 6.03 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಕುರಿತು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೇವನಹಳ್ಳಿ ನಿವಾಸಿ 36 ವರ್ಷದ ವ್ಯಕ್ತಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮುದ್ರಾ ಯೋಜನೆಯಡಿ ಸಾಲ ಪಡೆಯುವುದಕ್ಕಾಗಿ ದೂರುದಾರ, ಇಂಟರ್‌ನೆಟ್‌ನಲ್ಲಿ ಹುಡುಕಾಡಿದ್ದರು. ಅದನ್ನು ತಿಳಿದುಕೊಂಡಿದ್ದ ಅಪರಿಚಿತ, ದೂರುದಾರರಿಗೆ ಕರೆ ಮಾಡಿ, 'ಮುದ್ರಾ ಯೋಜನೆ ಅಡಿ ಸಾಲ ಕೊಡಿಸುತ್ತೇನೆ' ಎಂದಿದ್ದರು. ಈ ಸಂಗತಿ ದೂರಿನಲ್ಲಿದೆ ಎಂದೂ ಮೂಲಗಳು ತಿಳಿಸಿವೆ.

'ವಾಟ್ಸ್‌ಆ್ಯಪ್ ಮೂಲಕ ದೂರುದಾರರಿಂದ ದಾಖಲೆ ಪಡೆದ ಆರೋಪಿ, ಸಾಲ ಮಂಜೂರು ಮಾಡಲು ಕೆಲ ಶುಲ್ಕಗಳನ್ನು ಪಾವತಿಸಬೇಕೆಂದು ಹೇಳಿದ್ದ. ಅದನ್ನು ನಂಬಿದ ದೂರುದಾರ, ಗೂಗಲ್ ಪೇ ಮೂಲಕ ಹಂತಹಂತವಾಗಿ ₹ 6.03 ಲಕ್ಷ ಜಮೆ ಮಾಡಿದ್ದರು. ಹಣ ಪಡೆದ ನಂತರ ಆರೋಪಿ ನಾಪತ್ತೆಯಾಗಿ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ' ಎಂದೂ ಮೂಲಗಳು ಹೇಳಿವೆ.

ಕ್ಯಾಮೆರಾ ಕಣ್ತಪ್ಪಿಸಲು ವಾಹನ ಸವಾರರಿಂದ ನಾನಾ ಕಸರತ್ತು

# ದಂಡ ತಪ್ಪಿಸಲು ಫಲಕ ಮುಚ್ಚುವ ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರನ್ನು ಪತ್ತೆ ಮಾಡಲು ಪೊಲೀಸರು ಕ್ಯಾಮೆರಾಗಳನ್ನು ಬಳಸುತ್ತಿದ್ದರೆ, ಕ್ಯಾಮೆರಾ ಕಣ್ಣಿನಿಂದ ತಪ್ಪಿಸಿಕೊಳ್ಳಲು ಕೆಲ ದ್ವಿಚಕ್ರ ವಾಹನ ಸವಾರರು ನಾನಾ ತಂತ್ರಗಳನ್ನು ಅನುಸರಿಸುತ್ತಿದ್ದಾರೆ.

ನಗರದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಪ್ರತಿಯೊಂದು ರಸ್ತೆಯಲ್ಲೂ ದಟ್ಟಣೆ ಸಾಮಾನ್ಯವಾಗಿದೆ. ಆದರೆ, ಸಂಚಾರ ವಿಭಾಗದಲ್ಲಿ ಸಿಬ್ಬಂದಿ ಕೊರತೆ ಇದೆ. ಈ ಕಾರಣದಿಂದಾಗಿ, ನಿಯಮ ಉಲ್ಲಂಘನೆಯನ್ನು ಕ್ಯಾಮೆರಾಗಳ ಮೂಲಕ ಪತ್ತೆ ಮಾಡಿ, ಸವಾರರಿಗೆ ದಂಡ ವಿಧಿಸಲಾಗುತ್ತಿದೆ.

ಸಿಬ್ಬಂದಿ ಕೈಗೂ ಹೊಸ ತಂತ್ರಜ್ಞಾನದ ಟ್ಯಾಬ್ ಹಾಗೂ ಮೊಬೈಲ್‌ಗಳನ್ನು ನೀಡಲಾಗಿದೆ. ನಿಯಮ ಉಲ್ಲಂಘಿಸುವ ವಾಹನಗಳ ಫೋಟೊಗಳನ್ನು ಸೆರೆಹಿಡಿಯುವುದಕ್ಕೆ ಅವಕಾಶವಿದೆ.

ಇಂಥ ಕ್ಯಾಮೆರಾದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಕೆಲ ಸವಾರರು, ವಾಹನಗಳ ನೋಂದಣಿ ಸಂಖ್ಯೆ ಫಲಕಗಳನ್ನು ಮರೆಮಾಚಿಕೊಂಡು ಓಡಾಡು ತ್ತಿದ್ದಾರೆ. ಸವಾರರ ಈ ವರ್ತನೆಯ ದೃಶ್ಯಗಳು ಸಹ ಕ್ಯಾಮೆರಾದಲ್ಲಿ ಸೆರೆ ಯಾಗಿವೆ.

'ಕೆಲವರು ಹೆಲ್ಮೆಟ್ ಧರಿಸದಿರುವುದು ಸೇರಿದಂತೆ ಹಲವು ಬಗೆಯಲ್ಲಿ ನಿಯಮ ಉಲ್ಲಂಘಿಸುತ್ತಿದ್ದಾರೆ. ಕ್ಯಾಮೆರಾ ಕಂಡ ಕೂಡಲೇ ಫಲಕವನ್ನು ಮುಚ್ಚಿಕೊಂಡು ಹೋಗುತ್ತಿದ್ದಾರೆ. ಕೆಲ ಮಹಿಳೆಯರು, ಸೀರೆ ಸೆರಗಿನಿಂದಲೂ ಫಲಕ ಮುಚ್ಚಿಕೊಂಡು ಹೋಗಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಸಂಚಾರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಸವಾರರ ಸಂಚಾರಕ್ಕೆ ಅಡ್ಡಿಪಡಿಸಬಾರದೆಂಬ ಕಾರಣಕ್ಕೆ ಸಿಬ್ಬಂದಿ ರಸ್ತೆಯಲ್ಲಿ ಸವಾರರನ್ನು ಅಡ್ಡಗಟ್ಟುತ್ತಿಲ್ಲ. ನಿಯಮ ಉಲ್ಲಂಘಿಸಿದರೂ ಕ್ಯಾಮೆರಾದಲ್ಲಿ ಸೆರೆ ಹಿಡಿದು, ಸವಾರರ ಮನೆಗೂ ದಂಡದ ರಶೀದಿ ಸಮೇತ ನೋಟಿಸ್ ಕಳುಹಿಸಲಾಗುತ್ತಿದೆ. ಆದರೆ, ಕೆಲ ಸವಾರರು ಮಾತ್ರ ಕ್ಯಾಮೆರಾವನ್ನೇ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ' ಎಂದೂ ತಿಳಿಸಿದರು.

'ಕೈ, ಕಾಲು, ಬಟ್ಟೆ, ಎಲೆಗಳಿಂದಲೂ ದ್ವಿಚಕ್ರ ವಾಹನದ ಹಿಂಭಾಗದ ನೋಂದಣಿ ಸಂಖ್ಯೆ ಫಲಕವನ್ನು ಮುಚ್ಚುತ್ತಿದ್ದಾರೆ. ಕ್ಯಾಮೆರಾದಲ್ಲಿ ವಾಹನದ ನೋಂದಣಿ ಸಂಖ್ಯೆ ಸೆರೆಯಾಗಬಾರದೆಂಬ ಕಾರಣಕ್ಕೆ ಅವರು ಈ ರೀತಿ ಮಾಡುತ್ತಿದ್ದಾರೆ' ಎಂದೂ ಹೇಳಿದರು.

ದಂಡದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ದ್ವಿಚಕ್ರ ವಾಹನಗಳ ನೋಂದಣಿ ಸಂಖ್ಯೆ ಫಲಕವನ್ನು ಮುಚ್ಚಿರುವುದು

ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆ ಫಲಕವನ್ನು ಸೊಪ್ಪಿನಿಂದ ಮುಚ್ಚಿರುವುದು

## 'ವ್ಹೀಲಿಂಗ್ ವೇಳೆ ಸಿಕ್ಕಿಬಿದ್ದರೆ ಮುಚ್ಚಳಿಕೆ ಪಡೆದು ನಿಗಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆಯಲ್ಲಿ ವ್ಹೀಲಿಂಗ್ ಮಾಡುವವರನ್ನು ಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುವುದು. ಜೊತೆಗೆ, ಮುಚ್ಚಳಿಕೆ ಬರೆಸಿಕೊಂಡು ಮತ್ತೊಮ್ಮೆ ವ್ಹೀಲಿಂಗ್ ಮಾಡದಂತೆ ನಿಗಾ ವಹಿಸಲಾಗುವುದು' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದರು.

ನಗರದ ಬನಶಂಕರಿ ಸಂಚಾರ ಠಾಣೆಯಲ್ಲಿ ಶನಿವಾರ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

'ಪ್ರಮುಖ ರಸ್ತೆಗಳಲ್ಲಿ ವ್ಹೀಲಿಂಗ್ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಇತರೆ ವಾಹನಗಳ ಸಂಚಾರಕ್ಕೂ ಅಡ್ಡಿಯಾಗುತ್ತಿದ್ದು, ಇದರಿಂದ ಸ್ಥಳೀಯರಲ್ಲಿ ಭಯ ಉಂಟಾಗಿದೆ' ಎಂದು ನಿವಾಸಿಗಳು ದೂರಿದರು.

ರವಿಕಾಂತೇಗೌಡ, 'ವ್ಹೀಲಿಂಗ್ ಮಾಡುವವರ ಮೇಲೆ ನಿರಂತರವಾಗಿ ಕಣ್ಣಿಟ್ಟು ಅಂತಹವರನ್ನು ಬಂಧಿಸಲಾಗುತ್ತಿದೆ. ಇನ್ನು ಮುಂದೆ ಅವರಿಂದ ಮುಚ್ಚಳಿಕೆಯನ್ನೂ ಬರೆಸಿಕೊಳ್ಳಲಿದ್ದೇವೆ. ವ್ಹೀಲಿಂಗ್ ಮಾಡಿ ಎರಡನೇ ಬಾರಿ ಸಿಕ್ಕಿಬಿದ್ದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ವ್ಹೀಲಿಂಗ್ ಮಾಡುವವರ ಬಗ್ಗೆ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಬೇಕು' ಎಂದು ಕೋರಿದರು.

ನಿವಾಸಿಗಳು, 'ಮನೆಯಲ್ಲಿ ಜಾಗವಿದ್ದರೂ ಕೆಲವರು ರಸ್ತೆ ಮೇಲೆಯೇ ವಾಹನ ನಿಲ್ಲಿಸುತ್ತಿದ್ದಾರೆ. ಕೆಲವರು, ಅಪ್ರಾಪ್ತರ ಕೈಗೆ ವಾಹನ ಕೊಟ್ಟು ಕಳುಹಿಸುತ್ತಿದ್ದಾರೆ' ಎಂದು ದೂರಿದರು.

ರವಿಕಾಂತೇಗೌಡ, 'ಮನೆ ಜಾಗದಲ್ಲಿ ವಾಹನ ಪಾರ್ಕಿಂಗ್ ಮಾಡುವಂತೆ ಸೂಚಿಸಲಾಗುವುದು. ಸಾರ್ವಜನಿಕರ ವಾಹನಗಳಿಗೆ ತೊಂದರೆ ಉಂಟು ಮಾಡಿದರೆ ದಂಡ ವಿಧಿಸಲಾಗುವುದು. ಅಪ್ರಾಪ್ತರಿಗೆ ವಾಹನ ಚಲಾಯಿಸಿದರೆ, ಪೋಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

# ಅನಿಲ ಸೋರಿಕೆ; ಹೋಟೆಲ್‌ನಲ್ಲಿ ಬೆಂಕಿ–ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯದ ತೋಟದ ರಸ್ತೆಯಲ್ಲಿರುವ ವಿನಾಯಕ್ ಹೋಟೆಲ್‌ನಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ಹೋಟೆಲ್ ಮಾಲೀಕರಾದ ರಾಜಣ್ಣ (56), ಗಾಯತ್ರಿ (51), ಕೆಲಸಗಾರ ಭಾಸ್ಕರ್ ಹಾಗೂ ಗ್ರಾಹಕ ಗಂಗರಾಜು ಗಾಯಗೊಂಡವರು. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಸಣ್ಣ ಶೆಡ್ ಹಾಕಿಕೊಂಡು ರಾಜಣ್ಣ ಹಾಗೂ ಕುಟುಂಬದವರು ಹೋಟೆಲ್ ನಡೆಸುತ್ತಿದ್ದರು. ಶನಿವಾರ ನಸುಕಿನಲ್ಲಿ ಹೋಟೆಲ್‌ನ ಬಾಗಿಲು ತೆರೆಯಲಾಗಿತ್ತು. ಬೆಳಿಗ್ಗೆಯಿಂದಲೇ ಗ್ರಾಹಕರು ಹೋಟೆಲ್‌ಗೆ ಬಂದು ಹೋಗುತ್ತಿದ್ದರು. ಬೆಳಿಗ್ಗೆ 11.30ರ ಸುಮಾರಿಗೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿತ್ತು. ಹೋಟೆಲ್ ಮಾಲೀಕರು ಸೇರಿ ಗ್ರಾಹಕರು ಗಾಯಗೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅನಿಲ ಸಿಲಿಂಡರ್ ಜೊತೆಯಲ್ಲೇ ಸೌದೆ ಒಲೆಯನ್ನೂ ಅಡುಗೆ ಮಾಡಲು ಬಳಸಲಾಗುತ್ತಿತ್ತು. ಶನಿವಾರವೂ ಒಂದೆಡೆ ಸೌದೆ ಒಲೆ ಉರಿಯುತ್ತಿತ್ತು. ಅತ್ತ, ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗುತ್ತಿತ್ತು. ಅದನ್ನು ಗಮನಿಸಿದ್ದ ಕೆಲಸಗಾರ, ಸಿಲಿಂಡರ್ ರೆಗ್ಯುಲೇಟರ್ ಸರಿಪಡಿಸಲು ಹೋದಾಗ ಬೆಂಕಿ ಹೊತ್ತಿಕೊಂಡಿತ್ತು.'

'ಸೌದೆಯ ಒಲೆಯ ಬೆಂಕಿ ಜೊತೆ ಅನಿಲ ಸೇರಿ ಅವಘಡ ಸಂಭವಿಸಿದೆ. ಹೋಟೆಲಿನ ಒಳಾಂಗಣದಲ್ಲಿ ಬೆಂಕಿ ಹೊತ್ತಿ ಉರಿದಿದೆ. ಪೀಠೋಪಕರಣ ಹಾಗೂ ಅಡುಗೆ ತಯಾರಿ ಸಾಮಗ್ರಿಗಳು ಸುಟ್ಟು ಹೋಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು' ಎಂದೂ ಪೊಲೀಸರು ತಿಳಿಸಿದರು.

ಬೆಂಕಿ ಅವಘಡದಿಂದ ಸುಟ್ಟು ಹೋಗಿರುವ ಹೋಟೆಲ್

# ಇಂಗ್ಲೆಂಡ್‌ನಲ್ಲಿ ಕೆಲಸ ಕೊಡಿಸುವ ಆಮಿಷ: ಯುವತಿಗೆ ₹ 1.78 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗ್ಲೆಂಡ್‌ನಲ್ಲಿ ಕೆಲಸಕ್ಕೆ ಆಯ್ಕೆಯಾಗಿರುವುದಾಗಿ ನಂಬಿಸಿ ವೀಸಾ ಕೊಡಿಸುವ ನೆಪದಲ್ಲಿ ₹ 1.78 ಲಕ್ಷ ಪಡೆದು ವಂಚಿಸಿರುವ ಬಗ್ಗೆ ಈಶಾನ್ಯ ವಿಭಾಗದ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸಮಾರನಹಳ್ಳಿ ನಿವಾಸಿಯಾಗಿರುವ 30 ವರ್ಷದ ಯುವತಿ ಠಾಣೆಗೆ ದೂರು ನೀಡಿದ್ದಾರೆ.

'ಇಂಗ್ಲೆಂಡ್‌ನ ಹೋಟೆಲೊಂದರಲ್ಲಿ ಕೆಲಸಕ್ಕಾಗಿ ಯುವತಿ ಫೆ. 5ರಂದು ವೈಯಕ್ತಿಕ ವಿವರ ಸಮೇತ ಅರ್ಜಿ ಸಲ್ಲಿಸಿದ್ದರು. ಈ ಮಾಹಿತಿ ತಿಳಿದುಕೊಂಡ ಆರೋಪಿ, ಯುವತಿಗೆ ಕರೆ ಮಾಡಿದ್ದ. 'ನೀವು ಹೋಟೆಲ್ ಪ್ರತಿನಿಧಿ ಕೆಲಸಕ್ಕೆ ಆಯ್ಕೆಯಾಗಿದ್ದೀರಿ. ಇಂಗ್ಲೆಂಡ್‌ಗೆ ಬರಲು ನಿಮಗೆ ವೀಸಾ ಅಗತ್ಯವಿದೆ. ಅದನ್ನು ಮಾಡಿಸಲು ರವೀನ್ ಬಲೀಂದ್ರ ಎಂಬಾತನನ್ನು ಸಂಪರ್ಕಿಸಿ' ಎಂದು ಆತ ಹೇಳಿದ್ದ. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮಾತು ನಂಬಿದ್ದ ಯುವತಿ, ರವೀನ್‌ನನ್ನು ಸಂಪರ್ಕಿಸಿದ್ದರು. ಆತ, ಕೆಲಸದ ನೇಮಕಾತಿ ಪತ್ರ ವನ್ನೂ ಕಳುಹಿಸಿದ್ದ. 'ವೀಸಾ ಮಾಡಿಸಲು ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ, ವೈದ್ಯಕೀಯ ಪರೀಕ್ಷಾ ಪ್ರಮಾಣ ಪತ್ರ ಹಾಗೂ ಇತರೆ ಪತ್ರಗಳು ಬೇಕು. ಅದಕ್ಕಾಗಿ ಶುಲ್ಕ ಪಾವತಿ ಮಾಡಬೇಕು' ಎಂದು ಆರೋಪಿ ಹೇಳಿದ್ದ. ಅದನ್ನೂ ನಂಬಿದ್ದ ಯುವತಿ, ಹಂತ ಹಂತವಾಗಿ ₹1.78 ಲಕ್ಷ ಪಾವತಿಸಿದ್ದರು. ಅದಾದ ನಂತರ, ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

### ಆ್ಯಪ್‌ನಲ್ಲಿ ಹೂಡಿಕೆ ಆಮಿಷ; ₹ 2.29 ಲಕ್ಷ ವಂಚನೆ

ಬೆಂಗಳೂರು: ನೆಟ್‌ವರ್ಕ್ ಮಾರ್ಕೆಟಿಂಗ್ ಆ್ಯಪ್ ಮೂಲಕ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ಸಿಗುವುದಾಗಿ ಆಮಿಷವೊಡ್ಡಿ ₹ 2.29 ಲಕ್ಷ ಪಡೆದು ವಂಚಿಸಲಾಗಿದೆ. ಈ ಕುರಿತು ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಂಚನೆ ಕುರಿತು ನಗರದ ಕಾಲೇಜೊಂದರ ವಿದ್ಯಾರ್ಥಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಾಟ್ಸ್‌ಆ್ಯಪ್ ಮೂಲಕ ವಿದ್ಯಾರ್ಥಿಗೆ ಸಂದೇಶ ಕಳುಹಿಸಿದ್ದ ಆರೋಪಿ, 'ಸ್ನೋಪರ್' ಹೆಸರಿನ ನೆಟ್‌ವರ್ಕ್ ಮಾರ್ಕೆಟಿಂಗ್ ಆ್ಯಪ್ ಬಗ್ಗೆ ತಿಳಿಸಿದ್ದ. ಹಣವನ್ನು ಹೂಡಿಕೆ ಮಾಡಿದರೆ ಕೆಲವೇ ದಿನಗಳಲ್ಲಿ ದುಪ್ಪಟ್ಟು ಹಣ ವಾಪಸು ಬರುವುದಾಗಿ ಹೇಳಿದ್ದ. ಅದನ್ನು ನಂಬಿದ್ದ ವಿದ್ಯಾರ್ಥಿ, ಆರೋಪಿ ಹೇಳಿದ್ದ ಖಾತೆಗಳಿಗೆ ಹಂತ ಹಂತವಾಗಿ ₹ 2.29 ಲಕ್ಷ ಜಮೆ ಮಾಡಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

ಹಣ ಪಡೆದ ನಂತರ ಆರೋಪಿ ಯಾವುದೇ ಪ್ರತಿಕ್ರಿಯೆ ನೀಡದೇ ನಾಪತ್ತೆಯಾಗಿದ್ದಾನೆ. ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

# ಬಾಂಬ್ ಸ್ಫೋಟದ ಆರೋಪಿ ಹೆಸರಿಗೆ 'ಡ್ರಗ್ಸ್' ರವಾನೆ?

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಮುಜೀಬ್ ಹೆಸರಿಗೆ ಕೊರಿಯರ್ ಮೂಲಕ ಪಾರ್ಸೆಲ್ ಬಂದಿದ್ದು, ಅದನ್ನು ಪತ್ತೆ ಹಚ್ಚಿರುವ ಜೈಲಿನ ಅಧಿಕಾರಿಗಳು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಏಪ್ರಿಲ್ 6ರಂದು ಡ್ರಗ್ಸ್ ಮಾದರಿ ವಸ್ತುವಿರುವ ಪಾರ್ಸೆಲ್ ಜೈಲಿಗೆ ಬಂದಿದೆ. ಅದರ ಸಮೇತ ಜೈಲಿನ ಅಧಿಕಾರಿಗಳು ದೂರು ನೀಡಿದ್ದಾರೆ. ಪಾರ್ಸೆಲ್‌ನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಮೂಲಗಳು ಹೇಳಿವೆ.

'ಮಡಿವಾಳ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಮುಜೀಬ್, ಹತ್ತು ವರ್ಷಗಳಿಂದ ಜೈಲಿನಲ್ಲಿದ್ದಾನೆ. ಆತನ ಹೆಸರಿನಲ್ಲಿ ಕೊರಿಯರ್‌ನಲ್ಲಿ ಬಂದ ಪಾರ್ಸೆಲ್‌ನ್ನು ಸಿಬ್ಬಂದಿ ಪರಿಶೀಲಿಸಿದ್ದರು. ಅದರಲ್ಲಿ ತಿಂಡಿ ಪೊಟ್ಟಣ ಹಾಗೂ ಬಾಟಲಿ ಇತ್ತು. ಬಾಟಲಿ ತೆರೆದು ನೋಡಿದಾಗ, ಅದರಲ್ಲಿ ಪೌಡರ್ ಕಂಡಿತ್ತು. ಮೇಲ್ನೋಟಕ್ಕೆ ಅದು ಡ್ರಗ್ಸ್ ರೀತಿಯಲ್ಲಿತ್ತು. ಪ್ರಯೋಗಾಲಯದ ವರದಿ ಬಂದ ನಂತರ ಅದರಲ್ಲಿದ್ದ ಪದಾರ್ಥ ಏನೆಂಬುದು ತಿಳಿಯಲಿದೆ' ಎಂದೂ ತಿಳಿಸಿವೆ.

ಕೇರಳ ವಿಳಾಸದಿಂದ ಬಂದಿದ್ದ ಕೊರಿಯರ್; 'ಕೇರಳ ಕಣ್ಣೂರಿನಿಂದ ಜಿನೇಬ್ ಎಂಬಾತ ಮುಜೀಬ್‌ಗೆ ಕೊರಿಯರ್ ಕಳುಹಿಸಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಆತ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

'ಕೊರಿಯರ್ ಬಂದಿರುವ ವಿಳಾಸದ ಬಗ್ಗೆ ಕೇರಳ ಪೊಲೀಸರಿಂದ ಹೆಚ್ಚಿನ ಮಾಹಿತಿ ಕೇಳಲಾಗಿದೆ' ಎಂದೂ ತಿಳಿಸಿವೆ.

ನೀಲಗಿರಿ ಮರ ತೆರವುಗೊಳಿಸಿ ಹೂ, ಹಣ್ಣು ಗಿಡ ಬೆಳೆಸಲು ನೆರವು ನೀಡಿ–ಲಿಂಬಾವಳಿ

# ಮಾಲ್ಗುಡಿ ಛಾಯಾಗ್ರಹಣ ಸ್ಪರ್ಧೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ನೀಲಗಿರಿ ಮರಗಳಿಂದ ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಕಾಡು ಪ್ರಾಣಿಗಳಿಗೆ ಮೇವು ಸಿಗುತ್ತಿಲ್ಲ. ಹಾಗಾಗಿ, ನೀಲಗಿರಿ ಮರಗಳನ್ನು ತೆರವುಗೊಳಿಸಿ ಕಾಡಿನಲ್ಲಿ ಹೂ, ಹಣ್ಣು, ಹಾಗೂ ಆರೋಗ್ಯವರ್ಧಕ ಗಿಡಗಳನ್ನು ನೆಡಲು ಸರ್ಕಾರ ಚಿಂತನೆ ನಡೆಸಿದೆ. ಇದಕ್ಕೆ ಉದ್ಯಮಿಗಳು ಹಾಗೂ ಸಂಸ್ಥೆಗಳು ಕೈಜೋಡಿಸಬೇಕು' ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಮನವಿ ಮಾಡಿದರು.

ರೋಟರಿ ಇಂಟರ್‌ನ್ಯಾಷನಲ್‌ನ 3,190ನೇ ಜಿಲ್ಲೆ, ಅರಣ್ಯ ಇಲಾಖೆ, ಫೆಡರೇಷನ್ ಆಫ್ ಇಂಡಿಯನ್ ಫೋಟೊಗ್ರಫಿ ಹಾಗೂ ಯೂತ್ ಫೋಟೊಗ್ರಫಿಕ್ ಸೊಸೈಟಿಗಳ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ 'ಮಾಲ್ಗುಡಿ ಅಖಿಲ ಭಾರತ ಛಾಯಾಗ್ರಹಣ ಸ್ಪರ್ಧೆ' ಉದ್ಘಾಟಿಸಿ ಅವರು ಮಾತನಾಡಿದರು.

'ಅರಣ್ಯ ಪ್ರದೇಶದಲ್ಲಿ ಜೀವನ ನಡೆಸುತ್ತಿರುವ ಸೋಲಿಗರಿಗೆ ಮೂಲ ಸೌಲಭ್ಯ ದೊರಕಿಸಿಕೊಡುವ ಮೂಲಕ ಕಾಡುಪ್ರಾಣಿಗಳಿಗೆ ಆಹಾರ ಸಿಗುವಂತಹ ವಾತಾವರಣ ನಿರ್ಮಿಸಲು ಕೇಂದ್ರ ಮತ್ತು ರಾಜ್ಯ ಚಿಂತನೆ ನಡೆಸಿದೆ. ಎಲ್ಲವನ್ನೂ ಸರ್ಕಾರದಿಂದ ಮಾಡಲು ಸಾಧ್ಯವಿಲ್ಲ. ಕಾಡು ಹಾಗೂ ಜೀವಿಗಳ ಉಳಿವಿಗಾಗಿ ಉದ್ಯಮಿಗಳೂ ಕೈಜೋಡಿಸಬೇಕು' ಎಂದರು.

ವಿನಯ ಗೂರೂಜಿ, 'ಮನುಷ್ಯ ಮತ್ತು ಪರಿಸರ ಸಹೋದರರಿದ್ದಂತೆ. ನಾವು ಪ್ರಕೃತಿಯನ್ನು ಉಳಿಸಿದಾಗ ಮಾತ್ರ ಆರೋಗ್ಯವಂತ ಸಮಾಜವನ್ನು ಕಾಣಬಹುದು' ಎಂದರು.

ರೋಟರಿ 3190ನೇ ಜಿಲ್ಲೆಯ ಎನ್.ಎಸ್.ಮಹದೇವ ಪ್ರಸಾದ್, 'ಬೇಸಿಗೆಯಲ್ಲಿ ಅರಣ್ಯ ಜೀವಿಗಳ ಉಳಿವಿಗಾಗಿ ನೀರಿನ ಹೊಂಡ, ತಂತಿ ಬೇಲಿ ಅಳವಡಿಕೆಗೆ ರೋಟರಿ ಸಂಸ್ಥೆ ಮುಂದಾಗಿದೆ' ಎಂದರು.

ರೋಟರಿ ಸಂಸ್ಥೆಯ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್, 'ರಾಜ್ಯದ ಹಲವೆಡೆ ರೋಟರಿ ಸಂಸ್ಥೆಯೊಂದಿಗೆ ಉದ್ಯಮಿಗಳು ಜೊತೆಗೂಡಿ ಮರ ಬೆಳೆಸಲು ಅರಣ್ಯ ಇಲಾಖೆಯ ಅನುಮತಿ ಬೇಕಾಗಿದೆ. ರಾಷ್ಟ್ರವ್ಯಾಪಿ ಛಾಯಾಚಿತ್ರಗಾರರಿಂದ ₹1 ಕೋಟಿ ಸಂಗ್ರಹವಾಗಲಿದ್ದು, ಅದನ್ನು ಅರಣ್ಯ ಸಂರಕ್ಷಣೆಗೆ ಉಪಯೋಗಿಸಿಕೊಳ್ಳಲಾಗುವುದು' ಎಂದು ಹೇಳಿದರು.

ಛಾಯಾಗ್ರಹಣ ಸ್ಪರ್ಧೆಯನ್ನು ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ವಿನಯ ಗೂರೂಜಿ, ರೋಟರಿ ಸಂಸ್ಥೆಯ ಮಹದೇವ ಪ್ರಸಾದ್, ಬಿ.ಎಲ್.ನಾಗೇಂದ್ರ ಪ್ರಸಾದ್, ಮಾಲ್ಗುಡಿ ಫೋಟೊಗ್ರಫಿ ಸಂಸ್ಥೆಯ ಮುಖ್ಯಸ್ಥ ಸೂರ್ಯಪ್ರಕಾಶ್ ಹಾಗೂ ಇತರರು ಇದ್ದಾರೆ.




ಬ್ಯಾಲಕೆರೆ: ಜಲಶಕ್ತಿ ಅಭಿಯಾನಕ್ಕೆ ಚಾಲನೆ

# ‘ಕೆರೆ ಅಭಿವೃದ್ಧಿಪಡಿಸಿದರೆ ನಗದು ಬಹುಮಾನ’

ಪ್ರಜಾವಾಣಿ ವಾರ್ತೆ

**ಹೆಸರಘಟ್ಟ:** ಕಸಘಟ್ಟಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಲಕೆರೆ ಗ್ರಾಮದಲ್ಲಿ ಜಲಶಕ್ತಿ ಅಭಿಯಾನಕ್ಕೆ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಜಿ.ಮರಿಸ್ವಾಮಿ ಚಾಲನೆ ನೀಡಿದರು.

‘ನಮ್ಮೂರ ಕೆರೆಗಳ ಹೂಳು ತೆಗೆದು ರಾಜಕಾಲುವೆ ಸ್ವಚ್ಛ ಮಾಡಿ ನೀರು ಸಂಗ್ರಹವಾಗುವಂತೆ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರು ಜಲಶಕ್ತಿ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಈ ಕಾರ್ಯಕ್ರಮದ ಭಾಗವಾಗಿ ದೊಡ್ಡ ಬ್ಯಾಲಕೆರೆ ಗ್ರಾಮದ ಕೆರೆಯ ಹೂಳು ತೆಗೆಯುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಗ್ರಾಮಸ್ಥರು ಪಕ್ಷಭೇದ ಮರೆತು ಕೈ ಜೋಡಿಸಬೇಕು’ ಎಂದರು.

ನಗರ ಜಿಲ್ಲಾ ಪಂಚಾಯಿತಿಯ ಸಿಇಒ ಸಂಗಪ್ಪ, ‘ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಕೆರೆಗಳ ದಡದಲ್ಲಿ ಗಿಡಗಳನ್ನು ನೆಡಲಾಗುವುದು. ಈಗಾಗಲೇ 50 ಸಾವಿರ ಸಸಿಗಳನ್ನು ನೀಡುವುದಕ್ಕೆ ಸಂಸ್ಥೆಯೊಂದು ಮುಂದೆ ಬಂದಿದೆ. ಆ ಗಿಡಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಿತರಿಸಲಾಗುವುದು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಗಪ್ಪ ಮಾತನಾಡಿದರು. ಜಿ.ಮರಿಸ್ವಾಮಿ, ಜಿಲ್ಲಾ ಪಂಚಾಯಿತಿ ಸದಸ್ಯರಾದ ಗಂಗಲಕ್ಷ್ಮಮ್ಮ ರಂಗಸ್ವಾಮಿ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಡಿ.ಎಸ್.ಮಂಜುಳಾ ಇದ್ದರು

‘ಕೆರೆಗಳ ಹೂಳು ತೆಗೆದು ಕೆರೆಯನ್ನು ಅಚ್ಚುಕಟ್ಟಾಗಿ ಅಭಿವೃದ್ಧಿ ಪಡಿಸಿದವರಿಗೆ ಮೊದಲ ಬಹುಮಾನವಾಗಿ ₹50 ಸಾವಿರ, ದ್ವಿತೀಯ ಬಹುಮಾನ ₹25 ಸಾವಿರ, ತೃತೀಯ ಬಹುಮಾನ ₹15 ಸಾವಿರ ನೀಡಲಾಗುವುದು’ ಎಂದರು.

ಉಪಕಾರ್ಯದರ್ಶಿ ಡಾ.ಸಿ. ಸಿದ್ದರಾಮಯ್ಯ, ‘ನರೇಗಾ ಯೋಜನೆಯಡಿ ಕೆರೆಗಳನ್ನು ನೂರು ದಿನಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಗ್ರಾಮದಲ್ಲಿರುವರಿಗೆ ನೂರು ದಿನಕ್ಕೆ ಸುಮಾರು ₹28 ಸಾವಿರದಷ್ಟು ಸಂಬಳ ಸಿಗುತ್ತದೆ’ ಎಂದರು.

# ರೈತನಿಗೆ ಹೊರೆಯಾದ ಬೂದುಗುಂಬಳ ಬೆಳೆ

• ಡಿ.ಕೆ. ಬಸವರಾಜು

**ದಾವಣಗೆರೆ:** ತಾಲ್ಲೂಕಿನ ಗೋಪನಾಳ್ ಗ್ರಾಮದಲ್ಲಿ ಬೂದುಗುಂಬಳ ಬೆಳೆದ ರೈತರೊಬ್ಬರು ಉತ್ತಮ ಬೆಲೆ ಸಿಗದೇ ಇರುವುದರಿಂದ ಮಾರುಕಟ್ಟೆಗೆ ಒಯ್ಯದೇ ಬೆಳೆ ನಾಶಪಡಿಸಲು ಮುಂದಾಗಿದ್ದಾರೆ.

ರೈತ ರವಿಶಂಕರ್ ಮೂರೂವರೆ ಎಕರೆ ಜಮೀನಿನಲ್ಲಿ ಬೂದುಗುಂಬಳ ಬೆಳೆದಿದ್ದಾರೆ. ಭರಪೂರ ಬೆಳೆಯೇನೋ ಬಂದಿದೆ. ದಾವಣಗೆರೆ ಮಾರುಕಟ್ಟೆಯಲ್ಲಿ ಒಂದು ಕೆ.ಜಿಗೆ ₹ 2ರಿಂದ ₹ 3 ಬೆಲೆ ಇದೆ. ಮಾರುಕಟ್ಟೆಗೆ ಒಯ್ದು ಮಾರಾಟ ಮಾಡಿದರೆ ಕೂಲಿ ಹಣವೂ ಸಿಗದಿರುವುದರಿಂದ ದಿಕ್ಕು ತೋಚದಂತಾಗಿದ್ದಾರೆ.

ಕೊರೊನಾ ಎರಡನೇ ಅಲೆ ಕಾರಣ ಮದುವೆ ಕಾರ್ಯಗಳಿಗೆ ನಿರ್ಬಂಧ ಹೇರಲಾಗಿದೆ. ಹಾಸ್ಟೆಲ್‌ಗಳೂ ಮುಚ್ಚಿವೆ. ಈ ಕಾರಣದಿಂದಾಗಿ ಬೇಡಿಕೆ ಇಲ್ಲದಂತಾಗಿದೆ. ಸದ್ಯ, ಏಳು ಟನ್ ಕುಂಬಳವನ್ನು ಕೊಯ್ಲು ಮಾಡಲಾಗಿದೆ.

‘ಬೆಳೆಗೆ ರಸಗೊಬ್ಬರ, ಔಷಧ ಹಾಗೂ ಕೂಲಿಗಾಗಿ ₹ 60 ಸಾವಿರ ಖರ್ಚಾಗಿದೆ. ಕೆ.ಜಿ.ಗೆ ₹ 3ರಂತೆ ಏಳು ಟನ್ ಮಾರಾಟವಾದರೂ ಕೇವಲ ₹ 21 ಸಾವಿರ ಸಿಗುತ್ತದೆ. ಕೊಯ್ಲು ಮಾಡಲು ಒಬ್ಬರಿಗೆ ದಿನಕ್ಕೆ ₹ 300 ಕೂಲಿ ಇದ್ದು, ₹ 30 ಸಾವಿರ ಖರ್ಚಾಗುತ್ತದೆ’ ಎಂದು ರವಿಶಂಕರ್ ಅಳಲು ತೋಡಿಕೊಂಡರು.

**ಅಜ್ಜನ ಕಾಲದಿಂದಲೂ ಕೃಷಿಯನ್ನೇ ನಂಬಿದ್ದೇನೆ. ಕೆ.ಜಿ.ಗೆ ₹ 6ರಿಂದ ₹ 8 ದರ ಸಿಕ್ಕಿದ್ದರೂ ಪರವಾಗಿರಲಿಲ್ಲ. ಬೆಲೆ ಕುಸಿತ ನೋಡಿದರೆ ಕೃಷಿ ಬದಲು ಕೂಲಿ ಮಾಡುವುದೇ ಲೇಸು**

**ರವಿಶಂಕರ್**, ರೈತ

‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉದ್ದನೆಯ ಬೂದುಗುಂಬಳಕ್ಕೆ ಮಾತ್ರ ಬೇಡಿಕೆ ಇದೆ. ನಮ್ಮದು ದುಂಡನೆಯ ಬೂದುಗುಂಬಳ. ಅಲ್ಲಿಗೆ ಕೊಂಡೊಯ್ಯಲು ಸಾರಿಗೆ ವೆಚ್ಚ ಹೆಚ್ಚಾಗಲಿದೆ. ಮದುವೆಯ ಸೀಸನ್‌ನಲ್ಲಿ ಉತ್ತಮ ಬೆಲೆ ಸಿಗಬಹುದು ಎಂದುಕೊಂಡಿದ್ದೆ. ಆದರೆ, ಕುಸಿದ ದರವು ನಿರಾಸೆ ಮೂಡಿಸಿದೆ’ ಎನ್ನುತ್ತಾರೆ ರವಿಶಂಕರ್.

2020ನೇ ಸಾಲಿನಲ್ಲಿ ಅತಿ ಹೆಚ್ಚು ರ್‍ಯಾಂಕ್‌ಗಳನ್ನು ಪಡೆದ ಸುರಾನಾ ಕಾಲೇಜಿನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಕಾಲೇಜಿನ ವತಿಯಿಂದ ಶನಿವಾರ ಸನ್ಮಾನಿಸಲಾಯಿತು. ರೈಲ್ವೆ ಎಡಿಜಿಪಿ ಭಾಸ್ಕರ್ ರಾವ್, ಮೈಕ್ರೋಲ್ಯಾಬ್ಸ್ ಲಿಮಿಟೆಡ್‌ನ ಸಿಎಂಡಿ ದಿಲೀಪ್ ಸುರಾನಾ, ಸುರಾನಾ ಎಜುಕೇಷನಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಅರ್ಚನಾ ಸುರಾನಾ, ಪ್ರಾಂಶುಪಾಲರಾದ ಎಂ.ಆರ್. ಭವಾನಿ ಇದ್ದರು.

# ‘ಮೈಸೂರು ಬಿನಾಲೆ’ ಉತ್ಸವಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

**ಮೈಸೂರು:** ಮೈಸೂರಿನ ಪ್ರವಾಸೋದ್ಯಮವನ್ನು ಉತ್ತೇಜಿಸಲು, ‘ಕೊಚ್ಚಿನ್ ಬಿನಾಲೆ’ ರೀತಿಯಲ್ಲಿ ‘ಮೈಸೂರು ಬಿನಾಲೆ’ ಹೆಸರಿನಲ್ಲಿ ಉತ್ಸವ ಆಯೋಜಿಸುವ ಚಿಂತನೆ ನಡೆದಿದೆ ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಹೇಳಿದರು.

ಕೇರಳದ ಕೊಚ್ಚಿ ನಗರದ ಪೋರ್ಟ್ ಕೊಚ್ಚಿಯಲ್ಲಿ ಎರಡು ವರ್ಷಗಳಿಗೊಮ್ಮೆ ಕೊಚ್ಚಿನ್ ಬಿನಾಲೆ (‘ಬಿನಾಲೆ’ ಪದದ ಅರ್ಥ ಎರಡು ವರ್ಷಗಳಿಗೊಮ್ಮೆ ನಡೆಯುವ ಉತ್ಸವ) ನಡೆಯುತ್ತದೆ. ಮೈಸೂರಿನ ಗತವೈಭವವನ್ನು ಸಾರುವ ಉದ್ದೇಶದಿಂದ ಅದೇ ರೀತಿಯ ಉತ್ಸವ ಆಯೋಜಿಸಲಾಗುವುದು ಎಂದು ಶನಿವಾರ ನಡೆದ ಮಾಧ್ಯಮ ಸಂವಾದದಲ್ಲಿ ತಿಳಿಸಿದರು.

‘ಇಲ್ಲಿನ ಪಾರಂಪರಿಕ ಕಟ್ಟಡ, ತಾಣಗಳನ್ನು ಸೇರಿಸಿಕೊಂಡು ಈ ಉತ್ಸವ ನಡೆಸಲಾಗುವುದು. ನೃತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಯೋಗ, ಆಯುರ್ವೇದ ಸೇರಿದಂತೆ ಮೈಸೂರಿನ ಸಮಗ್ರ ಸಂಸ್ಕೃತಿಯನ್ನು ಎಲ್ಲರಿಗೂ ಪರಿಚಯಿಸುವುದು ಇದರ ಉದ್ದೇಶ’ ಎಂದು ಮಾಹಿತಿ ನೀಡಿದರು.

‘ಎರಡು ವರ್ಷಗಳಿಗೊಮ್ಮೆ, ನವೆಂಬರ್–ಡಿಸೆಂಬರ್‌ನಲ್ಲಿ ಉತ್ಸವ ನಡೆಸುವ ಚಿಂತನೆ ಇದೆ. ಈ ಯೋಜನೆ ಇನ್ನೂ ಆರಂಭಿಕ ಹಂತದಲ್ಲಿದ್ದು, ಜಿಲ್ಲಾಡಳಿತವು ಎಲ್ಲರಿಂದಲೂ ಸೂಕ್ತ ಸಲಹೆಗಳನ್ನು ಸ್ವಾಗತಿಸುತ್ತದೆ’ ಎಂದರು.

## WEEKEND CORNER ಕ್ಲಾಸಿಫೈಡ್ಸ್

**SREE SADGURU RAGHAVENDRA SWAMY'S SPECIAL BLESSINGS FOR MANKIND**
(DIVINE MESSAGE RECEIVED AS ON 13.03.2020 AT 2.00 A.M.)

Divine suggestion as how to eradicate globally spreading disease **POPULARLY KNOWN AS CORONA VIRUS THAT IS GRADUALLY AFFLICTING THE ENTIRE WORLD**

**DIVINE SOLUTIONS:** There is a sacred place near Tumkur (about 40 miles from Bangalore popularly know as **NAMADA CHILUME** where **VISHNU THIRTHA** exists. The **VISHNU THIRTHA** is most sacred on earth where **GODDESS GANGAMATHA** resides along with **SWAMY VIDYARANYA, LORD SHIVA** and other eminent Gods. This sacred **RAMA THIRTHA** is to eradicate the disease.

This is to be distributed in an organised manner by volunteers and the income derived should be earmarked for the welfare or development of the holy shrine.

For details about our universe as revealed by Gods, exact location Sree Rama Janmabhommi, cure for Dementia, Childlessness. Please log on to: www.vijaybhavan.com BY B.K. VENUGOPAL

**20th Florence Nightingale Award - 2021**

20ನೇ ವರ್ಷದ ರಾಜ್ಯ ಮಟ್ಟದ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಸೇವೆಗಳಲ್ಲೇ ಅತಿ ಶ್ರೇಷ್ಠವಾದದ್ದು ನರ್ಸಿಂಗ್. ಉತ್ತಮ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30-04-2021ನೇ ಶುಕ್ರವಾರ ಸಂಜೆ 6 ಗಂಟೆಯೊಳಗೆ ಸಲ್ಲಿಸಬಹುದು.

ಪೂರ್ಣ ವಿವರ ವೆಬ್ ಸೈಟಲ್ಲಿ ಲಭ್ಯ

- ಈ ರಾಜ್ಯ ಮಟ್ಟದ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಯನ್ನು ಆಂಗ್ಲೋ ಇಂಡಿಯನ್ ಯುನಿಟಿ ಸೆಂಟರ್ ಮತ್ತು ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಡೆಸಿಕೊಳ್ಳಲಾಗುವುದು.
- ಅರ್ಜಿಗಳನ್ನು ಈ ಕೆಳಕಂಡ ವೆಬ್ ಸೈಟ್‌ನಿಂದ ಸಲ್ಲಿಸಿ www.nightingaleawards.in ಕಾರ್ಡ್‌ಕಾಪಿಯನ್ನು ಈ ವಿಳಾಸಕ್ಕೆ ಕಳಿಸಬೇಕೆಂದು ಮನವಿ.

ಶ್ರೀ ಐವನ್ ನಿಗ್ಲಿ, ಮಾಜಿ ಶಾಸಕರು
# 113, 2nd E Cross, OMBR Layout, Banaswadi, Bengaluru - 560 043.
94480 71900, 94804 51483, 97421 24973

**POONAM'S™ FURNITURE HOUSE** Come Home To Better Value

Ugadi FESTIVAL SALE — Up to 70% OFF

| Item | Price | Offer |
|---|---|---|
| Double Cot 5X6.5 | ₹ 22,000 | OFFER ₹9,800 |
| Barbie 3+1+1 | ₹ 38,000 | OFFER ₹22,800 |
| Cot Smart 5X6.5 Queen | ₹ 22,000 | OFFER ₹10,800 |
| Cot Deluxe With Storage 5X6.5 | ₹ 38,000 | OFFER ₹18,800 |
| Teak Wood D/T 1x4 | ₹ 28,000 | OFFER ₹13,800 |
| Solid Wood Cot 5X6.5 | ₹ 32,000 | OFFER ₹13,800 |

Chikkathogur Gate, Electronic City Post, Hosur Main Road, Opp. to Jubilant Motors, Bangalore-100
9360381638, 9742242378, 9945181446, 9901252501

**worth®** All Big Brand Garments at Affordable Prices

**UGADI Special Sale**

Men's and Women's upto 70% Off.

Special counter : Women's Kurtis & Legins

aurelia · BIBA

Collect special gift on every purchase of Rs. 10,000/- & Rs. 15,000/-

Sale Upto 12.4.2021

Prem Chandra Sagar, Near Ashoka Pillar, 2nd Block, Jayanagar

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Engg/ Production Technical

**CONSTRUCTION SITE** supervisor with 3 + years experience for site in Kammanahalli (HRBR Layout) should have 2 wheeler and construction knowledge. Contact: 080- 26603729 / 080-26602089 E-mail: anvesh@mahendraperfumery.com.

**CENTURY METERING** systems, an electronic equipment design and manufacturing company located in jalahalli peenya bangalore needs PCB artwork engineer to work in EAGLECAD, CADENCE, and Embedded software engineer. Send your resume to century.metering@gmail.com

**WANTED B.E** Mechanical/ Electrical Candidates 2-3 Years Experience Cranes Air Compressor Power Press. srinivasan.t@hotmail.com

### Graphic Designers

**WANTED GRAPHIC** Designer for Wallpaper Printing Co.- (Coreldraw, Photoshop & Illustrator) Min 5 Years Exp. at Shantinagar Bangalore, Call 9342935865

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

### General

**FOR A** Leading Electronics Inductive Components Mfr. in Peenya. SALES MANAGERS, SALES EXECUTIVES, TELE-MARKETING EXECUTIVES, ACCOUNTANT, DATA-ENTRY OPERATORS with similar experience. Apply to purchase@vetrilindia.in Phone: 080-28360561

**LOOKING FOR** Legal Professional with at least five years of experience working in a reputed LAW firm. The candidate with ability to independently Draft Agreements, Deeds, Documents, Applications, Appeals, Petitions, Notices, etc., and good communication skills will be preferred. Interested candidates may send their resume to amrutha.v@incorpadvisory.in & rashmi.bhargavi@incorpadvisory.in

**REQUIRED OFFICE** Assistant (MALE) Qualification: 12th PassAge: 30-45 years Timings: 8.30am to 7.00pm Basic English & Computer Knowledge required Contact: 9535910010

**S-VYASA YOGA** (Deemed to be) University Invites application for RESEARCH ASSOCIATE- One post, Desired: Ph.D in Life Sc. Location-Bangalore, RESEARCH ASSISTANT- One Post, Desired; M.Sc in Yoga or Life Sc. for (DST-SATYAM) Sponsored Project. Apply on or before: April 22nd: ramesh.mavathur@svyasa.edu.in/ hrdesk@svyasa.org

**GRANITE MULTIWIRE** machine operators required. house, food and good salary. kandoi@indiagranite.com

**CAMPAIGN/OFFICE/** sales Managers Field officers Graduates/Freshers/ students reqd with 2 Wheeler WhatsApp 8618341813

### Hospital & Medical Jobs

**Shoulder Therapist** *required*
A Patient in Malleshwaram needs to be treated by a **Shoulder Therapist** every day for next 6 months.
*Please contact* **98450 08202**

### Marketing & Sales

**WANTED SALES** Executive/ Bangalore/ Centering/ Scaffolding Products/ Field work/ 2 Wheeler Must/12K/ Allowance Call: 9900069150

### Multiple Vacancy

**BILLING DATA** Entry & Godown Helpers required staying Magadi Road Channenahalli Tavarekere Contact MY Towers Tunganagar 23586195 23284118

### Part-Time Jobs

**PANDEMIC SITUATION** Lost Job. MNC Provide Work From Home 30 to 35K Call: 7019215243/ 9886641282

### Teachers/ Professors

**ST SOPHIA** Convent (CBSE) Nagarabhavi requires Trained /experienced Office Assistants, Teachers for Mathematicians, Science, Socialscience, English, for primary & High school (Immediate Appointment) principal@stsophiaconvent.org Contact: 9243031872

**ARVIND INTERNATIONAL SCHOOL**
Affiliated to CBSE, New Delhi (Affiliation No.831133 )
#14, Kalikanagar, opp. Sowmyakali Temple, Andrahalli Main Road, PSI Post, BANGALORE- 560058
Ph: 080-28361704, 9945409738.
REQUIRES TRAINED EXPERIENCED FACULTY WITH ENGLISH FLUENCY
**Teachers for NURSERY/ PRIMARY/ HIGH SCHOOL**
**Also required PE Teachers (Male)**
Transportation for Teachers from: Magadi Road, Jalahalli Cross and Laggere.
Send your resume with recent passport size photo to arvindinterblr@gmail.com within 7 days
Or Walk-in interview
Monday to Saturday between 09.30 to 1.30pm only

**SRI K.K EDUCATION CENTRE** KADABAGERE, BANGALORE
APPLICATIONS REQUIRED FOR THE POST OF FACULTIES 2021-22
TEACHING STAFF
1. KINDERGARTEN – NTT training with good communication skills
2. PRIMARY TEACHERS
* Requirement- English, Hindi, Kannada, Mathematics
* Qualifications - Graduate with B.Ed, D.Ed
3. HIGHER PRIMARY AND SECONDARY
* Requirement - Science, English & Social
* Qualification -Graduate with B.Ed / M.Ed
4. INFORMATION TECHNOLOGY/ COMPUTER - B.Sc., / M.Sc., (comp)/ B C A / MCA
5. PHYSICAL EDUCATION INSTRUCTORS
NON-TEACHING STAFF
6. OFFICE ASSISTANT & RECEPTIONIST
* Having excellent communication skills, Be comfortable with the use of technology
Contact no: 7406666583
E-Mail: srikkec@gmail.com

**Little Lillys Education Society**
Vidyaranyapura
Requires Lady Teachers with Experience Sanskrit for 10th Std,
Salary: 25K To 30K
Trained and Experience Teachers for Primary all Subjects,
Salary: 20K To 25K
9535498177
6363935893

**WANTED LECTURER** in History, Economics and Librarian for Vidyavana PU College, Tirumalashettyhalli, Whitefield, Bengaluru. Contact: 9663389388

**REQUIRES LADY** Teachers for English B.A BEd & M.A BEd, walk-in Interview with the Secretary, Srikrishna International School, ITI Layout, BSK 3rd Stage, Bangalore-85, Phone:65365824.

**ENGLISH TEACHERS** needed for Middle & High School for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333, 7829015333. OR email: chitrakootajobs@gmail.com WALK IN WELCOME.

### Receptionist/ Secretary

**REQUIRED EXPERIENCED** Tele callers Working hours: 10 Am to 6 Pm [Full time], 4 Pm to 8 Pm [Part time]. Excellent Remuneration, Incentives. send WhatsApp message about yourself Please don't call 8762424646, 8217611257 Deevige Classes Malleshwaram

## AUTOMOTIVE

### Four Wheelers Buying

### Others

**WANTED OWNER** DRIVEN Accident Free Aspirefigo/ Brio/ Celerio/ Pulse Car 5 Years Reasonable Price, 9886233136

### Four Wheelers Selling

#### Benz

**SALE MERCEDES** Benz E250 CDI,2015 Model, White Colour,75000KMS, Mint Condition with Company Maintained. 9980122137/ Mail: Venkatesh.n@bhorukapower.com

#### BMW

**BMW X1** SDRIVE 2014 DONE 1,15,000. 2ND OWNER 13,00,000/- AudiQ5, 2011.FIRST OWNER 18,00,000/- INSURANCE UPTO APRIL 2022. OWNER-9845014561

#### Toyota

**INNOVA CRYSTA** V June 2016 Silver 48,000 kms. in Excellent Condition for Sale. CALL: 9483509169

## BUSINESS

### Business to Business

### Construction And Maintenance

**CONSTRUCTION OF** YOUR Dream House/ Villa- Renovation, Extension Floor Work etc with good Materials- 9353082981.

### Finance

**“URGENT LOAN** Avail @ 3.5% p.a Personal, Business, Project, Takeover all types loan in just 5 days OM FINANCE LTD. Call/ WhatsApp: 8826494700.”

**AVAILABLE PRIVATE** Mortgage Loans at Low ROI A.B Khatha Properties No Income CIBIL. Contact Nagesh 95389 04373.

### Business Offers

#### Distributors

**EARN UPTO** R.40,000 to Rs. 60,000 Manufacturing of Paper plate, Areca plates with minimum investment. With Buy Back agreement for finished goods with best price. Contact:- 7829033399, 9741021222. Our Factory/office: Bangalore

#### Finance

**FINANCE REQUIRED** on Commercial Project Land. Contact 7676770503

#### General

**IS YOUR** business doing very good but children not interested & no one to support? but you want to retire? To sell your business or to find a reliable good partner or a working partner. Call Arun 9845077299

**EARN DAILY** income through small investment in Real Estate, Resorts, Timeshare, Sharemarket, Crypto trading, Export & Imports, Movies, Media, E-commerce, Kirana, Tours and Travels. 7659977788, 8374332116.

## EDUCATIONAL

### Admission

**METRO EDUCATIONAL** SERVICES, BE, B.Tech, AMIIE, MBA, Pharmacy, Nursing, Para-Medical Courses, B.Ed, BA, LLB, B.Com, BBA, BCA, B.Sc, M.Com, MA, MCA, M.Sc, MSW, M.Phil, Ph.D, SSLC, PUC, Diploma Engineering, NTT, PTT etc. 9341273990.

## MATRIMONIAL

### Brides Wanted

#### Brahmin

**BRIDE WANTED**
Tamil Iyer 50/ 5'10", Bangalore, handsome, well settled, PSU, lip-reading/ sign-lang seeks a homely, religious, Brahmin girl (sub cast ok) as life partner, lip-reading /sign-lang btw 38-45y. No expectations.
Contact: 8050241139

#### Hindu

**BRIDE WANTED**
CNB 49 years (single) Bussiness. Looking for Cast no bar only Indipendent Single Widow/ Divorce/ Latemarriage Bride Job, Pvt or Bussiness Contact Direct No, Brokers
9036453277
Call or watsup

#### Bride Required Others

**WANTED BRIDES**
HEALTHY ENTHUSIASTIC BRAHMIN ORGANIC FARMER 63 (EX MNC) WANTS LADY INTERESTED IN GARDENING AND WILLING TO STAY IN A COOL SCENIC PLACE
Call: 9380378747

### Grooms Wanted

#### Tamil

**HANDSOME IYENGAR** Groom in 35 Years Age, BE/ BTech Bangalore Based only for a Beautiful Iyengar Girl BE Employed, Vadagalai/ Thenkalai No Bar, Contact: 9980954813

### Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

## OTHERS

### For Sale

**OWNER LEAVING** Immediate sale Leather Sofa, Diwan, Teak dining, curtains & KIDS BIKE 9845414482, 7019263843

## PERSONAL

### Change of Name

**I MARUTHA** KASIRAJAN R, S/O Ramanathan M, R/@ #34/1, 1ST Floor, Raghavendra Layout, Maragondanahalli Main Road, K R Puram, Bangalore-36.Declare that Changed My Minor Sons Name From SHIV LINGESHWAR M TO MATHESH M Vide Affidavit Dated: 12/03/2021 Before Notary C Sasikala Bangalore.

**I, CHANNAPPAGOUD** R/a #34, Basava Nilaya, Chinchodi Deodurga, Raichur-584116 Have Changed My Name to CHANNAPPAGOUD GOUDRU Vide Affidavit Dated: 09.04.2021 Sworn Before Notary K.V. Prema Kumari, Bangalore.

**I, SEEMEEN** Fathima Rassik Fareed R/o Koolz Sapphire Hill, Flat No. G1,#48/2d, 2nd Main, Chinnanna Layout, KB. Sandra new Extention, RT Nagar Post,Bengaluru-560032, have changed my nameto SEEMEEN FATHIMA, vide affidavit dated09-04-2021. sworn before notary Y.R.Chandrasekar, Blr.

**I DIVYA** BADRI R/@ Flat No 304, Anandlok Apartments , 2nd cross, 5th Main, Kempapura Hebbal, Bengaluru-24 have changed my name to DIVVYA B NARAYAN vide affidavit dated 10.04.2021 before Notary A.R Muneer Ahmed Bengaluru

## SOCIAL SERVICES

### Old Age Home

**SUKHSHANTHI LUXURY** Retirement Home. Furnished Accommodation with 3 meals, 24x7 Nurse, Ambulance, Library. Rent Rs. 18,890/- pm. Near Sarjapur, Bangalore. Call: 88847-10009/ 080 26629422

MORE Classifieds IN SUPPLEMENT

ನಗರದಲ್ಲಿ ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರ ನಾಲ್ಕನೇ ದಿನವೂ ಮುಂದುವರಿಕೆ

# ಬಿಎಂಟಿಸಿ: ಮತ್ತೆ 118 ನೌಕರರು ವಜಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆರನೇ ವೇತನ ಆಯೋಗದ ಶಿಫಾರಸು ಜಾರಿಗೆ ಒತ್ತಾಯಿಸಿ ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರ ಸತತ ನಾಲ್ಕನೇ ದಿನವೂ ಮುಂದುವರಿಯಿತು. ಇತ್ತ, ಕರ್ತವ್ಯಕ್ಕೆ ಹಾಜರಾಗದಿರುವ ತರಬೇತಿ ನೌಕರರನ್ನು ಸೇವೆಯಿಂದ ವಜಾಗೊಳಿಸುವ ಕಾರ್ಯವನ್ನೂ ಬಿಎಂಟಿಸಿ ಮುಂದುವರಿಸಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ಬಹುತೇಕ ನೌಕರರು ಶನಿವಾರವೂ ಕರ್ತವ್ಯಕ್ಕೆ ಹಾಜರಾಗಲಿಲ್ಲ. ಏ.7 ಮತ್ತು 8ರಂದು ಹೊರಡಿಸಿದ ಆದೇಶದಂತೆ ತರಬೇತಿ ಮತ್ತು ಪ್ರೊಬೇಷನರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 118 ನೌಕರರನ್ನು ಬಿಎಂಟಿಸಿ ವಜಾ ಮಾಡಿದೆ.

ಇವರಲ್ಲಿ 60 ಮಂದಿ ತರಬೇತಿ ನೌಕರರಾಗಿದ್ದರೆ, 58 ಜನ ಪ್ರೊಬೇಷನರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಶುಕ್ರವಾರವೂ 120 ನೌಕರರನ್ನು ವಜಾಗೊಳಿಸಿ ಬಿಎಂಟಿಸಿ ಆದೇಶ ಹೊರಡಿಸಿತ್ತು.

**1,850 ಜನರಿಗೆ ನೋಟಿಸ್:** ಬಿಎಂಟಿಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 55 ವರ್ಷ ಮೇಲ್ಪಟ್ಟ 1,850 ನೌಕರರಿಗೆ ನೋಟಿಸ್ ನೀಡಲಾಗಿದ್ದು, ವೈದ್ಯಕೀಯ ದೈಹಿಕ ಕ್ಷಮತೆ ಪ್ರಮಾಣಪತ್ರ ಒದಗಿಸುವಂತೆ ಸೂಚಿಸಿದೆ. ಏ.12ರ ಸಂಜೆಯ ವೇಳೆಗೆ, ಜಿಲ್ಲಾ ವೈದ್ಯಾಧಿಕಾರಿಯಿಂದ ಸಹಿ ಹಾಕಿಸಿಕೊಂಡು ಈ ಪ್ರಮಾಣಪತ್ರ ನೀಡಬೇಕು ಎಂದು ಸಂಸ್ಥೆ ಸೂಚಿಸಿತ್ತು.

‘ಶನಿವಾರ, ಭಾನುವಾರ ರಜೆ ಇದೆ. ಒಂದೇ ದಿನದಲ್ಲಿ ಡಿಎಚ್‌ಒ ಕಡೆಯಿಂದ ಪ್ರಮಾಣಪತ್ರ ಪಡೆಯುವುದು ಕಷ್ಟವಾಗುತ್ತದೆ. ಕೆಲಸದಿಂದ ತೆಗೆಯಬೇಕು ಎಂಬ ದುರುದ್ದೇಶದಿಂದಲೇ ಬಿಎಂಟಿಸಿ ಇಂತಹ ಆದೇಶ ಮಾಡಿದೆ’ ಎಂದು ನೌಕರರೊಬ್ಬರು ದೂರಿದರು.

ನಂತರ, ಆದೇಶದಲ್ಲಿ ಮಾರ್ಪಾಡು ಮಾಡಿದ ಬಿಎಂಟಿಸಿ, ವೈದ್ಯಾಧಿಕಾರಿಯಿಂದ ವೈದ್ಯಕೀಯ ಪ್ರಮಾಣಪತ್ರವನ್ನು ಪಡೆಯುವಲ್ಲಿ ತೊಂದರೆ ಉಂಟಾದಲ್ಲಿ, ಸಂಸ್ಥೆಯ ಆಸ್ಪತ್ರೆಯಲ್ಲಿ ಹೊರರೋಗಿಗಳ ವಿಭಾಗದಲ್ಲಿ ಹಾಜರಾಗಿ ಪ್ರಮಾಣಪತ್ರ ಪಡೆದು ಸಲ್ಲಿಸಬಹುದು ಎಂದು ಹೇಳಿದೆ.

ವೈದ್ಯಕೀಯ ಪ್ರಮಾಣಪತ್ರ ಹಾಜರು ಪಡಿಸಲು ಸಾಧ್ಯವಾಗದಿದ್ದರೆ, ಅಂತಹ ನೌಕರರು ಸಂಬಂಧಪಟ್ಟ ಘಟಕ ವ್ಯವಸ್ಥಾಪಕರಿಗೆ ಖುದ್ದಾಗಿ ಲಿಖಿತ ರೂಪದಲ್ಲಿ ಸಮಜಾಯಿಷಿ ನೀಡಬೇಕು ಎಂದೂ ಸೂಚಿಸಿದೆ. ಇದಕ್ಕೆ ತಪ್ಪಿದರೆ ಅಂತಹ ನೌಕರರು ಸೇವೆಯಿಂದ ನಿವೃತ್ತಿಗೊಳ್ಳಲು ಒಪ್ಪಿದ್ದಾರೆ ಎಂದು ಪರಿಗಣಿಸಲಾಗುವುದು ಎಂದೂ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

**ಅಮಾನವೀಯ:** ‘ತರಬೇತಿ ನೌಕರರನ್ನು ವಜಾಗೊಳಿಸುವ ಮತ್ತು ಹಿರಿಯ ನೌಕರರಿಗೆ ನೋಟಿಸ್ ಜಾರಿ ಮಾಡುವ ಮೂಲಕ ಬಿಎಂಟಿಸಿಯು ಅಮಾನವೀಯವಾಗಿ ನಡೆದುಕೊಳ್ಳುತ್ತಿದೆ. ನ್ಯಾಯ ಕೇಳಿದರೆ ವಜಾ ಶಿಕ್ಷೆ ನೀಡುತ್ತಿದೆ’ ಎಂದು ನೌಕರರು ಅಸಮಾಧಾನ ವ್ಯಕ್ತಪಡಿಸಿದರು.

ಬಿಎಂಟಿಸಿಯ 200ಕ್ಕೂ ಹೆಚ್ಚು ಬಸ್‌ಗಳು ಶನಿವಾರ ಕಾರ್ಯಾಚರಣೆ ನಡೆಸಿದವು.

ಪ್ರಯಾಣಿಕರು ಶನಿವಾರ ನಗರದ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಮುಂದೆ ಬಸ್‌ಗಾಗಿ ಕಾಯುತ್ತಿದ್ದರು –ಪ್ರಜಾವಾಣಿ ಚಿತ್ರ

## ಮೆಜೆಸ್ಟಿಕ್ ತಲುಪಲು ಹರಸಾಹಸ

ವಾರಾಂತ್ಯವಾಗಿದ್ದರಿಂದ ಮತ್ತು ಸರಣಿ ರಜೆ ಇರುವುದರಿಂದ ಸ್ವಂತ ಊರಿಗೆ ತೆರಳಲು ಸಾವಿರಾರು ಜನ ಕೆಂಪೇಗೌಡ ಬಸ್ ನಿಲ್ದಾಣದತ್ತ (ಮೆಜೆಸ್ಟಿಕ್) ಧಾವಿಸಿದರು. ಆದರೆ, ಬಿಎಂಟಿಸಿ ಬಸ್ ಅಥವಾ ಖಾಸಗಿ ಬಸ್ ವ್ಯವಸ್ಥೆ ಇಲ್ಲದೆ ತೊಂದರೆ ಅನುಭವಿಸಬೇಕಾಯಿತು.

‘ಓಲಾ, ಉಬರ್ ಕಾಯ್ದಿರಿಸಲು ಸಾಧ್ಯವಾಗುತ್ತಿಲ್ಲ. ಆಟೊದವರು ದುಪ್ಪಟ್ಟು ಹಣ ಕೇಳುತ್ತಿದ್ದಾರೆ. ಮುಷ್ಕರ ಅಂತ್ಯಗೊಳಿಸಲು ಸರ್ಕಾರ ಆದಷ್ಟು ಬೇಗ ಯಾವುದಾದರೂ ಪರಿಹಾರ ಮಾರ್ಗ ಕಂಡುಕೊಳ್ಳಬೇಕು. ಇಲ್ಲದಿದ್ದರೆ ಸಾಮಾನ್ಯ ಜನ ಹೆಚ್ಚು ತೊಂದರೆ ಅನುಭವಿಸಬೇಕಾಗುತ್ತದೆ’ ಎಂದು ಪ್ರಯಾಣಿಕ ರಮೇಶ್ ಎಂಬುವರು ಹೇಳಿದರು.

‘ಮೆಟ್ರೊ ರೈಲಿನ ಮೂಲಕ ಮೆಜೆಸ್ಟಿಕ್ ತಲುಪಬೇಕು ಎಂದರೆ ಮೆಟ್ರೊ ಸ್ಮಾರ್ಟ್‌ಕಾರ್ಡ್‌ಗೆ ₹50, ಠೇವಣಿಗೆ ₹50 ಮತ್ತು ಟಿಕೆಟ್ ದರಕ್ಕೆ ಕನಿಷ್ಠ ₹50 ಬೇಕಾಗುತ್ತದೆ. ಬಿಎಂಟಿಸಿ ಬಸ್ ಇಲ್ಲದೇ ಇರುವುದರಿಂದ ಅನಗತ್ಯವಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ’ ಎಂದು ಕೆಂಗೇರಿಯ ಮಹಾಂತೇಶ್ ಅಸಮಾಧಾನ ವ್ಯಕ್ತಪಡಿಸಿದರು.

## ದಬ್ಬಾಳಿಕೆ ಬಿಟ್ಟು ಬೇಡಿಕೆ ಈಡೇರಿಸಿ: ನಟ ಚೇತನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ತಮ್ಮ ನ್ಯಾಯಯುತ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮುಷ್ಕರ ನಡೆಸುತ್ತಿರುವ ಸಾರಿಗೆ ನೌಕರರ ಮೇಲೆ ರಾಜ್ಯ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ. ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿಯ ತರಬೇತಿ ನೌಕರರನ್ನು ವಜಾಗೊಳಿಸುವ ಮೂಲಕ ಮುಷ್ಕರ ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ನೌಕರರು ಇದ್ಯಾವುದಕ್ಕೂ ಬಗ್ಗುವುದಿಲ್ಲ’ ಎಂದು ನಟ ಚೇತನ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು ‘ಸಾರಿಗೆ ನೌಕರರ ಒಂಬತ್ತು ಬೇಡಿಕೆಗಳ ಪೈಕಿ ಎಂಟನ್ನು ಈಡೇರಿಸಿರುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಇದು ಸಂಪೂರ್ಣ ಸುಳ್ಳು. 72 ನಿಗಮಗಳ ಪೈಕಿ 70 ನಿಗಮಗಳಿಗೆ ಸರ್ಕಾರವು ಆರನೇ ವೇತನ ಆಯೋಗದ ಅಡಿಯಲ್ಲಿ ಸೌಲಭ್ಯಗಳನ್ನು ನೀಡುತ್ತಿದೆ. ಆದರೆ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಸಿಬ್ಬಂದಿಯನ್ನು ಇದರಿಂದ ಹೊರಗಿಟ್ಟಿದೆ. ಇದು ಯಾವ ನ್ಯಾಯ’ ಎಂದು ಪ್ರಶ್ನಿಸಿದರು.

‘ಸಾರಿಗೆ ನೌಕರರನ್ನು ವಜಾಗೊಳಿಸುವ, ಮನೆ ಖಾಲಿ ಮಾಡಿಸುವ ಹಾಗೂ ವರ್ಗಾವಣೆ ಮಾಡುವ ಮೂಲಕ ಅವರ ಬಲ ಕುಗ್ಗಿಸುವ ಕೆಲಸಕ್ಕೆ ಸರ್ಕಾರ ಕೈಹಾಕಿದೆ. ಆಳುವವರ ಈ ತಂತ್ರ ಫಲಿಸುವುದಿಲ್ಲ.

ಚೇತನ್

ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಶ್ರೀಮಂತರ ಪರವಾಗಿ ಕೆಲಸ ಮಾಡುತ್ತಿದೆ. ಧನಿಕರಿಗೆ ತೆರಿಗೆಯಿಂದ ವಿನಾಯಿತಿ ನೀಡುವ ಈ ಸರ್ಕಾರ ನೌಕರರ ಬೇಡಿಕೆ ಈಡೇರಿಸಲು ಸಾಧ್ಯವಿಲ್ಲ ಎಂದು ಹೇಳುತ್ತಿದೆ. ಸರ್ಕಾರದ ಈ ಮೊಂಡು ಹಠದಿಂದಾಗಿಯೇ ಬಿಕ್ಕಟ್ಟು ಉದ್ಭವಿಸಿದೆ. ಪ್ರಯಾಣಿಕರಿಗೆ ಆಗಿರುವ ತೊಂದರೆಗೆ ಸರ್ಕಾರವೇ ನೇರ ಹೊಣೆ’ ಎಂದು ಆರೋಪಿಸಿದರು.

‘ಸಾರಿಗೆ ಸಂಸ್ಥೆಯನ್ನು ಖಾಸಗೀಕರಣಗೊಳಿಸಲು ಸರ್ಕಾರ ಹುನ್ನಾರ ನಡೆಸುತ್ತಿದೆ. ಹೀಗಾಗಿಯೇ ನೌಕರರ ಬೇಡಿಕೆ ಈಡೇರಿಸಲು ಹಿಂದೇಟು ಹಾಕುತ್ತಿದೆ. ನೌಕರರ ಮುಷ್ಕರಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಬೇಡಿಕೆ ಈಡೇರುವವರೆಗೂ ಅವರ ಜೊತೆಗೆ ಇರುತ್ತೇನೆ. ಕೋಡಿಹಳ್ಳಿ ಚಂದ್ರಶೇಖರ್ ಅವರು ರೈತಪರ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅವರು ಸಾರಿಗೆ ನೌಕರರ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಅವರನ್ನು ಬಂಧಿಸುವ ಮೂಲಕ ಸರ್ಕಾರವು ಪ್ರಜಾಪ್ರಭುತ್ವ ವಿರೋಧಿ ಧೋರಣೆ ಅನುಸರಿಸಿದೆ. ಇದು ಖಂಡನಾರ್ಹ’ ಎಂದು ಹೇಳಿದರು.

## ಯಶವಂತಪುರ-ಮಂಗಳೂರು- ಕಾರವಾರ ವಿಶೇಷ ರೈಲು

**ಬೆಂಗಳೂರು:** ದಕ್ಷಿಣ ರೈಲ್ವೆಯು ಯಶವಂತಪುರ–ಮಂಗಳೂರು ಜಂಕ್ಷನ್ ಹಾಗೂ ಕಾರವಾರ ಮಾರ್ಗದಲ್ಲಿ ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆ ಒದಗಿಸಿದೆ. ಜನರು ಸಾಮಾನ್ಯ ದರದಲ್ಲಿ ಈ ರೈಲುಗಳಲ್ಲಿ ಪ್ರಯಾಣಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮುಷ್ಕರದಿಂದ ಬಸ್ ಸೇವೆಯಲ್ಲಿ ವ್ಯತ್ಯಯವಾಗಿದೆ. ಈ ಸಮಯದಲ್ಲೇ ವಿಶೇಷ ರೈಲು ಸೇವೆ ಆರಂಭಿಸಿರುವುದರಿಂದ ಕರಾವಳಿ ಪ್ರದೇಶಗಳಿಗೆ ಪ್ರಯಾಣಿಸುವವರಿಗೆ ಅನುಕೂಲವಾಗಲಿದೆ.

| ರೈಲು ಸಂಖ್ಯೆ | ಹೊರಡುವ ಸ್ಥಳ | ಹೊರಡುವ ಸಮಯ | ತಲುಪುವ ಸ್ಥಳ | ತಲುಪುವ ಸಮಯ | ಸೇವೆಯ ದಿನಗಳು | ಸೇವೆ ಆರಂಭವಾಗುವ ದಿನ |
|---|---|---|---|---|---|---|
| 06575 | ಯಶವಂತಪುರ | ಬೆಳಿಗ್ಗೆ 7 | ಮಂಗಳೂರು ಜಂಕ್ಷನ್ | ಸಂಜೆ 5 | ಮಂಗಳವಾರ, ಗುರುವಾರ, ಭಾನುವಾರ | ಏಪ್ರಿಲ್ 13ರಿಂದ |
| 06576 | ಮಂಗಳೂರು ಜಂಕ್ಷನ್ | ಬೆಳಿಗ್ಗೆ 11.30 | ಯಶವಂತಪುರ | ರಾತ್ರಿ 8.20 | ಬುಧವಾರ, ಶುಕ್ರವಾರ, ಸೋಮವಾರ | ಏಪ್ರಿಲ್ 12 ರಿಂದ |
| 06539 | ಯಶವಂತಪುರ | ಬೆಳಿಗ್ಗೆ 7 | ಮಂಗಳೂರು ಜಂಕ್ಷನ್ | ಸಂಜೆ 5 | ಶನಿವಾರ | ಏಪ್ರಿಲ್ 17 ರಿಂದ |
| 06540 | ಮಂಗಳೂರು ಜಂಕ್ಷನ್ | ಬೆಳಿಗ್ಗೆ 9.15 | ಯಶವಂತಪುರ | ರಾತ್ರಿ 8.05 | ಭಾನುವಾರ | ಏಪ್ರಿಲ್ 18ರಿಂದ |
| 06211 | ಯಶವಂತಪುರ | ಬೆಳಿಗ್ಗೆ 7 | ಕಾರವಾರ | ರಾತ್ರಿ 8.55 | ಸೋಮವಾರ, ಬುಧವಾರ, ಶುಕ್ರವಾರ | ಏಪ್ರಿಲ್ 12ರಿಂದ |
| 06212 | ಕಾರವಾರ | ಬೆಳಿಗ್ಗೆ 5.30 | ಯಶವಂತಪುರ | ರಾತ್ರಿ 8.20 | ಮಂಗಳವಾರ,ಗುರುವಾರ, ಶನಿವಾರ | ಏಪ್ರಿಲ್ 13ರಿಂದ |

# ಕೋಡಿಹಳ್ಳಿ ಚಂದ್ರಶೇಖರ್ ಬಂಧನಕ್ಕೆ ಸಿಪಿಎಂ ಖಂಡನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಾರಿಗೆ ನೌಕರರ ಮುಷ್ಕರದ ನೇತೃತ್ವ ವಹಿಸಿದ್ದ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಬಂಧಿಸಿರುವ ರಾಜ್ಯ ಬಿಜೆಪಿ ಸರ್ಕಾರದ ಧೋರಣೆ ಖಂಡನೀಯ’ ಎಂದು ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಖಂಡನೆ ವ್ಯಕ್ತಪಡಿಸಿವೆ.

‘ಸಾರಿಗೆ ಮುಷ್ಕರವನ್ನು ನಿಷೇಧಿಸಿ ದಮನಕಾರಿ ಧೋರಣೆಯನ್ನು ಸರ್ಕಾರ ಮುಂದುವರಿಸಿದೆ. ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಬಂಧಿಸುವ ಮೂಲಕ ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ತೋರಿದೆ. ಬಂಧಿತರನ್ನು ಕೂಡಲೇಬಿಡುಗಡೆಮಾಡಬೇಕು’ಎಂದು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್.ಉಮೇಶ್ ಆಗ್ರಹಿಸಿದ್ದಾರೆ.

‘ಸರ್ಕಾರ ಸಾರಿಗೆ ನೌಕರರ ಪ್ರತಿನಿಧಿಗಳ ಜೊತೆ ಚರ್ಚಿಸಿ, ಸೌಹಾರ್ದಯುತ ಪರಿಹಾರದ ಹಾದಿಯನ್ನು ಅನುಸರಿಸಬೇಕಿತ್ತು. ಅದರ ಬದಲು ಮುಷ್ಕರ ನಿಷೇಧ, ವಸತಿ ಗೃಹಗಳ ತೆರವು, ಖಾಸಗಿ ಬಸ್‌ಗಳಿಗೆ ಅವಕಾಶ, ಎಸ್ಮಾ ಜಾರಿ ಬೆದರಿಕೆಗಳನ್ನು ಒಡ್ಡಿದೆ. ಇದು, ಬಿಜೆಪಿ ಸರ್ಕಾರವು ಸರ್ಕಾರಿ ಸಾರಿಗೆಯನ್ನು ಖಾಸಗೀಕರಣ ಮಾಡಲು ನಡೆಸಿರುವ ಹುನ್ನಾರ’ ಎಂದು ದೂರಿದ್ದಾರೆ.

ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ,‘ರಾಜ್ಯದ ಜನತೆ ಸಾರಿಗೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ಸರ್ಕಾರ ಸಾರ್ವಜನಿಕರನ್ನು ನೌಕರರ ವಿರುದ್ಧ ಎತ್ತಿ ಕಟ್ಟಿ, ತನ್ನ ದುರಾಡಳಿತ ಮರೆಮಾಚುವ ರಾಜಕೀಯದಲ್ಲಿ ತೊಡಗಿದೆ. ಇದನ್ನು ಜನರು ಅರ್ಥಮಾಡಿಕೊಂಡು ನೌಕರರ ಪರ ನಿಲ್ಲಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

## ರಸಗೊಬ್ಬರ ಸಮರ್ಪಕ ಪೂರೈಕೆಗೆ ಕೇಂದ್ರ ಸೂಚನೆ

**ನವದೆಹಲಿ (ಪಿಟಿಐ):** ರಸಗೊಬ್ಬರ ಲಭ್ಯತೆ ಮತ್ತು ಬೆಲೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ಹೇಳಿರುವ ಸರ್ಕಾರವು, ಮುಂಗಾರು ಬಿತ್ತನೆ ಅವಧಿಯಲ್ಲಿ ರಸಗೊಬ್ಬರ ಪೂರೈಕೆ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಿ ಎಂದು ತಯಾರಕರು ಮತ್ತು ಆಮದುದಾರರಿಗೆ ಸೂಚನೆ ನೀಡಿದೆ.

2020–21ರ ಹಿಂಗಾರು ಅವಧಿಗೆ ಬೇಕಾಗುವಷ್ಟು ರಸಗೊಬ್ಬರ ಲಭ್ಯವಿತ್ತು ಎಂದು ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಅಧಿಕೃತ ಪ್ರಕಟಣೆ ತಿಳಿಸಿದೆ.

ಕೋವಿಡ್–19 ಸಾಂಕ್ರಾಮಿಕವು ಒಡ್ಡಿರುವ ಹಲವು ಸವಾಲುಗಳ ನಡುವೆಯೂ ಅಗತ್ಯ ಇರುವಷ್ಟು ರಸಗೊಬ್ಬರ ಉತ್ಪಾದನೆ, ಆಮದು ಮತ್ತು ಸರಬರಾಜು ಸಕಾಲಕ್ಕೆ ಆಗಿದೆ.

ರೈತರ ಹಿತದೃಷ್ಟಿಯಿಂದ ಸರ್ಕಾರವು ರಸಗೊಬ್ಬರ ಲಭ್ಯತೆ ಮತ್ತು ಬೆಲೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಂಗಾರು ಅವಧಿಗೆ ಎಷ್ಟು ಪ್ರಮಾಣದ ರಸಗೊಬ್ಬರ ಅಗತ್ಯ ಇದೆ ಎನ್ನುವುದನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜೊತೆ ಸಮಾಲೋಚಿಸಿ ಅದನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗಿದೆ ಎಂದೂ ಹೇಳಿದೆ.

## 13ರಿಂದ ‘ಭೂಮಿ ಸುಪೋಷಣ–ಸಂರಕ್ಷಣಾ’ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಸಾಯನಿಕಗಳ ಬಳಕೆಯಿಂದ ಭೂಮಿ ಬಂಜರಾಗುವುದನ್ನು ತಪ್ಪಿಸಿ, ಫಲವತ್ತತೆ ಹೆಚ್ಚಿಸುವ ಜಾಗೃತಿ ಮೂಡಿಸಲು ‘ಭೂಮಿ ಸುಪೋಷಣ ಮತ್ತು ಸಂರಕ್ಷಣಾ ಅಭಿಯಾನ’ವನ್ನು ಇದೇ 13ರಿಂದ ಜುಲೈ 24ರವರೆಗೆ ದೇಶವ್ಯಾಪಿ ಹಮ್ಮಿಕೊಳ್ಳಲಾಗಿದೆ’ ಎಂದು ಸುಪೋಷಣ ಜನ ಅಭಿಯಾನದ ರಾಷ್ಟ್ರೀಯ ಸಮಿತಿಯ ಸದಸ್ಯ ಆನಂದ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಭೂಮಿ ಸುಪೋಷಣೆಗಾಗಿ ಕೃಷಿಕರು, ಸಾಮಾನ್ಯ ಜನರನ್ನು ಸಂಪರ್ಕಿಸುವುದು, ಈಗಾಗಲೇ ಸುಪೋಷಣೆಯಲ್ಲಿ ತೊಡಗಿರುವ ಕೃಷಿಕರಿಂದ ಮಾಹಿತಿ ನೀಡುವುದು ಸಾವಯವ ಆಸಕ್ತರನ್ನು ಪ್ರೇರೇಪಿಸುವುದು ಈ ಅಭಿಯಾನದ ಮುಖ್ಯ ಉದ್ದೇಶ’ ಎಂದರು.

‘ಭೂತಾಯಿಯ ರಕ್ಷಣೆಯ ಧ್ಯೇಯದೊಂದಿಗೆ ಹಮ್ಮಿಕೊಂಡಿರುವ ಅಭಿಯಾನಕ್ಕೆ ಅಕ್ಷಯ ಕೃಷಿ ಪರಿವಾರ, ಸಾವಯವ ಕೃಷಿ ಪರಿವಾರ, ಸ್ವದೇಶಿ ಜಾಗರಣ ಮಂಚ್, ಗ್ರಾಮ ವಿಕಾಸ, ವನವಾಸಿ ಕಲ್ಯಾಣ ಸೇರಿದಂತೆ ಹಲವು ಸಂಘಟನೆಗಳು ಕೈಜೋಡಿಸಿವೆ. ಏ.13ರ ಯುಗಾದಿ ಹಬ್ಬದಂದು ಅಭಿಯಾನಕ್ಕೆ ಅಧಿಕೃತ ಚಾಲನೆ ನೀಡಲಾಗುವುದು’ ಎಂದು ವಿವರಿಸಿದರು.

‘ಭೂಮಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅಭಿಯಾನ ಆರಂಭಗೊಳ್ಳಲಿದೆ. ಗ್ರಾಮದ ಎಲ್ಲ ರೈತರಿಂದ ಅವರ ಕೃಷಿ ಭೂಮಿಯಿಂದ ಒಂದು ಹಿಡಿ ಮಣ್ಣನ್ನು ತಂದು ರಾಶಿ ಮಾಡಲಾಗುವುದು. ಅದಕ್ಕೆ ಪೂಜೆ ಸಲ್ಲಿಸುವ ಮೂಲಕ ಭೂತಾಯಿಯನ್ನು ಸಾವಯವಗೊಳಿಸುವ ಸಂಕಲ್ಪ ಮಾಡಲಾಗುವುದು. ಅಭಿಯಾನದ ಭಾಗವಾಗಿ ತಾಲ್ಲೂಕು ಮಟ್ಟದಲ್ಲಿ ಸಮಾವೇಶಗಳು, ಗ್ರಾಮಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಅಭಿಯಾನದ ಕರ್ನಾಟಕ ದಕ್ಷಿಣ ಪ್ರಾಂತದ ಸಂಚಾಲಕ ಅರುಣ್‌ಕುಮಾರ್, ‘ಭೂಮಿ ರಾಸಾಯನಿಕಗಳ ಬಳಕೆಯಿಂದ ಅಪಾಯಕ್ಕೆ ತುತ್ತಾಗಿದೆ. ಅದನ್ನು ಸಾವಯವಗೊಳಿಸುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಭೂಮಿಯನ್ನು ಕೊಂಡೊಯ್ಯಬೇಕು’ ಎಂದರು.

## ಕೃಷಿ ಕಾಯ್ದೆ ವಾಪಸ್‌ಗೆ ಆಗ್ರಹಿಸಿ ದೆಹಲಿಗೆ ಪಾದಯಾತ್ರೆ

**ಹಾಸನ:** ರೈತ ಹೋರಾಟ ಬೆಂಬಲಿಸಿ ದೆಹಲಿ ಚಲೋ ಪಾದಯಾತ್ರೆ ಹಮ್ಮಿಕೊಂಡಿರುವ ಬಾಗಲಕೋಟೆಯ ಟಿಕಿ ನಾಗರಾಜ್ ಕಲ್ಕುಟುಗ ಅವರನ್ನು ಗುರುವಾರ ಸಂಜೆ ನಗರದ ಹೇಮಾವತಿ ಪ್ರತಿಮೆ ಬಳಿ ಸ್ವಾಗತಿಸಲಾಯಿತು.

‘ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕೆಂದು ಒತ್ತಾಯಿಸಿ ಕಾಲ್ನಡಿಗೆ ಜಾಥಾ ಕೈಗೊಂಡಿರುವ ನಾಗರಾಜ್ ಅವರ ಬದ್ಧತೆಯನ್ನು ಎಲ್ಲರೂ ಪ್ರಶಂಶಿಸಲೇಬೇಕು’ ಎಂದು ಸಿಐಟಿಯು ಜಿಲ್ಲಾ ಅಧ್ಯಕ್ಷ ಧರ್ಮೇಶ್ ಹೇಳಿದರು.

ನಾಗರಾಜ್ ಮಾತನಾಡಿ, ‘ಪಾದಯಾತ್ರೆಯ ಉದ್ದಕ್ಕೂ ರೈತರಿಂದ ಪ್ರೋತ್ಸಾಹ ಸಿಕ್ಕಿದ್ದು, ಶಕ್ತಿ ಬಂದಂತಾಗಿದೆ. ಕೇಂದ್ರದ ನೂತನ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು. ಬೆಳೆಗಳಿಗೆ ಬೆಂಬಲ ಬೆಲೆ ಸಿಗುವ ಕಾನೂನು ಜಾರಿಯಾಗಬೇಕು. ರೈತರನ್ನು ಅವಮಾನಿಸುವ ಸರ್ಕಾರದ ಕ್ರಮ ಖಂಡನೀಯ’ ಎಂದರು.

ಫೆ.11 ರಂದು ಚಾಮರಾಜನಗರದಿಂದ ಪಾದಯಾತ್ರೆ ಆರಂಭಿಸಿರುವ ನಾಗರಾಜ, ಇದೀಗ ಹಾಸನ ಬಳಿಯಿದ್ದಾರೆ. ಕಳೆದ 56 ದಿನಗಳಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿ ಸುತ್ತಾಡಿ, ಜನರೊಂದಿಗೆ ಮಾತನಾಡಿದ್ದಾರೆ. ರಾಜ್ಯದ ಇನ್ನುಳಿದ ಜಿಲ್ಲೆಗಳಲ್ಲಿ ಪ್ರಯಾಣಿಸಿ, ಮಹಾರಾಷ್ಟ್ರದ ಮೂಲಕ ದೆಹಲಿಗೆ ಯಾತ್ರೆ ಬೆಳೆಸಲಿದ್ದಾರೆ.

ಗ್ರಾಮೀಣಾಭಿವೃದ್ಧಿ ವಿ.ವಿ ಘಟಿಕೋತ್ಸವದಲ್ಲಿ ಡಾ. ಬಾಲಸುಬ್ರಹ್ಮಣ್ಯಂ ಅಭಿಮತ

# ಚೀನಿ ಸೂತ್ರ ಗ್ರಾಮೀಣಾಭಿವೃದ್ಧಿಗೆ ಪೂರಕ

ಪ್ರಜಾವಾಣಿ ವಾರ್ತೆ

**ಗದಗ:** ‘ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಚೀನಾ ಮತ್ತು ಮಲೇಷಿಯಾ ದೇಶಗಳು ಮಾಡಿದ ಪ್ರಯೋಗಗಳನ್ನು ನಾವು ಗಮನಿಸಬೇಕು. ಅದರ, ಜತೆಗೆ ನಮ್ಮದೇ ಹೊಸ ಪ್ರಯೋಗಗಳನ್ನು ಮಾಡುವ ಮೂಲಕ ನವಭಾರತದ ಕನಸು ಅರಳಿಸಬೇಕು’ ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಂಸ್ಥಾಪಕ ಡಾ. ಬಾಲಸುಬ್ರಹ್ಮಣ್ಯಂ ಹೇಳಿದರು.

ಶನಿವಾರ ನಡೆದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಅವರು ದೀಕ್ಷಾ ಭಾಷಣ ಮಾಡಿದರು.

‘ಚೀನಾದಲ್ಲಿನ ಗ್ರಾಮೀಣ ಪ್ರದೇಶಗಳು ನಮ್ಮಷ್ಟೇ ಸಮಸ್ಯೆಗಳಿಂದ ಬಳಲುತ್ತಿವೆ. ಗ್ರಾಮೀಣ ಭಾಗದಲ್ಲಿ ತಾಂಡವವಾಡುತ್ತಿರುವ ಬಡತನ ನಿರ್ಮೂಲನೆ, ಹಳ್ಳಿಗಳಲ್ಲೇ ಸಮೃದ್ಧ ಅವಕಾಶ ಸೃಷ್ಟಿ ಹಾಗೂ ಭಾರತ ಮತ್ತು ಚೀನಾದ ಡಿಎನ್‌ಎ ಸಂಸ್ಕೃತಿ ಎಂಬುದನ್ನು ಅರ್ಥಮಾಡಿಕೊಂಡಿರುವ ಅವರು ಸಾಂಸ್ಕೃತಿಕ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಿದ್ದರಿಂದ ಅಭಿವೃದ್ಧಿ ಸಾಧಿಸಿದ್ದಾರೆ. ಈ ಮೂರು ಸೂತ್ರಗಳನ್ನು ನಾವು ಕೂಡ ಅಳವಡಿಸಿಕೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

‘ಹೊಸ ಬಗೆಯ ಆರ್ಥಿಕ ಕ್ರಾಂತಿ ಆಗಬೇಕಿದೆ. ಗ್ರಾಮೀಣ ಪ್ರದೇಶದಲ್ಲಿ ತಯಾರಾಗುವ ವಸ್ತುಗಳಿಗೆ ದೊಡ್ಡ ಮಾರುಕಟ್ಟೆ ಸೃಷ್ಟಿಯಾಗಬೇಕಿದೆ. ನಮ್ಮಲ್ಲಿ ಹೊಸ ಆಲೋಚನೆಗಳಿಗೆ ಬರವಿಲ್ಲ; ಅವಕಾಶಗಳಿಗೆ ಕೊರತೆ ಇದೆ. ಸರ್ಕಾರ ಪ್ರತಿ ಹಳ್ಳಿಗೂ ಮೂಲಸೌಕರ್ಯ ಒದಗಿಸುವತ್ತ ಗಂಭೀರವಾಗಿ ಯೋಚಿಸಬೇಕು’ ಎಂದು ಸಲಹೆ ನೀಡಿದರು.

ಪ್ರಥಮ ರ‍್ಯಾಂಕ್ ಗಳಿಸಿದ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಮನುಷಾ ಸಿ. ಅವರಿಗೆ ಸಹ ಕುಲಾಧಿಪತಿ ಕೆ.ಎಸ್ ಈಶ್ವರಪ್ಪ ಹಾಗೂ ಕುಲಪತಿ ಪ್ರೊ. ವಿಷ್ಣುಕಾಂತ ಎಸ್‌ಚಟಪಲ್ಲಿ ಅವರು ಸ್ವರ್ಣ ಪದಕ ಹಾಗೂ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು

‘ಪಂಚಾಯತ್ ನಮ್ಮ ಅಭಿವೃದ್ಧಿಯ ಚಿಹ್ನೆ ಆಗಬೇಕು. ಅಭಿವೃದ್ಧಿಯ ಬೀಜ ಪಂಚಾಯತ್‌ಗಳಲ್ಲಿ ಮೊಳೆತರೆ; ಆ ಮರವು ರಾಜ್ಯದ ಬೆಳವಣಿಗೆಗೆ ಅನುಕೂಲ ಮಾಡಿಕೊಡುತ್ತದೆ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶಾಸಕ ಎಚ್.ಕೆ.ಪಾಟೀಲ ಹಾಗೂ ಡಾ. ಅಶೋಕ ಮಹಾದೇವ ದಳವಾಯಿ ಅವರಿಗೆ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಕೆ.ಎಸ್.ಈಶ್ವರಪ್ಪ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. 2017–18 ಮತ್ತು 2018–20 ಬ್ಯಾಚ್‌ನಲ್ಲಿ ಪ್ರಥಮ ರ‍್ಯಾಂಕ್ ಪಡೆದ 12 ಮಂದಿ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ ಪ್ರದಾನ ಮಾಡಿದರು. ದ್ವಿತೀಯ ರ‍್ಯಾಂಕ್ ಪಡೆದ 12 ಮಂದಿ ಹಾಗೂ ತೃತೀಯ ರ‍್ಯಾಂಕ್ ಪಡೆದ 12 ಮಂದಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಲಾಯಿತು.

ವಿಶ್ವವಿದ್ಯಾಯಲಯದ ಕುಲಪತಿ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ, ಕುಲಸಚಿವ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ, ವಿತ್ತಾಧಿಕಾರಿ ಪ್ರಶಾಂತ್ ಜೆ.ಸಿ. ಇದ್ದರು.

## ಕೇರಳ: ಉನ್ನತ ಶಿಕ್ಷಣ ಸಚಿವರ ರಾಜೀನಾಮೆ ಸದ್ಯಕ್ಕಿಲ್ಲ

**ತಿರುವನಂತಪುರ (ಪಿಟಿಐ):** ‘ಸಂಬಂಧಿಗೆ ಉದ್ಯೋಗವನ್ನು ಕೊಡಿಸಲು ಸಚಿವ ಸ್ಥಾನದ ಪ್ರಭಾವ ಬಳಸಿರುವ ಬಗ್ಗೆ ಲೋಕಾಯುಕ್ತರಿಂದ ಪ್ರತಿಕೂಲ ವರದಿ ಇದ್ದರೂ, ಉನ್ನತ ಶಿಕ್ಷಣ ಸಚಿವ ಕೆ.ಟಿ.ಜಲೀಲ್ ಅವರು ತಕ್ಷಣಕ್ಕೆ ರಾಜೀನಾಮೆ ಕೊಡುವುದಿಲ್ಲ’ ಎಂದು ಕಾನೂನು ಸಚಿವ ಎ.ಕೆ.ಬಾಲನ್ ಅವರು ತಿಳಿಸಿದ್ದಾರೆ.

‘ಜಲೀಲ್ ಅವರಿಗೆ ವಿವಿಧ ಕಾನೂನು ಆಯ್ಕೆಗಳಿವೆ. ಲೋಕಾಯುಕ್ತ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ತರಬಹುದು. ಅಲ್ಲದೆ, ಲೋಕಾಯುಕ್ತ ವರದಿ ಆಧರಿಸಿ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಗೆ ಮೂರು ತಿಂಗಳ ಅವಕಾಶವಿದೆ‘ ಎಂದು ಅವರು ಶನಿವಾರ ಹೇಳಿದರು.

ಲೋಕಾಯುಕ್ತ ಅವರ ವರದಿ ಹಿನ್ನೆಲೆಯಲ್ಲಿ ಜಲೀಲ್ ಅವರು ತಕ್ಷಣವೇ ರಾಜೀನಾಮೆ ಕೊಡಬೇಕು ಎಂದು ಈಗ ಒತ್ತಾಯಿಸುತ್ತಿರುವರು, ರಾಜ್ಯದಲ್ಲಿ ಅಂತಹ ಯಾವುದೇ ನಿದರ್ಶನವಿಲ್ಲ ಎಂಬುದನ್ನು ಅರಿತುಕೊಳ್ಳಬೇಕು. ಕೆಳಹಂತದ ಕೋರ್ಟ್ ಅಭಿಪ್ರಾಯ ಆಧರಿಸಿ ಯಾರಾದರೂ ರಾಜೀನಾಮೆ ನೀಡಿದ್ದಾರೆಯೇ ಎಂದು ಪ್ರಶ್ನಿಸಿದರು.

ಜಲೀಲ್ ಅವರ ಸಂಬಂಧಿ ಕೆ.ಟಿ. ಅದೀಬ್ ಅವರು ಅನುಕಂಪದ ಆಧಾರದಲ್ಲಿ ನೇಮಕವಾಗಿದ್ದಾರೆ. ಅವರು ಅರ್ಹರಿದ್ದರೆ, ಇಲ್ಲವೇ ಎಂಬುದನ್ನಷ್ಟೇ ಪರಿಶೀಲಿಸಬೇಕು. ಸಂಬಂಧಿಗಳು ನೇಮಕವಾಗಬಾರದು ಎಂದು ಯಾವುದೇ ಕಾಯ್ದೆಯೂ ಹೇಳಿಲ್ಲ ಎಂದು ಬಾಲನ್ ಅವರು ಸಮರ್ಥಿಸಿಕೊಂಡರು.

ಡಾ. ರಾಮ್ ಸೇವಕ್ ಶರ್ಮಾ ಅಭಿಮತ

# ‘ಲಸಿಕೆ ಕೊರತೆ ನಿವಾರಣೆಗೆ ಪೋಲು ತಡೆ ಅಗತ್ಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘60 ವರ್ಷ ಮೇಲ್ಪಟ್ಟವರು ಸೇರಿದಂತೆ ಅರ್ಹ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಲಸಿಕೆ ಪಡೆದುಕೊಳ್ಳಲು ಮುಂದೆ ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ಪ್ರತಿ ಡೋಸ್ ಕೂಡ ಮುಖ್ಯವಾಗುತ್ತದೆ. ಹಾಗಾಗಿ, ಲಸಿಕೆ ವ್ಯರ್ಥವಾಗುವಿಕೆಯನ್ನು ತಡೆಯಬೇಕು’ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ (ಎನ್‌ಎಚ್‌ಎ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ರಾಮ್ ಸೇವಕ್ ಶರ್ಮಾ ತಿಳಿಸಿದರು.

ಪಬ್ಲಿಕ್ ಅಫೇರ್ಸ್ ಫೋರಮ್ ಆಫ್ ಇಂಡಿಯಾ ಆಯೋಜಿಸಿದ ‘ಕೋವಿಡ್–19 ಲಸಿಕಾ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್’ ಕುರಿತ ಆನ್‌ಲೈನ್ ಸಂವಾದದಲ್ಲಿ ಮಾತನಾಡಿದರು.

‘ಒಮ್ಮೆಗೇ ಎಲ್ಲರಿಗೂ ಲಸಿಕೆ ನೀಡಲು ಸಾಧ್ಯವಿಲ್ಲ. ಅಷ್ಟು ಪ್ರಮಾಣದಲ್ಲಿ ಲಸಿಕೆ ಕೂಡ ತಯಾರಾಗುವುದಿಲ್ಲ. ಹಾಗಾಗಿಯೇ ಆದ್ಯತೆಯ ಮೇರೆಗೆ ಮೊದಲು ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ಮುಂಚೂಣಿ ಯೋಧರ ಮಾಹಿತಿಯನ್ನು ಕಲೆಹಾಕಿ, ಲಸಿಕೆ ನೀಡಲಾಯಿತು. ಪ್ರಾರಂಭಿಕ ದಿನಗಳಲ್ಲಿ ಲಸಿಕೆ ಪಡೆಯಲು ಫಲಾನುಭವಿಗಳು ಅಷ್ಟಾಗಿ ಉತ್ಸಾಹ ತೋರಲಿಲ್ಲ. ಈಗ ಹಿರಿಯ ನಾಗರಿಕರು ಹಾಗೂ 45 ವರ್ಷ ಮೇಲ್ಪಟ್ಟವರು ಹೆಚ್ಚಿನ ಸಂಖ್ಯೆಯಲ್ಲಿ ಆರೋಗ್ಯ ಕೇಂದ್ರಗಳಿಗೆ ಬರುತ್ತಿದ್ದಾರೆ. ಆದಷ್ಟು ಬೇಗ ಎಲ್ಲರಿಗೂ ಲಸಿಕೆ ಒದಗಿಸಬೇಕಿದೆ. ಹಾಗಾಗಿ, ಲಸಿಕೆ ವ್ಯರ್ಥವಾಗುವುದನ್ನು ತಡೆಯುವ ಮೂಲಕ ಕೊರತೆ ಆಗದಂತೆ ಸ್ಥಳೀಯ ವೈದ್ಯಕೀಯ ಸಿಬ್ಬಂದಿ ನೋಡಿಕೊಳ್ಳಬೇಕು’ ಎಂದು ಹೇಳಿದರು.



ಡಾ. ರಾಮ್ ಸೇವಕ್ ಶರ್ಮಾ

‘ಸದ್ಯ ನೀಡಲಾಗುತ್ತಿರುವ ‘ಕೋವಿಶೀಲ್ಡ್’ ಲಸಿಕೆಯು ಒಂದು ಶೀಶೆಯಲ್ಲಿ 10 ಡೋಸ್ ಹಾಗೂ ‘ಕೋವ್ಯಾಕ್ಸಿನ್’ ಲಸಿಕೆಯು 20 ಡೋಸ್ ಇರುತ್ತದೆ. ಒಮ್ಮೆ ಶೀಶೆಯನ್ನು ತೆರೆದಲ್ಲಿ 4 ಗಂಟೆ ಕಾಲಾವಧಿಯಲ್ಲಿ ಅಷ್ಟೂ ಡೋಸ್ ನೀಡಬೇಕಾಗುತ್ತದೆ. ಅವಧಿ ಮೀರಿದ ಬಳಿಕ ವ್ಯರ್ಥ ಎಂದು ಪರಿಗಣಿಸಲಾಗುತ್ತದೆ. ನಿಗದಿತ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಬರದಿದ್ದಲ್ಲಿ, ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಿದವರು ಗೈರಾದಲ್ಲಿ ಹಾಗೂ ದಿನದ ಅಂತ್ಯಕ್ಕೆ ಶೀಶೆ ತೆರೆದರೆ ವ್ಯರ್ಥವಾಗುವ ಸಾಧ್ಯತೆ ಇರುತ್ತದೆ. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕು’ ಎಂದು ತಿಳಿಸಿದರು.

**ನಿರ್ವಹಣೆಗೆ ತಂತ್ರಜ್ಞಾನ ಸಹಾಯಕ:** ‘ಲಸಿಕೆ ವಿತರಣೆಗೆ ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವ ಜತೆಗೆ ಡಿಜಿಟಲ್ ದಾಖಲಾತಿ ರೂಪಿಸಲಾಗಿದೆ. ಇದರಿಂದ ಲಸಿಕೆಯ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ತಿಳಿಯಲು ಸಾಧ್ಯವಾಗುತ್ತದೆ. ಫಲಾನುಭವಿಗಳನ್ನು ಗುರುತಿಸುವಿಕೆ, ಎರಡು ಡೋಸ್‌ಗಳ ನಡುವೆ ನಿಗದಿತ ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ವಿವಿಧ ಪ್ರಕ್ರಿಯೆ ನಡೆಸಲು ‘ಕೋವಿನ್’ ಪೋರ್ಟಲ್ ಹಾಗೂ ಆ್ಯಪ್ ಸಹಕಾರಿಯಾಗಿದೆ. ಲಸಿಕೆ ಪಡೆದ ಬಳಿಕ ಅದರ ಪರಿಣಾಮದ ಬಗ್ಗೆ ಅಧ್ಯಯನ ನಡೆಸಲು ಕೂಡ ದಾಖಲಾತಿ ಬೇಕಾಗುತ್ತದೆ’ ಎಂದು ಹೇಳಿದರು.

‘ಲಸಿಕೆ ಪಡೆದವರಿಗೆ ನೀಡಲಾಗುವ ಡಿಜಿಟಲ್ ಪ್ರಮಾಣ ಪತ್ರ ಕೂಡ ಮಹತ್ವ ಹೊಂದಿದೆ. ವಿದೇಶಗಳಿಗೆ ಪ್ರಯಾಣ ಸೇರಿದಂತೆ ವಿವಿಧ ಸಂದರ್ಭದಲ್ಲಿ ಪ್ರಮಾಣ ಪತ್ರ ತೋರಿಸಬೇಕಾಗುತ್ತದೆ. ಅದು ವಿಶ್ವ ಆರೋಗ್ಯ ಸಂಸ್ಥೆಯಿಂದ ಮಾನ್ಯತೆ ಹೊಂದಿರುತ್ತದೆ. ಕೋವಿಡ್‌ನಿಂದಾಗಿ ಡಿಜಿಟಲ್ ಆರೋಗ್ಯ ಸೇವೆಗಳು ಮುಂಚೂಣಿಗೆ ಬಂದಿವೆ. ಟೆಲಿ ಮೆಡಿಸಿನ್, ಟೆಲಿ ಸಮಾಲೋಚನೆಯಂತಹ ಸೇವೆ ವೈದ್ಯಕೀಯ ವ್ಯವಸ್ಥೆಯನ್ನು ಸರಳೀಕರಣ ಮಾಡಿದೆ’ ಎಂದರು.

## ಹಾವೇರಿ: ಪತ್ನಿ ಹುಡುಕಿಕೊಡುವಂತೆ ಪತಿ ಕಣ್ಣೀರು

ಪ್ರಜಾವಾಣಿ ವಾರ್ತೆ

**ಹಾವೇರಿ:** ‘ಹರಪನಹಳ್ಳಿ ತಾಲ್ಲೂಕು ಬೆಣ್ಣಿಹಳ್ಳಿಯ ಸಂಬಂಧಿಕರ ಮನೆಗೆ ಹೋದ ಸಂದರ್ಭದಲ್ಲಿ ಪೊಲೀಸರ ಸೋಗಿನಲ್ಲಿ ಬಂದ ನಾಲ್ವರು ನನ್ನ ಪತ್ನಿಯನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಅಪಹರಣವಾಗಿ 20 ದಿನ ಕಳೆದರೂ ಪತ್ನಿ ಪತ್ತೆಯಾಗಿಲ್ಲ. ಪತ್ನಿ ಹುಡುಕಿಕೊಡಲು ಸ್ಥಳೀಯ ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ’ ಎಂದು ರಾಣೆಬೆನ್ನೂರು ನಗರದ ವೀರೇಶ ಅಡಿವೆಪ್ಪನವರ ದೂರಿದರು.

‘ಮಾರ್ಚ್ 20ರಂದು ನಡೆದ ಅಪಹರಣದ ಬಗ್ಗೆ ರಾಣೆಬೆನ್ನೂರು ನಗರ ಠಾಣೆಗೆ ದೂರು ಸಲ್ಲಿಸಿದ್ದೇನೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ’ ಎಂದರು.

‘ನಾವು ಪರಸ್ಪರ ಪ್ರೀತಿಸಿ 2020ರ ಜೂನ್ 28ರಂದು ಮದುವೆಯಾಗಿದ್ದೇವೆ. ಇದು ದಿವ್ಯಶ್ರೀ ಅವರ ಕುಟುಂಬದ ಹಿರಿಯ ಪೊಲೀಸ್ ಅಧಿಕಾರಿಗೆ ಹಾಗೂ ಅವರ ಮನೆಯವರಿಗೆ ಇಷ್ಟವಿರಲಿಲ್ಲ’ ಎಂದರು.

‘ಶಿವಮೊಗ್ಗದ ಹಿರಿಯ ಪೊಲೀಸ್ ಅಧಿಕಾರಿಗಳೇ ನನ್ನ ಪತ್ನಿಯನ್ನು ಅಪಹರಣ ಮಾಡಿಸಿದ್ದಾರೆ’ ಎಂದು ವೀರೇಶ ಆರೋಪ ಮಾಡಿದರು.

‘ನನ್ನನ್ನು ಯಾರು ಕಿಡ್ನಾಪ್ ಮಾಡಿಲ್ಲ. ನನ್ನ ತಾಯಿ ಜೊತೆ ಹೋಗಿದ್ದೇನೆ ಎಂದು ದಾವಣಗೆರೆ ಠಾಣೆಗೆ ದಿವ್ಯಶ್ರೀ ವರದಿ ನೀಡಿದ್ದಾರೆ. ಶೀಘ್ರದಲ್ಲೇ ಪ್ರಕರಣ ರಾಣೆಬೆನ್ನೂರು ಠಾಣೆಗೆ ವರ್ಗವಾಗಲಿದೆ’ ಎಂದು ರಾಣೆಬೆನ್ನೂರು ಠಾಣೆ ಇನ್‌ಸ್ಪೆಕ್ಟರ್ ಎಂ.ಐ.ಗೌಡಪ್ಪಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ವೀರೇಶ ಮತ್ತು ದಿವ್ಯಶ್ರೀ ದಂಪತಿ

ಜಿಲ್ಲಾಧಿಕಾರಿ ಜೆ.ಮಂಜುನಾಥ್ ಕಿವಿಮಾತು

# ‘ಯುವಜನರು ಗಾಂಧಿ ತತ್ವಗಳನ್ನು ಪಾಲಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಹಾತ್ಮ ಗಾಂಧಿ ಅವರ ಸರಳ ವ್ಯಕ್ತಿತ್ವ ಹಾಗೂ ಅಹಿಂಸಾ ತತ್ವವನ್ನು ಈಗಿನ ಯುವ ಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾಡಳಿತ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ನಗರದ ಬನ್ನಪ್ಪ ಉದ್ಯಾನದಲ್ಲಿ ಶುಕ್ರವಾರ ನಡೆದ ‘ಸ್ವಾತಂತ್ರ್ಯ ಅಮೃತ ಮಹೋತ್ಸವ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘300 ವರ್ಷಗಳ ಬಳಿಕ ಪರಕೀಯರ ಸಂಕೋಲೆಯಿಂದ ಹೊರಬಂದು, ಭಾರತ ಸ್ವಾತಂತ್ರ್ಯ ಪಡೆಯಲು ಅನೇಕ ಹೋರಾಟಗಾರರು ತ್ಯಾಗದ ಬಲಿದಾನಗಳ ಮೂಲಕ ಶ್ರಮಿಸಿದ್ದಾರೆ. ಅವರೆಲ್ಲ ದೇಶದ ಮಹಾನ್ ಚೇತನರು’ ಎಂದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜಿ.ಕೆ.ಶ್ರೀರಾಮ್,‘ ದೇಶಕ್ಕೆ ಸ್ವಾತಂತ್ರ್ಯ ಬಂದು ಮುಂದಿನ ವರ್ಷಕ್ಕೆ 75ರ ವಸಂತ ದಾಟಲಿದೆ. ಅದರ ಅಂಗವಾಗಿ ಇಂದು ಯಾವುದೇ ಜಾತಿ, ಮತಗಳೆನ್ನದೆ, ನಾವೆಲ್ಲರೂ ಒಂದೇ, ನಾವೆಲ್ಲರೂ ಭಾರತೀಯರು ಎನ್ನುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು’ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ವಿಚಾರ ಸಂಕಿರಣ ಹಾಗೂ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ನೀಲಮ್ಮ, ಬೆಂಗಳೂರು ಉತ್ತರ ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷೆ ಸಂಧ್ಯಾ ಎಂ. ಹಾಗೂ ಸ್ವಾತಂತ್ರ್ಯ ಹೋರಾಟಗಾರರ ವೇಷಧಾರಿಗಳು ಇದ್ದಾರೆ

### ಪದವಿ: ಮುಂದಿನ ಶೈಕ್ಷಣಿಕ ವರ್ಷದ ವೇಳಾಪಟ್ಟಿ ಬದಲಾವಣೆ ಇಲ್ಲ– ಡಿಸಿಎಂ ಅಶ್ವತ್ಥನಾರಾಯಣ

# ಪರೀಕ್ಷೆ ಖಚಿತ; ಬೇಸಿಗೆ ರಜೆ ಇಲ್ಲ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಕಾಲೇಜುಗಳಲ್ಲಿ ಮಾರ್ಗಸೂಚಿ ಪ್ರಕಾರ ಸುರಕ್ಷತಾ ಕ್ರಮ
- ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್) ಜಾರಿ

ಬೆಂಗಳೂರು: ‘ಕೋವಿಡ್ ಪರಿಸ್ಥಿತಿಯ ಕಾರಣಕ್ಕೆ ಈ ವರ್ಷದ ಪದವಿ ತರಗತಿಗಳ ಪರೀಕ್ಷೆ ಹಾಗೂ ಶೈಕ್ಷಣಿಕ ಚಟುವಟಿಕೆ ಸ್ಥಗಿತಗೊಳಿಸುವುದಿಲ್ಲ. ನಿಗದಿಯಾಗಿರುವ ವೇಳಾಪಟ್ಟಿಯಂತೆ ಎಲ್ಲವೂ ನಡೆಯಲಿದೆ’ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಶನಿವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್, ಡಿಪ್ಲೊಮಾ ಸೇರಿದಂತೆ ಉನ್ನತ ಶಿಕ್ಷಣ ವ್ಯಾಪ್ತಿಗೆ ಬರುವ ಎಲ್ಲ ವಿಭಾಗಗಳ ಪರೀಕ್ಷೆಗಳು ನಿಗದಿಯಂತೆ ನಡೆಯಲಿದೆ’ ಎಂದರು.

‘2021-22ನೇ ಶೈಕ್ಷಣಿಕ ಸಾಲಿನ ಚಟುವಟಿಕೆಯಲ್ಲಿಯೂ ವ್ಯತ್ಯಯ ಇಲ್ಲ. ಪರೀಕ್ಷೆಗಳು ಮುಗಿದ ಬೆನ್ನಿಗೆ ಆಫ್‌ಲೈನ್ ಮತ್ತು ಆನ್‌ಲೈನ್ ತರಗತಿ ಆರಂಭವಾಗಲಿದೆ. ಬೇಸಿಗೆ ರಜೆ ಇಲ್ಲ. ಮೊದಲು ಆನ್‌ಲೈನ್ ತರಗತಿಗಳು ಆರಂಭವಾಗಲಿವೆ. ಎರಡರ ಪೈಕಿ ಒಂದಕ್ಕೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಾಗಬೇಕು’ ಎಂದರು.

‘ಯಾರು ಕಾಲೇಜಿಗೆ ಬರುತ್ತಾರೋ ಅವರಿಗೆ ಕೋವಿಡ್ ಮಾರ್ಗಸೂಚಿ ಪ್ರಕಾರ ಸುರಕ್ಷತಾ ಕ್ರಮಗಳನ್ನು ಕಾಲೇಜಿನಲ್ಲಿ ಕೈಗೊಳ್ಳಲಾಗುವುದು. ತರಗತಿ ಕೊಠಡಿಗಳ ಸ್ಯಾನಿಟೈಸೇಷನ್, ಸ್ವಚ್ಛತೆ, ಕೋವಿಡ್ ಪರೀಕ್ಷೆ, ಪರಸ್ಪರ ಅಂತರ ಹಾಗೂ ಮಾಸ್ಕ್ ಧರಿಸುವುದು ಕಡ್ಡಾಯವಾಗಿರುತ್ತದೆ’ ಎಂದು ವಿವರಿಸಿದರು.

**ಉಚಿತ ಟ್ಯಾಬ್ಲೆಟ್ ಪಿಸಿ:** ‘ಕೋವಿಡ್ ಕಾರಣಕ್ಕಾಗಿ ಈಗಾಗಲೇ ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್) ಜಾರಿಗೆ ತರಲಾಗಿದೆ. ವಿದ್ಯಾರ್ಥಿಗಳು ಎಲ್ಲೇ ಇದ್ದರೂ ಕಲಿಯಬಹುದು. ಅದಕ್ಕೆ ನೆರವಾಗಲು ಈ ವರ್ಷ ಸರ್ಕಾರಿ ಕಾಲೇಜುಗಳ 1.60 ಲಕ್ಷ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿ ನೀಡಲಾಗಿದೆ. ತರಗತಿ ಕೊಠಡಿಗಳನ್ನೇ ಸ್ಟುಡಿಯೊ ಆಗಿ ಪರಿವರ್ತಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಎಲ್‌ಎಂಎಸ್ ವ್ಯವಸ್ಥೆಯಲ್ಲಿ ಕಂಟೆಂಟ್ ಸರಿಯಾಗಿ ಅಪ್‌ಲೋಡ್ ಆಗುತ್ತಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸಂಬಂಧಪಟ್ಟವರ ಜತೆ ಚರ್ಚಿಸಿ ತಕ್ಷಣ ಅದನ್ನು ಸರಿಪಡಿಸಲು ಸೂಚಿಸುತ್ತೇನೆ’ ಎಂದರು.

## ಮಹದೇಶ್ವರ ಬೆಟ್ಟ: ರಥೋತ್ಸವ ರದ್ದು

ಚಾಮರಾಜನಗರ: ಯುಗಾದಿ ಜಾತ್ರೆಯ ಅಂಗವಾಗಿ, ಇದೇ 13ರಂದು ಮಹದೇಶ್ವರ ಬೆಟ್ಟದಲ್ಲಿ ನಡೆಯಬೇಕಿದ್ದ ರಥೋತ್ಸವವನ್ನು ರದ್ದು ಮಾಡಲಾಗಿದೆ.

ಕೋವಿಡ್ ಕಾರಣದಿಂದ ಗರಿಷ್ಠ 500 ಜನರ ಮಿತಿಗೆ ಒಳಪಟ್ಟು ಜಾತ್ರೆ ನಡೆಸಲು ಜಿಲ್ಲಾಧಿಕಾರಿ ಎಂ.ಆರ್. ರವಿ ಆದೇಶಿಸಿದ್ದಾರೆ. ರಥ ಎಳೆಯಲು 500ರಿಂದ 1000 ಜನರು ಬೇಕು. ರಥೋತ್ಸವ ನಡೆಸಿದರೆ ಕನಿಷ್ಠ ಮೂರು ಸಾವಿರ ಜನರು ಸೇರಲಿದ್ದಾರೆ. ಅಷ್ಟು ಜನರಿಗೆ ಅವಕಾಶ ನೀಡಲು ಸಾಧ್ಯವಾಗದೇ ಇರುವುದರಿಂದ ರಥೋತ್ಸವ ರದ್ದುಗೊಳಿಸಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ಆದೇಶ ಹೊರಡಿಸಿದ್ದಾರೆ.

## ಸುದ್ದಿ 2 ನಿಮಿಷ

### ಮೇ 23ಕ್ಕೆ ಅಖಿಲ ಭಾರತ ಭಗೀರಥ ಜಯಂತ್ಯುತ್ಸವ

ಬ್ರಹ್ಮವಿದ್ಯಾನಗರ (ಹೊಸದುರ್ಗ): ತಾಲ್ಲೂಕಿನ ಬ್ರಹ್ಮವಿದ್ಯಾನಗರದ ಭಗೀರಥ ಗುರುಪೀಠದಲ್ಲಿ ಮೇ 23ರಂದು ಅಖಿಲ ಭಾರತ ಭಗೀರಥ ಜಯಂತ್ಯುತ್ಸವ, ಭಗೀರಥ ದೇಗುಲ, ರಂಗ ಮಂದಿರ, ಪ್ರಸಾದನಿಲಯ ಲೋಕಾರ್ಪಣೆ, ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ.

ತಾಲ್ಲೂಕು ಉಪ್ಪಾರ ಸಂಘದಿಂದ ಮಠದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾಜದ ಮುಖಂಡರ ಸಭೆಯ ಸಾನ್ನಿಧ್ಯ ವಹಿಸಿದ್ದ ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರು ಈ ವಿಷಯ ತಿಳಿಸಿದರು.

‘ಕರ್ನಾಟಕ, ಬಿಹಾರ ಹಾಗೂ ಕೇರಳದ ರಾಜ್ಯಪಾಲರು, ಮುಖ್ಯಮಂತ್ರಿಗಳು, ಹಲವು ಸಚಿವರು, ಮಠಾಧೀಶರನ್ನು ಸಮಾವೇಶಕ್ಕೆ ಆಹ್ವಾನಿಸಲಾಗುವುದು. ಹಿಂದುಳಿದಿರುವ ಉಪ್ಪಾರ ಸಮಾಜದ ಅಭಿವೃದ್ಧಿಗೆ ಪರಿಶಿಷ್ಟ ಪಂಗಡದ ಮೀಸಲಾತಿ ಕೊಡಬೇಕು ಎಂದು ಸಮಾವೇಶದಲ್ಲಿ ಹಕ್ಕೊತ್ತಾಯ ಮಂಡಿಸಲಾಗುವುದು. ಕಾಲಮಿತಿಯಲ್ಲಿ ಮೀಸಲಾತಿ ಕೊಡದಿದ್ದರೆ ಹೋರಾಟಕ್ಕೆ ಸಜ್ಜಾಗುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

‘ಭದ್ರಾ ಮೇಲ್ದಂಡೆ ಯೋಜನೆಯ ಕಾಲುವೆ ನಿರ್ಮಾಣದ ಕಾಮಗಾರಿ ಮಠಕ್ಕೆ ಹೊಂದಿಕೊಂಡಂತೆ ನಡೆಯುತ್ತಿದೆ. ಬಂಡೆ ಸ್ಫೋಟಿಸುವಾಗ ಇಲ್ಲಿ ಅನೇಕ ಮನೆಗಳು ಬಿರುಕು ಬಿಟ್ಟಿವೆ. ಕೆಲವು ಮನೆಗಳು ನೆಲಕ್ಕುರುಳಿವೆ. ಹೀಗಾಗಿ ಬ್ರಹ್ಮವಿದ್ಯಾನಗರ ಗ್ರಾಮ ಸೇರಿ ಮಠದ ಅಭಿವೃದ್ಧಿಗೆ ಭದ್ರಾ ಮೇಲ್ದಂಡೆ ಯೋಜನೆಯಡಿ ವಿಶೇಷ ಅನುದಾನ ನೀಡಬೇಕು’ ಎಂದು ಸ್ವಾಮೀಜಿ ಸರ್ಕಾರವನ್ನು ಒತ್ತಾಯಿಸಿದರು.

### ಉತ್ತರ ಕರ್ನಾಟಕಕ್ಕೆ ಕಚೇರಿ ಸ್ಥಳಾಂತರಿಸಿ: ಯಾಸೀರ್ ಜವಳಿ

ಬೆಂಗಳೂರು: ‘ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿರುವ ಪ್ರಮುಖ ಇಲಾಖೆಯ ಕಚೇರಿಗಳನ್ನು ಉತ್ತರ ಕರ್ನಾಟಕ ಭಾಗಕ್ಕೆ ಸ್ಥಳಾಂತರಿಸಬೇಕು. ಆ ಭಾಗದ ಜನರ ಹಿತದೃಷ್ಟಿಯಿಂದ ಈ ಕೆಲಸ ಆಗಲೇಬೇಕು. ಇದಕ್ಕಾಗಿ ಕಾನೂನು ಹೋರಾಟ ನಡೆಸಲು ನಿರ್ಧರಿಸಿದ್ದೇವೆ’ ಎಂದು ಉತ್ತರ ಕರ್ನಾಟಕ ರೈತರ ಅಭಿವೃದ್ಧಿ ಸಂಘದ ಅಧ್ಯಕ್ಷ ಯಾಸೀರ್ ಜವಳಿ ಶನಿವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು ‘ಪ್ರಮುಖ ಇಲಾಖೆಯ ಕಚೇರಿಗಳನ್ನು ಉತ್ತರ ಕರ್ನಾಟಕದ ಭಾಗಗಳಿಗೆ ಸ್ಥಳಾಂತರಿಸಬೇಕು ಎಂದು ಸರ್ಕಾರ 2019ರಲ್ಲಿಯೇ ಅಧಿಸೂಚನೆ ಹೊರಡಿಸಿದೆ. ಇದು ಕಾಗದಕ್ಕಷ್ಟೇ ಸೀಮಿತವಾಗಿದೆ. ಈ ಸಂಬಂಧ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ’ ಎಂದು ತಿಳಿಸಿದರು.

‘ದಕ್ಷಿಣದ ಜಿಲ್ಲೆಗಳಿಗೆ ಹೋಲಿಸಿದರೆ ಉತ್ತರ ಭಾಗದ ಜಿಲ್ಲೆಗಳು ಅಭಿವೃದ್ಧಿಯಲ್ಲಿ ಹಿಂದುಳಿದಿವೆ. ಪ್ರಮುಖ ಕಚೇರಿಗಳು ಬೆಂಗಳೂರಿನಲ್ಲಿಯೇ ಕೇಂದ್ರೀಕೃತವಾಗಿರುವುದು ಇದಕ್ಕೆ ಕಾರಣ. ಏನಾದರೂ ಕೆಲಸಗಳು ಆಗಬೇಕಾದರೆ ಆ ಭಾಗದ ಜನ ಬೆಂಗಳೂರಿಗೆ ಬರಬೇಕು. ಇದು ಅವರಿಗೆ ಹೊರೆಯಾಗಿ ಪರಿಣಮಿಸಿದೆ’ ಎಂದರು.

ಪ್ರಜಾವಾಣಿ facebook LIVE fb.com/prajavani.net
ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ
ಅಶ್ವಿನಿ
ರಸಾಯನ ಶಾಸ್ತ್ರ ಉಪನ್ಯಾಸಕರು, ಕಲಬುರ್ಗಿ
ಇವರಿಂದ ಟಿಪ್ಸ್
ವಿಷಯ: ರಸಾಯನ ಶಾಸ್ತ್ರ
ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ
ಏಪ್ರಿಲ್ 12 ಹಾಗೂ 15 ಸಂಜೆ 4.30 ರಿಂದ 6.00

ಪ್ರಜಾವಾಣಿ facebook LIVE fb.com/prajavani.net
ಯುಗಾದಿ ಹಬ್ಬದ ವಿಶೇಷ
ಹಿಂದೂಸ್ತಾನವು ಎಂದೂ ಮರೆಯದ
ಸಾಹಿತ್ಯ ರಸ ಋಷಿ ವಿಜಯ ನಾರಸಿಂಹ
ಅವರ ಪ್ರಖ್ಯಾತ ಚಲನ ಚಿತ್ರ ಗೀತೆಗಳು
ನಂದಿನಿ ವಲ್ಲೀಶ್, ಗಾಯಕಿ, ಚಲನ ಚಿತ್ರ ನಟ
ಅರ್ಪಣೆ
‘ಸ್ಟೈಲಿಂಗ್ ಸಿಂಗರ್’ ಸ್ವರೂಪ್ ರಮೇಶ್
ಮಂಗಳವಾರ 13 ನೇ ಏಪ್ರಿಲ್ ಸಂಜೆ 6.30

## ಕೆಪಿಎಸ್‌ಸಿ: ಎಫ್‌ಡಿಎ ‘ಕೀ ಉತ್ತರ’ ಎಡವಟ್ಟು

### ಉತ್ತರ ಸರಿ ಇದ್ದರೂ ತಪ್ಪೆಂದು ಪರಿಗಣನೆ, ಅನಗತ್ಯವಾಗಿ ಗ್ರೇಸ್ ಅಂಕ– ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ಭರ್ತಿಗೆ ಫೆ. 28ರಂದು ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ (ಸಾಮಾನ್ಯ ಜ್ಞಾನ, ಸಾಮಾನ್ಯ ಕನ್ನಡ ಮತ್ತು ಸಾಮಾನ್ಯ ಇಂಗ್ಲಿಷ್) ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪ್ರಕಟಿಸಿರುವ ಪರಿಷ್ಕೃತ ‘ಕೀ ಉತ್ತರ’ಗಳಲ್ಲಿ ಕೆಲವು ತಪ್ಪಾಗಿವೆ ಎಂದು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ದೂರು ನೀಡಿರುವ ಅಭ್ಯರ್ಥಿಗಳು, ‘ಉತ್ತರ ಸರಿ ಇದ್ದರೂ ತಪ್ಪೆಂದು ಪರಿಷ್ಕೃತ ಉತ್ತರ ನೀಡಲಾಗಿದೆ. ಅಲ್ಲದೆ, ಅನಗತ್ಯವಾಗಿ ಗ್ರೇಸ್ ಅಂಕ ಕರುಣಿಸಲಾಗಿದೆ’ ಎಂದಿದ್ದಾರೆ

‘ಪರಿಷ್ಕೃತ ಕೀ ಉತ್ತರದಲ್ಲಿ 19 ಪ್ರಶ್ನೆಗಳಿಗೆ (ಸಾಮಾನ್ಯ ಜ್ಞಾನ – 4, ಸಾಮಾನ್ಯ ಕನ್ನಡದಲ್ಲಿ 15) ಉತ್ತರಗಳನ್ನು ಬದಲಿಸಲಾಗಿದೆ. ಆ ಪೈಕಿ, ಸಾಮಾನ್ಯ ಜ್ಞಾನದ 1 ಮತ್ತು ಸಾಮಾನ್ಯ ಕನ್ನಡದ 6 ಪ್ರಶ್ನೆಗಳಲ್ಲಿ ಎಲ್ಲ ನಾಲ್ಕೂ ಆಯ್ಕೆ ಉತ್ತರಗಳು ಸರಿ ಎಂಬ ಕಾರಣಕ್ಕೆ ಗ್ರೇಸ್ ಅಂಕ ನೀಡಲಾಗಿದೆ. ಇದರ ಹೊರತಾಗಿ ಎರಡು ತಪ್ಪು ಉತ್ತರ ಪ್ರಕಟಿಸಲಾಗಿದೆ. ಗ್ಲಿಲಹಪ್ರಶ್ನೆಗಳಿಗೆ ಉತ್ತರಗಳನ್ನು ಸರಿಪಡಿಸುವ ಗೋಜಿಗೆ ಹೋಗಿಲ್ಲ’ ಎಂದು ದೂರಿದ್ದಾರೆ.

‘ಮೊದಲು ಮಾರ್ಚ್ 2ರಂದು ಕೀ ಉತ್ತರ ಪ್ರಕಟಿಸಿ ಆಕ್ಷೇಪಣೆ ಆಹ್ವಾನಿಸಲಾಗಿತ್ತು. ಅದರಲ್ಲಿ ತಪ್ಪುಗಳಿವೆ ಎಂದು ದಾಖಲೆ ಸಹಿತ ಆಕ್ಷೇಪಣೆ ಸಲ್ಲಿಸಿದ್ದೇವೆ. ಆದರೆ, ಕೆಪಿಎಸ್‌ಸಿ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಂಡಿಲ್ಲ. ಏ. 8ರಂದು ಅಂತಿಮ ಪರಿಷ್ಕೃತ ಕೀ ಉತ್ತರ ಪ್ರಕಟಿಸಲಾಗಿದೆ. ಉತರ ಸರಿಯಿದ್ದರೂ (ಆಯೋಗ ನಡೆಸಿದ ಹಿಂದಿನ ಪರೀಕ್ಷೆಗಳಲ್ಲಿ ಕೇಳಿದ ಪ್ರಶ್ನೆಗೆ ಆಗ ಉತ್ತರ ಸರಿಕೊಟ್ಟು) ತಪ್ಪೆಂದು ನೀಡಿದೆ’ ಎಂದು ಅಭ್ಯರ್ಥಿಯೊಬ್ಬರು ಹೇಳಿದರು.

‘ಕೆಪಿಎಸ್‌ಸಿಯ ಈ ನಡೆಯಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯ ಆಗಿದೆ. ಪರಿಷ್ಕೃತ ಉತ್ತರಗಳನ್ನು ಮತ್ತೊಮ್ಮೆ ಪರಿಷ್ಕರಿಸಿ, ಸರಿಯಿದ್ದರೂ ತಪ್ಪೆಂದು ನೀಡಿದ ಉತ್ತರಗಳನ್ನು ಸರಿಪಡಿಸಬೇಕು. ಗ್ರೇಸ್ ಅಂಕ ನೀಡಿದ ಉತ್ತರಗಳನ್ನು ಪರೀಶಿಲಿಸಿ, ಒಂದೇ ಆಯ್ಕೆ ಸ್ಪಷ್ಟವಾಗಿ ಸರಿ ಇದ್ದರೂ ಎರೆಡರಡು ಮತ್ತು ಮೂರೂ ಅಯ್ಕೆಗಳು ಸರಿ ಎಂದು ನೀಡಿದ ಉತ್ತರಗಳನ್ನು ಬದಲಿಸಬೇಕು. ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಬೇಕು’ ಎಂದೂ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ಕೆಪಿಎಸ್‌ಸಿ ಕಾರ್ಯದರ್ಶಿ ಅವರನ್ನು ಸಂಪರ್ಕಿಸಲು ಯತ್ನಿಸಿದರೂ, ಅವರು ಸಂಪರ್ಕಕ್ಕೆ ಸಿಗಲಿಲ್ಲ.

## ಸಂಸ್ಕೃತ ವಿವಿ: ಗೌರವ ಡಿ.ಲಿಟ್ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕೃತ ವಿಶ್ವವಿದ್ಯಾಲಯದ ‘ಗೌರವ ಡಿ.ಲಿಟ್’ ಪದವಿಯನ್ನು ಹಿರಿಯ ಸಂಸ್ಕೃತ ವಿದ್ವಾಂಸ ಪಂಡಿತ ಮಳಗಿ ಜಯತೀರ್ಥಾಚಾರ್ಯ ಅವರಿಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರದಾನ ಮಾಡಿದರು.

ಗಾಯನ ಸಮಾಜದಲ್ಲಿ ಶನಿವಾರ ನಡೆದ ಸಂಸ್ಕೃತ ವಿಶ್ವವಿದ್ಯಾಲಯದ 8ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪಾಲ್ಗೊಂಡು ಅವರು, ಇನ್ನೋರ್ವ ಸಂಸ್ಕೃತ ಪಂಡಿತ ಎಸ್. ಕಣ್ಣನ್ ಅವರಿಗೆ ಡಿ. ಲಿಟ್, 30 ಮಂದಿಗೆ ಪಿಎಚ್. ಡಿ, 43 ಮಂದಿಗೆ ಎಂ.ಫಿಲ್ ಪದವಿ ಪ್ರದಾನ ಮಾಡಿದರು.

ಪಂಡಿತ ಮಳಗಿ ಜಯತೀರ್ಥಾಚಾರ್ಯ ಅವರಿಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ‘ಗೌರವ ಡಿ.ಲಿಟ್’ ಪ್ರದಾನ ಮಾಡಿದರು. ಎಂ. ಕೊಟ್ರೇಶ್ ಮತ್ತು ಪ್ರೊ.ಕಾ.ಇ. ದೇವನಾಥನ್ ಇದ್ದರು

ಮಾತುಂಗಾದ ಮಾವುಲಿ ವಿದ್ಯಾಪೀಠದಲ್ಲಿ ಶಾಸ್ತ್ರಗಳನ್ನು ಅಧ್ಯಯನ ಮಾಡಿರುವ ಪಂ. ಮಳಗಿ ಜಯತೀರ್ಥಾಚಾರ್ಯ, ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ.

ಪಶ್ಚಿಮ ಬಂಗಾಳ ಬೇಲೂರಿನ ಸ್ವಾಮಿ ವಿವೇಕಾನಂದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಸ್ವಾಮಿ ಆತ್ಮಪ್ರಿಯಾನಂದ ಅವರು ಕೊಲ್ಕತಾದಿಂದಲೇ ವರ್ಚ್ಯುವಲ್ ಮೂಲಕ ಘಟಿಕೋತ್ಸವ ಭಾಷಣ ಮಾಡಿದರು..

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕಾ.ಇ. ದೇವನಾಥನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಸಚಿವ ಎಂ. ಕೊಟ್ರೇಶ್ ಪಾಲ್ಗೊಂಡಿದ್ದರು.

## ಶಾಲೆ ಕೊಠಡಿಯಲ್ಲೇ ವಿದ್ಯಾರ್ಥಿ ಆತ್ಮಹತ್ಯೆ

ಶೇಖ್ ಉಮರ್

ಕಲಬುರ್ಗಿ: ಇಲ್ಲಿನ ಎಂಎಸ್‌ಕೆ ಮಿಲ್ ಪ್ರದೇಶದ ಮದೀನಾ ಕಾಲೊನಿಯ ಆಯಿಶಾ ಶಾಲೆಯ ಕೊಠಡಿಯಲ್ಲಿಯೇ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಯೊಬ್ಬ ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಶಹಾ ಜಿಲಾನಿ ಕಾಲೊನಿಯ ಶೇಖ್ ಮಹಿಬೂಬ್ ಅವರ ಪುತ್ರ ಶೇಖ್ ಉಮರ್ (16) ಸಾವಿಗೆ ಶರಣಾದವ. ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದಿಲ್ಲ. ಆದರೆ, ಸರಿಯಾಗಿ ಓದು ಎಂದು ಶುಕ್ರವಾರ ರಾತ್ರಿ ಪಾಲಕರು ಬೈದಿದ್ದರು. ಅದರಿಂದ ಮನನೊಂದು ಹೀಗೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಾವಿಗೆ ಮುನ್ನ ವಿದ್ಯಾರ್ಥಿ ಕೊಠಡಿಯ ಬ್ಲ್ಯಾಕ್‌ಬೋರ್ಡ್ ಮೇಲೆ, ‘ಇಂದು ನನ್ನ ಕೊನೆಯ ದಿನವಾಗಿದೆ. ಇಂದು ನಾನು ಸಾಯುತ್ತೇನೆ. ನನ್ನ ಮೇಲೆ ತಂದೆ– ತಾಯಿ ಆಶೀರ್ವಾದ ಇರಲಿ’ ಎಂದು ಬರೆದಿದ್ದಾನೆ. ವಿದ್ಯಾರ್ಥಿ ಶನಿವಾರ ಬೆಳಿಗ್ಗೆ 7.30ರ ಸುಮಾರಿಗೆ ಶಾಲೆ ಹಿಂಬಾಗಿಲಿನಿಂದ ಕೊಠಡಿ ಪ್ರವೇಶಿಸಿದ್ದಾನೆ. ಬೆಳಿಗ್ಗೆ 9.30ಕ್ಕೆ ಸಿಬ್ಬಂದಿ ಬಾಗಿಲು ತೆರೆದಾಗಲೇ ವಿಷಯ ಗೊತ್ತಾಗಿದೆ. ರಾಘವೇಂದ್ರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಜಿಲ್ಲೆಗಳು ಹಾಗೂ ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಶನಿವಾರ ಗುಡುಗು ಸಹಿತ ಉತ್ತಮ ಮಳೆಯಾಗಿದೆ.

ಬೆಳ್ತಂಗಡಿ ತಾಲ್ಲೂಕಿನ ನಾರಾವಿ, ಅಳದಂಗಡಿ, ವೇಣೂರು ಪರಿಸರದಲ್ಲಿ ಅರ್ಧ ಗಂಟೆಗೂ ಹೆಚ್ಚು ಉತ್ತಮ ಮಳೆ ಸುರಿದಿದೆ.

ಬಜಿರೆ ಶಾಲೆಯ ಕಂಪೌಂಡ್‌ನಲ್ಲಿದ್ದ ಅಶೋಕ ಮರದ ಬುಡಕ್ಕೆ ಸಿಡಿಲು ಬಡಿದಿದ್ದು, ಇಂಟರ್‌ಲಾಕ್ ಅಳವಡಿಸಿದ ದಂಡೆಗೆ ಹಾನಿಯಾಗಿದೆ.

ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏ.14 ಮತ್ತು 15ರಂದು ಗುಡುಗು ಮಿಂಚು ಸಹಿತ ಭಾರಿ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಶನಿವಾರ ಗುಡುಗು ಸಹಿತ ಸಾಧಾರಣ ಮಳೆಯಾಗಿದೆ.

ಶಿವಮೊಗ್ಗ, ಭದ್ರಾವತಿ, ಹೊಸನಗರ, ತೀರ್ಥಹಳ್ಳಿ, ಕೋಣಂದೂರಿನಲ್ಲಿ ಸಾಧಾರಣ ಮಳೆಯಾಗಿದ್ದು, ರಿಪ್ಪನ್‌ಪೇಟೆಯಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಿದೆ. ಸಾಗರದಲ್ಲಿ ತುಂತುರು ಮಳೆಯಾಗಿದೆ.

ಪ್ರಜಾವಾಣಿ ಸಂವಾದ facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕನ್ನಡ ಚಿತ್ರರಂಗದ ನೈಜ ಸಮಸ್ಯೆಗಳೇನು?
ಸಂವಾದದಲ್ಲಿ ಪಾಲ್ಗೊಳ್ಳುವವರು
ನೀವೂ ಪಾಲ್ಗೊಳ್ಳಿ ಸೋಮವಾರ 12-04-2021 ಮಧ್ಯಾಹ್ನ 12 ರಿಂದ 1
ಟಿ.ಎಸ್.ನಾಗಾಭರಣ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಬಿ.ಸುರೇಶ್, ನಟ, ನಿರ್ಮಾಪಕ ಮತ್ತು ನಿರ್ದೇಶಕ
fb.com/prajavani.net

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ
ಪರಸ್ಪರ ಅಂತರ ಕಾಯ್ದುಕೊಳ್ಳಿ

## ಕಾಫಿ ತೋಟದಲ್ಲಿ ದಾಂದಲೆ: ಕಾಡಾನೆ ಸೆರೆ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಕೊಡಗು ಜಿಲ್ಲೆ): ಅಮ್ಮತ್ತಿ ಹೊಸಕೋಟೆ ವ್ಯಾಪ್ತಿಯ ಕಾಫಿ ತೋಟದಲ್ಲಿ ದಾಂದಲೆ ನಡೆಸುತ್ತಿದ್ದ ಕಾಡಾನೆಯೊಂದನ್ನು ಶನಿವಾರ ನಡೆದ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ. ಈ ಆನೆ ಜನರ ಮೇಲೂ ದಾಳಿ ನಡೆಸುತ್ತಿತ್ತು. ಗ್ರಾಮಸ್ಥರು ದೂರು ನೀಡಿದ್ದರು.

ಇಲಾಖೆಯ 60 ಸಿಬ್ಬಂದಿ, ‘ಅಭಿಮನ್ಯು’, ‘ಅರ್ಜುನ’, ‘ಗೋಪಾಲ ಕೃಷ್ಣ’, ‘ಗಣೇಶ’, ‘ಗಜೇಂದ್ರ’, ‘ಭೀಮ’ ಎಂಬ ಸಾಕಾನೆಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿತ್ತು.

ಹೊಸಕೋಟೆಯ ಕೊಕ್ಕಂಡಕಾಡು ಎಂಬಲ್ಲಿ ಪತ್ತೆಯಾದ ಪುಂಡಾನೆಯ ಮೇಲೆ, ವೈದ್ಯ ಮುಜೀಬ್ ಹಾಗೂ ಶೂಟರ್ ವಿಕ್ರಂ ಅವರು ಅರಿವಳಿಕೆ ಚುಚ್ಚುಮದ್ದು ಹಾರಿಸಿದರು. ಬಳಿಕ, ಸಾಕಾನೆಗಳ ಸಹಾಯದಿಂದ ಹಗ್ಗದಲ್ಲಿ ಬಂಧಿಸಲಾಯಿತು. ಸಾಕಾನೆಗಳು ಎಳೆದು ತರುವಾಗ ಪುಂಡಾನೆಯು ತಪ್ಪಿಸಿಕೊಳ್ಳಲು ಯತ್ನಿಸುತ್ತಿತ್ತು. ಬಳಿಕ ಅಭಿಮನ್ಯು ಆನೆಯು, ಅದನ್ನು ಲಾರಿ ಹತ್ತಿಸುವಲ್ಲಿ ಯಶಸ್ವಿಯಾಯಿತು. ಸೆರೆಯಾದ ಆನೆಗೆ ಅಂದಾಜು 32 ವರ್ಷ ಪ್ರಾಯ. ಬಂಡೀಪುರಕ್ಕೆ ಕರೆದೊಯ್ಯಲಾಯಿತು.

ಲಾರಿ ಹತ್ತಲು ಹಿಂದೇಟು ಹಾಕಿದ ಕಾಡಾನೆಯನ್ನು ಎಳೆದು ತಂದ ಸಾಕಾನೆಗಳು

ಕಾರ್ಯಾಚರಣೆಯಲ್ಲಿ ವಿರಾಜಪೇಟೆ ಡಿಸಿಎಫ್ ಚಕ್ರಪಾಣಿ, ಎಸಿಎಫ್ ಉತ್ತಪ್ಪ, ರೋಶಿನಿ, ಆರ್‌ಎಫ್‌ಒ ಗೋಪಾಲ, ದೇವಯ್ಯ, ಉಪ ವಲಯ ಅರಣ್ಯ ಅಧಿಕಾರಿ ಅಶೋಕ, ಕಳ್ಳೀರ ದೇವಯ್ಯ, ಅರಣ್ಯ ಸಿಬ್ಬಂದಿ ಹಾಜರಿದ್ದರು.

### ಮಹಿಳೆಯರ ನೆರವಿಗೆ ಆರೋಗ್ಯ ಇಲಾಖೆ ಯೋಜನೆ

## ಸ್ತನ ಕ್ಯಾನ್ಸರ್ ಪತ್ತೆಗೆ ಸಂಚಾರಿ ಪ್ರಯೋಗಾಲಯ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಪ್ರತಿ ವರ್ಷ ಹೊಸದಾಗಿ ಕ್ಯಾನ್ಸರ್ ಪೀಡಿತರಾಗುತ್ತಿರುವವರ ಪೈಕಿ ಶೇ 28 ರಷ್ಟು ಮಹಿಳೆಯರು ಸ್ತನ ಕ್ಯಾನ್ಸರ್‌ಗೆ ಗುರಿಯಾಗುತ್ತಿದ್ದಾರೆ. ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿ, ಮಹಿಳೆಯರ ಆರೋಗ್ಯದ ಬಗ್ಗೆ ಕಾಳಜಿ ತೋರುವ ಆಶಯದಡಿ ಸಂಚಾರಿ ಪ್ರಯೋಗಾಲಯ ಸೌಲಭ್ಯ ಕಲ್ಪಿಸಲು ಸರ್ಕಾರ ಮುಂದಾಗಿದೆ.

ಸದ್ಯ 70 ಸಾವಿರಕ್ಕೂ ಅಧಿಕ ಮಂದಿ ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿನ ಸಾಂಕ್ರಾಮಿಕವಲ್ಲದ ರೋಗಗಳ ಕ್ಲಿನಿಕ್‌ಗಳಲ್ಲಿ (ಎನ್‌ಸಿಡಿ) ಕ್ಯಾನ್ಸರ್ ಸೇರಿದಂತೆ ವಿವಿಧ ರೋಗಗಳ ಬಗ್ಗೆ ತಪಾಸಣೆ ನಡೆಸಿ, ಕಾಯಿಲೆ ಪತ್ತೆ ಮಾಡಲಾಗುತ್ತಿದೆ. ಸದ್ಯ ರಾಜ್ಯದಲ್ಲಿ 30 ಜಿಲ್ಲಾ ಮಟ್ಟದ ಹಾಗೂ 243 ತಾಲ್ಲೂಕು ಮಟ್ಟದ ಎನ್‌ಸಿಡಿ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ ವರ್ಷ ಲಾಕ್‌ಡೌನ್ ಮತ್ತು ಕೋವಿಡ್ ಕಾಯಿಲೆಯ ನಡುವೆಯೂ 13.32 ಲಕ್ಷಕ್ಕೂ ಅಧಿಕ ಮಂದಿ ಈ ಕ್ಲಿನಿಕ್‌ಗಳಿಗೆ ತೆರಳಿ, ತಪಾಸಣೆ ಮಾಡಿಸಿಕೊಂಡಿದ್ದರು. ಅವರಲ್ಲಿ 1,052 ಮಂದಿಯಲ್ಲಿ ಕ್ಯಾನ್ಸರ್ ಪತ್ತೆಯಾಗಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಮಹಿಳೆಯಲ್ಲಿ ಹೆಚ್ಚಿನವರು ಸ್ತನ ಕ್ಯಾನ್ಸರ್ ಎದುರಿಸುತ್ತಿದ್ದಾರೆ. ಅದೇ ರೀತಿ, ಗರ್ಭಕಂಠ ಮತ್ತು ಗರ್ಭಕೋಶದ ಕ್ಯಾನ್ಸರ್ ಸಹ ಇರುವುದು ದೃಢಪಡುತ್ತಿದೆ. ಆದರೆ, ಕ್ಯಾನ್ಸರ್ ತಪಾಸಣೆ ಸಂಬಂಧ ಕ್ಲಿನಿಕ್‌ಗಳು ಹಾಗೂ ಆಸ್ಪತ್ರೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬರುತ್ತಿಲ್ಲ. ಹೀಗಾಗಿ, ಆರೋಗ್ಯ ಇಲಾಖೆಯು ಸಂಚಾರಿ ಪ್ರಯೋಗಾಲಯದ ಮೂಲಕ ಮಹಿಳೆಯರು ಇರುವಲ್ಲಿಯೇ ತಪಾಸಣೆಗೆ ಒಳಪಡಿಸಲು ಮುಂದಾಗಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸಹಯೋಗದಲ್ಲಿ ಈ ತಪಾಸಣೆ ನಡೆಯಲಿದೆ.

‘ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ. ಅವರು ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳದ ಕಾರಣ ಕೆಲವರಿಗೆ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ. ಹಾಗಾಗಿ, ಸಂಚಾರಿ ಪ್ರಯೋಗಾಲಯದ ಮೂಲಕ ತಪಾಸಣೆಗೆ ಯೋಜನೆ ರೂಪಿಸಲಾಗಿದೆ’ ಎಂದು ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪನಿರ್ದೇಶಕ ಡಾ. ರಂಗಸ್ವಾಮಿ ತಿಳಿಸಿದರು.

**ಸಮಸ್ಯೆ ಕಾಣಿಸಿಕೊಂಡಲ್ಲಿ ಹೆಚ್ಚಿನ ಚಿಕಿತ್ಸೆ**

‘ಈ ಯೋಜನೆಗೆ ₹ 11 ಕೋಟಿ ವೆಚ್ಚವಾಗಲಿದೆ. ವ್ಯಾನ್‌ಗಳನ್ನು ಖರೀದಿಸಿ, ಪ್ರಾಯೋಗಿಕವಾಗಿ ಕೆಲ ಜಿಲ್ಲೆಗಳಲ್ಲಿ ಕಾರ್ಯಾರಂಭ ಮಾಡಲಾಗುತ್ತದೆ. ಕಿದ್ವಾಯಿ ಸಂಸ್ಥೆಯ ವ್ಯಾನ್‌ಗಳನ್ನೂ ಬಳಸಿಕೊಳ್ಳಲಾಗುತ್ತದೆ. ವ್ಯಾನ್‌ನಲ್ಲಿ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಇರುತ್ತಾರೆ. ಆರೋಗ್ಯ ಕಾರ್ಯಕರ್ತರು ತಪಾಸಣೆ ನಡೆಸಿದ ಬಳಿಕ ಸಮಸ್ಯೆ ಕಾಣಿಸಿಕೊಂಡಲ್ಲಿ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕ್ಯಾನ್ಸರ್ ಯಾವ ಹಂತದಲ್ಲಿದೆ ಎಂಬುದರ ಆಧಾರದ ಮೇಲೆ ಯಾವ ಆಸ್ಪತ್ರೆಗೆ ಕಳುಹಿಸಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ’ ಎಂದು ಡಾ. ರಂಗಸ್ವಾಮಿ ವಿವರಿಸಿದರು.

**ಹೆಚ್ಚಿನವರು ರೋಗ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ಬರುತ್ತಾರೆ. ಪ್ರಾರಂಭದಲ್ಲೇ ಕ್ಯಾನ್ಸರ್ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ**

**ಡಾ.ಸಿ. ರಾಮಚಂದ್ರ,** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

### ಘಟನೆಗೆ ಖಂಡನೆ: ಆನ್‌ಲೈನ್‌ನಲ್ಲಿ ₹ 6 ಲಕ್ಷ ನಿಧಿ ಸಂಗ್ರಹ • ಶಿಕ್ಷಣ ಸಚಿವರ ಪೋಸ್ಟ್‌ಗೆ ಟೀಕೆ-ಮೆಚ್ಚುಗೆ

# ಸುಟ್ಟ ಕನ್ನಡ ಗ್ರಂಥಾಲಯ ಮತ್ತೆ ಕಟ್ಟಲು ಪಣ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಉದಯಗಿರಿಯ ಶಾಂತಿನಗರದಲ್ಲಿ, ಸೈಯದ್ ಇಸಾಕ್ ಎಂಬುವವರು ನಡೆಸುತ್ತಿದ್ದ ಕನ್ನಡ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿರುವ ಘಟನೆಗೆ, ಶನಿವಾರ ರಾಜ್ಯದಾದ್ಯಂತ ಖಂಡನೆ ವ್ಯಕ್ತವಾಗಿದೆ.

ಇದರೊಂದಿಗೆ, ಇಸಾಕ್ ಅವರಿಗೆ ನೆರವಿನ ಭರವಸೆಯ ಮಹಾಪೂರವೂ ಹರಿದುಬಂದಿದೆ. ಗ್ರಂಥಾಲಯ ಮರು ನಿರ್ಮಾಣಕ್ಕಾಗಿ ಆರಂಭಿಸಿರುವ ಆನ್‌ಲೈನ್ ಕ್ರೌಡ್‌ಫಂಡಿಂಗ್ ಅಭಿಯಾನಕ್ಕೆ ಭರಪೂರ ಸ್ಪಂದನೆ ವ್ಯಕ್ತವಾಗಿದ್ದು, 5 ತಾಸಿನಲ್ಲಿ ₹ 6 ಲಕ್ಷಕ್ಕೂ ಅಧಿಕ ಹಣ ಸಂಗ್ರಹವಾಗಿದೆ. ಹಣಕಾಸು, ಪುಸ್ತಕ ನೆರವು ನೀಡುವ ಭರವಸೆಗಳು ವ್ಯಕ್ತವಾಗಿವೆ.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಅವರು ಇಸಾಕ್ ಅವರ ನೆರವಿಗೆ ನಿಲ್ಲುವುದಾಗಿ ಧೈರ್ಯ ತುಂಬಿದರೆ; ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಬೆಂಕಿ ಇಟ್ಟವರನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.

ಸಚಿವ ಸುರೇಶ್‌ಕುಮಾರ್ ಅವರು, ಫೇಸ್‌ಬುಕ್‌ನಲ್ಲಿ ಘಟನೆಯನ್ನು ಪ್ರಸ್ತಾಪಿಸಿ, ‘ದುಷ್ಕರ್ಮಿಗಳು ಸುಮಾರು 11 ಸಾವಿರ ಪುಸ್ತಕಗಳನ್ನು ಭಸ್ಮ ಮಾಡಿದ್ದಾರೆ. ಇದರಲ್ಲಿ ಮೂರು ಸಾವಿರ ಭಗವದ್ಗೀತೆ ಪ್ರತಿಗಳು ಇದ್ದವಂತೆ. ಇಸಾಕ್ ಅವರಿಗೆ ಅಗತ್ಯ ನೆರವು–ಸಾಂತ್ವನ ನೀಡುವುದು ನಮ್ಮೆಲ್ಲರ ಕರ್ತವ್ಯ. ನಾನು ಅವರಿಗೆ ಸಹಾಯ ಮಾಡುವುದಾಗಿ ಹಾಗೂ ಶೀಘ್ರದಲ್ಲಿಯೇ ಭೇಟಿ ಮಾಡುವುದಾಗಿ ತಿಳಿಸಿದ್ದೇನೆ’ ಎಂದು ಬರೆದುಕೊಂಡಿದ್ದರು. ಅವರ ಈ ಸಂದೇಶಕ್ಕೆ ಮೆಚ್ಚುಗೆ, ಸಹಮತದೊಂದಿಗೆ ವ್ಯಾಪಕ ಟೀಕೆಯೂ ವ್ಯಕ್ತವಾಗಿದೆ.



ಸುಟ್ಟು ಕರಕಲಾಗಿರುವ ಗ್ರಂಥಾಲಯ

‘ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಬೆಂಕಿ ಇಟ್ಟವರಿಗೇ ಇನ್ನೂ ಶಿಕ್ಷೆಯಾಗಿಲ್ಲ. ಇನ್ನು, ಇಂಥವರಿಗೆ ಸರ್ಕಾರ ನ್ಯಾಯ ಒದಗಿಸುತ್ತದೆಯೇ?’, ‘‘ಅದರಲ್ಲಿ ಭಗವದ್ಗೀತೆ ಪುಸ್ತಕಗಳು ಇದ್ದವಂತೆ’’ ಎಂಬ ನಿಮ್ಮ ವಿಶೇಷ ಒಲವು ಮಾತ್ರ ಬ್ರಾಹ್ಮಣ್ಯವನ್ನು ಕಾಣಿಸಿತು. ಪುಸ್ತಕಗಳು ಎಂದರೆ ಪುಸ್ತಕಗಳಷ್ಟೇ ಅಲ್ಲವೇ? ನಿಮ್ಮ ಆತಂಕ ಯಾವುದರ ಮೇಲಿತ್ತು ಎಂಬುದು ಅರ್ಥವಾಯಿತು’ ಎಂದು ಕೆಲವರು ಟೀಕಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಈ ಅಕ್ಷರ ವಿರೋಧಿ ದುಷ್ಕರ್ಮಿಗಳನ್ನು ತಕ್ಷಣ ಬಂಧಿಸಲು ಕ್ರಮ ಕೈಗೊಳ್ಳುವುದರ ಜೊತೆಗೆ ಸೈಯದ್ ಅವರಿಗೆ ಸೂಕ್ತ ಪರಿಹಾರವನ್ನೂ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

ಇಸಾಕ್ ಅವರ ಮನೆಗೆ ತೆರಳಿದ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು, ಸಂವಿಧಾನ, ಭಗವದ್ಗೀತೆ, ಕುರಾನ್ ಹಾಗೂ ಬೈಬಲ್‌ನ ಪ್ರತಿಗಳನ್ನು ನೀಡಿ, ಗ್ರಂಥಾಲಯದ ಮರುನಿರ್ಮಾಣದ ಭರವಸೆ ನೀಡಿದರು.

ಗ್ರಂಥಾಲಯವನ್ನು ಸುಟ್ಟಿದ್ದಾರೆಯೇ ಹೊರತು, ಸಹಾಯ ಮಾಡುವ ಕನ್ನಡಿಗರ ಮನಸ್ಸನ್ನು ಸುಟ್ಟಿಲ್ಲ. ಸುಟ್ಟ ಜಾಗದಲ್ಲೇ ಮತ್ತೆ ಗ್ರಂಥಾಲಯ ಎದ್ದು ನಿಲ್ಲಬೇಕು. ಅದಕ್ಕಾಗಿ, ತಾವು ₹ 1 ಲಕ್ಷ ಮೌಲ್ಯದ ಪುಸ್ತಕ ಕೊಡಲು ಸಿದ್ಧವಿರುವುದಾಗಿ ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿಯ ಎನ್. ಎಂ.ಬಿರಾದಾರ ಹೇಳಿದ್ದಾರೆ.

**ಆರೋಪಿಗಳ ಪತ್ತೆಗೆ ತಂಡ ರಚನೆ:** ಉದಯಗಿರಿ ಠಾಣೆ ಪೊಲೀಸರು, ಆರೋಪಿಗಳ ಪತ್ತೆಗಾಗಿ ಪ್ರತ್ಯೇಕ ತಂಡ ರಚಿಸಿದ್ದಾರೆ. ಈಗಾಗಲೆ ಹಲವು ಸುಳಿವು ಸಿಕ್ಕಿವೆ’ ಎಂದು ಮೂಲಗಳು ತಿಳಿಸಿವೆ. ‘ಕಿಡಿಗೇಡಿಗಳು ಬೆಂಕಿ ಇಟ್ಟದ್ದರಿಂದ, 11 ಸಾವಿರ ಪುಸ್ತಕಗಳು ಭಸ್ಮವಾಗಿದ್ದಾಗಿ ಸೈಯದ್ ಇಸಾಕ್ ಅವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

**5 ತಾಸಿನಲ್ಲಿ ಸಂಗ್ರಹವಾಯಿತು ₹ 6 ಲಕ್ಷ!**

ಮೈಸೂರಿನ ಇನ್ಫೊಸಿಸ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಫತೇನ್ ಮಿಸ್ಬಾ, ಆನ್‌ಲೈನ್‌ನಲ್ಲಿ ಆರಂಭಿಸಿರುವ ಕ್ರೌಡ್‌ಫಂಡಿಂಗ್ ಅಭಿಯಾನಕ್ಕೆ ನಿರೀಕ್ಷೆ ಮೀರಿ ಸ್ಪಂದನೆ ವ್ಯಕ್ತವಾಗಿದೆ. ಐದು ತಾಸಿನಲ್ಲಿ ₹ 6 ಲಕ್ಷ ಹಣ ಸಂಗ್ರಹವಾಗಿದೆ. 396 ಮಂದಿ ದೇಣಿಗೆ ನೀಡಿದ್ದಾರೆ.

ಫತೇನ್ ಮಿಸ್ಬಾ

ಆನ್‌ಲೈನ್ ಕ್ರೌಡ್‌ಫಂಡಿಂಗ್‌ನಲ್ಲೇ ಇದು ದಾಖಲೆ ನಿರ್ಮಿಸಿದೆ ಎನ್ನುತ್ತಾರೆ ಮಿಸ್ಬಾ.

‘ಎಡಿಜಿಪಿ ಭಾಸ್ಕರ್‌ರಾವ್ ಅವರು ಕರೆ ಮಾಡಿ ಗ್ರಂಥಾಲಯಕ್ಕೆ ಬೆಂಕಿ ಬಿದ್ದಿರುವ ಕುರಿತು ಮಾಹಿತಿ ನೀಡಿ, ನೆರವು ನೀಡಿ ಎಂದು ಹೇಳಿದರು. ನಂತರ, ನಾನು ಗ್ರಂಥಾಲಯದ ಮರುನಿರ್ಮಾಣ ಹಾಗೂ ಅವರು ವಾಸಿಸುವ ಪ್ರದೇಶದ ಅಭಿವೃದ್ಧಿಗೆ ‘ಕೆಟೊ’ ವೆಬ್‌ಸೈಟ್‌ನಲ್ಲಿ ಫಂಡ್ ರೈಸಿಂಗ್ ಆರಂಭಿಸಿದೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪಾಲಿಕೆ ಅಥವಾ ‘ಮುಡಾ’ ನಿರ್ದಿಷ್ಟ ಸ್ಥಳ ನೀಡಿದರೆ ಸಾಕು, ಕಟ್ಟಡವೊಂದನ್ನು ನಿರ್ಮಿಸಿ ಕನ್ನಡ ಗ್ರಂಥಾಲಯವನ್ನು ಮರು ಸ್ಥಾಪಿಸಲಾಗುವುದು’ ಎಂದು ಹೇಳಿದರು. ಮಿಸ್ಬಾ ಅವರು ಈಗಾಗಲೇ ವಿವಿಧ ಉದ್ದೇಶಗಳಿಗೆ ಆನ್‌ಲೈನ್‌ನಲ್ಲಿ ಫಂಡ್ ರೈಸಿಂಗ್ ಮಾಡಿದ್ದರು.

**ಕನ್ನಡದ ಜನತೆಯ ಪ್ರೀತಿ, ಗೌರವಗಳಿಗೆ ನಾನು ಚಿರಋಣಿ. ಇದೇ ಸ್ಥಳದಲ್ಲಿ ಮತ್ತೊಂದು ಗ್ರಂಥಾಲಯ ನಿರ್ಮಿಸುವೆ**

**ಸೈಯದ್ ಇಸಾಕ್,** ದಹಿಸಿದ ಕನ್ನಡ ಗ್ರಂಥಾಲಯದ ಮಾಲೀಕ

**ಸೈಯದ್ ಇಸಾಕ್ ಅವರು ನಡೆಸುತ್ತಿದ್ದ ಗ್ರಂಥಾಲಯ ಯಾರ ಜಾಗದಲ್ಲಿತ್ತು ಎಂಬುದರ ಕುರಿತು ಪರಿಶೀಲಿಸಲಾಗುವುದು**

**ಡಿ.ಬಿ.ನಟೇಶ್,** ಮುಡಾ ಆಯುಕ್ತ

## ಪ್ರಗತಿ ಸಾಧಿಸದ ಭಾರತ– ಚೀನಾ ಮಾತುಕತೆ

ನವದೆಹಲಿ(ಪಿಟಿಐ): ಪೂರ್ವ ಲಡಾಖ್‌ನ ಸಂಘರ್ಷ ಪ್ರದೇಶಗಳಲ್ಲಿ ಬಾಕಿ ಉಳಿದಿರುವ ಸೇನೆಯನ್ನು ವಾಪಸ್ ಕರೆಯಿಸಿಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಚೀನಾ ನಡುವಣ ಮಾತುಕತೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿಲ್ಲ.

ಶನಿವಾರ ಚುಷುಲ್ ಗಡಿಯಲ್ಲಿ ಭಾರತ ಮತ್ತು ಚೀನಾ ಸೇನೆಯ ಕಮಾಂಡರ್ ಮಟ್ಟದ 11ನೇ ಸುತ್ತಿನ ಮಾತುಕತೆ ನಡೆಯಿತು.

ಡೆಪ್‌ಸ್ಯಾಂಗ್, ಗೋಗ್ರಾ ಮತ್ತು ಹಾಟ್‌ಸ್ಪ್ರಿಂಗ್ಸ್ ಪ್ರದೇಶದಿಂದ ಸೇನೆಯನ್ನು ವಾಪಸ್ ಕರೆಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ಆದರೆ, ಚೀನಾ ತನ್ನ ನಿಲುವು ಸಡಿಲಿಸಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮಾತುಕತೆ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಭಾರತೀಯ ಸೇನೆ, ‘ಬಾಕಿ ಉಳಿದಿರುವ ಪ್ರದೇಶಗಳಲ್ಲಿನ ಸೇನೆಯನ್ನು ವಾಪಸ್ ಕರೆಯಿಸಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ಯಾವುದೇ ರೀತಿಯ ಘಟನೆಗಳು ನಡೆಯದಂತೆ ಸ್ಥಿರತೆಯನ್ನು ಕಾಪಾಡಲು ಉಭಯ ದೇಶಗಳು ಒಪ್ಪಿಕೊಂಡಿವೆ. ಜತೆಗೆ, ಬಾಕಿ ಉಳಿದಿರುವ ಬಿಕ್ಕಟುಗಳ ಬಗ್ಗೆ ಶೀಘ್ರ ಇತ್ಯರ್ಥಗೊಳಿಸಲು ಒಪ್ಪಿವೆ’ ಎಂದು ತಿಳಿಸಿದೆ.

ಮಾತುಕತೆಗೆ ಚೀನಾ ಮಿಲಿಟರಿ ಹಿರಿಯ ಅಧಿಕಾರಿಗಳು ಪೂರ್ವ ನಿರ್ಧಾರ ಕೈಗೊಂಡು ಬಂದಿದ್ದರು. ತಮ್ಮ ನಿಲುವುಗಳಲ್ಲಿ ಸಡಿಲಿಕೆ ತೋರಲಿಲ್ಲ ಎಂದು ಮೂಲಗಳು ತಿಳಿಸಿವೆ.

## ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆರೋಪ

# ‘ಖಾಸಗೀಕರಣಗೊಳಿಸುವ ಹುನ್ನಾರ’

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ‘ಸಾರಿಗೆ ನಿಗಮಗಳನ್ನು ಖಾಸಗೀಕರಣಗೊಳಿಸುವ ಹುನ್ನಾರವನ್ನು ಸರ್ಕಾರ ನಡೆಸಿದೆ’ ಎಂದು ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಶನಿವಾರ ದೂರಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಸರ್ಕಾರ ಸತ್ಯಾಗ್ರಹ ಹತ್ತಿಕ್ಕುವ ಕೆಲಸಕ್ಕೆ ಮುಂದಾಗುತ್ತಿದೆ. ಕುಟುಂಬ ನಿರ್ವಹಣೆ ಕಷ್ಟ ಆಗುತ್ತಿದೆ. ವೇತನ ಹೆಚ್ಚಿಸಿ ಎಂದು ಕೇಳುವುದು ದುರುದ್ದೇಶವೇ? ಸಾರಿಗೆ ನೌಕರರನ್ನು ಏಕೆ ಕಡೆಗಣಿಸಲಾಗುತ್ತಿದೆ? ಖಾಸಗಿಯವರಿಗೆ ಕೊಡುವ ತರಾತುರಿಯಲ್ಲಿ ಇದ್ದೀರಾ’ ಎಂದು ತರಾಟೆಗೆ ತೆಗೆದುಕೊಂಡರು.

‘ಸರ್ಕಾರ ತುರ್ತಾಗಿ ತೀರ್ಮಾನ ಕೈಗೊಳ್ಳಬೇಕು. ಸರ್ಕಾರದ ನಿರ್ಧಾರ ಆಧರಿಸಿ ಮುಷ್ಕರ ಮುಂದುವರಿಕೆ ಬಗ್ಗೆ ನಿರ್ಧರಿಸುತ್ತೇವೆ. ಬೇಡಿಕೆಗಳ ಬಗ್ಗೆ ಹಿಂದೆಯೇ ಒಪ್ಪಂದ ಆಗಿತ್ತು. ಆದರೆ, 6ನೇ ವೇತನ ಆಯೋಗದ ಶಿಫಾರಸು ಜಾರಿ ಮಾಡಿಲ್ಲ. ಈಗ ದಲ್ಲಾಳಿ ವ್ಯವಹಾರ ಶುರು ಮಾಡಿದ್ದಾರೆ’ ಎಂದು ಟೀಕಿಸಿದರು.

**ಕೋಡಿಹಳ್ಳಿ ವಶ, ಬಿಡುಗಡೆ:** ಇದಕ್ಕೂ ಮೊದಲು ಪೊಲೀಸರು ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಕ್ಯಾಂಪ್ ಠಾಣೆ ಪೊಲೀಸರು ಶನಿವಾರ ಬೆಳಿಗ್ಗೆ ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು. ರೈತ ಮುಖಂಡರು ಹಾಗೂ ಮುಷ್ಕರದಲ್ಲಿ ತೊಡಗಿರುವ ಸಾರಿಗೆ ನೌಕರರನ್ನು ಭೇಟಿಯಾಗಿ, ಮುಂದಿನ ಹೋರಾಟದ ಬಗ್ಗೆ ಚರ್ಚಿಸುವುದಕ್ಕಾಗಿ ಅವರು ‘ಮಿಲನ್’ ಹೋಟೆಲ್‌ಗೆ ಬಂದಿದ್ದರು. ಅಲ್ಲಿಂದಲೇ ಪೊಲೀಸರು ಕರೆದೊಯ್ದರು.

ಆಗ ಕೋಡಿಹಳ್ಳಿ ಅವರು ‘ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯಮೊಟಕುಗೊಳಿಸಲಾಗುತ್ತಿದೆ. ನನ್ನನ್ನು ವಶಕ್ಕೆ ಪಡೆದು ಸರ್ಕಾರ ತಪ್ಪು ನಿರ್ಧಾರ ತೆಗೆದುಕೊಂಡಿದೆ. ಇದನ್ನೂ ಸ್ವಾಗತಿಸುತ್ತೇನೆ’ ಎಂದು ಹೇಳಿದರು.

‘ಅವರು ಅನುಮತಿ ಪಡೆಯದೆ ಸಭೆ ಆಯೋಜಿಸಿದ್ದರು. ಹೀಗಾಗಿ, ಅವರನ್ನು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಲಾಗಿದೆ. ಬೆಂಗಳೂರಿಗೆ ಹೋಗುವುದಾಗಿ ಅವರು ತೆರಳಿದರು’ ಎಂದು ಡಿಸಿಪಿ ಯಶೋದಾ ವಂಟಗೋಡಿ ‘ಪ್ರಜಾವಾಣಿ’ಗೆ ತಿಳಿಸಿದರು. ಸಭೆಗೆ ಬರುತ್ತಿದ್ದ 23 ಜನರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಬೆಳಗಾವಿಯಲ್ಲಿ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಅವರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದು ಕರೆದೊಯ್ದರು
ಪ್ರಜಾವಾಣಿ ಚಿತ್ರ

> **ಈ ರೀತಿ ಬಂಧಿಸುವುದು ಸರಿಯಲ್ಲ. ದೆಹಲಿಯಲ್ಲಿ ಮಾಡಿದಂತೆ ಇಲ್ಲೂ ಮಾಡೋಣ ಎಂದು ಸರ್ಕಾರ ಮುಂದಾಗಿದೆ. ಇದು ಜಾಸ್ತಿ ದಿನ ಉಳಿಯುವುದಿಲ್ಲ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> **ಸಾರಿಗೆ ನೌಕರರು ಮನುಷ್ಯರೇ. ಸರ್ಕಾರ ಶತ್ರುಗಳಂತೆ ನೋಡುತ್ತಿರುವುದು ಸಾಧುವಲ್ಲ. ಸೌಹಾರ್ದಯುತವಾಗಿ ಮಾತುಕತೆ ನಡೆಸಬೇಕು**
> **ಕೆ.ಆರ್.ರಮೇಶ್ ಕುಮಾರ್,** ಶಾಸಕ

### ಮುಷ್ಕರ: 31 ಸಿಬ್ಬಂದಿ ವಜಾ

**ಕಲಬುರ್ಗಿ:** ಮೂರು ದಿನಗಳಿಂದ ಮುಷ್ಕರದಲ್ಲಿ ಪಾಲ್ಗೊಂಡ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 31 ಸಿಬ್ಬಂದಿಯನ್ನು ವಜಾಗೊಳಿಸಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಕೂರ್ಮಾರಾವ್ ಶನಿವಾರ ಆದೇಶ ಹೊರಡಿಸಿದ್ದಾರೆ.

8 ಮಂದಿ ತರಬೇತಿ ಸಿಬ್ಬಂದಿ, 23 ಕಾಯಂ ಸಿಬ್ಬಂದಿ ಇವರಲ್ಲಿದ್ದಾರೆ. ಸಂಸ್ಥೆಗೆ ರೂಪಾಯಿ ಆದಾಯ ಕಡಿತವಾಗುತ್ತಿದೆ. ತಕ್ಷಣಕ್ಕೆ ಕೆಲಸಕ್ಕೆ ಹಾಜರಾಗಬೇಕು ಎಂದು ಎಚ್ಚರಿಕೆ ನೀಡಿದ ಮೇಲೂ ಇವರು ಹಾಜರಾಗಿಲ್ಲ. ಹಾಗಾಗಿ, ವಜಾ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

### 22 ಜನರಿಗೆ ‘ಡೀಮ್ಡ್ ಟು ಲೀವ್’ ಶಿಕ್ಷೆ

**ಗದಗ:** ಗದಗದಲ್ಲಿ 22 ಮಂದಿ ಸಾರಿಗೆ ಸಿಬ್ಬಂದಿಯನ್ನು ಶಿರಸಿ, ಚಿಕ್ಕೋಡಿ ವಿಭಾಗಕ್ಕೆ ವರ್ಗ ಮಾಡಲಾಗಿದೆ. ಗದಗ ವಿಭಾಗದಲ್ಲಿ ಶನಿವಾರ 37 ಬಸ್‌ಗಳು ಸಂಚರಿಸಿವೆ. ಭಾನುವಾರ 100ಕ್ಕೂ ಅಧಿಕ ಬಸ್‌ಗಳು ಸಂಚಾರ ಆರಂಭಿಸಲಿವೆ.

‘ಸಾರಿಗೆ ವ್ಯವಸ್ಥೆ ಸಹಜ ಸ್ಥಿತಿಗೆ ತರಲು ಸರ್ಕಾರ ‘ಪ್ರಭಾವಕಾರಿಯಾಗಿ ಬಿಡುಗಡೆ’ ಮಾಡುವ ‘ಡೀಮ್ಡ್ ಟು ಲೀವ್’ ಸೂತ್ರ ಅನುಸರಿಸಿದೆ. ವರ್ಗ ಆದವರು ನಾಳೆಯೇ ಸೂಚಿತ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು. ಮುಂದೆ ಈ ಡಿಪೋಗೂ ಅವರಿಗೂ ಸಂಬಂಧ ಇರುವುದಿಲ್ಲ. ಉಳಿದಂತೆ ಕರ್ತವ್ಯಕ್ಕೆ ಬರಲು ಸೂಚಿಸಿ 33 ಮಂದಿಗೆ ನೋಟಿಸ್ ನೀಡಲಾಗಿದೆ’ ಎಂದು ಗದಗ ವಿಭಾಗದ ಅಧಿಕಾರಿ ಜಿ.ಐ.ಬಸವಂತಪುರ ತಿಳಿಸಿದ್ದಾರೆ.

**12 ಸಿಬ್ಬಂದಿ ವರ್ಗಾವಣೆ:** ಕೆಎಸ್‌ಆರ್‌ಟಿಸಿ ಮಂಗಳೂರು ವಿಭಾಗದಲ್ಲಿ ಇಬ್ಬರು ತಾಂತ್ರಿಕ ಸಿಬ್ಬಂದಿ ಹಾಗೂ 15 ಚಾಲಕರು ಸೇರಿದಂತೆ 17 ಜನರನ್ನು ವರ್ಗಾವಣೆ ಮಾಡಲಾಗಿದೆ.

ಸಿಬ್ಬಂದಿ ನಿಧಾನವಾಗಿ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ಶನಿವಾರ ಒಟ್ಟು 120 ಬಸ್‌ಗಳು ಸಂಚರಿಸಿದ್ದು, ಭಾನುವಾರ 200ಕ್ಕೂ ಅಧಿಕ ಬಸ್‌ಗಳು ಸಂಚರಿಸಲಿವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಅರುಣ್ ತಿಳಿಸಿದ್ದಾರೆ.

# ‘ನಾಲ್ಕು ದಿನಗಳಲ್ಲಿ ಸಾರಿಗೆ ವ್ಯವಸ್ಥೆ ಸಹಜ ಸ್ಥಿತಿಗೆ’

ಪ್ರಜಾವಾಣಿ ವಾರ್ತೆ

**ಬೀದರ್:** ‘ರಾಜ್ಯದಲ್ಲಿ ನಾಲ್ಕು ದಿನಗಳಲ್ಲಿ ಸಾರಿಗೆ ವ್ಯವಸ್ಥೆ ಸಹಜ ಸ್ಥಿತಿಗೆ ಬರಲಿದೆ. ಹೀಗಾಗಿ ಎಸ್ಮಾ ಜಾರಿ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದು ಸಾರಿಗೆ ಸಚಿವರೂ ಆದ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದರು.

‘ಶುಕ್ರವಾರ 900 ಬಸ್, ಶನಿವಾರ 1500 ಸಂಚರಿಸಿವೆ. ಭಾನುವಾರ 2 ಸಾವಿರ ಬಸ್‌ಗಳು ಓಡಾಡಲಿವೆ. ಸೋಮವಾರದ ವೇಳೆ ನೌಕರರು ಕರ್ತವ್ಯಕ್ಕೆ ಹಾಜರಾಗುವ ವಿಶ್ವಾಸ ಇದೆ’ ಎಂದು ಹುಮನಾಬಾದ್‌ನಲ್ಲಿ ತಮ್ಮನ್ನು ಭೇಟಿ ಮಾಡಿದ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

ಲಕ್ಷ್ಮಣ ಸವದಿ

‘ಕೆಲ ಚಾಲಕರು, ನಿರ್ವಾಹಕರು ಕರ್ತವ್ಯದ ಮೇಲೆ ಹಾಜರಾಗಲು ಸಿದ್ಧರಿದ್ದೇವೆ ಎಂದು ಕರೆ ಮಾಡುತ್ತಿದ್ದಾರೆ. ನೌಕರರ ಸಂಘದ ಸದಸ್ಯರ ಬೆದರಿಕೆ ಕಾರಣ ಹಿಂಜರಿಯುತ್ತಿದ್ದಾರೆ. ನಾಲ್ಕು ದಿನಗಳ ಮುಷ್ಕರದಿಂದಾಗಿ ಈ ತಿಂಗಳು ಸಂಬಳ ಕೊಡಲು ಸಹ ನಿಗಮದ ಬಳಿ ಹಣ ಇಲ್ಲ. ಮತ್ತೆ ಸರ್ಕಾರ ನೆರವಿಗೆ ಬರಬೇಕಾಗಲಿದೆ’ ಎಂದರು.

‘ಮುಷ್ಕರದಿಂದ ಬಡವರು, ಮಧ್ಯಮ ವರ್ಗದವರು ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಯಗಾದಿ ಹಬ್ಬಕ್ಕೆ ಊರಿಗೆ ಹೋಗುವವರಿಗೂ ಸಮಸ್ಯೆ ಕಾಡುತ್ತಿದೆ. ನೌಕರರು ತಕ್ಷಣ ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ಮನವಿ ಮಾಡಿದರು.

‘ಬೆಂಕಿ ಹತ್ತಿದಾಗ ತೆನೆ ಸುಟ್ಟುಕೊಳ್ಳುವವರು ರಾಜಕೀಯದಲ್ಲಿ ಇದ್ದಾರೆ. ಇದು ಒಳ್ಳೆಯದಲ್ಲ. ಇನ್ನೊಬ್ಬರ ಮುಖಕ್ಕೆ ಮಸಿ ಬಳಿಯಲು ಯತ್ನಿಸಿದರೆ ನಮ್ಮ ಕೈಗೆ ತಗುಲಿರುತ್ತದೆ ಎಂಬ ಅರಿವು ಅಗತ್ಯ. ಡಿ.ಕೆ.ಶಿವಕುಮಾರ್ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಸಾರಿಗೆ ನೌಕರರು ವಿವೇಚನೆಯಿಂದ ನಿರ್ಧರಿಸಬೇಕು‘ ಎಂದರು.

‘ಸರ್ಕಾರ, ಸಾರಿಗೆ ನೌಕರರಿಗೆ ಬೆದರಿಕೆ ಹಾಕಿಲ್ಲ. ಆದರೆ ಸಾರ್ವಜನಿಕರಿಗೆ ತೊಂದರೆಯಾದರೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಲಿದೆ’ ಎಂದು ಎಚ್ಚರಿಸಿದರು.

## 300ಕ್ಕೂ ಅಧಿಕ ನೌಕರರು ಕರ್ತವ್ಯಕ್ಕೆ ಹಾಜರು

ಪ್ರಜಾವಾಣಿ ವಾರ್ತೆ

**ಮೈಸೂರು:** ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ ಅಡಿಯಲ್ಲಿ ಗುರುತಿಸಿಕೊಂಡಿರುವ ಒಟ್ಟು 370 ಮಂದಿ ನೌಕರರು ಶನಿವಾರ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ನಗರ ಘಟಕದಿಂದ 71 ಕೆಎಸ್‌ಆರ್‌ಟಿಸಿ ಬಸ್‌ಗಳು, ಗ್ರಾಮಾಂತರ ಘಟಕದಿಂದ 58 ಬಸ್‌ಗಳು ಸಂಚಾರ ಆರಂಭಿಸಿವೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್‌ನ ನಗರ ಘಟಕದ ಪ್ರಧಾನ ಕಾರ್ಯದರ್ಶಿ ಮಧುಸೂದನ್, ‘ಕಾರ್ಮಿಕ ಇಲಾಖೆಯು ಮುಷ್ಕರವನ್ನು ನಿರ್ಬಂಧಿಸಿ ಆದೇಶ ಹೊರಡಿಸಿದೆ. ಹೀಗಾಗಿ, ಯೂನಿಯನ್ ಅಡಿ ಇರುವ ಎಲ್ಲ ನೌಕರರು ಶನಿವಾರ ಸಂಜೆಯ ನಂತರ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ಭಾನುವಾರ ಇನ್ನಷ್ಟು ಮಂದಿ ಕರ್ತವ್ಯಕ್ಕೆ ಬರಲಿದ್ದಾರೆ’ ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ಗ್ರಾಮಾಂತರ ಘಟಕದಿಂದ ಶನಿವಾರ ಒಟ್ಟು 410ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ರಾಜ್ಯದ ವಿವಿಧ ಭಾಗಗಳಿಗೆ ಸಂಚರಿಸಿವೆ.

# ಮುಷ್ಕರ ಮುರಿಯಲು ‘ವರ್ಗಾಸ್ತ್ರ’

ಒಂದನೇ ಪುಟದಿಂದ

ಸಾರಿಗೆ ನಿಗಮಗಳ ನೌಕರರ ಮುಷ್ಕರದಿಂದ ರಾಜ್ಯದಾದ್ಯಂತ ಶನಿವಾರವೂ ಬಸ್ ಸೇವೆಯಲ್ಲಿ ವ್ಯತ್ಯಯ ಉಂಟಾಯಿತು. ಹಿಂದಿನ ಮೂರು ದಿನಗಳಿಗೆ ಹೋಲಿಸಿದರೆ ಶನಿವಾರ ತುಸು ಹೆಚ್ಚಿನ ಸಂಖ್ಯೆಯ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದರು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಿಂದ ಒಟ್ಟು 1,600ಕ್ಕೂ ಹೆಚ್ಚು ಬಸ್‌ಗಳನ್ನು ಶನಿವಾರ ಓಡಿಸಲಾಗಿದೆ.

ಯುಗಾದಿ ಹಬ್ಬಕ್ಕೆ ತೆರಳುವವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದುದರಿಂದ ಶನಿವಾರ ಬೆಳಿಗ್ಗೆ ಬಸ್ ನಿಲ್ದಾಣಗಳಲ್ಲಿ ಹೆಚ್ಚಿನ ಜನರಿದ್ದರು. ಮಧ್ಯಾಹ್ನದ ಬಳಿಕ ಈ ಸಂಖ್ಯೆ ಕುಸಿಯುತ್ತಾ ಹೋಯಿತು. ಸ್ಥಳೀಯ ಬಸ್‌ಗಳ ಸಂಚಾರ ಬಹುತೇಕ ರದ್ದಾಗಿರುವ ಕಾರಣದಿಂದ ದುಡಿಯುವ ವರ್ಗದ ಜನರ ಪಡಿಪಾಟಲು ಮುಂದುವರಿದಿದೆ.

**ವರ್ಗಾವಣೆಯ ಅಸ್ತ್ರ ಪ್ರಯೋಗ:** ನೌಕರರನ್ನು ಮಣಿಸಲು ನೋಟಿಸ್ ಜಾರಿ, ಟ್ರೈನಿ ಮತ್ತು ತರಬೇತಿ ಅವಧಿಯಲ್ಲಿರುವ ಸಿಬ್ಬಂದಿಯನ್ನು ಕೆಲಸದಿಂದ ವಜಾಗೊಳಿಸುವ ಕ್ರಮ ಕೈಗೊಂಡಿದ್ದ ಸಾರಿಗೆ ನಿಗಮಗಳು ಈಗ ವರ್ಗಾವಣೆಯ ಅಸ್ತ್ರ ಪ್ರಯೋಗಿಸಲು ಆರಂಭಿಸಿವೆ. ಮುಷ್ಕರದ ಮುಂಚೂಣಿಯಲ್ಲಿ ಗುರುತಿಸಿಕೊಂಡಿರುವ ನೌಕರರನ್ನು ಗುರುತಿಸಿ ವರ್ಗಾವಣೆ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ಶುಕ್ರವಾರ ಮತ್ತು ಶನಿವಾರ ಒಟ್ಟು 320 ನೌಕರರನ್ನು ವಿವಿಧೆಡೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 222 ನೌಕರರನ್ನು ವರ್ಗಾವಣೆ ಮಾಡಲಾಗಿದೆ. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ 75 ಸಿಬ್ಬಂದಿಯನ್ನು ವರ್ಗಾವಣೆ ಮಾಡಿದೆ. ಬಿಎಂಟಿಸಿಯಲ್ಲೂ ಕೆಲವು ನೌಕರರ ವರ್ಗಾವಣೆ ಮಾಡಲಾಗಿದೆ.

**ಮತ್ತಷ್ಟು ನೌಕರರ ವಜಾ:** ಮುಷ್ಕರದಲ್ಲಿ ಭಾಗಿಯಾಗಿರುವ ಟ್ರೈನಿ ಮತ್ತು ಪ್ರೊಬೇಷನರಿ ಸಿಬ್ಬಂದಿಯನ್ನು ವಜಾಗೊಳಿಸುವ ಪ್ರಕ್ರಿಯೆಯನ್ನೂ ಸಾರಿಗೆ ನಿಗಮಗಳು ಮುಂದುವರಿಸಿವೆ. ಬಿಎಂಟಿಸಿ 118 ನೌಕರರನ್ನು ಶನಿವಾರ ಕೆಲಸದಿಂದ ವಜಾಗೊಳಿಸಿದೆ. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 31 ಜನರನ್ನು ವಜಾ ಮಾಡಿದೆ.

ಇನ್ನೊಂದೆಡೆ ಎಲ್ಲ ಸಾರಿಗೆ ನಿಗಮಗಳೂ 55 ವರ್ಷ ವಯಸ್ಸಾಗಿರುವ ನೌಕರರಿಗೆ ಸೋಮವಾರ ಸಂಜೆಯೊಳಗೆ ದೈಹಿಕ ಸಾಮರ್ಥ್ಯದ ಕುರಿತು ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸುವಂತೆ ಸೂಚನೆ ನೀಡಿವೆ. ಬಿಎಂಟಿಸಿ ಈ ಸಂಬಂಧ 1,800 ನೌಕರರಿಗೆ ನೋಟಿಸ್ ಜಾರಿಗೊಳಿಸಿದೆ. ಸೋಮವಾರ ಸಂಜೆಯೊಳಗೆ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ನೌಕರರು ನಿವೃತ್ತಿಗೆ ಒಪ್ಪಿಗೆ ನೀಡಿರುವುದಾಗಿ ಪರಿಭಾವಿಸಲಾಗುವುದು ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ.

**ಕ್ರಿಮಿನಲ್ ಪ್ರಕರಣ ದಾಖಲು:** ಮುಷ್ಕರಕ್ಕೆ ಪ್ರಚೋದನೆ ನೀಡುವವರು, ಕರ್ತವ್ಯನಿರತ ಸಿಬ್ಬಂದಿಗೆ ಅಡ್ಡಿಪಡಿಸುವವರು, ಕರ್ತವ್ಯಕ್ಕೆ ಹಾಜರಾಗುವವರನ್ನು ಸಾಮಾಜಿಕ ಮಾಧ್ಯಮಗಳಲ್ಲಿ ನಿಂದಿಸುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತಿದೆ. ಈವರೆಗೆ 25 ಪ್ರಕರಣಗಳನ್ನು ದಾಖಲಿಸಲಾಗಿದೆ.

ಮುಷ್ಕರಕ್ಕೆ ಸಂಚು ನಡೆಸುತ್ತಿರುವ ಆರೋಪದ ಮೇಲೆ ಸಾರಿಗೆ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ವಿರುದ್ಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ತಿಂಗಳ ಹಿಂದೆಯೇ ಎಫ್‌ಐಆರ್ ದಾಖಲಿಸಲಾಗಿತ್ತು. ಈಗ ತನಿಖೆಯನ್ನು ಚುರುಕುಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಲಬುರ್ಗಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್‌ಗಳ ಮೂಲಕ ಶನಿವಾರ ಕೂಲಿಕಾರ್ಮಿಕರು ತಮ್ಮ ಊರಿಗೆ ತೆರಳಿದರು

### ನೌಕರರಿಗೆ ಕೋವಿಡ್ ಲಸಿಕೆ ಸೌಲಭ್ಯ

ಕರ್ತವ್ಯಕ್ಕೆ ಹಾಜರಾಗುವ ನೌಕರರಿಗೆ ಕೋವಿಡ್ ಲಸಿಕೆ ಹಾಕುವುದು ಮತ್ತು ಕೋವಿಡ್ ಪರೀಕ್ಷೆ ನಡೆಸುವ ಕೆಲಸವನ್ನು ಸಾರಿಗೆ ನಿಗಮಗಳು ಶನಿವಾರ ಆರಂಭಿಸಿವೆ.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ 100ಕ್ಕೂ ಹೆಚ್ಚು ನೌಕರರಿಗೆ ಶನಿವಾರ ಲಸಿಕೆ ನೀಡಲಾಗಿದೆ. ನೌಕರರು ಮತ್ತು ಅವರ ಕುಟುಂಬದ ಸದಸ್ಯರಿಗೂ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ‘ಮುಷ್ಕರದಲ್ಲಿ ರಾಜಕೀಯ ಬೇಡ’

ಒಂದನೇ ಪುಟದಿಂದ

‘ಸಾರಿಗೆ ನೌಕರರ ಜತೆ ಸರ್ಕಾರ ಹಲವು ಸುತ್ತಿನ ಮಾತುಕತೆ ನಡೆಸಿದೆ. ಆದರೂ, ಕೆಲವರ ಕೈವಾಡದಿಂದ ಮುಷ್ಕರ ನಡೆಯುತ್ತಿದೆ. ಇಂತಹ ದುರಿತ ಕಾಲದಲ್ಲಿ ಕಾಂಗ್ರೆಸ್ ನಾಯಕರು ಸಮಸ್ಯೆ ಬಗೆಹರಿಸುವ ಬದಲಿಗೆ ರಾಜಕೀಯ ಹೇಳಿಕೆ ನೀಡುತ್ತಿರುವುದು ದುರ್ದೈವದ ಸಂಗತಿ’ ಎಂದವರು ತಿಳಿಸಿದ್ದಾರೆ.

‘ಕೋಡಿಹಳ್ಳಿ ಚಂದ್ರಶೇಖರ್ ಜತೆ ಕೈಜೋಡಿಸಿರುವ ಕಾಂಗ್ರೆಸ್ ಮುಷ್ಕರದ ಬೆಂಕಿಯಲ್ಲಿ ಅಡುಗೆ ತಯಾರಿಸಲು ಹವಣಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗುತ್ತಿದೆ. ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಖುಷಿಪಡುವ ಪಟ್ಟಭದ್ರರನ್ನು ಬಂಧಿಸುವುದು ಅನಿವಾರ್ಯವಾಗಿತ್ತು’ ಎಂದು ಕೋಡಿಹಳ್ಳಿ ವಿರುದ್ಧದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

### ಇಬ್ಬರು ಚಾಲಕರ ಅಮಾನತು: ಒಬ್ಬರ ವಜಾ

**ಸಂಡೂರು:** ತಾಲ್ಲೂಕಿನ ದೋಣಿಮಲೈ ಕಡೆಗೆ ಏ.8 ರಂದು ಹೊರಟಿದ್ದ ಸಾರಿಗೆ ಸಂಸ್ಥೆಯ ಬಸ್ಸಿಗೆ ಕಲ್ಲು ಹೊಡೆದ ಆರೋಪ ಎದುರಿಸುತ್ತಿರುವ ಸಂಸ್ಥೆಯ ಚಾಲಕರಾದ ಕೆ. ಶಿವಕುಮಾರ್ ಹಾಗೂ ಎಂ. ನಾಗರಾಜ ಎಂಬುವವರನ್ನು ಅಮಾನತುಗೊಳಿಸಲಾಗಿದೆ.

2016ರಲ್ಲಿ ಅಪಘಾತವಾಗಿದ್ದ ವಾಹನದ ಚಾಲಕ ಚಿಗಟೇರಿ ಶಿವಕುಮಾರ್ ಅವರನ್ನು
ಸೇವೆಯಿಂದ ವಜಾಗೊಳಿಸಿ ಶುಕ್ರವಾರ ಸಾರಿಗೆ ಸಂಸ್ಥೆಯ ಹೊಸಪೇಟೆ ವಿಭಾಗದ ನಿಯಂತ್ರಣಾಧಿಕಾರಿ ಆದೇಶಿಸಿದ್ದಾರೆ.

# ಯಡಿಯೂರಪ್ಪ ಹಡಗು ಮುಳುಗುತ್ತಿದೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪಯಣಿಸುತ್ತಿರುವ ಹಡಗು ಮುಳುಗುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

‘ಕಾಂಗ್ರೆಸ್ ಮುಳುಗುತ್ತಿರುವ ಹಡಗು’ ಎಂಬ ಮುಖ್ಯಮಂತ್ರಿ ಹೇಳಿಕೆಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ‘ಅವರದ್ದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ ನಿತ್ಯವೂ ಏನು ಹೇಳಿಕೆ ಕೊಡುತ್ತಿದ್ದಾರೆ? ಮುಖ್ಯಮಂತ್ರಿ ಹಡಗೇ ಮುಳುಗುತ್ತಿದೆ ಎನ್ನುವುದಕ್ಕೆ ಅವರ ಹೇಳಿಕೆಗಳೇ ಸಾಕ್ಷಿಯಾಗಿವೆ’ ಎಂದರು.

‘ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಕಣಕ್ಕಿಳಿಸಿ ಸತೀಶ ಜಾರಕಿಹೊಳಿ ಅವರನ್ನು ಹರಕೆಯ ಕುರಿ ಮಾಡಲಾಗಿದೆ’ ಎಂಬ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿಯವರು ಮಂಗಲಾ ಅಂಗಡಿ ಅವರಿಗೆ ಏನು ಮಾಡಿದರು? ಮೊದಲು ಯಾರ ಹೆಸರು ಕೇಳಿಬರುತ್ತಿತ್ತು. ನಂತರ ಏನಾಯ್ತು? ರವಿ ಯಾವಾಗಲೂ ಸುಳ್ಳನ್ನೇ ಹೇಳುತ್ತಾನೆ. ಅದಕ್ಕೆಲ್ಲಾ ಉತ್ತರ ಕೊಡುವುದಿಲ್ಲ’ ಎಂದು ಅವರು ಹೇಳಿದರು.

## ‘ಸಿ.ಎಂ ಕುಟುಂಬದ ಭ್ರಷ್ಟಾಚಾರ ತನಿಖೆಯಾಗಲಿ’

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ‘ಪಕ್ಷದಿಂದ ಹೊರ ಹಾಕಬೇಡಿ ಎಂದು ನಾನು, ಯಾರನ್ನೂ ಕೈ ಮುಗಿದು ಬೇಡಿಕೊಂಡಿಲ್ಲ. ಹೊರಹಾಕುವುದಾದರೆ, ಅದಕ್ಕೂ ಮೊದಲು ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅವರ ಕುಟುಂಬದವರ ಭ್ರಷ್ಟಾಚಾರದ ಬಗ್ಗೆ ತನಿಖೆಯಾಗಲಿ’ ಎಂದು ಶಾಸಕ ಬಸವನಗೌಡ ಪಾಟೀಲ ಯತ್ನಾಳ ಶನಿವಾರ ಹರಿಹಾಯ್ದರು.

ಇಲ್ಲಿನ ಸಿದ್ಧಾರೂಢ ಮಠದಲ್ಲಿ ಶನಿವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು ‘ರಾಜ್ಯಕ್ಕೆ ಬರುವ ರಾಷ್ಟ್ರೀಯ ನಾಯಕರು ವಾಪಸ್ ಹೋಗುವ ಮುನ್ನ ನನ್ನನ್ನು ಬೈದು ಹೋಗುತ್ತಾರೆ. ವಿಮಾನದಲ್ಲಿ ಕುಳಿತ ಬಳಿಕ ನಕ್ಕು ಬಿಡುತ್ತಾರೆ. ಇದರ ಮರ್ಮ ಏನೆಂಬುದು ಎಲ್ಲರಿಗೂ ಗೊತ್ತಿದೆ. ಮುಂದೊಂದು ದಿನ ಅದನ್ನೂ ಬಹಿರಂಗ ಪಡಿಸುವೆ’ ಎಂದರು.

‘ಬಿಜೆಪಿ ಅತಿ ದೊಡ್ಡ ಪಕ್ಷವಾಗಿದೆ. ನನ್ನ ವಿರುದ್ಧ ಹತ್ತೇ ನಿಮಿಷದಲ್ಲಿ ಕ್ರಮ ತೆಗೆದುಕೊಳ್ಳಬಹುದಿತ್ತು. ಆದರೆ, ಭ್ರಷ್ಟಾಚಾರದ ವಿರುದ್ಧದ ನನ್ನ ಹೋರಾಟ ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಮಾಧಾನ ತಂದಿದೆ. ಹೀಗಾಗಿ ಪಕ್ಷದಿಂದ ನನ್ನನ್ನು ಹೊರ ಹಾಕುವುದು ಅಸಾಧ್ಯದ ಮಾತು’ ಎಂದರು.

‘ನನಗೆ ಹಿಂದೆ ಷೋಕಾಸ್ ನೋಟಿಸ್ ನೀಡಿದ್ದಾಗಲೇ ಯಡಿಯೂರಪ್ಪ ಕುಟುಂಬದ ಭ್ರಷ್ಟಾಚಾರದ ಬಗ್ಗೆ ಪ್ರಧಾನಿ, ಗೃಹ ಸಚಿವ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ 11 ಪುಟಗಳ ದಾಖಲೆ ಕೊಟ್ಟಿದ್ದೇನೆ. ನೋಟಿಸ್ ಕೊಟ್ಟು ಎರಡು ತಿಂಗಳಾದರೂ ನನ್ನ ಮೇಲೆ ಕ್ರಮ ಕೈಗೊಂಡಿಲ್ಲವೆಂದರೆ ನನ್ನ ಆರೋಪ ಸತ್ಯ ಎಂದರ್ಥವಲ್ಲವೇ’ ಎಂದು ಪ್ರಶ್ನಿಸಿದರು.

ಯತ್ನಾಳ ಅವರ ಬಗ್ಗೆ ಶೇ 00.1ರಷ್ಟೂ ವಿಶ್ವಾಸವಿಲ್ಲ ಎಂಬ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿಕೆಗೆ ಅವರು, ‘ಅರುಣ್ ಸಿಂಗ್ ಲೆಕ್ಕ ಪರಿಶೋಧಕರಾಗಿದ್ದಾರೆ. ಹೀಗಾಗಿ, ಅವರು ಶೇ 00.1ರ ಬಗ್ಗೆ ಮಾತನಾಡಿದ್ದಾರೆ. ಅವರಿಗೆ ಧನ್ಯವಾದ’ ಎಂದು ವ್ಯಂಗ್ಯವಾಡಿದರು.

### ಉಪಚುನಾವಣೆ ಬಳಿಕ ಯತ್ನಾಳ ವಿರುದ್ಧ ಕ್ರಮ; ಅರುಣ್ ಸಿಂಗ್

ಪ್ರಜಾವಾಣಿ ವಾರ್ತೆ

**ಸುರಪುರ (ಯಾದಗಿರಿ ಜಿಲ್ಲೆ):** ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ಆರೋಪ ಮಾಡುತ್ತಿರುವುದು, ಬಹಿರಂಗ ಹೇಳಿಕೆ ನೀಡುತ್ತಿರುವುದು ಪಕ್ಷ ವಿರೋಧಿ ಚಟುವಟಿಕೆಯಾಗಿದೆ. ಉಪಚುನಾವಣೆ ಮುಗಿದ ನಂತರ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು’ ಎಂದು ಬಿಜೆಪಿ ರಾಜ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಸನಗೌಡ ಯತ್ನಾಳ ಅವರಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಆದರೂ ಅವರು ತಮ್ಮ ಚಾಳಿ ಬಿಡುತ್ತಿಲ್ಲ’ ಎಂದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027.

**ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ. 01 ದಿನಾಂಕ: 10–04–2021**

ಈ ಕೆಳಗೆ ತಿಳಿಸಿರುವ ಸೇವೆಗಳ / ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಪೂರ್ವಾರ್ಹತೆ ಮತ್ತು ವಾಣಿಜ್ಯ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಟೆಂಡರ್ ಸಂಖ್ಯೆ. | ಖರೀದಿಸುವ ಸಾಮಗ್ರಿಗಳ ವಿವರ | ಟೆಂಡರ್‌ನ ಮೊತ್ತ ಲಕ್ಷ ರೂ.ಗಳಲ್ಲಿ (ಅಂದಾಜು) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ 17.00 ಗಂಟೆ |
|---|---|---|---|
| ಜಿ–02/21–21 | ಆಟೋಮೋಟಿವ್ ಬ್ಯಾಟರಿಗಳ ಖರೀದಿ. | 900.00 | 12-05-2021 |
| ಜಿ–03/21–21 | ಆಟೋಮೋಟಿವ್ ಗ್ರೀಸ್‌ಗಳ ಖರೀದಿ. | 500.00 | 12-05-2021 |
| ಜಿ–04/21–21 | ಸೆಲೆಕ್ಷನ್ ಆಫ್ ಆನ್ ಏಜೆನ್ಸಿ ಫಾರ್ ಇಂಪ್ಲಿಮೆಂಟೇಷನ್ ಆಫ್ ಕೊಲಿಷನ್ ವಾರ್ನಿಂಗ್ ಸಿಸ್ಟಮ್ ಮತ್ತು ಡ್ರೈವರ್ ಡ್ರೌಸಿನೆಸ್ ಸಿಸ್ಟಮ್. | 500.00 | 12-05-2021 |
| ಜಿ–05/21–21 | UPS ಬ್ಯಾಟರಿಗಳ ಖರೀದಿ. | 200.00 | 12-05-2021 |
| ಜಿ–06/21–21 | GHT ಬೋಲ್ಟ್, GHT ‘U’ ಬೋಲ್ಟ್ ಹಾಗೂ ನೈಲಾಕ್ ನಟ್ಸ್ ಖರೀದಿ. | 150.00 | 12-05-2021 |
| ಜಿ–07/21–21 | ಪ್ರಿಂಟರ್‌ಗಳ ಖರೀದಿ. | 70.00 | 12-05-2021 |
| ಜಿ–08/21–21 | ಅಲ್ಯೂಮಿನಿಯಂ ಸಾಕೆಟ್ ಮತ್ತು ಡೈ ಕ್ಯಾಸ್ಟಿಂಗ್. | 45.00 | 12-05-2021 |
| ಜಿ–09/21–21 | ಪ್ಲಾಸ್ಟಿಕ್ ಲ್ಯಾಮಿನೇಷನ್ ಪೌಚಸ್. | 12.00 | 12-05-2021 |
| | ಅಲ್ಪಾವಧಿ ಟೆಂಡರ್ | | |
| ಜಿ–01/21–21 | ಟೈರ್, ಟ್ಯೂಬ್ & ಫ್ಲಾಪ್ ಸೆಟ್ಸ್, ಟ್ಯೂಬ್‌ಲೆಸ್ ರೇಡಿಯಲ್ ಟೈರ್ಸ್ ಮತ್ತು ಅಡಿಷನಲ್ ಟ್ಯೂಬ್ಸ್ ಮತ್ತು ಫ್ಲಾಪ್ಸ್ ಖರೀದಿಸುವ ಬಗ್ಗೆ. | 9000.00 | 17-04-2021 |

ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಪ್ರಕಟಗೊಳಿಸಲಾಗುವುದು.
**ಸೂಚನೆ:** ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://eproc.karnataka.gov.in** ಗೆ ಲಾಗ್ ಆನ್ ಮಾಡಿ ಅಥವಾ **ದೂರವಾಣಿ ಸಂಖ್ಯೆ: 080–22230960,22234115** ಕರೆಮಾಡಿ ಅಥವಾ **eprocurementhelpdesk@gmail.com** ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ಬೆಂ.ನ/ಅಡ್ವಟೋರ್/127/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ**
ಸಂ: ತಾ.ಸಾ.ಆ.(ಚ) ನಾ.ಕ್ಲಿ.ಟೆಂ/1/03/2021–22 ದಿನಾಂಕ: 05.04.2021

**ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿಯಲ್ಲಿ)**

2021–22ರ ಸಾಲಿಗಾಗಿ ನಾನ್ ಕ್ಲಿನಿಕಲ್ ಮತ್ತು ಗ್ರೂಪ್ ‘ಡಿ’ ಸೇವೆ ನಿರ್ವಹಿಸಲು ಮುಖ್ಯ ವೈದ್ಯಾಧಿಕಾರಿಗಳು, ತಾ.ಸಾ. ಆಸ್ಪತ್ರೆ, ಚಳ್ಳಕೆರೆ ಇವರ ಹೆಸರಿನಲ್ಲಿ ಪ್ರತಿಷ್ಠಿತ ನೋಂದಾಯಿತ ಸಂಸ್ಥೆಯವರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಕರೆಯಲಾಗಿದ್ದು, ಇ–ಟೆಂಡರ್ ನಮೂನೆಗಳನ್ನು www. eproc.karnataka.gov.in ರಲ್ಲಿ ಅಂತರ್ಜಾಲದಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 05.04.2021ರಿಂದ 04.05.2021ರ ವರೆಗೆ ಮತ್ತು ಅಂತರ್ಜಾಲದಲ್ಲಿ ಭರ್ತಿ ಮಾಡಲು ಕೊನೆಯ ದಿನಾಂಕ: 04.05.2021ರ ಅಪರಾಹ್ನ 5:00 ಗಂಟೆಯವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.05.2021 ಬೆಳಿಗ್ಗೆ 11:00 ಗಂಟೆಗೆ. ಕಾರಣಾಂತರದಿಂದ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಮತ್ತು ಡೌನ್‌ಲೋಡ್ ಮಾಡುವ ಹಾಗೂ ತೆರೆಯುವ ದಿನಾಂಕಗಳಂದು ಸರ್ಕಾರಿ ರಜೆ ಘೋಷಿಸಿದ್ದಲ್ಲಿ ಅದರ ಮುಂದಿನ ದಿನಾಂಕವನ್ನು ಪರಿಗಣಿಸಲಾಗುದುವುದು. ಹೆಚ್ಚಿನ ವಿವರಗಳಿಗೆ www. eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ತಾ.ಸಾ. ಆಸ್ಪತ್ರೆ, ಚಳ್ಳಕೆರೆ.

RO No. 038: DIPR/CTA/MCA/2021-22



**ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ**
ಕ್ರಮಾಂಕ:ಶಿಮನಪಾಶಿ:ಕಾವಿ–2:ಸಿಆರ್:01/2021–22 ದಿನಾಂಕ:03.04.2021

**ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)**

**ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ಮಹಾನಗರ ಪಾಲಿಕೆಯಲ್ಲಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.eproc karnataka.gov.inನಲ್ಲಿ ಪಡೆದುಕೊಳ್ಳಬಹುದು.**

1). ಇ–ಪ್ರೊಕ್ಯೂರ್‌ಮೆಂಟ್ ನಮೂನೆಗಳಿಗಾಗಿ ಆನ್‌ಲೈನ್‌ನಲ್ಲಿ ಇ–ಪೇಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **18.04.2021 (ಸಂಜೆ 4.00ರವರೆಗೆ)** 2). ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **19.04.2021 ಸಂಜೆ 4.30 ಗಂಟೆ.** 3). ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : **20.04.2021 ಸಂಜೆ 4.00 ಗಂಟೆ.** 4). **ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳಯಲ್ಲಿ ಪಡೆಯಬಹುದಾಗಿದೆ.** 5) ಕಾಮಗಾರಿ ಪೂರೈಸುವ ಅವಧಿ : **18 ತಿಂಗಳು (ಮಳೆಗಾಲ ಸೇರಿ).** 6) ಅನುದಾನ : **ಪಾಲಿಕೆಯ ಎಂಟರ್ ಪ್ರೈಸಸ್ ಅನುದಾನ**

| ಕ್ರ. ಸಂ | ಇಂಡೆಂಟ್ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ) | ಇ.ಎಂ.ಡಿ (ರೂ.ಗಳಲ್ಲಿ) | ಮೀಸಲಾತಿ | ಅನುಧಾನ |
|---|---|---|---|---|---|---|
| 1 | 113179 | ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ ನಂ.27ರ ಸಂತೆ ಮೈದಾನದಲ್ಲಿ ಪಾಲಿಕೆ ವತಿಯಿಂದ ನಿರ್ಮಿಸುತ್ತಿರುವ ವಾಣಿಜ್ಯ ಕಟ್ಟಡ ಕಾಮಗಾರಿ. | 225.00 | - | Class 2 and above | ಪಾಲಿಕೆಯ ಎಂಟರ್ ಪ್ರೈಸಸ್ ಅನುದಾನ |
| 2 | 114795 | ಪಾಲಿಕೆ ವ್ಯಾಪ್ತಿಯಲ್ಲಿನ ವಾರ್ಡ್ ನಂ.28ರ ಸಂತೆ ಮೈದಾನದಲ್ಲಿ ಪಾಲಿಕೆ ವತಿಯಿಂದ ನಿರ್ಮಿಸುತ್ತಿರುವ ವಾಣಿಜ್ಯ ಕಟ್ಟಡ ಕಾಮಗಾರಿ. | 125.00 | – | Class 3 and above | ಪಾಲಿಕೆಯ ಎಂಟರ್ ಪ್ರೈಸಸ್ ಅನುದಾನ |

ಸೂಚನೆ : ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ–ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು (ವಿಭಾಗ–2)
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.65–04/ಝೇಂಕಾರ್/2021–22



**ಮೈಸೂರು ಸಕ್ಕರೆ ಕಂಪನಿ ನಿಯಮಿತ**
ಮೈಸೂರು ಬಯಲು ರಂಗ ಮಂದಿರ, ಶುಗರ್ ಟೌನ್, ಮಂಡ್ಯ, ಕರ್ನಾಟಕ–571402,
Mob: 9945754010/9886848504 E-mail: pamd_msco@yahoo.com
CIN-U15428KA1933SGC000142

**ಪ್ರಕಟಣೆ**

ದಿನಾಂಕ 28ನೇ ಏಪ್ರಿಲ್ 2021 ರಂದು ಪೂರ್ವಹ್ನ 11.00 ಗಂಟೆಗೆ ಈ ಕೆಳಗಿನ ವ್ಯವಹಾರವನ್ನು ನಡೆಸುವ ಸಲುವಾಗಿ **ಮೈಸೂರು ಸಕ್ಕರೆ ಕಂಪನಿ ನಿಯಮಿತದ** ಸದಸ್ಯರುಗಳ ಅಸಾಧಾರಣ ಸಾಮಾನ್ಯ ಸಭೆಯು ವೀಡಿಯೋ ಕಾನ್ಫರೆನ್ಸ್ ಮೋಡ್ ಮೂಲಕ ನಡೆಯಲ್ಲಿದ್ದು, ಸದರಿ ಸಭೆಗೆ ಸೂಚನೆಯನ್ನು ಈ ಮೂಲಕ ನೀಡಲಾಗಿದೆ.

**ವಿಶೇಷ ವ್ಯವಹಾರ / ವ್ಯಾಪಾರ :**

ಪರಿಗಣಿಸಲು ಮತ್ತು ಆಲೋಚನೆ ಸರಿಹೊಂದಿದಲ್ಲಿ ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡು ಇಲ್ಲದೇ ರವಾನಿಸಲು, ಈ ಕೆಳಗಿನ ನಿರ್ಣಯವನ್ನು / ಠರಾವನ್ನು ವಿಶೇಷ ಠರಾವು ಎಂದು ಪರಿಗಣಿಸಲು ಹಾಗೂ ಚಲಾವಣೆಗೆ ತರಲು
ಕಂಪನಿಗಳ ಕಾಯ್ದೆ 2013 ಮತ್ತು ಅದಕ್ಕೆ ಅನ್ವಯವಾಗುವ ಎಲ್ಲಾ ನಿಬಂಧನೆಗಳು / ಅನ್ವಯಿಕೆಗಳು ಮತ್ತು ಅನ್ವಯವಾಗುವ ಯಾವುದಾದರೂ ನಿಬಂಧನೆಗಳು ಇದ್ದಲ್ಲಿ, ಮಂಡಳಿಯ ನಿರ್ದೇಶಕರು ನಿರ್ಧರಿಸಿದಂತೆ, ಕಂಪನಿಯ ಸದಸ್ಯರ ಒಪ್ಪಿಗೆಯನ್ನು ಪಡೆದು ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಂಪನಿ ನಿಯಮಿತದಲ್ಲಿನ ಕಾರ್ಖಾನೆಯನ್ನು ಎಲ್.ಆರ್.ಓ.ಟಿ ಆಧಾರದ ಮೇಲೆ 40 ವರ್ಷಗಳ ಅವಧಿಗೆ ನೀಡಲು ನಿರ್ಣಯಿಸಲಾಗಿದೆ.
ಮುಂದುವರೆದು, ಕಂಪನಿಯ ಪರ ಮತ್ತು ಪರವಾಗಿ ಒಪ್ಪಂದಕ್ಕೆ ಸಹಿ ಹಾಕಲು ಮತ್ತು ಅಂತಹ ಎಲ್ಲಾ ಪ್ರಾಸಂಗಿಕ ಕೃತ್ಯಗಳು, ಕಾರ್ಯಗಳು ಮತ್ತು ಕೆಲಸಗಳನ್ನು ನಿರ್ವಹಿಸಲು ಈ ಮೂಲಕ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಇವರಿಗೆ ಅಧಿಕಾರ ನೀಡಲು ನಿರ್ಣಯಿಸುವ ಬಗ್ಗೆ.

**ಇ.ಜಿ.ಎಂ.ನ ಸೂಚನೆಯ ಪ್ರಕಾರ ಇ–ಮತದಾನ ಸೂಚನೆ**

1. ಕಂಪನಿಯು ಇ–ಮತದಾನಕ್ಕಾಗಿ ಸಿಡಿಎಸ್‌ಎಲ್‌ನ ಸೇವೆಗಳನ್ನು ಬಳಕೆ ಮಾಡಿಕೊಂಡಿರುತ್ತದೆ. ಷೇರುದಾರರು ಹೆಚ್ಚಿನ ಮಾಹಿತಿಗಾಗಿ **www.evotingindia.com** ಗೆ ಭೇಟಿ ನೀಡಿ ತಮ್ಮ ಮತವನ್ನು ಚಲಾವಣೆ ಮಾಡಬಹುದಾಗಿದೆ.
2. ಇ–ಮತದಾನದ ಸಂಕ್ಷಿಪ್ತವಾದ ಮಾಹಿತಿಯನ್ನು ಷೇರುದಾರರಿಗೆ ಈಗಾಗಲೇ ಪೋಸ್ಟ್ ಮೂಲಕ ಕಳುಹಿಸಲಾಗಿದೆ.
3. ಷೇರುದಾರರಿಗೆ ಭಾಗವಹಿಸಲು ಅನುಕೂಲವಾಗುವಂತೆ ಮಂಡ್ಯ ನಗರದ ಮೈಷುಗರ್ ಬಯಲು ರಂಗ ಮಂದಿರ ಮತ್ತು ಮೈಷುಗರ್ ಪೌಢಶಾಲೆ (ಎರಡು ಬದಿ)ಯಂತೆ 3 ಸ್ಥಳಗಳನ್ನು ನಿಗದಿಪಡಿಸಲಾಗಿದೆ. ಷೇರುದಾರರು ಮಾನ್ಯವಿರುವ ಗುರುತಿನ ಚೀಟಿಯನ್ನು ಉದಾ: ಚುನಾವಣಾ ಗುರುತಿನ ಚೀಟಿ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ವಾಹನ ಚಾಲನಾ ಗುರುತಿನ ಚೀಟಿಯನ್ನು ತೋರಿಸಿ ಆವರಣವನ್ನು ಪ್ರವೇಶಿಸಬಹುದಾಗಿದೆ.
4.ಕರ್ನಾಟಕ ಸರ್ಕಾರದ ಕೋವಿಡ್ –19ರ ಮಾರ್ಗಸೂಚಿಗಳ ಅನ್ವಯದಂತೆ ಒಂದು ಆವರಣದಲ್ಲಿ 50 ಷೇರುದಾರರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿರುತ್ತದೆ. ಯಾವ ಷೇರುದಾರರು ರಿಮೋಟ್ ಇ–ಮತದಾನದಲ್ಲಿ ಪಾಲ್ಗೊಳಲಾಗಲಿಲ್ಲವೊ ಅವರು ನೇರವಾಗಿ ಮೇಲೆ ಸೂಚಿಸಿದ 3 ಸ್ಥಳಗಳಲ್ಲಿ First come First serve basis ನಲ್ಲಿ ಇ–ಮತ ಚಲಾವಣೆ ಮಾಡಬಹುದು.
5. ಮತದಾನದ ಅವಧಿಯು **ದಿನಾಂಕ 25 ಏಪ್ರಿಲ್ 2021 ರಂದು ಬೆಳಿಗ್ಗೆ 11.00 ಕ್ಕೆ ಪ್ರಾರಂಭವಾಗುತ್ತದೆ ಮತ್ತು ದಿನಾಂಕ 27 ಏಪ್ರಿಲ್ 2021 ರಂದು ಸಂಜೆ 5.00 ಘಂಟೆಗೆ ಕೊನೆಗೊಳ್ಳುತ್ತದೆ.** ಈ ಅವಧಿಯಲ್ಲಿ, ಕಂಪನಿಯ ಷೇರುದಾರರು ವಿದ್ಯುನ್ಮಾನವಾಗಿ ತಮ್ಮ ಮತವನ್ನು ಚಲಾಯಿಸಬಹುದು, ಇ–ಮತದಾನ ಮಾಡ್ಯೂಲ್ ಅನ್ನು ಸಿಡಿಎಸ್‌ಎಲ್ ನಂತರ ನಿಷ್ಕ್ರಿಯಗೊಳಿಸುತ್ತದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ / ಆದೇಶಾನುಸಾರ
ಮೈಸೂರು ಸಕ್ಕರೆ ಕಂಪನಿ ನಿ. ಪರವಾಗಿ
ಸಹಿ/–
(ಡಾ॥ ಹೆಚ್.ಎನ್. ಗೋಪಲಕೃಷ್ಣ ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು ಡಿನ್ ನಂ.08184281

ಸ್ಥಳ : ಬೆಂಗಳೂರು
ದಿನಾಂಕ: 01.04.2021
ವಾಸಾಸಂಇ/ಮಂಡ್ಯ/ಶಿರಡಿಸಾಯಿ/23/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

# ನಕಲಿ ಬ್ರ್ಯಾಂಡ್ ಹೆಸರಲ್ಲಿ ಸ್ಥಳೀಯ ಅಕ್ಕಿ ಮಾರಾಟ

• ಸಿದ್ದನಗೌಡ ಪಾಟೀಲ

**ಕೊಪ್ಪಳ:** ಜಿಲ್ಲೆಯಲ್ಲಿ ಅಧಿಕೃತವಾಗಿ 150ಕ್ಕೂ ಹೆಚ್ಚು ಅಕ್ಕಿ ಗಿರಣಿಗಳು ಇವೆ. ಕೆಲ ಅಕ್ಕಿ ಗಿರಣಿ ಮಾಲೀಕರು ಹಲವು ವರ್ಷಗಳಿಂದ ಪಡಿತರ ಅಕ್ಕಿಯನ್ನು ಖರೀದಿಸಿ, ಅವುಗಳನ್ನು ಪಾಲಿಶ್ ಮಾಡಿ ಮಾರುವ ಅಕ್ರಮಕ್ಕೆ ಇಳಿದಿದ್ದಾರೆ. ಜನವರಿ ತಿಂಗಳಲ್ಲಿ ಜಿಲ್ಲಾಧಿಕಾರಿಗಳೇ ತೆರಳಿ ಗೋದಾಮುಗಳಲ್ಲಿ ಸಂಗ್ರಹಿಸಿಟ್ಟಿದ್ದ ಅಕ್ಕಿಯನ್ನು ವಶಪಡಿಸಿಕೊಂಡಿದ್ದು, ಈ ಅಕ್ರಮದ ಜಾಲಕ್ಕೆ ಪೆಟ್ಟು ಬಿದ್ದಿದೆ.

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಅಕ್ಕಿ ಗಿರಣಿಗಳಲ್ಲಿಯೂ ಅಕ್ರಮ ನಡೆದಿರುವ ಆರೋಪಗಳಿವೆ. ಅನ್ನಭಾಗ್ಯ ಯೋಜನೆಯಡಿ ಅಕ್ಕಿಯನ್ನು ನ್ಯಾಯಬೆಲೆ ಅಂಗಡಿ ಮತ್ತು ಜನರಿಂದ ಕೆ.ಜಿ.ಗೆ ₹ 10ರ ದರದಲ್ಲಿ ಖರೀದಿಸಿ ಅವುಗಳನ್ನು ಕೆ.ಜಿ.ಗೆ ₹ 35ರಿಂದ ₹ 40ರವರೆಗೆ ರಾಜ್ಯ ಹಾಗೂ ಹೊರರಾಜ್ಯಗಳಿಗೆ ಮಾರಲಾಗುತ್ತಿದೆ.

ಭತ್ತದ ಕಣಜಗಳೆಂದೇ ಹೆಸರಾದ ಗಂಗಾವತಿ, ಕಾರಟಗಿ, ಕೊಪ್ಪಳ ತಾಲ್ಲೂಕುಗಳಲ್ಲಿ ಸೋನಾ ಮಸೂರಿ, ಕಾವೇರಿ, ಆರ್‌ಎನ್‌ಆರ್ ತಳಿ ಭತ್ತವನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ವಿದೇಶಕ್ಕೂ ರಫ್ತಾಗುತ್ತಿದೆ.

**ನಕಲಿ ಬ್ರ್ಯಾಂಡ್:** ಈಚೆಗೆ ಗಂಗಾವತಿಯ ರಾಣಾಪ್ರತಾಪ್ ಸಿಂಗ್ ವೃತ್ತದಲ್ಲಿರುವ ಅಕ್ಕಿ ಗಿರಣಿಯ ಮೇಲೆ ದಾಳಿ ಮಾಡಿದ ಅಧಿಕಾರಿಗಳು, ಪ್ರಸಿದ್ಧ ಬ್ರ್ಯಾಂಡ್‌ಗಳ ನಕಲಿ ಅಕ್ಕಿ ಪ್ಯಾಕೆಟ್ ತಯಾರಿಸಿ ಮಾರಾಟ ಮತ್ತು ಸಂಗ್ರಹ ಮಾಡಿದ್ದ ಆರೋಪದ ಮೇಲೆ ಗಿರಣಿ ಬಂದ್ ಮಾಡಿಸಿ, 4,911 ಚೀಲ ಅಕ್ಕಿ ವಶಕ್ಕೆ ಪಡೆದಿದ್ದರು.

'ಪ್ರಸಿದ್ಧ ಬ್ರ್ಯಾಂಡ್‌ಗಳ ಅಕ್ಕಿ ಚೀಲಗಳ ಮಾದರಿಯಲ್ಲೇ ಸ್ಥಳೀಯ ಅಕ್ಕಿಯನ್ನು ತುಂಬಿ ಹೆಚ್ಚಿನ ಬೆಲೆಗೆ ಮಾರುವ ಉದ್ದೇಶದಿಂದ ಹೀಗೆ ಸಂಗ್ರಹಿಸುವ ಜಾಲ ಇದೆ. ನೈಜ ಬ್ರ್ಯಾಂಡ್ ಕಂಪನಿಯವರು ದೂರು ದಾಖಲಿಸಬೇಕು. ಆಗ ಮಾತ್ರ ಅಕ್ರಮ ತಡೆಯಲು ಹೆಚ್ಚಿನ ಬಲ ಬರುತ್ತದೆ' ಎನ್ನುತ್ತಾರೆ ಅಧಿಕಾರಿಗಳು.

'ಅಕ್ರಮ ಮಾಡದೇ ಹೋದರೆ ಅಕ್ಕಿ ಗಿರಣಿ ನಡೆಸುವುದೇ ಕಷ್ಟವಾಗುತ್ತಿದೆ. ಹಾಗೆಂದು ಎಲ್ಲರೂ ಅಕ್ರಮ ಮಾಡುವುದಿಲ್ಲ. ಗುಣಮಟ್ಟ ಕಾಪಾಡಿಕೊಂಡಿರುವ ಉದ್ಯಮಗಳು ಇವೆ. ಕೆಲ ಬೆರಳೆಣಿಕೆಯ ದಂಧೆಕೋರರಿಂದ ಪದೇ ಪದೇ ಇಂತಹ ಘಟನೆಗಳು ನಡೆಯುತ್ತವೆ. ಅಂತಹ ಕೃತ್ಯಗಳಿಗೆ ಸಂಪೂರ್ಣ ತಡೆ ಹಾಕಬೇಕು' ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಉದ್ಯಮಿಯೊಬ್ಬರು.

ಅಕ್ಕಿ ಗಿರಣಿಗಳ ಮೂಲಕ ಜಿಲ್ಲೆಯ ವಾಣಿಜ್ಯ ವಹಿವಾಟಿಗೆ ಬಲ ಬಂದಿದೆ. ಆದರೆ, ಅವು ಕೂಡ ಮೂಲಸೌಕರ್ಯ, ಕಾರ್ಮಿಕರ ಕೊರತೆ ಸೇರಿದಂತೆ ನಾನಾರೀತಿಯ ಸಮಸ್ಯೆ ಎದುರಿಸುತ್ತಿವೆ.

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿಯೂ ಅಕ್ಕಿ ಗಿರಣಿಗಳಿವೆ. ಅವುಗಳ ಸಮಸ್ಯೆಗಳೂ ಭಿನ್ನವಾಗಿಲ್ಲ.

ಗಂಗಾವತಿ ತಾಲ್ಲೂಕಿನಲ್ಲಿ ಭತ್ತ ಒಕ್ಕಲು ಕಾರ್ಯ ನಡೆದಿದ್ದು, ಚೀಲಕ್ಕೆ ತುಂಬಿ ಮಾರುಕಟ್ಟೆಗೆ ಕಳುಹಿಸುತ್ತಿರುವ ರೈತರು

ಪಡಿತರ ಅಕ್ಕಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಗಂಗಾವತಿಯ ಖಾಸಗಿ ಗೋದಾಮುಗಳ ಮೇಲೆ ಜಿಲ್ಲಾಧಿಕಾರಿ, ಎಸ್ಪಿ ನೇತೃತ್ವದಲ್ಲಿ ದಾಳಿ ನಡೆಸಿದಾಗಿನ ಚಿತ್ರ

**ಭತ್ತ ಬೆಳೆಯುವ ರೈತರಿಗೂ ಹಲವು ಸಮಸ್ಯೆಗಳಿವೆ. ಸುವ್ಯವಸ್ಥಿತ ಮಾರುಕಟ್ಟೆಯಿರದ ಕಾರಣ ತೋಚಿದ ಕಡೆ ಮಾರಬೇಕಿದೆ.ಇದರಿಂದ ಮೋಸ ಹೋಗುವ ಸಾಧ್ಯತೆ ಹೆಚ್ಚು**

**ದೊಡ್ಡಪ್ಪ ದೇಸಾಯಿ,** ಭತ್ತ ಬೆಳೆಗಾರ

**ಭತ್ತ ಖರೀದಿ ಕೇಂದ್ರ ಆರಂಭಿಸಿದ್ದರೂ ರೈತರು ಭತ್ತವನ್ನು ನೀಡುತ್ತಿಲ್ಲ. ಹೆಚ್ಚಿನ ಬೆಲೆಗೆ ವ್ಯಾಪಾರಿಗಳಿಗೆ ಮಾರುತ್ತಾರೆ. ಇದರಿಂದ ಅಕ್ಕಿ ಗಿರಣಿಗಳಿಗೂ ಸಾಕಷ್ಟು ಭತ್ತ ದೊರೆಯುವುದಿಲ್ಲ. ಅಲ್ಲದೆ ವ್ಯಾಪಾರಿಗಳಿಂದ ರೈತರಿಗೆ ಮೋಸವಾಗುತ್ತದೆ. ಖರೀದಿ ಕೇಂದ್ರಗಳಿಗೆ ಮಾರಿದರೆ, ವಾರದಲ್ಲಿಯೇ ಹಣ ಪಾವತಿ ಮಾಡಲಾಗುತ್ತದೆ.**

**ಗಂಗಪ್ಪ,** ಸಹಾಯಕ ನಿರ್ದೇಶಕ (ಪ್ರಭಾರ), ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಕೊಪ್ಪಳ

## ಅಸಹಾಯಕ ಸ್ಥಿತಿಯಲ್ಲಿ ಎಪಿಎಂಸಿ

ಭತ್ತವನ್ನು ಬೆಳೆದ ರೈತರು ಈ ಮೊದಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಮೂಲಕ ಮಾರುತ್ತಿದ್ದರು. ಈಗ ಹೊಸ ಎಪಿಎಂಸಿ ಕಾಯ್ದೆ ಜಾರಿಯ ನಂತರ ಅವರು ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು.

ತಮಿಳುನಾಡು ಸೇರಿದಂತೆ ಹೊರರಾಜ್ಯದ ಕೆಲ ವ್ಯಾಪಾರಿಗಳು ಭತ್ತ ಕಟಾವಿನ ನಂತರ ಒಕ್ಕಲು ಮಾಡಿದ ಅಕ್ಕಿಯನ್ನು ಜಮೀನುಗಳಲ್ಲಿಯೇ ಖರೀದಿಸಿ ಲಾರಿ ಮೂಲಕ ತುಂಬಿಕೊಂಡು ಹೋಗುತ್ತಿದ್ದಾರೆ.

'ಈ ಮೊದಲು ಎಪಿಎಂಸಿ ಮೂಲಕ ಭತ್ತ ಖರೀದಿ, ವಹಿವಾಟು ನಡೆಯುತ್ತಿತ್ತು. ಕೊಪ್ಪಳ ಜಿಲ್ಲೆಯ ಐದು ಎಪಿಎಂಸಿಗಳಲ್ಲಿ ವಾರ್ಷಿಕ ₹ 20 ಕೋಟಿಗೂ ಹೆಚ್ಚು ಲಾಭವಿತ್ತು. ಈಗ ರೈತರು ಎಪಿಎಂಸಿ ಹೊರಗೆ ಮಾರುವುದರಿಂದ ನಮಗೆ ಯಾವುದೇ ರೀತಿಯ ಸೆಸ್ ಬರುತ್ತಿಲ್ಲ' ಎನ್ನುತ್ತಾರೆ ಕೊಪ್ಪಳ ಎಪಿಎಂಸಿಯ ಅಧಿಕಾರಿ ಶ್ಯಾಮ್ ಪವಾರ್.

## ಅಕ್ಕಿ ಗಿರಣಿಗೆ ಬೇಕಿದೆ ಕಾಯಕಲ್ಪ

ಅಕ್ಕಿ ಗಿರಣಿ ಮಾಲೀಕರಿಗೂ ಅನೇಕ ಸಮಸ್ಯೆಗಳಿವೆ. ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ, ಭತ್ತ ಖರೀದಿ ಮತ್ತು ಅಕ್ಕಿ ಮಾರಾಟಕ್ಕೆ ವ್ಯವಸ್ಥೆ, ಅಗ್ಗದ ದರದಲ್ಲಿ ರೈಲಿನಲ್ಲಿ ಅಕ್ಕಿ ಸಾಗಣೆಗೆ ವ್ಯವಸ್ಥೆ ಆಗಬೇಕಿದೆ. ಕಾರ್ಮಿಕರ ಸಮಸ್ಯೆಯೂ ಇದೆ. ಇದಕ್ಕಾಗಿ ಹೊರರಾಜ್ಯದ ಕಾರ್ಮಿಕರನ್ನೇ ಹೆಚ್ಚಾಗಿ ಅವಲಂಬಿಸಿದ್ದೇವೆ.

ಗಂಗಾವತಿ ಮತ್ತು ಸುತ್ತಲಿನ ಅಕ್ಕಿ ಗಿರಣಿಗಳಿಗೆ ಅವಶ್ಯವಿರುವ ಮೂಲಸೌಕರ್ಯ, ಸಬ್ಸಿಡಿ ನೀಡಬೇಕು. ಇಲ್ಲಿ ಬೆಳೆಯುವ ಭತ್ತವನ್ನು ಮಾರುಕಟ್ಟೆ ದರದಲ್ಲಿ ಖರೀದಿಸಿ ಇಲ್ಲಿನ ಗಿರಣಿಗಳಿಗೆ ನೀಡಿ, ಅವುಗಳನ್ನು ವಿದೇಶಕ್ಕೂ ರಫ್ತು ಮಾಡುವ ಅವಕಾಶ ಕಲ್ಪಿಸಬೇಕು. ರೈತ ಮತ್ತು ಉದ್ದಿಮೆದಾರರಿಗೂ ಹಾನಿ ಆಗದಂತೆ ಯೋಜನೆಗಳನ್ನು ಸರ್ಕಾರ ಘೋಷಿಸಿದರೆ ಒಳ್ಳೆಯದು.

**ಪರಣ್ಣ ಮುನವಳ್ಳಿ,** ಗಂಗಾವತಿ ಶಾಸಕ ಮತ್ತು ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷ

# ಚೇತರಿಕೆ ಕಾಣದ ಅಕ್ಕಿ ಗಿರಣಿಗಳು

ಸರ್ಕಾರದಿಂದ ಸಿಗದ ಉತ್ತೇಜನ, ಹೊರ ರಾಜ್ಯಗಳ ವ್ಯಾಪಾರಿಗಳಿಂದ ಪೈಪೋಟಿ

• ಚಂದ್ರಶೇಖರ ಆರ್.

**ದಾವಣಗೆರೆ:** ಜಿಲ್ಲೆಯಲ್ಲಿ ಒಂದು ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದ ಅಕ್ಕಿ ಗಿರಣಿಗಳು ಇದೀಗ ಒಂದೊಂದಾಗಿ ಬಾಗಿಲು ಮುಚ್ಚುತ್ತಿವೆ. ಶೇ 80ಕ್ಕೂ ಹೆಚ್ಚು ಅಕ್ಕಿ ಗಿರಣಿಗಳು ಬಂದ್ ಆಗಿವೆ. ಜಿಲ್ಲೆಯಲ್ಲಿದ್ದ 140 ಗಿರಣಿಗಳಲ್ಲಿ ಈಗ ಉಳಿದಿರುವುದು 40 ಮಾತ್ರ.

ಜಿಲ್ಲೆಯ ಮಲೇಬೆನ್ನೂರಿನ ಅಕ್ಕಿ ರಾಜ್ಯದಲ್ಲೇ ಪ್ರಸಿದ್ಧ. ಒಂದು ಕಾಲದಲ್ಲಿ ಇಲ್ಲಿ 15ಕ್ಕೂ ಹೆಚ್ಚು ಅಕ್ಕಿ ಗಿರಣಿಗಳು ಇದ್ದವು. ಈಗ 5 ಗಿರಣಿಗಳಷ್ಟೇ ಉಳಿದಿವೆ.

ಅಕ್ಕಿ ಗಿರಣಿಗಳು ಬಂದ್ ಆಗಲು ಹಲವು ಕಾರಣಗಳಿವೆ. ಅವುಗಳ ಪೈಕಿ ಸರ್ಕಾರದಿಂದ ಸಿಗದ ಉತ್ತೇಜನ, ಆಂಧ್ರಪ್ರದೇಶ, ತಮಿಳುನಾಡು ಭತ್ತದ ವ್ಯಾಪಾರಿಗಳ ಪೈಪೋಟಿ, ಪರಿಸರ ಕಾಯ್ದೆ, ಇಲ್ಲಿ ಬಂದ ಲಾಭವನ್ನು ಬೇರೆಡೆ ತೊಡಗಿಸಿಕೊಂಡ ಮಾಲೀಕರ ನೀತಿ ಪ್ರಮುಖವಾದವು. ಈಗ ಕೊರೊನಾ ಆವರಿಸಿಕೊಂಡಿದ್ದು, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ.

ಕೊರೊನಾ ಸಂದರ್ಭದಲ್ಲಿ ಹೇರಿದ ಲಾಕ್‌ಡೌನ್‌ನಿಂದ ಹಲವು ಉದ್ಯಮಗಳಂತೆ ಅಕ್ಕಿ ಗಿರಣಿಗಳು ಸಂಕಷ್ಟ ಅನುಭವಿಸಿದವು. ಲಾಕ್‌ಡೌನ್ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹಲವು ಸಣ್ಣ ಕೈಗಾರಿಕೆಗಳಿಗೆ ಆರ್ಥಿಕ ಪ್ಯಾಕೇಜ್ ಘೋಷಿಸಿತು. ಆದರೆ, ಅಕ್ಕಿ ಗಿರಣಿಗಳಿಗೆ ಯಾವುದೇ ರಿಯಾಯಿತಿ ಘೋಷಿಸಲಿಲ್ಲ. ಇದರಿಂದ ಉದ್ಯಮಕ್ಕೆ ಇನ್ನಷ್ಟು ಸಮಸ್ಯೆಗಳು ಎದುರಾದವು.

1969ರಿಂದ ಈಚೆಗೆ ಆರಂಭವಾದ ಅಕ್ಕಿ ಗಿರಣಿಗಳು ಈ ಭಾಗದಲ್ಲಿ ಉತ್ತುಂಗದಲ್ಲಿದ್ದವು. ಆದರೆ ಈಗ ನಿಧಾನವಾಗಿ ಮರೆಯಾಗುತ್ತಿವೆ. ಪ್ರಸಿದ್ಧಿ ಪಡೆದಿದ್ದ ದಾಂಡೇಕರ್ ಮಿಲ್, ಬಿನ್ನಿ ಮಾರ್ಟಿನ ರೈಸ್‌ಮಿಲ್‌ನಂತಹ ದೊಡ್ಡ ಗಿರಣಿಗಳು ಮುಚ್ಚಿವೆ. ಒಂದೊಂದು ಗಿರಣಿಯಲ್ಲಿ 100ಕ್ಕೂ ಅಧಿಕ ಮಂದಿ ಕಾರ್ಮಿಕರಿದ್ದರು. ಆದರೆ ಈಗ 20 ಜನರಿಗೂ ಕೆಲಸ ಕೊಡದ ಸ್ಥಿತಿ ಇದೆ.

**ಸರ್ಕಾರದಿಂದ ಸಿಗದ ಉತ್ತೇಜನ:** 'ಶೇ 70ರಷ್ಟು ಅಕ್ಕಿ ಉದ್ಯಮ ಅವನತಿಯ ಅಂಚಿಗೆ ತಲುಪಿದೆ. ಕಾರ್ಪೊರೇಟ್ ಕಂಪನಿಗಳಿಗೆ ಅನ್ವಯಿಸುವ ನಿಯಮಗಳನ್ನು ಕೇಂದ್ರ ಸರ್ಕಾರ ಸಣ್ಣ ಕೈಗಾರಿಕೆಗಳ ಮೇಲೆ ಹೇರಿದೆ. 10 ಲಾರಿಯಷ್ಟು ಅಕ್ಕಿ ಮಾರುತ್ತಿದ್ದವರು ಈಗ ಒಂದು ಲಾರಿಯಷ್ಟು ಮಾರಲು ಪರದಾಡುವಂತಾಗಿದೆ. ಕೊರೊನಾದಲ್ಲಿ ಸರ್ಕಾರವು ಎರಡು ತಿಂಗಳು ವಿದ್ಯುತ್ ಬಿಲ್‌ನಿಂದ ರಿಯಾಯಿತಿ ನೀಡಿತ್ತು. ಮತ್ತೆ ಎಲ್ಲ ಬಿಲ್ ಕಟ್ಟಿಸಿಕೊಂಡಿದ್ದಾರೆ. ಸರ್ಕಾರ ಯಾವುದೇ ಉತ್ತೇಜನ ನೀಡಿಲ್ಲ' ಎನ್ನುತ್ತಾರೆ ಮಲೇಬೆನ್ನೂರಿನ ಅಕ್ಕಿ ಗಿರಣಿ ಮಾಲೀಕ ವಾಗೀಶಸ್ವಾಮಿ.

'ಅಕ್ಕಿ ಗಿರಣಿಗಳು ಸ್ಥಳೀಯ ರೈತರಿಂದ ಭತ್ತ ಖರೀದಿಸುವ ಕಾರಣ ರೈತರಿಗೆ ಉಪಯುಕ್ತವಾಗಿದೆ. ಅಲ್ಲದೇ, ಹಲವು ಕಾರ್ಮಿಕರ ಬದುಕು ನಡೆಯುತ್ತಿತ್ತು. ಈಗ ಎಲ್ಲವೂ ಬಂದ್ ಆಗಿವೆ' ಎಂದು ಅವರು ಬೇಸರಪಡುತ್ತಾರೆ.

**ಹೊರರಾಜ್ಯದವರ ಪೈಪೋಟಿ ಹೆಚ್ಚು:** 'ನಾವು ಇಲ್ಲಿನ ರೈತರಿಂದ ಭತ್ತ ಖರೀದಿಸುತ್ತಿದ್ದೆವು. ಆದರೆ ಈಗ ಆಂಧ್ರಪ್ರದೇಶ, ತಮಿಳುನಾಡಿನ ಭತ್ತ ವ್ಯಾಪಾರಿಗಳು ಹೆಚ್ಚಿನ ಬೆಲೆಗೆ ಭತ್ತ ಖರೀದಿಸುತ್ತಿದ್ದಾರೆ. ಅವರ ಜತೆ ಪೈಪೋಟಿ ಎದುರಿಸುವುದೇ ಕಷ್ಟವಾಗಿದೆ' ಎನ್ನುತ್ತಾರೆ ಅಕ್ಕಿ ಗಿರಣಿ ಮಾಲೀಕರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಬಿ. ಚಿದಾನಂದಪ್ಪ.

'ಅಲ್ಲಿ ಕುಚಲಕ್ಕಿ (ಬಾಯ್ಲಡ್) ಹಾಗೂ ಹಾಫ್ ಬಾಯ್ಲಡ್ ಅಕ್ಕಿ ಮಾಡುತ್ತಾರೆ. ಇದರಿಂದ ಅವರಿಗೆ ಹೆಚ್ಚು ನುಚ್ಚು ಬರುವುದಿಲ್ಲ. ಹೆಚ್ಚೆಂದರೆ ಮೂರು ಚೀಲ ನುಚ್ಚು ಬರಬಹುದು. ಆದರೆ ನಮ್ಮಲ್ಲಿ ಬಾಯ್ಲಡ್ ಅಕ್ಕಿ ಬಳಸುವುದಿಲ್ಲ. ಅದಕ್ಕಾಗಿ ಸ್ಟೀಮ್ ಅಕ್ಕಿ ಮಾಡುತ್ತೇವೆ. ಇದರಲ್ಲಿ 100 ಚೀಲ ನುಚ್ಚೇ ಬರುತ್ತದೆ. ಅದರಿಂದ ನಷ್ಟ ಹೆಚ್ಚು. ನುಚ್ಚು ಹೆಚ್ಚು ಬರುವ ಕಾರಣ ಹೆಚ್ಚಿನ ಬೆಲೆಗೆ ಭತ್ತ ಖರೀದಿಸುವುದು ನಮ್ಮಿಂದ ಸಾಧ್ಯವಿಲ್ಲ. ಬೇರೆ ರಾಜ್ಯದವರು ಹೆಚ್ಚಿನ ಬೆಲೆಗೆ ಖರೀದಿಸುತ್ತಾರೆ. ಹೀಗಾಗಿ ಗಿರಣಿ ನಡೆಸುವುದು ಕಷ್ಟಕರವಾಗಿದೆ' ಎನ್ನುವ ವಿವರಣೆ ಅವರದು.

'ಗುಣಮಟ್ಟದ ಅಕ್ಕಿ ತಯಾರಿಸದೆ, ಖರೀದಿಸಿ ಮಾರಾಟ ಮಾಡಿದ್ದರಿಂದ ಕೆಲ ಮಾಲೀಕರು ನಷ್ಟ ಅನುಭವಿಸಿದರು. ಅಲ್ಲದೇ ಪಡಿತರ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದೂ ಅಕ್ಕಿ ಗಿರಣಿಗಳು ನಷ್ಟ ಅನುಭವಿಸಲು ಕಾರಣ ಎನ್ನುತ್ತಾರೆ' ರೈತ ಮುಖಂಡ, ಮಲೇಬೆನ್ನೂರು ಬಳಿಯ ಜಿ. ಮಂಜುನಾಥ ಪಟೇಲ್.

'ಭತ್ತ ಬೆಳೆಯಲು ಹೆಚ್ಚು ಖರ್ಚು, ಶ್ರಮ ಬೇಕಿರುವ ಕಾರಣ ಹೆಚ್ಚಿನ ರೈತರು ಈಗ ಅಡಿಕೆಯತ್ತ ಮುಖ ಮಾಡಿದ್ದಾರೆ. ಭತ್ತಕ್ಕೆ ಉತ್ತಮ ಬೆಲೆಯೂ ಇಲ್ಲ. ಕೂಲಿ ಕಾರ್ಮಿಕರ ಕೊರತೆ, ಯಾಂತ್ರೀಕೃತ ಬೇಸಾಯ ಹೆಚ್ಚು ಖರ್ಚು ಬೇಡುವ ಕಾರಣ ಭತ್ತ ಬೇಸಾಯದಿಂದ ರೈತರು ವಿಮುಖರಾಗುತ್ತಿದ್ದಾರೆ. ಇದೂ ಅಕ್ಕಿ ಗಿರಣಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ' ಎನ್ನುತ್ತಾರೆ ಚೀಲೂರಿನ ರೈತ ಗೋವಿಂದರಾಜು.

ದಾವಣಗೆರೆಯಲ್ಲಿ ಬಂದ್ ಆಗಿರುವ ಅಕ್ಕಿ ಗಿರಣಿ (ಸಂಗ್ರಹ ಚಿತ್ರ)

ಮಲೇಬೆನ್ನೂರಿನ ವೀರಭದ್ರೇಶ್ವರ ರೈಸ್ ಆ್ಯಂಡ್ ಫ್ಲೋರ್ ಮಿಲ್‌ನಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿರುವುದು (ಸಂಗ್ರಹ ಚಿತ್ರ)

**ನಮ್ಮೂರಿನ ಅಕ್ಕಿಗೆ ಬೇಡಿಕೆ ಇದೆ. ಆದರೆ ಸರ್ಕಾರದ ಅಸಮರ್ಪಕ ನೀತಿ, ಆರ್ಥಿಕ ಉತ್ತೇಜನಕ್ಕೆ ಕ್ರಮ ಕೈಗೊಳ್ಳದಿರುವುದೇ ಗಿರಣಿಗಳು ಮುಚ್ಚಲು ಕಾರಣ.**

**ಬಿ. ಚಿದಾನಂದಪ್ಪ**
ಉಪಾಧ್ಯಕ್ಷ, ಅಕ್ಕಿ ಗಿರಣಿ ಮಾಲೀಕರ ಸಂಘದ ರಾಜ್ಯ ಘಟಕ

**ಬೇರೆ ವಲಯಕ್ಕೆ, ರೈತರಿಗೆ ಹಲವು ಯೋಜನೆಗಳನ್ನು ಘೋಷಿಸುವ ಸರ್ಕಾರ ಗಿರಣಿಗಳ ಉತ್ತೇಜನಕ್ಕೂ ನೆರವು ನೀಡಬೇಕು.**

**ವಾಗೀಶಸ್ವಾಮಿ**
ಅಕ್ಕಿ ಗಿರಣಿ ಮಾಲೀಕ, ಮಲೇಬೆನ್ನೂರು

## 'ಅನ್ನ ಭಾಗ್ಯ'ಕ್ಕಿಲ್ಲ ಕಣ್ಗಾವಲು!

**ಒಂದನೇ ಪುಟದಿಂದ...**

**ಕಾಲ ಕೂಡಿ ಬಂದಿಲ್ಲ!:** ಅಕ್ಕಿ, ಗೋಧಿ, ರಾಗಿ, ಸಕ್ಕರೆ ಸೇರಿದಂತೆ ಪಡಿತರ ಧಾನ್ಯಗಳನ್ನು ದಾಸ್ತಾನು ಮಳಿಗೆಯಿಂದ ತುಂಬಿಕೊಂಡು ನ್ಯಾಯಬೆಲೆ ಅಂಗಡಿಗಳಿಗೆ ಹೋಗುವ ಲಾರಿಗಳು ಯಾವ ಮಾರ್ಗದಿಂದ ಸಾಗುತ್ತಿವೆ ಮತ್ತು ಎಷ್ಟು 'ತೂಕ'ದ ಧಾನ್ಯಗಳನ್ನು ಕೊಂಡೊಯ್ಯುತ್ತಿವೆ ಎಂಬ ವಿವರಗಳನ್ನು ಕುಳಿತಲ್ಲೇ ನಿಯಂತ್ರಿಸಲು ಜಿಪಿಎಸ್ ತಂತ್ರಜ್ಞಾನದ ಮೊರೆ ಹೋಗಲು ಇಲಾಖೆ ನಿರ್ಧರಿಸಿತ್ತು. ಎಷ್ಟು ಟ್ರಿಪ್, ಎಷ್ಟು ದೂರ, ದಾಸ್ತಾನು ಮಳಿಗೆಯಿಂದ ಧಾನ್ಯ ತುಂಬಿಕೊಂಡು ಹೊರಟ ಸಮಯ, ನಿಗದಿಪಡಿಸಿದ ಸ್ಥಳಗಳಲ್ಲಿ ಎಷ್ಟು ಸಮಯದವರೆಗೆ ನಿಲುಗಡೆಯಾಗಿದೆ, ಮಾರ್ಗ ಬದಲಾದರೆ, ಅನುಮತಿ ಇಲ್ಲದ ಸ್ಥಳದಲ್ಲಿ ವಾಹನ ನಿಲುಗಡೆಯಾದರೆ, ವಿನಾಕರಣ ತೂಕ ಕಡಿಮೆಯಾದರೆ ಇ-ಮೇಲ್, ಎಸ್‌ಎಂಎಸ್ ಸಂದೇಶ ಅಧಿಕಾರಿಗಳಿಗೆ ರವಾನೆಯಾಗುವ ವ್ಯವಸ್ಥೆಯದು. ಆದರೆ, ಅದಕ್ಕೆ ಮುಹೂರ್ತ ಕೂಡಿ ಬಂದಿಲ್ಲ!

## ಗುಂಡಣ್ಣ




## 25 ವರ್ಷಗಳ ಹಿಂದೆ

ಗುರುವಾರ, 11-4-1996

• **ಭಟ್ಕಳದ ಶಾಸಕ ಚಿತ್ತರಂಜನ್ ಹತ್ಯೆ**

**ಕಾರವಾರ, ಏ. 10–** ಹಾಲಿ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಕ್ಷದ ಶಾಸಕರಾಗಿದ್ದ ಭಟ್ಕಳದ ಡಾ.ಯು. ಚಿತ್ತರಂಜನ್ (54) ಅವರನ್ನು ಇಂದು ರಾತ್ರಿ ಅಪರಿಚಿತರು ಅವರ ಮನೆಯಲ್ಲಿ ಗುಂಡಿಕ್ಕಿ ಕೊಂದಿದ್ದಾರೆ.

ಗುಂಡೇಟಿನಿಂದ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಗಿ, ಅಲ್ಲಿ ಚಿತ್ತರಂಜನ್ ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಬಿಜೆಪಿ ಕಾರ್ಯಕರ್ತರ ಸಭೆ ಮುಗಿಸಿ ರಾತ್ರಿ 9.30ರ ಸುಮಾರಿಗೆ ಮನೆಗೆ ಬಂದು ದೂರದರ್ಶನದಲ್ಲಿ ವಾರ್ತೆಗಳನ್ನು ವೀಕ್ಷಿಸುತ್ತಿದ್ದಾಗ ಕಿಟಕಿ ಮೂಲಕ ಅಪರಿಚಿತರು ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ.

## 50 ವರ್ಷಗಳ ಹಿಂದೆ

ಭಾನುವಾರ, 11-4-1971

• **'ಗೊಂದಲದ ಮುಕ್ತಾಯ'**

**ಬೆಂಗಳೂರು, ಏ.10–** ಸಂಜೆ ನಡೆದ ಆಡಳಿತ ಕಾಂಗ್ರೆಸ್ಸಿನ ಶಾಸಕ ಪಕ್ಷದ ಸಭೆ 'ಗೊಂದಲದಲ್ಲಿ' ಮುಕ್ತಾಯವಾಯಿತೆಂದು ಕೆಲ ಸದಸ್ಯರು ತಿಳಿಸಿದರು.

ಆಗಾಗ್ಗೆ ಬಿಸಿ ವಾತಾವರಣದಲ್ಲಿ ನಡೆಯಿತೆನ್ನಲಾದ ಸಭೆ ಕ್ರಮಬದ್ಧವಾದುದಲ್ಲವೆಂದು ಕೆಲ ಸದಸ್ಯರು ಆಕ್ಷೇಪಿಸಿದರೆಂದು ತಿಳಿದುಬಂದಿದೆ.

ಹೊಸದಾಗಿ ಬಂದಿರುವ ಸದಸ್ಯತ್ವವನ್ನು ಪಾರ್ಲಿಮೆಂಟರಿ ಬೋರ್ಡ್ ಇನ್ನೂ ಅಂಗೀಕರಿಸಿಲ್ಲ. ಅಧ್ಯಕ್ಷ ಸಂಜೀವಯ್ಯ ಅವರ ಹೇಳಿಕೆಯಲ್ಲೂ ಇದು ಸ್ಪಷ್ಟವಾಗಿದೆ.

## ದಿನ ಭವಿಷ್ಯ

ಭಾನುವಾರ 11 ಏಪ್ರಿಲ್ 2021

**ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೇವತಿ ಅಮಾವಾಸ್ಯೆ ಗಂ. 60-00 (ದಿನಪೂರ್ತಿ) ಭಾನುವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 5-15 (ಬೆ. 8-22) ಐಂದ್ರ ನಾಮ ಯೋಗ ಗಂ 17-49 ಚತುಷ್ಕರಣ ಗಂ. 29-27 ವಿಷ ಗಂ. 37-48 ಅಮೃತಾಭಾವಃ :** ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-15 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 8, 9

**ಮೇಷ:** ಬಿಡುವಿಲ್ಲದ ಕೆಲಸ-ಕಾರ್ಯಗಳ ನಡುವೆಯೂ ಪ್ರಯಾಣದಲ್ಲಿ ಸುಖಾನುಭವ. ಆರೋಗ್ಯದ ಬಗ್ಗೆ ಗಮನ ಅಗತ್ಯ. ಸ್ವಂತ ಉದ್ಯಮದಲ್ಲಿ ತೊಡಗಿರುವವರಿಗೆ ಕೆಲಸ-ಕಾರ್ಯಗಳಲ್ಲಿ ಹಿನ್ನಡೆ. ಹಿತೈಷಿಗಳ ಸಹಕಾರ ಲಭ್ಯವಾಗಲಿದೆ.

**ವೃಷಭ:** ನಿರೀಕ್ಷಿಸಿದಂತೆ ಕೆಲಸ-ಕಾರ್ಯಗಳು ನಡೆಯಲಿವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಒತ್ತಡ ಉಂಟಾಗಲಿದೆ. ಕ್ರೀಡಾಪಟುಗಳಿಗೆ ಗೌರವಾದರಗಳು ಲಭ್ಯವಾಗಲಿವೆ. ಅಮೂಲ್ಯ ವಸ್ತುಗಳ ಶೋಧನೆಗಾಗಿ ಕಾಲ ವ್ಯಯ.

**ಮಿಥುನ:** ವಾಹನ ಯಂತ್ರೋಪಕರಣಗಳಿಂದ ಅನುಕೂಲಕರ ವಾತಾವರಣ. ವಿದ್ಯಾರ್ಥಿಗಳಿಗೆ ಆಟ, ಪಾಠಗಳಲ್ಲಿ ಹೆಚ್ಚಿನ ಪ್ರಗತಿ. ಕುಟುಂಬದಲ್ಲಿ ಒಮ್ಮತದ ನಿರ್ಣಯದಿಂದಾಗಿ ನೆಮ್ಮದಿ. ಸಂತಸ ತರುವ ಸುದ್ದಿಯೊಂದನ್ನು ಆಲಿಸಲಿದ್ದೀರಿ.

**ಕರ್ಕಾಟಕ:** ಕೌಟುಂಬಿಕ ಸಾಮರಸ್ಯದೊಂದಿಗೆ ಶಾಂತಿಯುತ ಬದುಕು. ಸಾಮಾಜಿಕ ಹಾಗೂ ಬಂಧುಗಳ ಗೌರವಾದರಗಳಿಗೆ ಪಾತ್ರರಾಗಲಿದ್ದೀರಿ. ವಿಪರೀತ ಕೆಲಸ-ಕಾರ್ಯಗಳಿಂದಾಗಿ ಹಾಗೂ ಓಡಾಟಗಳಿಂದಾಗಿ ದೇಹಾಲಸ್ಯ.

**ಸಿಂಹ:** ಕೆಲಸ ಕಾರ್ಯಗಳಲ್ಲಿ ಪ್ರಗತಿ. ಮನೆಯಲ್ಲಿ ಸಮಾಧಾನಕರ ವಾತಾವರಣ. ವಂಚನೆಯಿಂದ ಪಾರಾಗಲು ಅಪರಿಚಿತರೊಂದಿಗೆ ವ್ಯವಹರಿಸುವಾಗ ಜಾಗರೂಕರಾಗಿರುವುದು ಅವಶ್ಯ. ಹಿರಿಯರಿಂದ ಉತ್ತಮ ಸಲಹೆ.

**ಕನ್ಯಾ:** ಉದ್ಯೋಗ ಕ್ಷೇತ್ರದಲ್ಲಿ ಒತ್ತಡ ಉಂಟಾಗುವ ಸಾಧ್ಯತೆ. ಲೇವಾದೇವಿ ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಧೈರ್ಯದಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವುದರಿಂದಾಗಿ ಮುಂದಿನ ಕೆಲಸಗಳು ಸುಗಮವಾಗಲಿವೆ.

**ತುಲಾ:** ಕೆಲಸ-ಕಾರ್ಯಗಳು ನಿರ್ವಿಘ್ನದಾಯಕವಾಗಿ ನಡೆಯಲಿವೆ. ವ್ಯಾಪಾರ, ವೃತ್ತಿಗಳಲ್ಲಿ ಲಾಭ. ಬಂಧು-ಬಾಂಧವರ ಹೊಗಳಿಕೆಗೆ ಪಾತ್ರರಾಗುವ ಅವಕಾಶಗಳು ಕಂಡುಬರುತ್ತಿದೆ. ಭೂ ವ್ಯವಹಾರದಲ್ಲಿ ಪ್ರಗತಿ.

**ವೃಶ್ಚಿಕ:** ಕಾರ್ಯಕಲಾಪಗಳು ಸುಗಮವಾಗಿ ಸಾಗಲಿವೆ. ವಾದ, ವಿವಾದ ಕಟ್ಟಲೆಗಳಲ್ಲಿ ನಿಮ್ಮ ಪರವಾಗಿ ನ್ಯಾಯ ದೊರಕಲಿದೆ. ಕಟ್ಟಡ ಖರೀದಿ ಮಾಡುವ ಸಾಧ್ಯತೆ. ಸಮಾಧಾನ ಚಿತ್ತದಿಂದ ಮನಸ್ತಾಪ ದೂರವಾಗಲಿದೆ.

**ಧನು:** ಆರೋಗ್ಯದಲ್ಲಿ ವೃದ್ಧಿ. ಬರಬೇಕಾದ ಬಾಕಿ ಹಣ ಸಕಾಲದಲ್ಲಿ ಹಿಂದಿರುಗಿ ಅನುಕೂಲ ತರಲಿದೆ. ಕೆಲಸ-ಕಾರ್ಯಗಳಲ್ಲಿ ಸಾಮಾನ್ಯ ಪ್ರಗತಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಪ್ರಿಯ ವ್ಯಕ್ತಿಗಳ ಆಗಮನ ಸಾಧ್ಯತೆ.

**ಮಕರ:** ಲೇವಾದೇವಿ ವ್ಯವಹಾರಸ್ಥರಿಗೆ ಹೆಚ್ಚಿನ ಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿಯಾಗುವ ಸಂಭವ. ಮಹಿಳೆಯರಿಗೆ ಸಂತಸ ತರುವ ದಿನ. ಶತ್ರುಗಳ ಭೀತಿಯಿಂದ ಮುಕ್ತರಾಗಲಿದ್ದೀರಿ. ಹಿತಕರ ಸುದ್ದಿ ಆಲಿಸಲಿದ್ದೀರಿ.

**ಕುಂಭ:** ಮಾನಸಿಕ ಬೇಸರ. ವಾಹನಗಳ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರುವುದು ಉತ್ತಮ. ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ವ್ಯಾಪಾರಸ್ಥರಿಗೆ ಧನ ಹಾನಿಯುಂಟಾಗುವ ಸಾಧ್ಯತೆ ಕಂಡುಬರುತ್ತಿದೆ.

**ಮೀನ:** ಉದ್ಯೋಗ ಅಥವಾ ವೃತ್ತಿಯಲ್ಲಿ ಒತ್ತಡದ ಕೆಲಸಗಳು ಎದುರಾದೀತು. ಹಣಕಾಸು ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಹಿರಿಯರೊಂದಿಗೆ ವ್ಯವಹಾರದ ಕುರಿತಾದ ಸಮಾಲೋಚನೆ ನಡೆಸಲಿದ್ದೀರಿ.

**ನಿಮ್ಮ ಜನ್ಮದಿನ 11-ಏಪ್ರಿಲ್** ಈ ದಿನ ಅತ್ಯಂತ ಶುಭಕರ. ವಾಹನ ಚಲನೆಯಲ್ಲಿ ಆಸಕ್ತಿ ಹೊಂದಿದವರಾದುದರಿಂದ ಸದಾ ಕ್ರಿಯಾಶೀಲರಾಗಿರುವಿರಿ. ಪ್ರಕೃತಿ ಪ್ರೇಮದಿಂದಾಗಿ ಸಾಮಾಜಿಕ ಗೌರವ ಪ್ರಾಪ್ತವಾಗಲಿದೆ. ಆರೋಗ್ಯದ ವಿಷಯದಲ್ಲಿ ಸ್ವಲ್ಪಮಟ್ಟಿನ ಕಿರಿ ಕಿರಿ ಸಾಧ್ಯತೆ. ಅತಿಯಾದ ಜಿಪುಣತನದಿಂದಾಗಿ ಮನೆಯಲ್ಲಿ ವೈಮನಸ್ಯ ಉಂಟಾದೀತು.

## ಪದಬಂಧ 4564 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಜಟಕಾಬಂಡಿ ಎಂದೆನಿಸುವ ಜೀವನ!(3)
3.ಕುದುರೆಯ ಲಾಯ(3)
4.ಒಣಗಿದ ವಸ್ತು(3)
6.ಕುರುಡಿಯ ಹತ್ತಿರದಲ್ಲಿಯೇ ಚಿಗುರು ಕಾಣುತ್ತಿದೆ(2)
7.ಭವನದ ಮೇಲಿಂದ ವೀಕ್ಷಿಸಿರುವ ಆಕಾಶ(2)
9.ಸಂಯಮದಿಂದ ನಿಂತಿರುವ ಮೃತ್ಯುದೇವತೆ(2)
13.ಮನಸ್ಸು ಇಲ್ಲಿ ಚಿಕ್ಕದಾಗಿದೆ(2)
14.ಹಣೆಯಲ್ಲಿ ಇಟ್ಟುಕೊಳ್ಳುವ ಬೊಟ್ಟು(3)
15.ದಾವಣಿ ಧರಿಸಿ ಹಾಡುತ್ತಿರುವ ಜಾನಪದ ಹಾಡು(3)
16.ಹಿಸ್ಸೆಯುಳ್ಳ ಅಂಚೆ!(3)

**ಮೇಲಿಂದ ಕೆಳಕ್ಕೆ**
1.ಕ್ಷಾಮವಿದ್ದಾಗಲೇ ಇದು ನಿಸ್ಸಾರ(3)
2.ನ್ಯಾಯವಲ್ಲದ ತರ್ಕ(3)
3.ಒಟ್ಟು ವ್ಯಾಪಾರ ಮಾಡುವ ಅಂಗಡಿ(2)
5.ನಡುಗುತ್ತುರುವವನ ಮಂದಹಾಸವೇ ಇಲ್ಲಿ ಉಲ್ಟಾ!(2)
6.ವಂಚನೆಯ ಯುಕ್ತಿ (5)
8.ಸಂಸಾರದ ಸೆರೆಯಿದು(5)
10.ಸಾಮತಿಯಲ್ಲಿರುವ ಬುದ್ಧಿ!(2)
11.ಅಸಹ್ಯ ರೂಪವುಳ್ಳದ್ದು(3)
12.ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಕೈದೀಪ(3)
13.ರಮಣಿ ಹಿಡಿದಿರುವ ರತ್ನ(2)



### 4563ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಆಡುಂಬೊಲ 3.ಪಿತಾಮಹ 5.ಜಾಮಾತೃ 6.ಕದಪು 8.ಉದರ 9.ರಥಿಕ 10.ಸಮೂಹ 12.ಪಾನಕ 14.ಸರಸ್ವತಿ 15.ಸುಮಬಾಣ

**ಮೇಲಿಂದ ಕೆಳಕ್ಕೆ:** 1.ಆಗಮಿಕ 2.ಲಜಾ 3.ಪಿತೃ 4.ಹಸ್ತಾಕ್ಷರ 7.ಪುಸ್ತಕ 8.ಉಬ್ಬಸ 9.ರಸಾಭಾಸ 11.ಹರಿವಾಣ 12.ಪಾತಿ 13.ಕಸು

## ಸುಡೊಕು 4950

| | | | | | | | | |
|---|---|---|---|---|---|---|---|---|
| | | 4 | | | 1 | | | 3 |
| | | 1 | | | | 6 | | |
| 5 | | | 8 | | 9 | | 4 | 7 |
| | | 5 | 4 | | | 3 | | |
| | 6 | | | 9 | | | 7 | |
| 3 | | | | | 8 | 5 | | 9 |
| 4 | 1 | | | 8 | | | 3 | |
| | | 2 | 7 | | 4 | 9 | | 1 |
| 7 | | 9 | | 3 | | | 2 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4949 ಸುಡೊಕು

| | | | | | | | | |
|---|---|---|---|---|---|---|---|---|
| 2 | 4 | 8 | 3 | 7 | 1 | 5 | 6 | 9 |
| 9 | 5 | 6 | 4 | 8 | 2 | 3 | 7 | 1 |
| 7 | 3 | 1 | 9 | 5 | 6 | 2 | 8 | 4 |
| 6 | 9 | 4 | 1 | 3 | 8 | 7 | 5 | 2 |
| 5 | 7 | 2 | 6 | 4 | 9 | 1 | 3 | 8 |
| 8 | 1 | 3 | 7 | 2 | 5 | 9 | 4 | 6 |
| 3 | 6 | 7 | 2 | 1 | 4 | 8 | 9 | 5 |
| 4 | 2 | 5 | 8 | 9 | 3 | 6 | 1 | 7 |
| 1 | 8 | 9 | 5 | 6 | 7 | 4 | 2 | 3 |

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಅನುಕಂಪದ ಅಲೆಯೋ, ಅನುಭವಕ್ಕೆ ಮಣೆಯೊ?

ಬೆಲೆ ಏರಿಕೆಯ ಬಿಸಿ ಮತ್ತು ಅನುಕಂಪದ ಅಲೆ ಇವೆರಡರ ನಡುವಿನ ಸ್ಪರ್ಧೆಯ ಕಣದಂತೆ ಗೋಚರಿಸುತ್ತಿರುವುದರಿಂದಾಗಿ ಬೆಳಗಾವಿ ಲೋಕಸಭಾ ಉಪ ಚುನಾವಣೆ ರಂಗು ಪಡೆದುಕೊಂಡಿದೆ. ಬಿಜೆಪಿ ಮತ್ತು ಕಾಂಗ್ರೆಸ್‌ನ ಪ್ರಬಲ ಅಭ್ಯರ್ಥಿಗಳು ತಮ್ಮ ಯೋಜನೆಗಳು ಮತ್ತು ಯಶಸ್ಸಿನ ನಿರೀಕ್ಷೆಗಳನ್ನು 'ಪ್ರಜಾವಾಣಿ'ಯ **ಎಂ. ಮಹೇಶ** ಅವರಿಗೆ ನೀಡಿದ ಸಂದರ್ಶನದಲ್ಲಿ ಬಿಚ್ಚಿಟ್ಟಿದ್ದಾರೆ.

## ಮಗಳ ಕೈ ಬಿಡಲಾರರು: ಮಂಗಲಾ ಅಂಗಡಿ

**• ಅಭ್ಯರ್ಥಿಯಾಗಿ ಹೇಗೆ ಸಮರ್ಥಿಸಿಕೊಳ್ಳೀರಿ?**

ಕುಟುಂಬಕ್ಕೆ ಟಿಕೆಟ್ ಸಿಗಲಿ ಎಂದು ಬಹಳ ಮಂದಿ ಬಯಸಿದ್ದರು. ಅಪ್ಪನ ಅಭಿವೃದ್ಧಿ ಕೆಲಸಗಳನ್ನು ಪರಿಗಣಿಸಲಿ ಎಂಬುದು ಮಕ್ಕಳ ವಾದವಾಗಿತ್ತು. ನಾವು ಅನಾಥರಂತಾಗಿದ್ದೇವೆ, ನೀವು ಸ್ಪರ್ಧಿಸಿ ಎಂದು ಕಾರ್ಯಕರ್ತರು ಹಾಗೂ ಬೆಂಬಲಿಗರು ಹೇಳುತ್ತಿದ್ದರು. ಅದಕ್ಕೆ ಪಕ್ಷದವರು ಅವಕಾಶ ಕೊಟ್ಟಿದ್ದಾರೆ.

**• ಟಿಕೆಟ್ ಆಕಾಂಕ್ಷಿಗಳ ಪ್ರತಿಕ್ರಿಯೆ ಹೇಗಿದೆ?**

ಆಕಾಂಕ್ಷಿಗಳಾಗಿದ್ದ ಸಂಜಯ ಪಾಟೀಲ, ಡಾ.ರವಿ ಪಾಟೀಲ ಸೇರಿದಂತೆ ಎಲ್ಲರೂ ಬೆಂಬಲಿಸುತ್ತಿದ್ದಾರೆ. 'ನಿಮಗೆ ಕೊಡಲಿಲ್ಲವೆಂದರೆ ನಮಗೆ ಕೊಡಿ ಎಂದಷ್ಟೇ ಕೇಳಿದ್ದೆವು. ನಿಮ್ಮನ್ನೇ ಪರಿಗಣಿಸಿದ್ದರಿಂದ ಖುಷಿಯಾಗಿದೆ' ಎಂದು ಮನೆಗೇ ಬಂದು ಹೇಳಿದ್ದಾರೆ. ಕಾರ್ಯಕರ್ತರು ಖುಷಿಯಾಗಿದ್ದಾರೆ. ಸಕ್ರಿಯವಾಗಿ ಪ್ರಚಾರ ಮಾಡುತ್ತಿದ್ದಾರೆ.

**• ನಿಮ್ಮನ್ನೇ ಏಕೆ ಆಯ್ಕೆ ಮಾಡಬೇಕು?**

ನನ್ನದು ಕೌಜಲಗಿ ಕುಟುಂಬ. ರಾಜಕಾರಣದ ಮನೆತನದಿಂದಲೇ ಬಂದವಳು. 20 ವರ್ಷಗಳಿಂದಲೂ ಪತಿ ಸುರೇಶ ಅಂಗಡಿ ಅವರ ಹಿಂದೆ ಇರುತ್ತಿದ್ದೆ. ಆದರೆ, ಹೊರಗಡೆ ಕಾಣಿಸಿಕೊಳ್ಳುತ್ತಿರಲಿಲ್ಲವಷ್ಟೆ. ಈಗ ಪೂರ್ಣವಾಗಿ ತೊಡಗಿಸಿಕೊಂಡಿದ್ದೇನೆ. ಅಂಗಡಿ ಅವರು ರೈಲ್ವೆ ಯೋಜನೆಗಳನ್ನು ತಂದಿದ್ದಾರೆ. ಅವುಗಳನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಕೇಂದ್ರ ಹಾಗೂ ರಾಜ್ಯದಲ್ಲೂ ನಮ್ಮದೇ ಪಕ್ಷವಿದೆ. ಹೆಚ್ಚಿನ ಅನುದಾನ ತರಬಹುದಾಗಿದೆ.

**• ಅನುಕಂಪದ ಅಲೆ ಗೆಲುವಿನ ಮೇಲೆ ಪರಿಣಾಮ ಬೀರಲಿದೆಯೇ?**

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3d3F7AS

ಸತೀಶ ಜಾರಕಿಹೊಳಿ ಕಾಂಗ್ರೆಸ್ಸಿನ ಅಭ್ಯರ್ಥಿ ಆಗಿದ್ದಾರೆ. ಅವರೂ ಗೋಕಾಕಿನವರು, ನಾನೂ. ನಾಲ್ಕು ಬಾರಿಯೂ ಸುರೇಶ ಅಂಗಡಿ ಅವರನ್ನು ಗೋಕಾಕದ ಅಳಿಯ ಎಂದು ಆಯ್ಕೆ ಮಾಡಿದ್ದರು. ಈ ಸಲ ಮಗಳನ್ನು ಗೆಲ್ಲಿಸುತ್ತಾರೆ ಎಂಬ ನಂಬಿಕೆ ಇದೆ.

**• ಬೆಲೆ ಏರಿಕೆಯು ಚುನಾವಣೆಯ ಪ್ರಮುಖ ಅಸ್ತ್ರವಾಗಲಿದೆಯೇ?**

ಉಪ ಚುನಾವಣೆಯಲ್ಲಿ ಜನರು ಅದ್ಯಾವುದಕ್ಕೂ ಗಮನ ಕೊಡುವುದಿಲ್ಲ. ಆ ಬಗ್ಗೆ ಏನೂ ಕೇಳಿಲ್ಲ.

**• ಸಿ.ಡಿ. ಪ್ರಕರಣ ಪರಿಣಾಮ ಬೀರುತ್ತದೆಯೇ?**

ಸಿ.ಡಿ. ಪ್ರಕರಣದಿಂದ ಯಾವ ಪರಿಣಾಮವೂ ಆಗುವುದಿಲ್ಲ. ಗೋಕಾಕ ಮತ್ತು ಅರಭಾವಿ ಶಾಸಕರಾದ ರಮೇಶ ಜಾರಕಿಹೊಳಿ ಹಾಗೂ ಬಾಲಚಂದ್ರ ಜಾರಕಿಹೊಳಿ ನಮ್ಮ ಪಕ್ಷದಲ್ಲೇ ಇದ್ದಾರೆ. ಅವರ ಸಹೋದರ ಲಖನ್ ಕೂಡ ಬೆಂಬಲಿಸುವುದಾಗಿ ಹೇಳಿದ್ದಾರೆ. ಪಕ್ಷದ ನಾಯಕರೂ ಅವರೊಂದಿಗೆ ಚರ್ಚಿಸಿದ್ದಾರೆ.

**• ಗೆದ್ದರೆ ಯೋಜನೆಗಳೇನು?**

ಅಭಿವೃದ್ಧಿಗಾಗಿ ಅಂಗಡಿ ಅವರ ಕನಸುಗಳಿವೆ. ಅವನ್ನು ನನಸಾಗಿಸಬೇಕಿದೆ. ನಗರದಲ್ಲಿ ವರ್ತುಲ ರಸ್ತೆ ನಿರ್ಮಿಸಬೇಕಾಗಿದೆ. ಕೋಲ್ಡ್ ಸ್ಟೋರೇಜ್ ನಿರ್ಮಾಣ, ಇತರ ಯೋಜನೆಗಳಿದ್ದವು. ಜನರ ಆಶೋತ್ತರ ಈಡೇರಿಸಲು ಪ್ರಯತ್ನಿಸುತ್ತೇನೆ.

## ಸೇವೆಯೇ ಶ್ರೀರಕ್ಷೆ: ಸತೀಶ ಜಾರಕಿಹೊಳಿ

**• ಅಭ್ಯರ್ಥಿಯಾಗಿ ಹೇಗೆ ಸಮರ್ಥಿಸಿಕೊಳ್ಳೀರಿ?**

ಸಂಘಟನೆ ಮಾಡುವವರು, ಈ ಭಾಗದಲ್ಲಿ ಪರಿಚಯ ಇರುವವರು ಬೇಕಾಗಿತ್ತು. ಮುಂಚಿನಿಂದಲೂ ಕೆಲಸ ಮಾಡುವವರಿದ್ದರೆ ಹೆಚ್ಚು ಅನುಕೂಲವಾಗುತ್ತದೆ. ಶ್ರಮದ ಅಗತ್ಯವಿರುವುದಿಲ್ಲ ಎಂದು ಪಕ್ಷ ನನ್ನನ್ನು ಆಯ್ಕೆ ಮಾಡಿದೆ.

**• ಬೆಂಬಲಿಗರ ಪ್ರತಿಕ್ರಿಯೆ ಹೇಗಿದೆ?**

ಎರಡು ತಿಂಗಳ ಹಿಂದೆ ನನಗೂ ಮನಸ್ಸಿರಲಿಲ್ಲ. ಪಕ್ಷ ಸಂಘಟನೆಗೆ ಹಾಗೂ ಮುಂದೆ ಒಳಿತಾಗುತ್ತದೆ ಎಂದು ಒಪ್ಪಿದೆ. ಟಿಕೆಟ್ ಘೋಷಣೆ ನಂತರ ಬಹಳ ಬೆಳವಣಿಗೆ ಆದವು. ಎಲ್ಲರೂ ತಾವಾಗಿಯೇ ನಿಮ್ಮ ಪರ ಕಾರ್ಯನಿರ್ವಹಿಸುತ್ತೇವೆ ಎನ್ನುತ್ತಿದ್ದಾರೆ. ಸಂಪೂರ್ಣ ಮನಸ್ಸಿನಿಂದಲೇ ಸ್ಪರ್ಧಿಸಿದ್ದೇನೆ. ನಿರೀಕ್ಷೆಗೂ ಮೀರಿ ಬೆಂಬಲ ಸಿಗುತ್ತಿದೆ. ಇದು ಸಂಪೂರ್ಣ ಕಾರ್ಯಕರ್ತರ ಚುನಾವಣೆ.

**• ನಿಮ್ಮನ್ನೇ ಏಕೆ ಆಯ್ಕೆ ಮಾಡಬೇಕು?**

25 ವರ್ಷಗಳಿಂದ ಸಮಾಜ ಸೇವಾ ಕ್ಷೇತ್ರದಲ್ಲಿದ್ದೇನೆ. ಶಿಕ್ಷಣ, ಕೈಗಾರಿಕೆ ಸೇರಿದಂತೆ ಎಲ್ಲ ರಂಗದಲ್ಲೂ ಕೆಲಸ ಮಾಡಿದ್ದೇನೆ. ವಿಧಾನ ಪರಿಷತ್ ಸದಸ್ಯ, ಮೂರು ಬಾರಿ ಶಾಸಕ ಹಾಗೂ ಮಂತ್ರಿಯಾಗಿ ಜಿಲ್ಲೆಗೆ ಸೇವೆ ಮಾಡಿದ್ದೇನೆ. ಹೆಚ್ಚಿನ ಪ್ರಮಾಣದ ಸೇವೆಗೆ ಅವಕಾಶ ಕೇಳುತ್ತಿದ್ದೇನೆ. ವೈಯಕ್ತಿಕ ವರ್ಚಸ್ಸು ಕೂಡ ನೆರವಾಗಲಿದೆ.

**• ಅನುಕಂಪದ ಅಲೆ ಪರಿಣಾಮ ಬೀರಲಿದೆಯೇ?**

ಅನುಕಂಪದ ಅಲೆ ಯಾವ ಪರಿಣಾಮವೂ ಬೀರುವುದಿಲ್ಲ. ನನಗಿಲ್ಲಿ ಎಲ್ಲರೊಂದಿಗೆ ಉತ್ತಮ ಸ್ನೇಹವಿದೆ. ಎಲ್ಲ ಮತದವರೂ ನನ್ನೊಟ್ಟಿಗೆ ಸೌಹಾರ್ದದಿಂದ ಇದ್ದಾರೆ. ಕ್ಷೇತ್ರವು ಹಿಂದೆ ಕಾಂಗ್ರೆಸ್‌ನ ಭದ್ರಕೋಟೆ ಆಗಿತ್ತು.



ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3mIMile

ಮತ್ತೆ ವಶಪಡಿಸಿಕೊಳ್ಳಲಿದ್ದೇವೆ.

**• ಬೆಲೆ ಏರಿಕೆಯು ಚುನಾವಣೆಯ ಪ್ರಮುಖ ಅಸ್ತ್ರವಾಗಲಿದೆಯೇ?**

ತೈಲ, ಅಡುಗೆ ಅನಿಲ ಸಿಲಿಂಡರ್ ಮತ್ತು ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ನಮಗೆ ಅನುಕೂಲ ಆಗಲಿದೆ. ಪ್ರಧಾನಿ ನರೇಂದ್ರ ಮೋದಿ ನೀಡುತ್ತಿರುವ ಸುಳ್ಳು ಭರವಸೆಗಳೇ ಪ್ರಮುಖ ಅಸ್ತ್ರಗಳಾಗಿವೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನೀಡಿದ್ದ ಜನಪರ ಕಾರ್ಯಕ್ರಮಗಳು ಶ್ರೀರಕ್ಷೆಯಾಗಿವೆ.

**• ಸಿ.ಡಿ. ಪ್ರಕರಣ ಪರಿಣಾಮ ಬೀರುತ್ತದೆಯೇ**

ಇಲ್ಲ. ಸಿ.ಡಿ. ಪ್ರಕರಣಕ್ಕೂ ಈ ಚುನಾವಣೆಗೂ ಸಂಬಂಧವಿಲ್ಲ. ಲಖನ್ ಬೆಂಬಲ ಅವರ ವೈಯಕ್ತಿಕ ವಿಚಾರ. ಪಕ್ಷ ಗಟ್ಟಿಯಾಗಿದೆ. ಗೋಕಾಕ ಮತ್ತು ಅರಭಾವಿಯಲ್ಲಿ ಜಾರಕಿಹೊಳಿ ಕುಟುಂಬದ ಅಭಿಮಾನಿಗಳು ಬಹಳಷ್ಟಿದ್ದಾರೆ.

**• ಗೆದ್ದರೆ ಯೋಜನೆಗಳೇನು?**

ಹಳ್ಳಿ, ತಾಲ್ಲೂಕು ಮಟ್ಟದಲ್ಲಿ ಉದ್ಯೋಗ ಸೃಷ್ಟಿಗೆ ಕೈಗಾರಿಕೆಗಳನ್ನು ಸ್ಥಾಪಿಸುವುದು. ನೀರಾವರಿಗೆ ಆದ್ಯತೆ ಕೊಡುವುದು. ಐಟಿ–ಬಿಟಿ ಹಬ್ ಮಾಡಿ ಯುವಕರಿಗೆ ನೌಕರಿ ಸಿಗುವಂತೆ ಮಾಡುವ ಕನಸಿದೆ.

# ಹಿಂಸೆಯ ಬಳಿಕ ರಾಜಕೀಯ ಮೇಲಾಟ

## ದಾಳಿಗೆ ಮಮತಾ ಕುಮ್ಮಕ್ಕು: ಮೋದಿ ಆರೋಪ

ಕೋಲ್ಕತ್ತ: ಸೀತಾಲಕುಚಿ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಕೇಂದ್ರೀಯ ಪಡೆಯ ಸಿಬ್ಬಂದಿ ಗೋಲಿಬಾರ್ ನಡೆಸಿ ನಾಲ್ವರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಹರಿಹಾಯ್ದಿದ್ದಾರೆ. ಕೇಂದ್ರೀಯ ಪಡೆಗಳ ಮೇಲೆ ದಾಳಿ ನಡೆಸುವಂತೆ ಜನರಿಗೆ ಮಮತಾ ಅವರು ಪ್ರಚೋದನೆ ನೀಡಿದ್ದಾರೆ. ಹಿಂಸಾಚಾರವು ಕಳೆದ ಹತ್ತು ವರ್ಷಗಳ ದುರಾಡಳಿತದಿಂದ ಅವರನ್ನು ರಕ್ಷಿಸದು ಎಂದೂ ಮೋದಿ ಹೇಳಿದ್ದಾರೆ.

'ಕೇಂದ್ರೀಯ ಪಡೆಗಳ ಸಿಬ್ಬಂದಿಗೆ ಮುತ್ತಿಗೆ ಹಾಕುವುದು ಮತ್ತು ಅವರ ಮೇಲೆ ಹಲ್ಲೆ ನಡೆಸುವುದು ಹೇಗೆ ಎಂದು ದೀದಿ (ಮಮತಾ)

> **ಸೋಲು ಸನ್ನಿಹಿತ ಎಂಬುದನ್ನು ಮನಗಂಡ ದೀದಿ ಕೀಳು ಮಟ್ಟಕ್ಕೆ ಇಳಿದಿದ್ದಾರೆ. ಬಂಗಾಳದಲ್ಲಿ ಏನು ಬೇಕಿದ್ದರೂ ಮಾಡಬಹುದು ಎಂಬುದಕ್ಕೆ ಅವಕಾಶ ಕೊಡುವುದಿಲ್ಲ**
> **ನರೇಂದ್ರ ಮೋದಿ,** ಪ್ರಧಾನಿ

ಅವರು ತಮ್ಮ ಚುನಾವಣಾ ರ್‍ಯಾಲಿಗಳಲ್ಲಿ ತರಬೇತಿ ನೀಡುತ್ತಿದ್ದಾರೆ. ಚುನಾವಣಾ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡುವ ವಿಧಾನವು ನಿಮ್ಮ ರಕ್ಷಣೆಗೆ ಬಾರದು' ಎಂದು ಸಿಲಿಗುರಿಯಲ್ಲಿ ನಡೆಸಿದ ಪ್ರಚಾರ ಭಾಷಣದಲ್ಲಿ ಮೋದಿ ಹೇಳಿದ್ದಾರೆ.

'ಭಯೋತ್ಪಾದಕರು ಮತ್ತು ನಕ್ಸಲರ ಬಗ್ಗೆ ಭದ್ರತಾ ಪಡೆಗಳಿಗೆ ಭಯ ಇಲ್ಲ. ಹಾಗಿರುವಾಗ ನಿಮ್ಮ ಬೆದರಿಕೆ ಮತ್ತು ಗೂಂಡಾಗಳಿಗೆ ಅವರು ಹೆದರುತ್ತಾರೆ ಎಂದು ನೀವು ಹೇಗೆ ಭಾವಿಸಿದಿರಿ' ಎಂದು ಪ್ರಧಾನಿ ಪ್ರಶ್ನಿಸಿದ್ದಾರೆ.

'ದೀದಿ ಅವರೇ, ನೀವು ಬಂಗಾಳದ ಭಾಗ್ಯ ವಿಧಾತ ಅಲ್ಲ. ಬಂಗಾಳವು ಯಾರದ್ದೇ ಆಸ್ತಿಯೂ ಅಲ್ಲ. ನೀವು ಹೋಗಬೇಕು ಎಂಬುದನ್ನು ಬಂಗಾಳದ ಜನರು ನಿರ್ಧರಿಸಿದ್ದಾರೆ. ನಿಮ್ಮನ್ನು ಹೊರಗೆ ಅಟ್ಟಲು ಅವರು ತೀರ್ಮಾನಿಸಿದ್ದಾರೆ. ನೀವು ಮತ್ತು ನಿಮ್ಮ ಇಡೀ ಗ್ಯಾಂಗ್ ಅನ್ನು ಹೊರಗೆ ಹಾಕಲಾಗುವುದು' ಎಂದು ಮೋದಿ ಹೇಳಿದ್ದಾರೆ.

ಕೂಚ್ ಬಿಹಾರ್‌ನಲ್ಲಿ ನಡೆದ ಘಟನೆಯ ಹಿಂದೆ ಇರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾ ಆಯೋಗವನ್ನು ಅವರು ಒತ್ತಾಯಿಸಿದರು. ಟಿಎಂಸಿ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಸುಲಿಗೆ ಮುಕ್ತ ಬಂಗಾಳ ಸೃಷ್ಟಿಗೆ ಸಮಯ ಬಂದಿದೆ ಎಂದರು.

'ಕೂಚ್‌ಬಿಹಾರ್‌ನಲ್ಲಿ ಆಗಿರುವುದು ಅತ್ಯಂತ ದುರದೃಷ್ಟಕರ. ಈ ಸಾವಿಗೆ ಸಂತಾಪ ವ್ಯಕ್ತಪಡಿಸುತ್ತೇನೆ. ಆ ಕುಟುಂಬಗಳ ಜತೆಗೆ ನನ್ನ ಪ್ರಾರ್ಥನೆ ಇದೆ. ಬಿಜೆಪಿ ಪರವಾಗಿ ವ್ಯಕ್ತವಾಗುತ್ತಿರುವ ಬೆಂಬಲ ಕಂಡು ದೀದಿ ಮತ್ತು ಅವರ ಗೂಂಡಾಗಳು ತತ್ತರಿಸಿದ್ದಾರೆ' ಎಂದರು.

ನಾದಿಯಾ ಜಿಲ್ಲೆಯ ಕೃಷ್ಣನಗರದಲ್ಲಿ ಮಾತನಾಡಿದ ಮೋದಿ, ಸಮಸ್ಯೆ ಇರುವುದು ಕೇಂದ್ರೀಯ ಪಡೆಗಳಲ್ಲಿ ಅಲ್ಲ, ಬದಲಿಗೆ ಮಮತಾ ಅವರ ಹಿಂಸೆ ಮತ್ತು ಅಕ್ರಮ ರಾಜಕೀಯದಲ್ಲಿ ಎಂದರು.



## ಗೋಲಿಬಾರ್‌ಗೆ ಶಾ ಪಿತೂರಿ: ಮಮತಾ ತಿರುಗೇಟು

ಬದುರಿಯ/ಹಿಂಗಲ್‌ಗಂಜ್ (ಪಿಟಿಐ): 'ಜನಾದೇಶ ಸಿಗದು ಎಂಬುದು ಬಿಜೆಪಿಗೆ ಗೊತ್ತಾಗಿದೆ. ಹಾಗಾಗಿ, ಆ ಪಕ್ಷವು ಜನರನ್ನು ಕೊಲ್ಲುವ ಪಿತೂರಿ ನಡೆಸಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಈ ಷಡ್ಯಂತ್ರ ಮಾಡಿದ್ದಾರೆ. ಹಾಗಾಗಿ, ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

> **ಈ ನಿಲುವಿಗೆ (ಸ್ವರಕ್ಷಣೆ) ಬಂದದ್ದು ಹೇಗೆ? ಅದರ ದೃಶ್ಯಗಳು ಇವೆಯೇ? ಜನರನ್ನು ಕೊಂದ ಬಳಿಕ ಅದನ್ನು ಅವರು ಸಮರ್ಥಿಸಿಕೊಳ್ಳುತ್ತಲೂ ಇದ್ದಾರೆ**
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸೀತಾಲಕುಚಿ ಘಟನೆಗೆ ಸಂಬಂಧಿಸಿ ಜನರು ಶಾಂತಿ ಕಾಯ್ದುಕೊಳ್ಳಬೇಕು ಎಂದು ಅವರು ಕರೆ ಕೊಟ್ಟಿದ್ದಾರೆ.

ಕೇಂದ್ರೀಯ ಪಡೆಗಳು ಹೀಗೆ ವರ್ತಿಸಬಹುದು ಎಂಬ ಭೀತಿ ತಮ್ಮಲ್ಲಿ ಮೊದಲೇ ಇತ್ತು. ಆದರೆ, ಜನರು ಶಾಂತಿಯುತವಾಗಿ ಮತದಾನ ಮಾಡಬೇಕು. ಅವರನ್ನು ಸೋಲಿಸುವ ಮೂಲಕ ಈ ಸಾವಿಗೆ ಪ್ರತೀಕಾರ ತೀರಿಸಿ ಎಂದು ಮಮತಾ ಹೇಳಿದ್ದಾರೆ.

ಮತದಾನಕ್ಕಾಗಿ ಸರದಿಯಲ್ಲಿ ನಿಂತಿದ್ದ ಜನರ ಮೇಲೆ ಕೇಂದ್ರೀಯ ಪಡೆಯ ಸಿಬ್ಬಂದಿ ಗುಂಡು ಹಾರಿಸಿದ್ದಾರೆ ಎಂದೂ ಅವರು ಆಪಾದಿಸಿದ್ದಾರೆ. ಭಾನುವಾರ ಮಧ್ಯಾಹ್ನ 2ರಿಂದ 4 ಗಂಟೆ ವರೆಗೆ ರಾಜ್ಯದಾದ್ಯಂತ ಶಾಂತಿಯುತ ಪ್ರತಿಭಟನೆ ನಡೆಸಲಾಗುವುದು. ಪಕ್ಷದ ಕಾರ್ಯಕರ್ತರು ಕಪ್ಪು ಪಟ್ಟಿ ಧರಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಮೂರು ವರ್ಷ ಹಿಂದೆ ನಡೆದ ಪಂಚಾಯಿತಿ ಚುನಾವಣೆಗಿಂತ ಈ ಬಾರಿ ಸಾವಿನ ಸಂಖ್ಯೆ ಹೆಚ್ಚಾಗಿದೆ. ಚುನಾವಣೆ ಘೋಷಣೆಯಾದಾಗಿನಿಂದ ಕೊಲೆಯಾದವರ ಲೆಕ್ಕ ಹಾಕಿದರೆ 17–18 ಮಂದಿ ಜೀವ ಕಳೆದುಕೊಂಡಿದ್ದಾರೆ. ಅವರಲ್ಲಿ 12 ಮಂದಿಯಾದರೂ ಟಿಎಂಸಿಯವರು ಇದ್ದಾರೆ ಎಂದು ಸೀತಾಲಕುಚಿ ಅವರು ಹೇಳಿದ್ದಾರೆ.

'ಸೀತಾಲಕುಚಿಯಲ್ಲಿನ ಘಟನೆಗೆ ಚುನಾವಣಾ ಆಯೋಗ ಕೂಡ ವಿವರಣೆ ನೀಡಬೇಕು. ಏಕೆಂದರೆ, ಆಡಳಿತದ ಹೊಣೆಯು ಈಗ ನಮ್ಮ ಕೈಯಲ್ಲಿ ಇಲ್ಲ. ಅದನ್ನು ಚುನಾವಣಾ ಆಯೋಗವು ನೋಡಿಕೊಳ್ಳುತ್ತಿದೆ' ಎಂದಿದ್ದಾರೆ.

'ಸ್ವರಕ್ಷಣೆ' ವರದಿಗೆ ಆಕ್ಷೇಪ: ಸ್ವರಕ್ಷಣೆಗಾಗಿ ಸಿಐಎಸ್‌ಎಫ್ ಸಿಬ್ಬಂದಿ ಗುಂಡು ಹಾರಿಸಿದ್ದಾರೆ ಎಂಬ ವರದಿಗೆ ಮಮತಾ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಘಟನೆಯ ಬಗ್ಗೆ ಸಿಐಡಿ ತನಿಖೆ ನಡೆಸಲಾಗುವುದು ಎಂದಿದ್ದಾರೆ. ಕೇಂದ್ರೀಯ ಪಡೆಗಳ ಹೇಳಿಕೆಯನ್ನು ಸಮರ್ಥಿಸುವ ವಿಡಿಯೊ ದೃಶ್ಯಗಳಾಗಲಿ, ಬೇರೆ ಸಾಕ್ಷ್ಯಗಳಾಗಲಿ ಇಲ್ಲ. ಹಾಗಿರುವಾಗ ಸ್ವರಕ್ಷಣೆಗಾಗಿ ಗುಂಡು ಹಾರಿಸಿದರು ಎಂಬುದನ್ನು ನಂಬುವುದು ಹೇಗೆ ಎಂದು ಅವರು ಪ್ರಶ್ನಿಸಿದ್ದಾರೆ.

ಲಾಕೆಟ್ ಚಟರ್ಜಿ ಅವರ ಕಾರನ್ನು ತಡೆಯಲು ಸ್ಥಳೀಯರು ಯತ್ನಿಸಿದರು —ಪಿಟಿಐ ಚಿತ್ರ

## ಮತಗಟ್ಟೆಯಲ್ಲೇ ಯುವಕನ ಹತ್ಯೆ

ಕೂಚ್‌ಬಿಹಾರ್ (ಪಿಟಿಐ): ಸೀತಾಲಕುಚಿ ಕ್ಷೇತ್ರದ 85ನೇ ಸಂಖ್ಯೆಯ ಮತಗಟ್ಟೆಯಲ್ಲಿ ಆನಂದ್ ಬರ್ಮನ್ ಎಂಬ ಯುವಕನ ಹತ್ಯೆಯಾಗಿದೆ. ಯುವಕನನ್ನು ಮತಗಟ್ಟೆಯಿಂದ ಹೊರಗೆಳೆದು ಗುಂಡು ಹಾರಿಸಿ ಕೊಲ್ಲಲಾಗಿದೆ. ಮತದಾನ ಪ್ರಕ್ರಿಯೆ ಪ್ರಗತಿಯಲ್ಲಿದ್ದಾಗಲೇ ಈ ಹತ್ಯೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ಹತ್ಯೆಯ ಹಿಂದೆ ಬಿಜೆಪಿ ಇದೆ ಎಂದು ಟಿಎಂಸಿ ಆರೋಪಿಸಿದೆ. ಮೃತ ವ್ಯಕ್ತಿಯು ತಮ್ಮ ಪಕ್ಷದ ಮತಗಟ್ಟೆ ಏಜೆಂಟ್. ಟಿಎಂಸಿ ಆತನನ್ನು ಹತ್ಯೆ ಮಾಡಿದೆ ಎಂದು ಬಿಜೆಪಿ ಆಪಾದಿಸಿದೆ.

ಹತ್ಯೆಯ ಬಳಿಕ, ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಸಂಘರ್ಷವೂ ನಡೆಯಿತು. ಮತಗಟ್ಟೆಯ ಹೊರಗೆ ಬಾಂಬ್ ಎಸೆಯಲಾಗಿದೆ. ಭದ್ರತೆಗೆ ನಿಯೋಜಿಸಲಾಗಿರುವ ಕೇಂದ್ರೀಯ ಪಡೆಯು ಲಾಠಿ ಪ್ರಹಾರ ನಡೆಸಿ ಪರಿಸ್ಥಿತಿಯನ್ನು ನಿಯಂತ್ರಿಸಿತು.

### ಹಲವೆಡೆ ಹಿಂಸೆ

- ನಕಲಿ ಮತದಾನ ತಡೆಯಲು ಯತ್ನಿಸಿದ ಬಿಜೆಪಿ ಅಭ್ಯರ್ಥಿ ಲಾಕೆಟ್ ಚಟರ್ಜಿ ಅವರ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ
- ಜಾಧವಪುರದ ಸಿಪಿಎಂ ಅಭ್ಯರ್ಥಿ ಸುಜನ್ ಚಕ್ರವರ್ತಿ ಅವರ ಮತಗಟ್ಟೆ ಏಜೆಂಟ್, ನಕಲಿ ಮತದಾನಕ್ಕೆ ಆಕ್ಷೇಪ ವ್ಯಕ್ತಪಡಿಸಿದಾಗ ಅವರ ಕಣ್ಣಿಗೆ ಖಾರದ ಪುಡಿ ಎರಚಲಾಗಿದೆ ಎಂದು ಹೇಳಲಾಗಿದೆ
- ಭಾಂಗರ್‌ನಲ್ಲಿ ಐಎಸ್‌ಎಫ್‌ನ ಮತಗಟ್ಟೆ ಏಜೆಂಟ್ ಮತಗಟ್ಟೆ ಪ್ರವೇಶಕ್ಕೆ ಟಿಎಂಸಿ ಕಾರ್ಯಕರ್ತರು ಅಡ್ಡಿಪಡಿಸಿದ್ದಾರೆ ಎಂದು ಆರೋಪಿಸಲಾಗಿದೆ. ಬಳಿಕ ಅಲ್ಲಿ ಟಿಎಂಸಿ ಮತ್ತು ಐಎಸ್‌ಎಫ್ ಕಾರ್ಯಕರ್ತರ ನಡುವೆ ಸಂಘರ್ಷ ನಡೆದಿದೆ

## ಬಂಗಾಳ: ಬಿ.ಕೆ. ಹರಿಪ್ರಸಾದ್‌ಗೆ ಹೆಚ್ಚುವರಿ ಹೊಣೆ



ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಕಾಂಗ್ರೆಸ್ ವೀಕ್ಷಕ ರಾಗಿ, ಚುನಾವಣಾ ಪ್ರಚಾರದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ಹಿರಿಯ ಮುಖಂಡ ಬಿ.ಕೆ ಹರಿಪ್ರಸಾದ್ ಅವರಿಗೆ ರಾಜ್ಯ ಕಾಂಗ್ರೆಸ್ ಘಟಕದ ಉಸ್ತುವಾರಿ ಹೊಣೆಯನ್ನೂ ನೀಡಲಾಗಿದೆ.

ಪಶ್ಚಿಮ ಬಂಗಾಳದ ಕಾಂಗ್ರೆಸ್ ಉಸ್ತುವಾರಿ ನಾಯಕ ಜಿತಿನ್ ಪ್ರಸಾದ ಅವರಿಗೆ ಕೋವಿಡ್ ತಗುಲಿರುವ ಕಾರಣ, ಹರಿಪ್ರಸಾದ್ ಅವರಿಗೆ ಹೆಚ್ಚುವರಿಯಾಗಿ ಈ ಜವಾಬ್ದಾರಿ ನೀಡಲಾಗಿದೆ.

ತಾವು ಈಗಾಗಲೇ ಹಿರಿಯ ವೀಕ್ಷಕರಾಗಿ ಪ್ರಚಾರ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದು, ಚುನಾವಣೆ ಸಂದರ್ಭದಲ್ಲಿ ಜಿತಿನ್ ಅವರು ಹೊತ್ತುಕೊಂಡಿದ್ದ ಹೆಚ್ಚುವರಿ ಜವಾಬ್ದಾರಿಗಳನ್ನು ತಾತ್ಕಾಲಿಕವಾಗಿ ನಿರ್ವಹಿಸಲಿದ್ದೇನೆ ಎಂದು ಹರಿಪ್ರಸಾದ್ ತಿಳಿಸಿದ್ದಾರೆ.

'ನಾವು ಎಡಪಕ್ಷಗಳು ಮತ್ತು ಐಎಸ್‌ಎಫ್ ಜತೆ ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಂಡಿದ್ದು, ಸರ್ಕಾರ ರಚಿಸುವ ಸ್ಥಿತಿಯಲ್ಲಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಚುನಾವಣೆ ಬಳಿಕ ಅತಂತ್ರ ವಿಧಾನಸಭೆ ಸೃಷ್ಟಿಯಾದರೆ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತೀರಾ' ಎಂಬ ಪ್ರಶ್ನೆ ಉತ್ತರಿಸಿದ ಅವರು, ಈ ಬಗ್ಗೆ ಪಕ್ಷದ ಅಧ್ಯಕ್ಷರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

ಹರಿಪ್ರಸಾದ್ ಮತ್ತು ಆಲಂಗಿರ್ ಆಲಂ ಅವರನ್ನು ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಹಿರಿಯ ವೀಕ್ಷಕರನ್ನಾಗಿ ಪಕ್ಷವು ಜನವರಿಯಲ್ಲಿ ನೇಮಿಸಿತ್ತು. ಪಂಜಾಬ್‌ನ ಸಚಿವ ವಿಜಯ್ ಇಂದರ್ ಸಿಂಗ್ಲಾ ಅವರೂ ಹಿರಿಯ ವೀಕ್ಷಕರಾಗಿದ್ದಾರೆ.

### ಪ್ರಶಾಂತ್ ಕಿಶೋರ್ ಧ್ವನಿಮುದ್ರಿಕೆ ಬಹಿರಂಗಪಡಿಸಿದ ಬಿಜೆಪಿ

## 'ಬಂಗಾಳದಲ್ಲಿ ದೀದಿಯಷ್ಟೇ ಮೋದಿ ಜನಪ್ರಿಯ'

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ ಪಕ್ಷದ ಚುನಾವಣಾ ತಂತ್ರಜ್ಞ ಪ್ರಶಾಂತ್ ಕಿಶೋರ್ ಅವರು ಮಾತನಾಡಿದ್ದಾರೆ ಎನ್ನಲಾದ ಧ್ವನಿಮುದ್ರಿಕೆಯು (ಆಡಿಯೊ ಕ್ಲಿಪ್) ಶನಿವಾರ ಸಾಕಷ್ಟು ವಿವಾದ ಹುಟ್ಟುಹಾಕಿದೆ. 'ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಜನಪ್ರಿಯತೆ ಇದೆ' ಎಂಬುದಾಗಿ ಕಿಶೋರ್ ಹೇಳಿದ್ದಾರೆ ಎನ್ನಲಾಗಿದೆ.

ಕೆಲವು ಪತ್ರಕರ್ತರೊಂದಿಗೆ ಕಿಶೋರ್ ಅವರು 'ಕ್ಲಬ್ ಹೌಸ್' ಆ್ಯಪ್‌ನಲ್ಲಿ ನಡೆಸಿದ್ದಾರೆ ಎನ್ನಲಾದ ಸಂವಾದದ ಆಯ್ದ ಭಾಗಗಳನ್ನು ಹಂಚಿಕೊಂಡಿರುವ ಬಿಜೆಪಿಯ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು 'ಟಿಎಂಸಿ ಚುನಾವಣೆ ಕತೆ ಮುಗಿಯಿತು' ಎಂದಿದ್ದಾರೆ.

ಪ್ರಶಾಂತ್ ಕಿಶೋರ್

'ಕ್ಲಬ್‌ಹೌಸ್‌ನಲ್ಲಿ ನಾನು ನಡೆಸಿದ್ದೇನೆ ಎನ್ನಲಾದ ಸಂವಾದದ ಪೂರ್ಣಪಾಠವನ್ನು ಬಹಿರಂಗಪಡಿಸಿ' ಎಂದು ಸವಾಲು ಹಾಕಿರುವ ಪ್ರಶಾಂತ್ ಕಿಶೋರ್, ಈ ಚುನಾವಣೆಯಲ್ಲಿ ಬಿಜೆಪಿ 100 ಸೀಟುಗಳನ್ನೂ ಗೆಲ್ಲುವುದಿಲ್ಲ ಎಂದು ಹೇಳಿದ್ದಾರೆ.

'ಬಂಗಾಳದಲ್ಲಿ ಟಿಎಂಸಿಗೆ ಆಡಳಿತ ವಿರೋಧಿ ಅಲೆ ಇದೆ. ಟಿಎಂಸಿ ಆಂತರಿಕ ಸಮೀಕ್ಷೆಯಲ್ಲಿ ಬಿಜೆಪಿಗೆ ಗೆಲುವು ಸಿಕ್ಕಿದೆ. ಪರಿಶಿಷ್ಟ ಜಾತಿ ಹಾಗೂ ಮಥುಆ ಸಮುದಾಯದವರು ಬಿಜೆಪಿಗೆ ಮತಹಾಕುತ್ತಿದ್ದಾರೆ ಎಂದು ಮಮತಾ ಅವರ ಚುನಾವಣಾ ತಂತ್ರಜ್ಞರೇ ಒಪ್ಪಿಕೊಂಡಿದ್ದಾರೆ' ಎಂದು ಧ್ವನಿಮುದ್ರಿಕೆ ಬಿಡುಗಡೆ ಬಳಿಕ ಮಾಳವೀಯ ಹೇಳಿದರು.

'ಬಿಜೆಪಿಯು ತನ್ನ ನಾಯಕರ ಮಾತುಗಳಿಗಿಂತ ನನ್ನ ಮಾತಿಗೇ ಹೆಚ್ಚು ಮಹತ್ವ ಕೊಡುತ್ತಿರುವುದು ಅಚ್ಚರಿ. ಸಂವಹನದ ಆಯ್ದ ಭಾಗ ಪ್ರಕಟಿಸಿ ಖುಷಿಪಡುವ ಬದಲು ಸಂಪೂರ್ಣ ಆಡಿಯೊವನ್ನು ಬಿಡುಗಡೆ ಮಾಡುವ ಛಾತಿ ತೋರಿಸಲಿ' ಎಂದು ಕಿಶೋರ್ ಹೇಳಿದ್ದಾರೆ.

## ನೀತಿ ಸಂಹಿತೆ ಉಲ್ಲಂಘಿಸಿಲ್ಲ ಆಯೋಗಕ್ಕೆ ಮಮತಾ ಉತ್ತರ

ನವದೆಹಲಿ (ಪಿಟಿಐ): ಕೇಂದ್ರೀಯ ಪಡೆಗಳ ವಿರುದ್ಧ ತಾವು ನೀಡಿರುವ ಹೇಳಿಕೆಯನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಮರ್ಥಿಸಿಕೊಂಡಿದ್ದಾರೆ. ಕೇಂದ್ರದ ಸಶಸ್ತ್ರ ಪೊಲೀಸ್ ಪಡೆಗಳ ಬಗ್ಗೆ ಅಪಾರ ಗೌರವ ಇದೆ. ಆದರೆ, ಈಗ ಅವುಗಳ ಬಗ್ಗೆ ಗಂಭೀರ ಆರೋಪಗಳಿವೆ. ನಿರ್ದಿಷ್ಟ ಪಕ್ಷವೊಂದರ ಪರವಾಗಿ ಈ ಪಡೆಗಳು ಕೆಲಸ ಮಾಡುತ್ತಿವೆ. ಮತಗಟ್ಟೆಗೆ ಬಾರದಂತೆ ಜನರನ್ನು ತಡೆಯುತ್ತಿವೆ ಎಂದು ಮಮತಾ ಅವರು ಚುನಾವಣಾ ಆಯೋಗಕ್ಕೆ ಹೇಳಿದ್ದಾರೆ.

'ಭದ್ರತಾ ಪಡೆಗಳ ಬಗ್ಗೆ ನೀಡಿರುವ ಹೇಳಿಕೆಯು ತಪ್ಪು, ಪ್ರಚೋದನಕಾರಿ ಮತ್ತು ಅತಿರೇಕದ್ದು ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿದೆ' ಎಂದು ಆಯೋಗವು ಮಮತಾ ಅವರಿಗೆ ಗುರುವಾರ ನೋಟಿಸ್ ನೀಡಿತ್ತು. ಶನಿವಾರದ ಒಳಗೆ ಪ್ರತಿಕ್ರಿಯೆ ನೀಡಲು ಸೂಚಿಸಿತ್ತು.

ಮಾದರಿ ನೀತಿ ಸಂಹಿತೆಯನ್ನಲಾಗಲಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್‌ಗಳನ್ನಾಗಲಿ ಉಲ್ಲಂಘಿಸಿಲ್ಲ. ಹಾಗಾಗಿ, ನೋಟಿಸ್ ಅನ್ನು ಹಿಂದಕ್ಕೆ ಪಡೆಯಬೇಕು ಎಂದು ಮಮತಾ ಕೋರಿದ್ದಾರೆ.

ಸಿಆರ್‌ಪಿಎಫ್‌ನ ಸಿಬ್ಬಂದಿ ಒಬ್ಬರು ರಾಮ್‌ನಗರದಲ್ಲಿ ಬಾಲಕಿಯೊಬ್ಬಳಿಗೆ ಕಿರುಕುಳ ನೀಡಿದ್ದರು. ಈ ಬಗ್ಗೆ ಆಯೋಗಕ್ಕೆ ದೂರು ಕೊಟ್ಟರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂಬುದನ್ನೂ ಮಮತಾ ಅವರು ತಮ್ಮ ಪ್ರತಿಕ್ರಿಯೆಯಲ್ಲಿ ಉಲ್ಲೇಖಿಸಿದ್ದಾರೆ.

## ಮಸ್ಕಿ ಉಪಚುನಾವಣೆ: ನೀತಿ ಸಂಹಿತೆ, ಕೋವಿಡ್ ನಿಯಮ ಉಲ್ಲಂಘನೆ–23 ಪ್ರಕರಣಗಳು ದಾಖಲು

ಮಸ್ಕಿ (ರಾಯಚೂರು ಜಿಲ್ಲೆ): ಮಸ್ಕಿ ಉಪಚುನಾವಣೆಯಲ್ಲಿ ನೀತಿ ಸಂಹಿತೆ ಉಲ್ಲಂಘನೆ ಸಂಬಂಧ 9 ಹಾಗೂ ಕೋವಿಡ್ ನಿಯಮ ಉಲ್ಲಂಘಿಸಿದ ಬಗ್ಗೆ 14 ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ಚುನಾವಣಾಧಿಕಾರಿ ರಾಜಶೇಖರ ಡಂಬಳ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಕೋವಿಡ್ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ 14 ಪ್ರಕರಣಗಳಲ್ಲಿ ₹ 17,600 ದಂಡ ವಸೂಲಿ ಮಾಡಲಾಗಿದೆ. ಹರ್ವಾಪುರ ಗ್ರಾಮದಲ್ಲಿ ಮತದಾರರಿಗೆ ಹಣ ಹಂಚಿಕೆ ಪ್ರಕರಣದಲ್ಲಿ ಬಿಜೆಪಿಯ ಅನಾಮಧೇಯ ಕಾರ್ಯಕರ್ತನ ವಿರುದ್ಧ ಕವಿತಾಳ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ' ಎಂದು ತಿಳಿಸಿದರು.

## ಕೋವಿಡ್ ಮಾರ್ಗಸೂಚಿ ಪಾಲನೆ ಕಡ್ಡಾಯ: ಆಯೋಗ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿದ್ದರೂ ರಾಜಕೀಯ ಪಕ್ಷಗಳ ತಾರಾ ಪ್ರಚಾರಕರು ಮತ್ತು ಹಿರಿಯ ಮುಖಂಡರು ಮಾಸ್ಕ್ ಧರಿಸದೆ ಚುನಾವಣಾ ಪ್ರಚಾರ ನಡೆಸುತ್ತಿರುವುದನ್ನು ಚುನಾವಣಾ ಆಯೋಗವು ಗಂಭೀರವಾಗಿ ಪರಿಗಣಿಸಿದೆ. ಕೋವಿಡ್ ತಡೆ ಮಾರ್ಗಸೂಚಿ ಪಾಲನೆ ಆಗದೇ ಇದ್ದರೆ ಪ್ರಚಾರ ಸಭೆಗಳನ್ನು ರದ್ದುಪಡಿಸಲು ಹಿಂಜರಿಯುವುದಿಲ್ಲ ಎಂದು ಆಯೋಗವು ಎಚ್ಚರಿಕೆ ನೀಡಿದೆ.

ಮಾನ್ಯತೆ ಇರುವ ಎಲ್ಲ ರಾಜಕೀಯ ಪಕ್ಷಗಳಿಗೆ ಪತ್ರ ಬರೆದು ಆಯೋಗವು ಈ ಎಚ್ಚರಿಕೆ ನೀಡಿದೆ. ವೇದಿಕೆಯಿಂದ ಭಾಷಣ ಮಾಡುವಾಗ ಅಥವಾ ಬೇರೆ ರೀತಿಯ ಪ್ರಚಾರ ಸಂದರ್ಭದಲ್ಲಿ ಮಾಸ್ಕ್ ಧರಿಸಬೇಕು, ಅಂತರ ಕಾಯ್ದುಕೊಳ್ಳಬೇಕು ಎಂದು ಪತ್ರದಲ್ಲಿ ಹೇಳಲಾಗಿದೆ.

ಪ್ರಚಾರ ಸಭೆಗಳಲ್ಲಿ ಮಾಸ್ಕ್ ಧರಿಸುವ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಆಯೋಗ ಮತ್ತು ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಗುರುವಾರ ನೋಟಿಸ್ ನೀಡಿತ್ತು.

## ಮಸ್ಕಿ ಉಪಚುನಾವಣೆ ಬಳಿಕ ಬೇಡಿಕೆ ಈಡೇರಿಕೆ: ಸಿ.ಎಂ.

ಪ್ರಜಾವಾಣಿ ವಾರ್ತೆ

ತುರ್ವಿಹಾಳ (ರಾಯಚೂರು): 'ಉಪಚುನಾವಣೆ ಬಳಿಕ ಎಲ್ಲಿಯೂ ಕಾಂಗ್ರೆಸ್ ವಿಳಾಸ ಇರುವುದಿಲ್ಲ. ಎಲ್ಲೆಡೆ ಬಿಜೆಪಿ ಪರ ಗಾಳಿ ಬೀಸುತ್ತಿದೆ. ಪ್ರತಾಪಗೌಡ ಪಾಟೀಲ ಅವರನ್ನು ಆಯ್ಕೆ ಮಾಡಿ, ಸೇವೆ ಮಾಡಲು ಅವಕಾಶ ಕೊಡಿ. ನೀರಾವರಿ ಸೇರಿ ಕ್ಷೇತ್ರದ ಬೇಡಿಕೆಗಳನ್ನು ಈಡೇರಿಸುತ್ತೇವೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದರು.

ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ತುರ್ವಿಹಾಳದಲ್ಲಿ ಶನಿವಾರ ಬಿಜೆಪಿ ಪ್ರಚಾರ ಸಭೆಯಲ್ಲಿ ಅವರು, 'ಕಾಂಗ್ರೆಸ್‌ನವರು ಜಾತಿಯ ವಿಷ ಬೀಜ ಬಿತ್ತಿ ಗೆಲ್ಲುತ್ತೇವೆ ಎನ್ನುವ ಭ್ರಮೆಯಲ್ಲಿದ್ದಾರೆ. 25 ಸಾವಿರ ಮತಗಳ ಅಂತರದಿಂದ ಪ್ರತಾಪಗೌಡ ಗೆಲ್ಲಲಿದ್ದಾರೆ. ಅನೇಕ ವರ್ಷಗಳಿಂದ ಬಿಜೆಪಿ ಅಭಿವೃದ್ಧಿ ಪರವಾಗಿ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

'ರೈತರ ಬೇಡಿಕೆಯಂತೆ ಭತ್ತ ಖರೀದಿ ಕೇಂದ್ರ ಆರಂಭಿಸಲು ಸೂಚಿಸಲಾಗಿದೆ. ₹ 1860 ದರದಲ್ಲಿ ಭತ್ತ ಖರೀದಿ ಮಾಡಲಾಗುವುದು. ₹ 2,620 ದರದಲ್ಲಿ ಜೋಳ ಖರೀದಿ ಮಾಡಲಾಗುವುದು. ಉಪಚುನಾವಣೆ ಬಳಿಕ ತುರ್ವಿಹಾಳ ಜನರ ಬೇಡಿಕೆಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲಾಗುವುದು. ಗಾರ್ಮೆಂಟ್ ಸ್ಥಾಪನೆಗೆ ಪರಿಶೀಲಿಸಲಾಗುವುದು' ಎಂದು ಯಡಿಯೂರಪ್ಪ ಭರವಸೆ ನೀಡಿದರು.

### ಹಾಲಾಪುರಲ್ಲಿ ವ್ಯಕ್ತಿ ಸಾವು: ಕೊಲೆ ಆರೋಪ

ರಾಯಚೂರು: ಜಿಲ್ಲೆಯ ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಹಾಲಾಪುರದಲ್ಲಿ ವ್ಯಕ್ತಿಯೊಬ್ಬ ಮಲಗಿದ್ದಲ್ಲೇ ಶನಿವಾರ ಸಾವನ್ನಪ್ಪಿದ್ದು, ಹಿಂದಿನ ದಿನ ಮೃತನೊಂದಿಗೆ ಜಗಳವಾಡಿದ್ದ ವ್ಯಕ್ತಿಯೇ ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ನಾಗಪ್ಪ ನಾಯಕ (48) ಮೃತ ವ್ಯಕ್ತಿ. ಮದ್ಯದ ಅಮಲಿನಲ್ಲಿ ಇರುತ್ತಿದ್ದ ನಾಗಪ್ಪ ಬೀದಿಗಳಲ್ಲಿ ವಿನಾಕಾರಣ ಜನರ ಮೇಲೆ ರೇಗಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದ ಜೊತೆ ಗುರುತಿಸಿಕೊಳ್ಳುತ್ತಿದ್ದ ವ್ಯಕ್ತಿಯು ಶುಕ್ರವಾರ ರಾತ್ರಿ ನಾಗಪ್ಪನ ಕಾಲಿಗೆ ಹೊಡೆದಿದ್ದರು ಎನ್ನಲಾಗಿದೆ. ಕವಿತಾಳ ಠಾಣೆ ಪೊಲೀಸರು ಪರಿಶೀಲಿಸಿದ್ದು, ಮರಣೋತ್ತರ ಪರೀಕ್ಷೆಗೆ ಶವ ಸಾಗಿಸಿದ್ದಾರೆ.

**ಮೌನಾಚರಣೆ:** 'ಹಾಲಾಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಕಾರ್ಯಕರ್ತನನ್ನು ಹತ್ಯೆ ಮಾಡಿದ್ದಾರೆ. ಈ ರೀತಿ ಗುಂಡಾಗಿರಿ ಮಾಡುವವರಿಗೆ ಮತ ಕೊಡಬೇಡಿ. ಬಿಜೆಪಿ ಮತಕೊಡಿ' ಎಂದು ಸುರ ಪುರ ಶಾಸಕ ರಾಜುಗೌಡ ಅವರು ತುರ್ವಿಹಾಳದಲ್ಲಿ ಆಯೋಜಿಸಿದ್ದ ಬಿಜೆಪಿ ಬಹಿರಂಗ ಪ್ರಚಾರ ಸಭೆಯಲ್ಲಿ ಹೇಳಿದರು.

ಬಹಿರಂಗ ಸಭೆಯಲ್ಲಿ, ಮೃತ ವ್ಯಕ್ತಿಯ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

## ಕಾಂಗ್ರೆಸ್ ಸೋತರೆ ರಾಜ್ಯಕ್ಕೆ ಒಳ್ಳೆಯ ಭವಿಷ್ಯ ಇಲ್ಲ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಸಮಾನತೆಯ ಹರಿಕಾರ ಬಸವಣ್ಣನವರ ನೆಲದಲ್ಲಿ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತರೆ ರಾಜ್ಯಕ್ಕೆ ಒಳ್ಳೆಯ ಭವಿಷ್ಯ ಇಲ್ಲ' ಎಂದು ಮಾಜಿ ಶಾಸಕ ಮಧು ಬಂಗಾರಪ್ಪ ಕಳವಳ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಮಾಲಾ ಬಿ. ನಾರಾಯಣರಾವ್ ಅವರ ಪರವಾಗಿ ನಗರದಲ್ಲಿ ಹಿಂದುಳಿದ ವರ್ಗಗಳ ಒಕ್ಕೂಟದಿಂದ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಬಿಜೆಪಿ ಅಂದರೆ ಅದು ಭಾರತೀಯ ಜನತಾ ಪಾರ್ಟಿ ಅನ್ನೋದು ತಪ್ಪು. ಅದೀಗ ಬಿಸಿನೆಸ್ ಜನತಾ ಪಾರ್ಟಿ ಆಗಿ ಬದಲಾಗಿದೆ. ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಹೋರಾಟಕ್ಕೆ ಹಣಿಯುತ್ತಿಲ್ಲ. ಸಾರಿಗೆ ನೌಕರರು ಮುಷ್ಕರ ನಡೆಸುತ್ತಿದ್ದರೂ ಸ್ಪಂದಿಸುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಬಂಗಾರಪ್ಪ ಅವರು ಕಾಂಗ್ರೆಸ್‌ನಿಂದಲೇ ಮುಖ್ಯಮಂತ್ರಿ ಆಗಿದ್ದರು. ಅವರು ಆರಂಭಿಸಿದ್ದ ಪಂಪ್ ಸೆಟ್‌ಗೆ ಉಚಿತ ವಿದ್ಯುತ್ ಪೂರೈಕೆ ಯೋಜನೆ, ಆಶ್ರಯ, ಅಕ್ಷಯ, ಭಾಗ್ಯಜ್ಯೋತಿ ಯೋಜನೆಗಳು ಎಲ್ಲಿವೆ? ಗ್ರಾಮೀಣ ಕೃಪಾಂಕ ನೀಡುವ ಪದ್ಧತಿ ರದ್ದಾಗಿದೆ. ಸಿದ್ದರಾಮಯ್ಯ ಅವರಲ್ಲಿ ಬಂಗಾರಪ್ಪನವರ ಗುಣ ಕಂಡಿದ್ದರಿಂದಲೇ ಈ ಪಕ್ಷಕ್ಕೆ ಬಂದಿದ್ದೇನೆ' ಎಂದರು.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 11 ಏಪ್ರಿಲ್ 2021

ಬಾಬಾಸಾಹೇಬರ ಸೂಟು 9

ಕನ್ನಡಕ್ಕೆ ಬಂದರು ಸೆಬಾಸ್ಟಿಯನ್ & ಸನ್ಸ್! 10

ಡೆಸ್ಡೆಮೋನಾ ರೂಪಕಂ: ಅವಳ ಅಂತರಂಗಕ್ಕೆ ಕನ್ನಡಿ 11



# ಮರಳಿ ನರಳಿದ ಯುಗಾದಿ

ಯಾರ ಅಳುವಿಗೂ ಅಳಿವಿಗೂ ನಿಲುಕದಂತೆ ಪರಿವರ್ತನೆಯ ಚಕ್ರ ಸುತ್ತುತ್ತಲೇ ಇದೆ. ಅಸ್ತವ್ಯಸ್ತವಾಗಿದ್ದ ಜನಜೀವನ ಈ ಯುಗಾದಿಗಾದರೂ ಸರಿದಾರಿಗೆ ಹೊರಳಲಿದೆ ಎಂದುಕೊಳ್ಳುವಾಗ ಕೊರೊನಾದ ಎರಡನೇ ಅಲೆ ಹೊರಳಿ ಮೇಲೆದ್ದಿದೆ. ಹಾಗಾದರೆ ಯುಗಾದಿ ಮರಳಿ ಬರುವಾಗ ಹೊಸ ವರುಷ, ಹೊಸ ಹರುಷ ತರುತ್ತದೆ ಎನ್ನುವುದು ಕಾವ್ಯದ ಸಾಲು ಮಾತ್ರವೇ?

ಚಿತ್ರಗಳು: ತಾಜುದ್ದೀನ್ ಆಜಾದ್

**ಸಹನಾ ಹೆಗಡೆ**

**2020,** ಮಾರ್ಚ್ ತಿಂಗಳು. ಯುಗಾದಿಯ ಪರ್ವ ಎದುರಿಗಿತ್ತು. ದೇಶದಾದ್ಯಂತ ಘೋಷಣೆಯಾದ ಲಾಕ್‌ಡೌನ್‌ಗೆ ಹಬ್ಬವನ್ನು ಬರದಂತೆ ತಡೆಯಲು ಸಾಧ್ಯವಿರಲಿಲ್ಲ. ಆದರೆ, ಅದರ ಚೈತನ್ಯವನ್ನು ಸಂಪೂರ್ಣವಾಗಿ ಉಡುಗಿಸಿಬಿಡುವ ತಾಕತ್ತಿತ್ತು. ಬೆಲ್ಲವೇನೋ ಮನೆಯಲ್ಲಿತ್ತು. ಬೇವನ್ನೆಲ್ಲಿಂದ ತರುವುದು ಎಂಬ ಪ್ರಶ್ನೆ ಉದ್ಭವಿಸಿತ್ತಾದರೂ ಸಾವಿನ ಸುಳಿಯಲ್ಲಿ ಜೀವಗಳನ್ನು ಸುತ್ತಿಸಿ ಸುತ್ತಿಸಿ ಸೆಳೆದೊಯ್ಯುತ್ತಿದ್ದ ಕೋವಿಡ್‌ನ ಮುಂದೆ ಅದು ಅಷ್ಟೇನೂ ದೊಡ್ಡದಾಗಿರಲಿಲ್ಲ.

ಬಿಡು, ಈ ಬಾರಿ ಕಹಿಯಿಲ್ಲದೇ ಬರಿ ಸಿಹಿಸಿಹಿಯಾಗಿಯೇ ಹಬ್ಬದೂಟ ಮಾಡಿದರಾಯಿತು ಎಂಬ ಉಡಾಫೆ, ಬರಲಿರುವ ವರ್ಷ ಸಿಹಿಯನ್ನೇ ಉಣಬಡಿಸಲಿಕ್ಕಿದೆ, ತಗೋ ಎಂಬ ಲಘುಭಾವ. ಇದು ಈ ಕ್ಷಣ ಹೇಗೋ ಏಗಿ ದಾಟಿಬಿಡಬೇಕಾದ ಕೇಡುಗಾಲ, ಲೋಕಕ್ಕೆ ಲೋಕವೇ ನರಳುತ್ತಿದೆ. ನಮ್ಮ ಬೇಸರ, ಹಳಹಳಿಕೆಗಳನ್ನೆಲ್ಲ ಕೆಲಕಾಲ ಗಂಟುಕಟ್ಟಿ ಮೇಲೆಸೆದರಾಯಿತು ಎಂಬ ಉಮೇದು, ಮತ್ತೆ ಬದುಕು ನಳನಳಿಸುತ್ತದೆ, ಶತಮಾನಗಳ ಕಾಲದ ಬೆಲ್ಲದ ಸಾಂಗತ್ಯದಿಂದ ಬೇವು ಎಷ್ಟು ದಿನ ದೂರವಿದ್ದೀತು ಎಂದು ನೆಚ್ಚಿಕೊಂಡ ನಂಬಿಕೆ. ಯಾವುದೂ ಖುಷಿಖುಷಿ ಗಂಟಲಲ್ಲಿಳಿಯದೇ ಊಟವೊಂದು ಶಾಸ್ತ್ರವಾಗಿ, ಹಬ್ಬದ ಸಂಪ್ರದಾಯ ಮಾತ್ರವಾಗಿ, ಆಪ್ತೇಷ್ಟರ ಬರುವಿಕೆ ಹೋಗಲಿ, ಎಷ್ಟೋ ಮನೆಗಳಲ್ಲಿ ಮನೆಜನರೇ ಜೊತೆಗಿಲ್ಲದೆ ಹೇಗೋ ಬಣಬಣ ಕಳೆದುಹೋಯಿತು.

ಏನೋ ಸಮಯ ಸರಿಯಿಲ್ಲ, ಸಹಿಸಿಕೊಂಡರಾಯಿತು. ಕಾದು ನೋಡಿದರಾಯಿತು ಅಂದುಕೊಂಡಿದ್ದೇ ಬಂತು. ಮುಂದೆ ಕಾದಿದ್ದೇ ಬೇರೆ ಎನ್ನುವ ಆಲೋಚನೆಯ ಲವಲೇಶವೂ ಆಗ ನಮಗಿರಲಿಲ್ಲ. ಚಿಂತೆ, ಚಿಂತನೆಗಳನ್ನೆಲ್ಲ ಮೀರಿ ಬಂದೆರಗಿದ ಬಿಕ್ಕಟ್ಟು, ಅದು ತಂದಿಟ್ಟ ಇಕ್ಕಟ್ಟೇ ಬೇರೆ. ಕಲ್ಪನೆಗೂ ಮೀರಿದ ಆಗುಹೋಗುಗಳು. ಕನಸಿನಲ್ಲೂ ಕಾಣದ ಆಘಾತಗಳ ಸಾಲುಸಾಲು. ವರ್ಷವಿಡೀ ಉಂಡಿದ್ದು ರೋಗ, ರೋಗಭಯ, ಆತಂಕ, ಸಾವುನೋವಿನ ಕಹಿ ಉಣಿಸು. ಕಂಡಿದ್ದು ಕಣ್ಣೀರು, ಮೂಕರೋದನ, ಮೌನ, ಹೋದಲ್ಲಿ, ಬಂದಲ್ಲಿ ತಲ್ಲಣಿಸುವ ಭಯಗ್ರಸ್ತ ಮನಸ್ಸು. ಆತನಕ ಬರಿದೆ ದುಃಸ್ವಪ್ನವೆಂದೆಣಿಸಿದ್ದು ಕೊನೆಗೂ ವಾಸ್ತವವಾಗಿ ಕಣ್ಣೆದುರು ಇಳಿದು ಕುಳಿತಿತ್ತು.

ಒಂದೆಡೆ ಗಾಳಿಸುದ್ದಿ, ವದಂತಿಗಳ ಅತಿವೃಷ್ಟಿ. ಮತ್ತೊಂದೆಡೆ, ಆಧಾರಸಹಿತವಾದ, ಅಧಿಕೃತವಾದ ಸಂಗತಿಗಳ ಅನಾವೃಷ್ಟಿ. ಭರವಸೆಗೆ ಬರ. ನಂಬಿಕೆಗೆ ಕೊಡಲಿಯೇಟು. ನಂಬಿದ ದೇವರಿಗೂ ಜಡಿದು ಬೀಗ, ಬಡಿದಿದ್ದು ಅನಿರ್ದಿಷ್ಟ ಅವಧಿಯ ಚಿಲಕ. ವೈದ್ಯರು, ವಿಜ್ಞಾನಿಗಳು ಹೇಳುವುದನ್ನು ಕೇಳಲು ಸದಾ ತವಕ. ಪರ್ಯಾಯಗಳು ದೂರದಿಗಂತದಲ್ಲೆಲ್ಲೂ ಕಾಣುತ್ತಿರಲಿಲ್ಲ. ದಾರಿಕಾಣದ ಅಸಹಾಯಕ ಸ್ಥಿತಿ.

ಹೀಗೇಕಾಯಿತು? ಇದಕ್ಕೆಲ್ಲ ಯಾರು ಹೊಣೆ? ನೇರವಾಗಿ ಯಾರತ್ತಲೂ ಬೊಟ್ಟುಮಾಡಿ ತೋರಿಸಲಾರದ, ಎಲ್ಲಿಗೇ ಹೋದರೂ ಯಾರಿಗೇ ಅಂದರೂ ಕೊನೆಗೆ ಸ್ವಂತದ ಬುಡಕ್ಕೇ ಬಂದು ನಿಲ್ಲುವ ಹತಾಶ ಸ್ಥಿತಿ, ಸನ್ನಿವೇಶ. ಖಚಿತ ಉತ್ತರವಿಲ್ಲದ ಪ್ರಶ್ನೆಗಳು ಬೃಹದಾಕಾರ ಬೆಳೆದು ನಿಂತವು. ಅಖಾಡಕ್ಕಿಳಿದವು ಆರೋಪ-ಪ್ರತ್ಯಾರೋಪ, ವಾದ-ಪ್ರತಿವಾದ, ಕಿರಿಚಾಟ-ಕೆಸರೆರಚಾಟ, ನಿಂದನೆ-ಆಪಾದನೆ. ಸಾಮಾನ್ಯನ ಬದುಕಿನಲ್ಲಿ ಉಳಿದಿದ್ದು ಕೇವಲ ಶೂನ್ಯ ಸಂಪಾದನೆ.

ಬದುಕು ಎನ್ನುವುದು ಸಾಧಾರಣ ಪರಿಸ್ಥಿತಿಯಲ್ಲಿಯೇ ಎಲ್ಲರಿಗೂ ಸಮನಾದ ಊಟವನ್ನು ಉಣಬಡಿಸುವುದಿಲ್ಲ. ಸಂಕಟದ ಕಾಲದಲ್ಲಿ ಅದನ್ನು ನಿರೀಕ್ಷಿಸುವುದಾದರೂ ಹೇಗೆ? ರೋಗಬಾಧೆಯ ನೇರ ಆಕ್ರಮಣಕ್ಕೆ ತುತ್ತಾಗಿ ಜೀವ ತೆತ್ತವರ ಸಂಖ್ಯೆ ಲಕ್ಷಗಟ್ಟಲೆಯಾದರೆ ಕುಟುಂಬದ ಸದಸ್ಯರನ್ನು, ಬಂಧುಮಿತ್ರರನ್ನು, ಬದುಕಿನಾಸರೆಯಾಗಿದ್ದ ವ್ಯಾಪಾರ-ವಹಿವಾಟುಗಳನ್ನು ಕಳೆದುಕೊಂಡು, ಬದುಕಿಯೂ ಅರೆಜೀವವಾದವರ ಲೆಕ್ಕ ಸಿಕ್ಕರೆ ಅದು ಕೋಟಿಕೋಟಿಯಾದೀತು. ಸಾವು-ನೋವು, ದುಃಖ-ಅಗಲಿಕೆ-ನರಳಿಕೆ, ಕಷ್ಟನಷ್ಟಗಳಿಗೆಲ್ಲ ವಿಧಿಯನ್ನು ಹೊಣೆಯಾಗಿಸಿ, ಕೆಲಕಾಲ ಶೋಕದಲ್ಲಿ ಮುಳುಗಿದರೂ ಮೇಲೆದ್ದು ಬದುಕನ್ನು ಕಟ್ಟಿಕೊಳ್ಳುವ ಅನಿವಾರ್ಯತೆ, ಕಟ್ಟಿಕೊಳ್ಳಲೇಬೇಕಾದ ಕಟುವಾಸ್ತವ ಒಂದೆಡೆಗಿತ್ತು, ಮತ್ತೊಂದೆಡೆ, ತಮ್ಮ ಕರ್ತೃತ್ವಶಕ್ತಿ, ಪರಿಶ್ರಮ, ಶ್ರದ್ಧೆ, ಬದ್ಧತೆಗಳಿಂದಲೇ ಸ್ವಂತದ, ಕುಟುಂಬದ ಜೊತೆಗೆ ಸಮುದಾಯದ ಒಳಿತಿಗೂ ದುಡಿಯುವವರ ಸಾಕಷ್ಟು ಉದಾಹರಣೆಗಳನ್ನು ಕಾಣಬಹುದಿತ್ತು.

ವೈಯಕ್ತಿಕ ಶುಚಿತ್ವ, ನೆರೆಹೊರೆ-ಪರಿಸರದ ಸ್ವಚ್ಛತೆ, ದೈಹಿಕ ಅಂತರದ ಅಗತ್ಯವನ್ನು ಕೆಲವರಿಗೆ ವಿವರಿಸಬೇಕಾದ ಅವಶ್ಯಕತೆಯೇ ಬೀಳಲಿಲ್ಲ. ಆದರೆ, ಇಂತಹ ವಿಪರೀತ ಪರಿಸ್ಥಿತಿಯಲ್ಲಿಯೂ ಸ್ವಂತದ, ಮನೆಯ, ಕುಟುಂಬದ, ಸಮುದಾಯದ ಸುರಕ್ಷೆಯತ್ತ ಗಮನ ಹರಿಸದೇ ಬೇಜವಾಬ್ದಾರಿಯುತವಾದ ವರ್ತನೆಗಳನ್ನು ಮೆರೆಯುವವರೂ ಧಾರಾಳವಾಗಿ ಕಂಡುಬಂದರು. ಇಂತಹವರಲ್ಲಿ ಕೆಲವರಾದರೂ ಪಾಠ ಕಲಿತರೇ, ವರ್ಷಾನುಗಟ್ಟಲೆಯ ಅಭ್ಯಾಸ-ಆಚರಣೆಗಳನ್ನು ಬದಲಾಯಿಸಿಕೊಂಡರೇ ಎಂದು ಒಮ್ಮೊಮ್ಮೆ ಆಶ್ಚರ್ಯವಾಗುತ್ತದೆ. ಈಗಲೂ ಬದಲಾಗಲಿಲ್ಲ ಎಂದರೆ ಅದೂ ಆಶ್ಚರ್ಯಕರ ಸಂಗತಿಯೇ. ಬದಲಾಗಲು ಇನ್ನೆಂತಹ ಹೊಡೆತ ಬೀಳಬೇಕಿತ್ತು? ಸಾಮ, ದಾನ, ಭೇದೋಪಾಯಗಳನ್ನು ಪ್ರಯೋಗಿಸಿ ನೋಡಿದ ಪ್ರಕೃತಿ ಮನುಷ್ಯನ ಅಹಂಕಾರವನ್ನು ಬಗ್ಗುಬಡಿಯಲು ದಂಡವನ್ನು ಕೈಗೆತ್ತಿಕೊಂಡಾಗಿದೆ. ಈಗಲೂ ಬುದ್ಧಿ ಕಲಿಯಲಿಲ್ಲವೆಂದಾದರೆ ಇನ್ಯಾವಾಗ ಎಂದೆಲ್ಲ ಯೋಚಿಸುತ್ತಲೇ ಮತ್ತೆ ಯುಗಾದಿ ಬಂದಿದೆ.

ಎಲ್ಲೋ ಚೀನಾದ ವುಹಾನ್‌ನಲ್ಲಿ, ಕಂಡು ಕೇಳರಿಯದ ದೇಶದಲ್ಲಿ ಕಾಣಿಸಿಕೊಂಡಿದೆಯಂತೆ, ಅಷ್ಟು ಜನ ಸತ್ತರಂತೆ, ಇಷ್ಟು ಜನ ಕಾಯಿಲೆ ಬಿದ್ದಿರುವರಂತೆ, ಆಸ್ಪತ್ರೆಗಳು ತುಂಬಿತುಳುಕುತ್ತಿವೆಯಂತೆ, ವೈದ್ಯಕೀಯ ವ್ಯವಸ್ಥೆ ಕುಸಿದು ಬೀಳುತ್ತಿದೆಯಂತೆ ಎಂಬೆಲ್ಲ ಮಾತುಗಳು ಬರಿಯ ಮಾತಾಗದೇ ನಮ್ಮನಿಮ್ಮೆಲ್ಲರ ಮನೆಯಂಗಳದ ಹಾವಾಗಿ, ಕೊನೆಗದು ಮನೆಯೊಳಗೇ ಹೊಕ್ಕು ಹರಿದಾಡಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಊರೂರು ತಿರುಗತೊಡಗಿದ 'ಮಹಾಮಾರಿ'ಯು 'ರಣಕೇಕೆ' ಹಾಕುತ್ತ, 'ಮರಣಮೃದಂಗ'ವನ್ನು ಬಾರಿಸುತ್ತ ಹಳ್ಳಿಯ ಮೂಲೆಮೂಲೆಗಳಲ್ಲಿ 'ರುದ್ರನರ್ತನ' ಮಾಡಿ ನಲಿದಿದ್ದು ಸುಳ್ಳಲ್ಲ.

ಕಳೆದ ವರ್ಷ ಯುಗಾದಿಯ ಆಸುಪಾಸು 'ಬಿಂದಾಸ್' ಮನೋಭಾವದಲ್ಲಿ ಹಾಯಾಗಿ ಮಲಗಿದ್ದ ನಮ್ಮೆಲ್ಲರ ದೈನಂದಿನ ಬದುಕುಗಳೂ ದಿನಕಳೆದಂತೆ ಹಳಿ ತಪ್ಪತೊಡಗಿದ್ದವು. ಹಳ್ಳಿ-ತಾಲ್ಲೂಕು-ಜಿಲ್ಲೆ-ರಾಜ್ಯಗಳ ಗಡಿಗೆರೆಗಳನ್ನು ಮೀರಿ ಒಟ್ಟಾರೆ ದೇಶಕ್ಕೆ ದೇಶವೇ ನಲುಗತೊಡಗಿತು. ಭೂಮಂಡಲದ ಯಾವುದೋ ಗೋಳಾರ್ಧದಲ್ಲಿ ಸಂಭವಿಸುವ ಪಲ್ಲಟ, ತಲ್ಲಣಗಳು ವಿಶ್ವವ್ಯಾಪಿಯಾಗಲು ಹೆಚ್ಚು ಸಮಯ ಹಿಡಿಯುವುದಿಲ್ಲ ಎನ್ನುವ ಸತ್ಯ ನಿಧಾನವಾಗಿಯಾದರೂ ಒಳಗಿಳಿಯತೊಡಗಿತ್ತು. ಪ್ರಗತಿಯ ಪ್ರತೀಕವಾದ, ಪ್ರತಿಷ್ಠೆಯ ಸಂಕೇತವಾದ ಸಂಚಾರ-ಸಂಪರ್ಕ-ಸಂವಹನಗಳು ವರದ ಹಸ್ತದ ಜೊತೆಗೆ ವಿನಾಶದ ಕಬಂಧ ಬಾಹುಗಳನ್ನೂ ಚಾಚಿ, ಸಿಕ್ಕಿದ್ದನ್ನೆಲ್ಲ ಬಾಚಿ ಕೊಂಡೊಯ್ದಿದ್ದೂ ಆಯಿತು.

ತನ್ನೆಲ್ಲ ಋಣಾತ್ಮಕ ಪ್ರಭಾವಗಳ ಕಾರಣ ಯಾವ ತಾಂತ್ರಿಕ ಪ್ರಗತಿ, ಸಂವಹನ, ಮಾಹಿತಿ ತಂತ್ರಜ್ಞಾನವನ್ನು ಮಾನವ ಬದುಕಿನ ಅಭಿಶಾಪವೆಂದು ಕರೆಯಲು ಉದ್ಯುಕ್ತರಾಗಿದ್ದೆವೋ ಅದೇ ಮಾಹಿತಿ ತಂತ್ರಜ್ಞಾನವು ನಮ್ಮ ಪಾಲಿಗೆ ಧರೆಗಿಳಿದ ದೇವತೆಯೂ ಆಯಿತು. ಎಲ್ಲಿ, ಯಾವುದನ್ನು, ಎಷ್ಟು, ಹೇಗೆ, ಏಕೆ ಬಳಸಿಕೊಳ್ಳಬೇಕು ಎಂಬ ವಿವೇಚನೆಯನ್ನೂ ಅದು ನಮ್ಮ ಮುಂದಿಟ್ಟಿತು. ಈಗ ವಿವೇಕವೆನ್ನುವುದು ತಲೆಗೆ ಸೀಮಿತವಾಗುಳಿಯಲಿಲ್ಲ, ಬೆರಳ ತುದಿಗಿಳಿದಿದೆ. ಮಾಹಿತಿ-ಜ್ಞಾನಗಳೆಲ್ಲದರ ಇಮ್ಮುಖ ಚಲನೆಯನ್ನು ಸಮರ್ಪಕವಾಗಿ ನಿರ್ವಹಿಸಿಕೊಳ್ಳುವ ಹೊಣೆ ನಮ್ಮ ಮೇಲಿದೆ. ಕಾಲ ಅಂತಹದೊಂದು ಅವಕಾಶವನ್ನು ನಮಗೆ ಒದಗಿಸಿದೆ. ಸಂಯಮದ ಒರೆಗಲ್ಲಿಗೆ ತಿಕ್ಕಿ ಹೊಳಪಾಗಿಸಿಕೊಳ್ಳಬೇಕಾದ ಅದೆಷ್ಟೋ ಕಲ್ಲುಗಳನ್ನು ಮಡಿಲಿಗೆ ಹಾಕಿನೋಡುತ್ತಿದೆ ಕಾಲ. ಕಾಲಷ್ಟೇ ಅಲ್ಲ, ಕಾಲ ಕೆಳಗಿನ ನೆಲವೂ ಗಟ್ಟಿಯಾಗಿರಲೇಬೇಕು ಓಡಲು, ಓಡಿ ನೆಲೆ ಮುಟ್ಟಲು ಎನ್ನುವುದನ್ನು ಸನ್ನಿವೇಶವು ಮನವರಿಕೆ ಮಾಡಿಕೊಡುತ್ತಲೇ ಇದೆ. ಯುಗಾದಿ ಮತ್ತೆ ಬಂದಿದೆ.

ಮನೆಮನೆಯ ಕದ ತಟ್ಟಿ ಭೀತಿಯ ಬೀಜ ಹಂಚಿಹೋಗಿದೆ ಕೊರೊನಾ. ಇದ್ದ ನೆಲವನ್ನೇ ಹಸನು ಮಾಡಬೇಕಿದೆ, ಬಿದ್ದ ಮಳೆಯ ನೀರನ್ನೇ ಕಾಪಿಟ್ಟು ಹನಿಸಬೇಕಿದೆ ಭೂಮಿಗೆ. ಇರುವ ಮಣ್ಣನ್ನೇ ಉತ್ತು, ಸಿಕ್ಕ ಬೀಜವನ್ನೇ ಬಿತ್ತಿ ಭರವಸೆಯ ಬೆಳೆ ತೆಗೆಯಬೇಕಿದೆ.

ಕುಟುಂಬದ ಸದಸ್ಯರನ್ನು, ಆಪ್ತೇಷ್ಟರನ್ನು ಕಳೆದುಕೊಂಡ ದುಃಖ, ಕುಸಿದುಬಿದ್ದ ಬದುಕಿನ ನೆಲೆಗಟ್ಟಿನ ನಷ್ಟ ಅಗಾಧವಾದುದು. ಅದಕ್ಕೆ ಯಾವ ಮಾತೂ ಯಾವ ಸಾಂತ್ವನವೂ ಸಮಾಧಾನ ನೀಡದು, ಪರಿಹಾರ ಒದಗಿಸದು. ಈ ಹಿನ್ನೆಲೆಯಲ್ಲಿ ಮತ್ತು ಯಾವ ಕ್ಷಣ ಏನೋ ಹೇಗೋ ಎಂಬ ಅನಿಶ್ಚಿತತೆ ಕಾಡುತ್ತಿರುವ ವಿಚಿತ್ರ ಸನ್ನಿವೇಶದಲ್ಲಿ, ಈ ತನಕದ ಬದುಕು ಒದಗಿಸಿದ ಸುರಕ್ಷಿತ ನೆಲೆಯಲ್ಲಿ ಕುಳಿತು ತೋಚಿದ್ದನ್ನು ಹೇಳುವುದು, ಬರೆಯುವುದು ಕೂಡ ಒಂದು ರೀತಿಯಲ್ಲಿ ಮುಜುಗರದ ಸಂಗತಿಯೇ. ಆ ಕುರಿತು ಕ್ಷಮೆ ಇರಲಿ. ಬದುಕಿನ ನಶ್ವರತೆ, ಶಾಶ್ವತತೆಯೆಡೆಗಿನ ತುಡಿತ ಮಾತ್ರ ಸ್ಥಿರವೆಂಬ ತಾತ್ವಿಕ ನೆಲೆಯಲ್ಲಿ ಜೀವನವನ್ನು ಮರುರೂಪಿಸಿಕೊಳ್ಳಬೇಕಾದ ಸಂಧಿಕಾಲದಲ್ಲಿ ನಾವಿದ್ದೇವೆ. ಅದಕ್ಕೆ ಪೂರಕವಾದ ಜೀವನಶೈಲಿ, ಬದುಕಿನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎನ್ನುವುದು ತಡವಾಗಿಯಾದರೂ ಅರ್ಥವಾಗುತ್ತಿದೆ.

ಮನುಷ್ಯ ಕೊನೆಗೂ ಮನುಷ್ಯನೇ. ಕಾಮ, ಕ್ರೋಧಾದಿ ದುರ್ಗುಣಗಳಂತೆ ಪ್ರೀತಿ-ಪ್ರೇಮ-ದಯೆ-ಕರುಣೆ-ಅನುಕಂಪ-ಮಮತೆ ಸಹಾಯ-ತ್ಯಾಗ-ಬಲಿದಾನಗಳಂತಹ ಒಳ್ಳೆಯ ಗುಣಗಳೂ ಇವೆಯಲ್ಲವೇ ಅವನಲ್ಲಿ? ಮನುಷ್ಯನ ಈ ಎಲ್ಲ ಮುಖಗಳ, ಮಿಶ್ರಗುಣಗಳ ಅನಾವರಣವಾಗಿದ್ದೂ ಈ ಕಾಲದಲ್ಲೇ ಅಲ್ಲವೇ? ಬಂದ ವಿಪತ್ತನ್ನು ಎದುರಿಸಲೇ ಬೇಕಿತ್ತು. ಬೇರೆ ದಾರಿ ಇರಲಿಲ್ಲ. ಸಾಂಘಿಕ, ಸಾಂಸ್ಥಿಕ, ಸಾಮುದಾಯಿಕ ಶಕ್ತಿಗಳ ಬೆಲೆ ಅರಿವಾಗತೊಡಗಿದ್ದು ಈಗಲೇ ಅಲ್ಲವೇ? ಪರಸ್ಪರ ಸಹಾಯ-ಸಹಕಾರ-ಸಹಯೋಗದ ನೆಲೆಯಲ್ಲಿ ನೆರವಿನ ಬೇರುಗಳು ಬಲವಾಗಿದ್ದು, ಹರಿವಿನ ಸೆಲೆಗಳು ಸ್ಪಷ್ಟವಾಗಿದ್ದು, ಸ್ಫುಟಗೊಂಡಿದ್ದು ಈಗಲೇ ಅಲ್ಲವೇ? **11ನೇ ಪುಟಕ್ಕೆ...**

# ಪ್ರತಿರೋಧದ ಹೊಸ ಹಾಡು ಎಂಜಾಯ್ ಎಂಜಾಮಿ

ಜಗತ್ತಿನ ರ‍್ಯಾಪ್ ಸಂಗೀತದಲ್ಲಿ ದೊಡ್ಡ ಹೆಜ್ಜೆಗುರುತು ಮೂಡಿಸಿದ 'ಎಂಜಾಯ್ ಎಂಜಾಮಿ'

**ಸತ್ಯಪ್ರಕಾಶ್ ಎಂ.ಆರ್.**

ಯೂಟ್ಯೂಬ್‌ನಲ್ಲಿ ಬಿಡುಗಡೆಯಾಗಿರುವ ತಮಿಳು ರ‍್ಯಾಪ್ ಹಾಡು 'ಎಂಜಾಯ್ ಎಂಜಾಮಿ' ಹೊಸ ಸಂಚಲನವನ್ನೇ ಸೃಷ್ಟಿಸಿದೆ. ಬಿಡುಗಡೆಯಾದ ನಾಲ್ಕು ವಾರಗಳಲ್ಲಿ ಸುಮಾರು 12 ಕೋಟಿ ವೀಕ್ಷಣೆ ಪಡೆದಿರುವ ಈ ಹಾಡು ಕೇವಲ ಮನರಂಜನೆಗಾಗಿ ರಚಿತವಾದದ್ದಲ್ಲ. ಸಮಾನತೆ, ಸಹಬಾಳ್ವೆ, ಸಮಪಾಲಿನ ಆಶಯದಲ್ಲಿ ಸಂಯೋಜನೆಗೊಂಡಿರುವ ಈ ಹಾಡು, ಕೇವಲ ಒಂದು ಪ್ರಯೋಗವಲ್ಲ; ಮೌನಕ್ರಾಂತಿಯ ಭಾಗ...

**ಪ್ರತಿರೋಧದ** ಅಭಿವ್ಯಕ್ತಿಗೆ ಭಿನ್ನ ಮಾರ್ಗಗಳನ್ನು ಆಯ್ದುಕೊಂಡ ಸಮಕಾಲೀನ ದಲಿತ ಕಾವ್ಯದ ಮೂಲ ಪ್ರೇರಣೆಯನ್ನು ದೇಸಿ ಪರಂಪರೆಯಲ್ಲಿ ಹುಡುಕುವುದಾದರೆ, ದಕ್ಷಿಣದಲ್ಲಿ ತಮಿಳುನಾಡಿನ ತಿರುವಳ್ಳುವರ್, ಕರ್ನಾಟಕದ ವಚನ ಚಳವಳಿಯ ಮಾದಾರ ಚೆನ್ನಯ್ಯ, ಉರಿಲಿಂಗ ಪೆದ್ದಿ, ದೋಹರ ಕಕ್ಕಯ್ಯ ಅವರಿಂದ ಬೇರು ಬಿಟ್ಟಿದ್ದರೆ, ಉತ್ತರದಲ್ಲಿ ಸಂತ ಕಬೀರರ ಸಮಕಾಲೀನರಾಗಿದ್ದ ವಾರಾಣಸಿಯ ಸಂತ ರವಿದಾಸ ಬೃಹತ್ತಾಗಿ ನಿಂತಿದ್ದಾರೆ. ತಿರುಕ್ಕುರಳ್ ಆಗಲಿ, ವಚನಗಳಾಗಲಿ ಅಥವಾ ಸಿಖ್ಖರ ಪವಿತ್ರ ಆದಿ ಗ್ರಂಥದಲ್ಲಿ ಅಡಕವಾಗಿರುವ ರವಿದಾಸರ 41 ಶ್ಲೋಕಗಳಾಗಲಿ ಕೇವಲ ಓದುವುದಕ್ಕಾಗಿ ರಚಿಸಿದ್ದಲ್ಲ. ಭಕ್ತಿ ಪರಂಪರೆಯ ಭಾಗವಾಗಿ ಎಲ್ಲರ ಮನಸ್ಸುಗಳನ್ನು ಪ್ರಭಾವಿಸಲು ರಚಿತವಾದ ಕೀರ್ತನೆಗಳೂ ಹೌದು.

ಆ ಪರಂಪರೆಯ ಮುಂದುವರೆದ ಭಾಗವಾಗಿ ಭಾರತದ ವಿವಿಧ ಭಾಷೆಗಳಲ್ಲಿ ಹಲವು ಮಂದಿ ಸೃಜನಶೀಲ ಬರವಣಿಗೆ ಮತ್ತು ಕಾವ್ಯ ರಚನೆಯಲ್ಲಿ ತೊಡಗಿ ಯಶಸ್ವಿಯೂ ಆಗಿದ್ದಾರೆ. ಮರಾಠಿ ಭಾಷೆಯ ದಲಿತ ಪ್ಯಾಂಥರ್ ನಾಮದೇವ್ ಢಸಳರ ಗೋಲ್ಪಿಥಾ ಖಂಡ ಕಾವ್ಯ, ಕನ್ನಡದ ಸಿದ್ಧಲಿಂಗಯ್ಯ ಮತ್ತಿತರರ ಬಂಡಾಯದ ಕವಿತೆಗಳು, ತಮಿಳಿನ ಮೀನಾ ಕಂದಸಾಮಿ ಅವರಂತಹ ಪ್ರಖರ ದಲಿತ ಮಹಿಳಾಧ್ವನಿ...ಆಯ್ದ ಕೆಲವು ನಿದರ್ಶನಗಳಷ್ಟೆ.

ವಿಶೇಷವಾಗಿ ಮರಾಠಿ, ಪಂಜಾಬಿ ಮತ್ತು ಕನ್ನಡ ಭಾಷೆಗಳಲ್ಲಿ ದಲಿತ ಕಾವ್ಯ, ಕೇವಲ ಪುಸ್ತಕ ರೂಪದ ಕವನ ಸಂಕಲನಗಳಿಗೆ ಸೀಮಿತವಾಗದೆ ಪ್ರತಿಭಟನೆಗಳಲ್ಲಿ, ಸಭೆ ಸಮಾರಂಭಗಳಲ್ಲಿ ಹೋರಾಟದ ಹಾಡುಗಳಾಗಿ ಬಳಸಲ್ಪಟ್ಟಿದೆ. ದಲಿತ ಚಳವಳಿ ಇರಬಹುದು ಅಥವಾ ಎಡಪಂಥೀಯ ಹೋರಾಟಗಳಿರಬಹುದು ಸಿದ್ಧಲಿಂಗಯ್ಯನವರ ಹೊಲೆ ಮಾದಿಗರ ಹಾಡು, ಗೋವಿಂದಯ್ಯನವರ ಎ, ಬಿ, ಸಿ ಮತ್ತು.. ಮತ್ತಿತರ ಬಂಡಾಯದ ಹಾಡುಗಳು ಇರಲೇಬೇಕಿತ್ತು. ಒಂದರ್ಥದಲ್ಲಿ ದಲಿತ ಚಳವಳಿ ಸೃಜನಶೀಲ ಅಭಿವ್ಯಕ್ತಿಗೆ ವೇದಿಕೆಯಾಗಿತ್ತು ಎಂದರೆ ತಪ್ಪಾಗಲಾರದು.

ಇಂಥ ಬಂಡಾಯದ ಹಾಡುಗಳು ಭಾರತದ ಕೆಲವು ಭಾಷೆಗಳಿಗಷ್ಟೇ ಸೀಮಿತವಾಗಿಲ್ಲ. ಇದು ಸಾರ್ವತ್ರಿಕ ಮತ್ತು ಸಾರ್ವಕಾಲಿಕ. ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಘಟ್ಟಗಳಲ್ಲಿಯೂ ಆಯಾ ಪ್ರದೇಶದ ಸವಾಲುಗಳು, ಸಂಕಷ್ಟಗಳಿಗೆ ಪ್ರತಿಸ್ಪಂದನೆಗಳಾಗಿ ಬಂಡಾಯದ ಹಾಡುಗಳು ಸೃಷ್ಟಿಯಾಗಿವೆ. ಕರ್ನಾಟಕದಲ್ಲಿ ದಲಿತರ ಹಾಡುಗಳು ತಮಟೆಯ ಸದ್ದಿನಲ್ಲಿ, ಬಂಡಾಯದ ಸಭೆಗಳ ಮಾತುಗಳಲ್ಲಿ ಹಿಮ್ಮೇಳಗಳಾಗಿ ಉಳಿದು, ಸಂಗೀತ ಪ್ರಕಾರವಾಗಿ ವಿಕಾಸಗೊಳ್ಳದೆ ಮೂಲೆಗುಂಪಾಗಿವೆ. ಆದರೆ, ಅಮೆರಿಕದ ಬಂಡಾಯದ ಹಾಡುಗಳು ಹಾಗಲ್ಲ. ಅವು ಒಂದೆಡೆ ಪ್ರತಿಭಟನೆಯ ಹಾಡುಗಳಾಗಿ ಗೆದ್ದರೆ, ಮತ್ತೊಂದೆಡೆ ಜಾಗತಿಕ ಸಂಗೀತದಲ್ಲಿ ಕೂಡ ಅತ್ಯಂತ ಜನಪ್ರಿಯ ಎನಿಸಿಕೊಂಡಿವೆ.

## ರೆಗ್ಗೆ ಎಂಬ ಬಂಡಾಯದ ಸಂಗೀತ

ಕೆರೆಬಿಯನ್ ದ್ವೀಪಗಳ ಮೂಲದಿಂದ ಬಂದ ಜಮೈಕಾದ ಖ್ಯಾತ ಗಾಯಕ, ರೆಗ್ಗೆ ಸಂಗೀತದ ಹರಿಕಾರ ಬಾಬ್ ಮಾರ್ಲಿ ಹಾಡು ಪ್ರತಿಭಟನಾ ಸಂಗೀತದ ಬಹುಮುಖ್ಯ ಅಭಿವ್ಯಕ್ತಿಗಳಲ್ಲೊಂದು. 1999ರಲ್ಲಿ ಟೈಮ್ ಮ್ಯಾಗಜಿನ್‌ನಿಂದ ಶತಮಾನದ ಆಲ್ಬಂ ಎಂಬ ಗೌರವಕ್ಕೆ ಪಾತ್ರವಾದ ಮಾರ್ಲಿಯ 'ಎಕ್ಸೋಡಸ್' ಮತ್ತು ಲೆಜೆಂಡ್ ಆಲ್ಬಂನ 'ಬಫೆಲೋ ಸೋಲ್ಜರ್ಸ್' ಹಾಡು ಅಮೆರಿಕದ ವರ್ಣಾಧಾರಿತ ದಬ್ಬಾಳಿಕೆ ಮತ್ತು ಜೀತಪದ್ಧತಿಯ ಅಂಕುಶಕ್ಕೆ ಸಿಲುಕಿ ನರಳಿದ ಕಪ್ಪುಜನರ ಪ್ರತಿಭಟನೆಯ ಸಂಕೇತಗಳಾಗಿವೆ. ರೆಗ್ಗೆ, ರ‍್ಯಾಪ್, ಹಿಪ್ ಹಾಪ್‌ಗಳು ಪ್ರತಿಭಟನೆಯ ಸಂಗೀತ ಪ್ರಕಾರಗಳಷ್ಟೇ ಅಲ್ಲ, ಜಗತ್ತಿನಾದ್ಯಂತ ಸೂಪರ್‌ಸ್ಟಾರ್‌ಗಳನ್ನು ಹುಟ್ಟುಹಾಕಿರುವ ಮತ್ತು ಜಾಗತಿಕ ಸಂಗೀತ ಉದ್ಯಮದ ಅತ್ಯಂತ ಯಶಸ್ವಿ ಮಾದರಿಗಳೂ ಹೌದು. ಆಧುನಿಕ ಸಂಗೀತ ವಾದ್ಯಗಳು, ಉತ್ಕೃಷ್ಟ ರೆಕಾರ್ಡಿಂಗ್ ಮತ್ತು ಸೋನಿ ಬಿಎಂಜಿ, ಯೂನಿವರ್ಸಲ್, ವಾರ್ನರ್‌ನಂತಹ ಜಾಗತಿಕ ಮ್ಯೂಸಿಕ್ ಲೇಬಲ್‌ಗಳ ಬೆಂಬಲದಿಂದ ರೆಗ್ಗೆ, ರ‍್ಯಾಪ್, ರಾಕ್ ಪ್ರಕಾರಗಳ ಆಲ್ಬಂಗಳು ಜಾಗತಿಕ ಮನ್ನಣೆ ಪಡೆದಿವೆ.

ರ‍್ಯಾಪ್ ಸಂಗೀತದಲ್ಲಿ ಬಹುಶಃ ಎಮಿನೆಮ್ ಒಬ್ಬನನ್ನು ಹೊರತುಪಡಿಸಿದರೆ, ಎಲ್ಲಾ ಸ್ಟಾರ್‌ಗಳು ಅಮೆರಿಕದ ಗಲ್ಲಿಗಳಿಂದ, ಸ್ಲಂಗಳಿಂದ, ಬಡ ಮಧ್ಯಮವರ್ಗದ ಕುಟುಂಬಗಳಿಂದ ಮೇಲೆದ್ದು ಬಂದ ಅದ್ಭುತ ಕಪ್ಪು ಪ್ರತಿಭೆಗಳು. ಫಿಫ್ಟಿ ಸೆಂಟ್ಸ್, ಸ್ನೂಪ್ ಡಾಗ್, ಜೇ ಜೆಂಡ್, ಕಾನ್ಯೆ ವೆಸ್ಟ್ ಹೀಗೆ ಪಟ್ಟಿ ಬಹಳ ದೊಡ್ಡದಿದೆ. ಆಫ್ರೋ-ಅಮೆರಿಕನ್ನರು ಪ್ರತಿಭಟನೆಯ ಸಂಗೀತಕ್ಕಷ್ಟೇ ಸೀಮಿತರಾಗಿಲ್ಲ. ರಾಕ್, ಸಾಫ್ಟ್ ರಾಕ್ ಪ್ರಕಾರಗಳಲ್ಲಿ ಮೈಕೆಲ್ ಜಾಕ್ಸನ್, ಸ್ಟೀವಿ ವಂಡರ್, ರೇ ಚಾರ್ಲ್ಸ್, ನ್ಯಾಟ್ ಕಿಂಗ್ ಕೋಲ್, ಲಯೋನಲ್ ರಿಚಿ ಮತ್ತಿತರರು ಸಾರ್ವಕಾಲಿಕ ಸ್ಟಾರ್‌ಗಳೇ.

**ಮುಂದಿನ ಪುಟಕ್ಕೆ...**

ಜಾಹೀರಾತು

## ಉಬ್ಬಿದ ರಕ್ತನಾಳಗಳು

**ಡಾ|| ಶ್ರೀಕಾಂತ್ ಮೋರ್ಲಾವರ್**
**ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್**

ಇಲ್ಲಿ ದೇಹದ ರಕ್ತನಾಳಗಳು ಹಿಗ್ಗಿ ದೊಡ್ಡದಾಗುತ್ತವೆ ಮತ್ತು ಹೆಚ್ಚಿನ ಪ್ರಮಾಣದ ರಕ್ತ ಇದರಲ್ಲಿ ತುಂಬಿರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು. ಈ ಸ್ಥಳದಲ್ಲಿ ಚರ್ಮ ಉಬ್ಬಿದ ಹಾಗೆ ಕಾಣಿಸುವುದು ಹೀಗೆ ಉಬ್ಬಿರುವ ರಕ್ತನಾಳಗಳನ್ನು ವೆರಿಕೋಸ್ ವೇನ್ಸ್ ಎನ್ನುತ್ತಾರೆ. ಇದು ಸಾಮಾನ್ಯವಾಗಿ ನೀಲಿ ಅಥವಾ ನೇರಳೆ ಬಣ್ಣದಲ್ಲಿರುತ್ತದೆ ಹಾಗೂ ಚರ್ಮ ಉಬ್ಬಿದ ರೀತಿಯಲ್ಲಿಯೂ ಕಾಣಿಸಿಕೊಳ್ಳಬಹುದು. ಇದು ಸಾಮಾನ್ಯವಾಗಿ ಕಾಲಿನ ತೊಡೆಯ ಭಾಗ ಕಾಫ್ ರೀಜನ್ ಹಾಗೂ ಪಾದದಲ್ಲಿ ಕಾಣಿಸಿಕೊಳ್ಳುತ್ತದೆ, ಹಾಗೂ ಇದು ನಿಧಾನವಾಗಿ ಹೆಚ್ಚಿನ ಬದಲಾವಣೆಗಳಿಗೆ ಕಾರಣವಾಗಬಹುದು.

**ಕಾರಣಗಳು:**

- ಕಾಲಿನ ರಕ್ತನಾಳಗಳಲ್ಲಿ ದೋಷಗಳಿದ್ದಾಗ ಹಾಗೂ ಅದರ ಸಾಮರ್ಥ್ಯ ಕಡಿಮೆಯಾದಾಗ ಅದು ಕೆಲಸ ಮಾಡುವಲ್ಲಿ ವಿಫಲವಾಗುತ್ತದೆ.ಇದರಿಂದಾಗಿ ರಕ್ತವು ಕಾಲಿನ ಭಾಗದಲ್ಲಿ ಸಂಗ್ರಹಿಸಲ್ಪಡುತ್ತದೆ ಇದರ ಪರಿಣಾಮವಾಗಿ ವೆರಿಕೋಸ್ ವೇನ್ಸ್ ಕಾಣಿಸಿಕೊಳ್ಳುತ್ತದೆ.
- ವಯಸ್ಸು ಹೆಚ್ಚಾದಂತೆ ಈ ಬಗೆಯ ಬದಲಾವಣೆಗಳು ಹೆಚ್ಚಾಗುವುದು.
- ಅನುವಂಶಿಕ ಕಾರಣಗಳು.
- ಬೊಜ್ಜು ರಕ್ತನಾಳಗಳ ಮೇಲೆ ಒತ್ತಡ ಹೆಚ್ಚಾಗುವುದು
- ವ್ಯಾಯಾಮದ ಕೊರತೆ,ಕೂತಲ್ಲಿಯೇ ಕೂತಿರುವುದು
- ಅಧಿಕ ಸಮಯದವರೆಗೆ ನಿಂತಿರುವುದು.
- ಗರ್ಭಿಣಿಯರಲ್ಲಿ, ಗೃಹಿಣಿಯರಲ್ಲಿ.

**ರೋಗ ಲಕ್ಷಣಗಳು:**

- ರಕ್ತನಾಳಗಳು ನೀಲಿ ಬಣ್ಣದಲ್ಲಿ ಕಾಣಿಸಿಕೊಳ್ಳುವುದು ಅಥವಾ ರಕ್ತನಾಳಗಳು ಉಬ್ಬಿರುವ ರೀತಿಯಲ್ಲಿ ಗೋಚರಿಸುವುದು.
- ತಿಳಿ ನೇರಳೆ ಜೇಡರ ಬಲೆಯ ರೀತಿಯಲ್ಲಿ ರಕ್ತನಾಳಗಳು ತೊಡೆಯ ಭಾಗದಲ್ಲಿ ಕಾಣಿಸಿಕೊಳ್ಳುವುದು.
- ಕಾಲು ಭಾರವಾದಂತೆ ಅನಿಸುವುದು.
- ನಡೆಯುತ್ತಿದ್ದಂತೆ ಕಾಲಿನಲ್ಲಿ ಸೆಳೆತ, ಭಾರವಾಗುವಿಕೆ.
- ಪಾದ ಹಾಗೂ ಕಾಲಿನಲ್ಲಿ ಊತ.
- ನವೆಯಾಗುವುದು.
- ಚರ್ಮದ ಬಣ್ಣ ಬದಲಾಗುವುದು, ಹಾಗೆಯೇ ಕಪ್ಪಾಗುವುದು. ಸಮಸ್ಯೆಯು ಹೆಚ್ಚಾದಂತೆಲ್ಲಾ ಬಣ್ಣ ಹೆಚ್ಚು ಹೆಚ್ಚಾಗಿ ಕಪ್ಪಾಗುವುದು.
- ಸಣ್ಣ ಗಾಯಗಳಿಂದ ಅಧಿಕ ರಕ್ತ ಸೋರುವಿಕೆ, ಗಾಯ ವಾಸಿಯಾಗಲು ನಿಧಾನವಾಗುವಿಕೆ ಇತ್ಯಾದಿ.
- ಕಾಲಿನಲ್ಲಿ ನೋವು ಸೆಳೆತ ಬಿಗಿಯಾಗುವಿಕೆ.
- ಸ್ನಾಯು ಸೆಳೆತ ಹಾಗೂ ಸುಸ್ತಾಗುವುದು.
- ರಕ್ತ ಹೆಪ್ಪುಗಟ್ಟಿದ ಬದಲಾವಣೆಗಳು ಕೆಲವೊಂದು ಭಾರಿ ಗಮನಿಸಬಹುದಾಗಿದೆ.

**ಪತ್ತೆ ಹಚ್ಚುವ ವಿಧಾನಗಳು.**

- ಸರಿಯಾದ ವಿವರವಾದ ಬದಲಾವಣೆಗಳ ಬಗೆಗಿನ ಮಾಹಿತಿ. ಡಾಪ್ಲರ್ ಸ್ಟಡಿ ಬಹು ಉಪಯುಕ್ತವಾಗಿದೆ.ಇದರ ಸಹಾಯದಿಂದ ರಕ್ತನಾಳದಲ್ಲಿ ರಕ್ತದ ಹರಿಯುವಿಕೆಯನ್ನು ಗುರುತಿಸುವ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.
- ಹಿಂದಿನ ರೋಗ ಹಾಗೂ ಅನುವಂಶೀಯ ಕಾರಣಗಳ ಬಗೆಗಿನ ಮಾಹಿತಿಯು ಕೂಡ ಉಪಯುಕ್ತವಾಗಿರುತ್ತದೆ.

ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

**ಸಮಸ್ಯೆಗಳು / ಪರಿಣಾಮಗಳು.**

- ಪಿಗ್ಮೆಂಟೇಷನ್ ಉಂಟಾಗುವುದು.
- ಧೀರ್ಘಕಾಲದ ಚರ್ಮದ ತೊಂದರೆಗಳಿಗೆ ಒಳಗಾಗುವುದು.
- ರಕ್ತನಾಳದ ಹುಣ್ಣುಗಳು
- ಡಿ ವಿ ಟಿ.
- ಪಾದದ ಊತ ಹಾಗೂ ಗಾಯಗಳು ಒಣಗದಿರುವುದು.
- ಗಾಯಗಳಲ್ಲಿ ನಿರಂತರವಾಗಿ ರಕ್ತ ಒಸರವುದು.

**ಮುನ್ನೆಚ್ಚರಿಕೆಯ/ಮುಂಜಾಗೃತಾ ಕ್ರಮಗಳು :**

- ಕುಳಿತುಕೊಂಡಿರುವಾಗ ಹಾಗೂ ಮಲಗಿರುವಾಗ ಕಾಲುಗಳನ್ನು ಉದ್ದಕ್ಕೆ ಚಾಚಿಕೊಳ್ಳುವುದು.
- ಕಂಪ್ರೆಶನ್ ಡ್ರೆಸ್ಸಿಂಗ್ ಮಾಡಿಸಿಕೊಳ್ಳುವುದು.
- ಸ್ಟಾಕಿಂಗ್ ಗಳ ಉಪಯೋಗ.
- ಅಧಿಕ ದೇಹದ ತೂಕವನ್ನು ನಿಯಂತ್ರಿಸಿಕೊಳ್ಳುವುದು.
- ದಿನನಿತ್ಯ ವ್ಯಾಯಾಮ ಮಾಡುವುದು.
- ಸಡಿಲವಾದ ಉಡುಪು ಧರಿಸುವುದು
- ಹೆಚ್ಚು ಹೊತ್ತು ನಿಂತುಕೊಳ್ಳುವುದನ್ನು ಕಡಿಮೆ ಮಾಡಿಕೊಳ್ಳುವುದು
- ಪೋಷಕಾಂಶಯುಕ್ತವಾದ ಆಹಾರದ ಸೇವನೆ.
- ಮಾನಸಿಕ ಒತ್ತಡಗಳಿಂದ ದೂರವಿರುವುದು
- ಮದ್ಯಪಾನ ಹಾಗೂ ಧೂಮಪಾನ ಮಾಡದಿರುವುದು.
- ಯಾವುದೇ ಬದಲಾವಣೆಗಳು ಕಂಡು ಬಂದಲ್ಲಿ ವೈದ್ಯರನ್ನು ಸಂಪರ್ಕಿಸಿ ಸರಿಯಾದ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವುದು.

**ಹೋಮಿಯೋಕೇರ್ ಇಂಟರ್ ನ್ಯಾಷನಲ್ ಚಿಕಿತ್ಸೆ.**

ಹೋಮಿಯೋಕೇರ್ ಇಂಟರ್ ನ್ಯಾಷನಲ್‌ನಲ್ಲಿನ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ಚಿಕಿತ್ಸಾ ವಿಧಾನದಿಂದ ಈ ಸಮಸ್ಯೆಯ ಪರಿಣಾಮಗಳನ್ನು ಸರಿಪಡಿಸಬಹುದಾಗಿದೆ. ಈ ಸಮಸ್ಯೆಯಿಂದಾಗಿ ಉಂಟಾಗುವಂತಹ ನೋವು, ಊತ ಮೊದಲಾದ ತೊಂದರೆಗಳಿಗೆ ಪರಿಣಾಮಕಾರಿಯಾದ ಚಿಕಿತ್ಸೆ ನೀಡಲಾಗುವುದು. ಇಲ್ಲಿ ರೋಗ ಲಕ್ಷಣ ಮಾತ್ರವಲ್ಲದೆ ರೋಗಿಯ ಮಾನಸಿಕ ಶಾರೀರಿಕ ಬದಲಾವಣೆಗಳು ಹಾಗೂ ಪರಿಸ್ಥಿಯನ್ನು ವಿವರವಾಗಿ ತಿಳಿದುಕೊಂಡು ಚಿಕಿತ್ಸೆ ನೀಡಲಾಗುವುದು. ಇದು ದೇಹದ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುವಲ್ಲಿ ಸಹಾಯಕಾರಿಯಾಗಿದೆ. ಚಿಕಿತ್ಸೆ ಹಾಗೂ ಚಿಕಿತ್ಸೆಯ ಅವಧಿಯು ಒಬ್ಬರಿಂದ ಒಬ್ಬರಿಗೆ ವ್ಯತ್ಯಾಸವಾಗಿರಬಹುದು ಹಾಗೂ ಫಲತಾಂಶವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತದೆ. ಫಲತಾಂಶಗಳು ವ್ಯಕ್ತಿಯ ದೇಹದ ರೋಗ ನಿರೋಧಕ ವ್ಯವಸ್ಥೆ ಹಾಗೂ ಅವರ ಅನಾರೋಗ್ಯದ ತೀವ್ರತೆಯನ್ನು ಅವಲಂಬಿಸುರುತ್ತದೆ.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

**ಶಾಖೆಗಳು:** ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

## ಮುನ್ನೋಟ 11-04-2021 ರಿಂದ 17-04-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1

ಸ್ನೇಹಿತರೊಡನೆ ವ್ಯವಹಾರ ಮಾಡುವಾಗ ಸ್ವಲ್ಪ ಎಚ್ಚರವಾಗಿರುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುವ ಸಾಧ್ಯತೆ ಇದೆ. ಹೆಚ್ಚು ಬಂಡವಾಳವನ್ನು ನಿರೀಕ್ಷಿಸುವ ಕೆಲಸಗಳನ್ನು ಸ್ವಲ್ಪ ಮುಂದೂಡುವುದು ಉತ್ತಮ. ಬಡವರಿಗೆ ದಾನ ಮಾಡಲು ಮನಸ್ಸು ಮಾಡುವಿರಿ. ಈ ಅವಕಾಶವನ್ನು ನಿಮ್ಮ ರಾಜಕೀಯ ಬೆಳವಣಿಗೆಗೂ ಸಹ ಬಳಸಿಕೊಳ್ಳಬಹುದು.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಮನೆಗೆ ಆತ್ಮೀಯರ ಆಗಮನವಾಗಲಿದೆ. ಮಹಿಳೆಯರು ತಮ್ಮ ವ್ಯಾಪಾರಗಳಲ್ಲಿ ಹೆಚ್ಚು ಪ್ರಭಾವ ಬೀರಲಿದ್ದಾರೆ. ಹಣಕಾಸಿನ ಸ್ಥಿತಿಯಲ್ಲಿ ಹಿನ್ನಡೆಯನ್ನು ಕಾಣಬಹುದು. ಭೂ ಸಂಬಂಧಿ ವ್ಯವಹಾರಗಳಲ್ಲಿ ಕಿರಿಕಿರಿ ಉಂಟಾಗಬಹುದು. ದೊಡ್ಡ ವ್ಯಕ್ತಿಗಳ ಸಹವಾಸದಿಂದ ಸಮಾಜದಲ್ಲಿ ಗೌರವ ಪಡೆಯುವಿರಿ. ಕೆಲವು ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳಿಗೆ ಬೇರೆಯ ಇಲಾಖೆಗಳಿಗೆ ವರ್ಗಾವಣೆಯಾಗಬಹುದು.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಆತಂಕದ ಛಾಯೆಯನ್ನು ಕಾಣಬಹುದು. ಕೆಲಸಕಾರ್ಯಗಳಲ್ಲಿ ದ್ವಂದ್ವ ನಿರ್ಧಾರಗಳಿಂದ ಹಿನ್ನಡೆಯಾಗಬಹುದು, ದೃಢ ನಿರ್ಧಾರಗಳಿಂದ ಮುಂದುವರೆಯುವುದು ಒಳ್ಳೆಯದು. ನ್ಯಾಯಾಲಯದಲ್ಲಿನ ತಗಾದೆಗಳು ಮಧ್ಯಸ್ಥರ ಮೂಲಕ ಸಂಧಾನಕ್ಕೆ ಬರಬಹುದು. ನಿಮ್ಮ ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳಿಂದ ಕಿರಿಕಿರಿಯಾಗಬಹುದು.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ

ಉದ್ಯಮ ಒಂದರಲ್ಲಿ ಹಣ ತೊಡಗಿಸಲು ಚಿಂತನೆ ನಡೆಸುವಿರಿ. ಬರಬೇಕಿದ್ದ ಹಣ ಈಗ ಬಂದು ಕೈಸೇರುತ್ತದೆ. ನಿರುದ್ಯೋಗಿಗಳಿಗೆ ಹೊಸ ಉದ್ಯೋಗಗಳ ಅವಕಾಶಗಳು ತೆರೆಯಲ್ಪಡುತ್ತವೆ. ಕೆಲವರಿಗೆ ರಾಜಕೀಯವಾಗಿ ಹೆಚ್ಚು ಪ್ರಬಲವಾಗುವ ಅವಕಾಶಗಳಿವೆ. ತಂದೆಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಶೀತ ಬಾಧೆಯಲ್ಲಿ ಇರುವವರು ಹೆಚ್ಚಿನ ನಿಗಾವಹಿಸಿರಿ.

**ಸಿಂಹ** — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗುತ್ತವೆ. ಕೃಷಿ ಚಟುವಟಿಕೆಯಲ್ಲಿ ಇರುವವರಿಗೆ ಬೇಕಾದ ಸಾಲ ಸೌಲಭ್ಯಗಳು ಒದಗಿ ಬರುತ್ತವೆ. ನಿಮ್ಮ ಶತ್ರುಗಳನ್ನು ನಯವಾಗಿ ಮಣಿಸಬಹುದು. ವಿವಾಹ ಸಂಬಂಧಗಳು ಒದಗಿ ಬರುವ ಸಾಧ್ಯತೆಗಳಿವೆ. ವ್ಯವಹಾರದಲ್ಲಿ ಕೆಲವರೊಂದಿಗೆ ಸಂಬಂಧ ವೃದ್ಧಿಸುತ್ತದೆ. ಲೇವಾ ದೇವಿ ವ್ಯವಹಾರವನ್ನು ಬಂಧುಗಳೊಂದಿಗೆ ಮಾಡಿದಲ್ಲಿ ಸಂಬಂಧ ಹಳಸಬಹುದು.

**ಕನ್ಯಾ** — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಪ್ರಮುಖ ಸಭೆಯಲ್ಲಿ ಭಾಗವಹಿಸಿ ಉನ್ನತ ವಿಷಯವೊಂದನ್ನು ಮಂಡಿಸುವಿರಿ ಹಾಗೂ ಅದಕ್ಕಾಗಿ ಎಲ್ಲರ ಮೆಚ್ಚುಗೆಯನ್ನು ಗಳಿಸುವಿರಿ. ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಅಗತ್ಯ. ಅನಗತ್ಯ ಮಾತುಗಳಿಂದ ನೆರೆಹೊರೆಯವರೊಂದಿಗೆ ಸಂಬಂಧ ಹಾಳಾಗಬಹುದು. ಧನಾದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ವೃತ್ತಿಯಲ್ಲಿ ಸ್ತ್ರೀಯರಿಂದ ಕಿರಿಕಿರಿ ಉಂಟಾಗಬಹುದು.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಸೌಂದರ್ಯವರ್ಧಕಗಳನ್ನು ತಯಾರಿಸಿ ಮಾರುವವರಿಗೆ ಮಾರಾಟ ಹೆಚ್ಚಾಗುತ್ತದೆ. ಸಾರ್ವಜನಿಕ ಕೆಲಸ ಮಾಡುವವರು ತಮ್ಮ ಕೈಯನ್ನು ಶುದ್ಧವಾಗಿಟ್ಟುಕೊಳ್ಳುವುದು ಬಹಳ ಮುಖ್ಯ. ನೀವು ಬೇರೆಯವರ ವಿರುದ್ಧ ಮಾಡಿದ ಪಿತೂರಿಯು ನಿಮ್ಮ ವಿರುದ್ಧವೇ ಕೇಳಿಬರತೊಡಗುತ್ತದೆ. ಜೀವನ ನಿರ್ವಹಣೆಗೆ ಸಹಾಯವಾಗುವ ಒಂದು ಆರ್ಥಿಕ ಸಂಪನ್ಮೂಲ ದೊರಕುತ್ತದೆ.

**ವೃಶ್ಚಿಕ** — ವಿಶಾಖೆ 4 ಅನೂರಾಧ, ಜ್ಯೇಷ್ಠ

ಗೃಹಿಣಿಯರು ಹರಿತವಾದ ಆಯುಧಗಳನ್ನು ಬಳಸುವಾಗ ಎಚ್ಚರಿಕೆವಹಿಸಿರಿ. ಎಂಜಿನಿಯರಿಂಗ್ ತಂತ್ರಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಗುಪ್ತಚರ ಇಲಾಖೆಯಲ್ಲಿ ಕೆಲಸ ಮಾಡುವವರ ಮೇಲೆ ಜವಾಬ್ದಾರಿ ಹೆಚ್ಚಾಗುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಸ್ವಂತ ಉದ್ದಿಮೆಯನ್ನು ನಡೆಸುವವರಿಗೆ ಓಡಾಟಗಳು ಹೆಚ್ಚಾಗುತ್ತವೆ.

**ಧನುಸ್ಸು** — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಕೃಷಿ ಸಂಬಂಧಿತ ಯಂತ್ರಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ನವೀನ ರೀತಿಯ ಕೃಷಿಯನ್ನು ಅಳವಡಿಸಿಕೊಳ್ಳುವ ಇಚ್ಛೆ ಬರುತ್ತದೆ, ಅದಕ್ಕೆ ಬೇಕಾದ ಮಾರ್ಗದರ್ಶನಗಳೂ ದೊರೆಯುತ್ತವೆ. ಸಾಲ ಕೊಟ್ಟವರು ಎಡೆಬಿಡದೆ ಮರುಪಾವತಿಗಾಗಿ ಬೇಡಿಕೆ ಇಡುವರು. ಸಮಾಧಾನದಿಂದ ಕೇಳಿಕೊಂಡಲ್ಲಿ ಹೆಚ್ಚಿನ ಕಾಲಾವಕಾಶ ನಿಮಗೆ ದೊರೆಯುವುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಹಿತಮಿತವಾದ ಮಾತುಗಳಿಂದ ಕಾರ್ಯಸಿದ್ಧಿಯಾಗುತ್ತದೆ. ಭೂ ವ್ಯವಹಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವೈಯಕ್ತಿಕ ಜೀವನದಲ್ಲಿ ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ಮನಸ್ಸಿಗೆ ನಿರಾಳವೆನಿಸುವುದು. ಉದ್ಯೋಗದ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಅನಿವಾರ್ಯತೆ ಇದೆ. ಅವಿವಾಹಿತರಿಗೆ ವಿವಾಹ ಸಂಬಂಧ ಕೂಡಿ ಬರುತ್ತದೆ.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ದೈನಂದಿನ ಕೆಲಸಗಳು ಯಶಸ್ವಿಯಾಗಿ ಸಾಗುತ್ತವೆ. ಹಿತಶತ್ರುಗಳ ವಿಚಾರದಲ್ಲಿ ಬಹಳ ಎಚ್ಚರಿಕೆ ಅಗತ್ಯ. ಬಂಧುಗಳು ನಿಮ್ಮನ್ನು ಹೊಗಳಿದರೆ ಅವರು ಆರ್ಥಿಕ ಸಹಾಯಕ್ಕಾಗಿ ಬರುವರೆಂದು ತಿಳಿಯಿರಿ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಮೇಲುಗೈ ಸಾಧಿಸಬಹುದು. ಹಣದ ಹರಿವು ಅಗತ್ಯಕ್ಕೆ ತಕ್ಕಷ್ಟು ಇದ್ದೇ ಇರುತ್ತದೆ.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕಾರ್ಯನಿರತ ಅಧಿಕಾರಿಗಳು ಸತ್ಯವನ್ನು ಬಯಲು ಮಾಡಲು ಹೋಗಿ ಅವಘಡಕ್ಕೆ ತುತ್ತಾಗುವ ಸಾಧ್ಯತೆಗಳಿವೆ. ಚಿನ್ನದ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚಾಗುವ ಲಕ್ಷಣಗಳಿವೆ. ಮಹಿಳೆಯರಿಗೆ ಆರ್ಥಿಕ ಸಬಲತೆಗೆ ಬೇಕಾದ ಅನುಕೂಲಗಳು ದೊರೆಯುತ್ತವೆ. ಸಿದ್ಧಪಡಿಸಿದ ಆಹಾರಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಕುಟುಂಬ ಸದಸ್ಯರಿಂದ ಹೆಚ್ಚಿನ ಸಹಕಾರ ದೊರೆಯುತ್ತದೆ.

## ಪದಬಂಧ 2682



**ಮೇಲಿನಿಂದ ಕೆಳಕ್ಕೆ**

1. ಅಮರತ್ವದ ಮಾಲೆ ಧರಿಸಿದ ಸಿಖ್ಖರ ಪುಣ್ಯಸ್ಥಳ 5
2. ನೀತಿ ನಿಯಮ ಪಾಲನೆಗೆ ಹೆಚ್ಚು ಕಡಿಮೆಯಿರದ ಮತ 5
3. ತಿಂಡಿ ತೀರ್ಥವನ್ನು ಆಶಿಸುವ ಶ್ವಾನದ ಕೂಸು 4
4. ಹಾಡು ಹಳೆಯದಾದರೂ ಭಾವ ಹೊಚ್ಚ ಹೊಸದು 5
9. ಮಗುವಿಗೆ ಮುದನೀಡುವ ಬಣ್ಣದ ಸದ್ದಿನ ಸಾಧನ 3
11. ಸ್ವರೂಪ ಮತ್ತು ಬಯಕೆ ಒಮ್ಮೊಮ್ಮೆ ವಿಕಾರ 3
12. ಅಮೃತವನ್ನು ಇಳಿಬಿಡುವ ಇಳೆ 3
13. ಹಾವನ್ನು ಹಿಡಿವ ಹಿರಿಯ ಹಕ್ಕಿ 3
14. ಮತ ಕುಲಗಳ ನಡುವೆ ನಡೆವ ಜಗಳ 5
15. ಎಲ್ಲಾ ಧರ್ಮಗಳೂ ಇಲ್ಲಿ ಸೇರಿವೆ 5
16. ಹೋರಾಟಕ್ಕೆ ಸಿದ್ಧವಿರುವ ಅಶ್ವ ದಳ 5
17. ಮನರಂಜನೆ ನೀಡುವಂತದ್ದು 4

**ಎಡದಿಂದ ಬಲಕ್ಕೆ**

1. ಅತಿ ಹೆಚ್ಚು ದ್ರವದಿಂದ ಕೂಡಿದ ಕಜ್ಜಾಯ 4
3. ಶ್ರೇಷ್ಠ ಹಾವಿನಜೊತೆ ಪಾರ್ಥ ಸೇರಿದ್ದಾನೆ 4
5. ಚೈತ್ರ ಮಾಸದಲ್ಲಿ ಚಿತ್ರಾನ್ನಕ್ಕೆ ರುಚಿಕೊಡುವ ಅಪಕ್ವ ಆಮ್ರ 5
6. ತಪಸ್ಸಿಗೆ ಸೂಕ್ತವಾದ ಅರಣ್ಯ 4
7. ರಾಧಿಕೆಯ ನೃತ್ಯಕ್ಕೆ ಸಾಕ್ಷಿಯಾದ ಜೇನಿನ ಕಾಡು 4
8. ಶುಭ್ರ ಬಿಳಿ ಹಿಮದ ಪರ್ವತ 5
10. ಕುಂಚದ ಕಲೆಯಲ್ಲಿ ಸೂರ್ಯನ ಕೀರ್ತಿ ಪಡೆದ ಕೇರಳ ರಾಜ 4
12. ಕಾಡು ಹಿಂದು ಮುಂದಾದರೆ ಹೊಸದಾಗಿ ಕಾಣುವುದು 2
13. ಗ್ರಾಹಕನ ವರಟು ನಾಮ 3
14. ಸಂಸ್ಕೃತದಲ್ಲಿ ಹುಟ್ಟುವವ 2
15. ಭೂಮಿಯಲ್ಲಿ ಅಡಗಿರುವ ಏಳು ರೀತಿಯ ಲೋಹ 4
17. ನಾಟಕದ ಮುಖ್ಯ ಗಂಡು ಪಾತ್ರಧಾರಿ 5
18. ಮಹಾಭಾರತದ ಯುದ್ಧದಲ್ಲಿ ಪಾಂಡವರ ಲಾಂಛನ 4
19. ನೂರು ಸಾವಿರ ಪಾಲು 4
20. ನಿಯಂತ್ರಣಕ್ಕೆ ರೂಪಿಸುವ ಕಾನೂನು ಕಟ್ಟಳೆ 5
21. ವಿಷ್ಣುವಿನ ಪ್ರೀತಿಗೆ ಪಾತ್ರನಾದವ 4
22. ಮನೆಯ ಕೆಳಗಿರುವ ಮನೆ 4

### ಪದಬಂಧ ಉತ್ತರ -2681

**ಮೇಲಿಂದ ಕೆಳಕ್ಕೆ**

1.ಸಲ್ಲಾಪ 2.ರಮ 3.ಕಲೆ 4.ನೆರಿಗೆ 6.ಸಾಹಸಂ 8.ಭವಭಯ 9.ಶಿರ 11.ಕಲಾಪ 13.ವಸತಿ 14.ಬಂಧನ 16.ಕನ್ನಗಿ 18.ದಮನಕ 21.ಕೋಣ 22.ಲೆಕ್ಕಿಗ 23.ಪ್ರಚಾರ 25.ಚೆಲುವೆ 26.ಅಂಧ 27.ಮದ

**ಎಡದಿಂದ ಬಲಕ್ಕೆ**

1.ಸರ್ವಾಧಿಕಾರ 3.ಕವಿಕಲ್ಪನೆ 5.ಮಸಾಲೆ 7.ಪದ್ಮನಾಭ 9.ಶಿವಗಂಗೆ 10.ವರ್ಣಸಂಕರ 12.ಮಾವ 14.ಬಂಟ 15.ಸಹಾಯಕ 17.ಪದಬಂಧ 19.ಮತಿ 20.ನಡೆ 21.ಕೋಗಿಲೆಗಾನ 23.ಪ್ರಕರಣ 24.ಕಡಲಾಚೆ 26.ಅಂಗದ 28.ರಕ್ತಸಂಬಂಧ 29.ಮರುಮದುವೆ

# ಬಾಬಾಸಾಹೇಬರ ಸೂಟು

ಸೂಟುಧಾರಿ ಅಂಬೇಡ್ಕರ್ ಭಾವಚಿತ್ರದ ಫ್ರೇಮನ್ನು ಸರಿಪಡಿಸುತ್ತಿರುವ ಬೀದಿ ಬದಿಯ ವ್ಯಾಪಾರಿ ಚಿತ್ರ: ದಾನಿಶ್ ಸಿದ್ದಿಕಿ

**ವಿಜಯಕುಮಾರ ಎಂ. ಬೋರಟ್ಟಿ**

> ಮೈಸೂರಿನ ಅಶೋಕಪುರಂನ ದರ್ಜಿ ತನ್ನ ಅಂಗಡಿಯ ಮುಂದೆ ಸೂಟುಧಾರಿ ಅಂಬೇಡ್ಕರ್ ಅವರ ಭಾವಚಿತ್ರ ಹಾಕಿದ್ದು ಏಕೆ? ಭಾರತದ ಸಂವಿಧಾನಶಿಲ್ಪಿಯ ಉಡುಪು ನಮಗೆ ನೀಡುತ್ತಿರುವ ಸಂದೇಶವಾದರೂ ಯಾವುದನ್ನು? ಬಾಬಾಸಾಹೇಬರ ಜನ್ಮದಿನದ ಸಂದರ್ಭದಲ್ಲಿ ಅವರ ಸೂಟಿನ ಕುರಿತು ಹೀಗೊಂದು ಮೀಮಾಂಸೆ...

ಮೈಸೂರಿನ ಅಶೋಕಪುರಂನ (ಹೆಚ್ಚಾಗಿ ಪರಿಶಿಷ್ಟ ವರ್ಗದವರು ಇಲ್ಲಿ ವಾಸಿಸುತ್ತಾರೆ) ಗಲ್ಲಿಯಲ್ಲಿ ಒಂದು ಟೈಲರ್ ಅಂಗಡಿ ಇದೆ. ಬಹಳ ಹಿಂದೆ ಆ ಅಂಗಡಿಯ ಮುಂದೆ ಡಾ. ಅಂಬೇಡ್ಕರ್ ಅವರ ಸುಂದರ ಮತ್ತು ವರ್ಣಮಯವಾದ ಚಿತ್ರ ಇತ್ತು. ಸುಮಾರು ಆರು ಅಡಿಗಳಷ್ಟು ಎತ್ತರವಿದ್ದ ಆ ಭಾವಚಿತ್ರವು ನಾನು ಆ ಗಲ್ಲಿಯನ್ನು ಹಾದು ಹೋದಾಗಲೆಲ್ಲ ಆಕರ್ಷಿಸುತ್ತಿತ್ತು. ಆ ಅಂಗಡಿಯ ದರ್ಜಿಯು ಅಂಬೇಡ್ಕರರ ಅಭಿಮಾನಿ ಎಂಬುದು ಆ ಭಾವಚಿತ್ರದಿಂದ ಸ್ಪಷ್ಟವಾಗಿ ತಿಳಿಯುತ್ತಿತ್ತು. ನಾನು ಆ ಭಾವಚಿತ್ರವನ್ನು ಯಾವಾಗಲೂ ಸಂಶೋಧನಾ ದೃಷ್ಟಿಯಿಂದಲೇ ವೀಕ್ಷಿಸುತ್ತಿದ್ದೆ. ಆ ಭಾವಚಿತ್ರದ ಔಚಿತ್ಯ ನನ್ನನ್ನು ಬಹಳ ಸಲ ಯೋಚನೆಗೆ ಹಚ್ಚುತ್ತಿತ್ತು.

ಅಂಬೇಡ್ಕರರು ಆ ಚಿತ್ರದಲ್ಲಿ ಆಧುನಿಕ ಸೂಟ್, ಬೂಟ್ ಹಾಕಿಕೊಂಡು ಸುಂದರವಾಗಿ ಕಾಣುವ ಒಬ್ಬ ವ್ಯಕ್ತಿ. ದರ್ಜಿಯು ಅಂಬೇಡ್ಕರರನ್ನು ಒಬ್ಬ ಮಾಡೆಲ್ ಆಗಿ ಕಾಣುವಂತೆ ಮಾಡಲು ಮತ್ತು ತನ್ನ ಅಂಗಡಿಯ ಸುತ್ತಲಿನ ಗ್ರಾಹಕರನ್ನು ಆಕರ್ಷಿಸಲು ಈ ರೀತಿಯ ಭಾವಚಿತ್ರವನ್ನು ಚಿತ್ರಿಸಿದ್ದ ಅಂತ ಅನಿಸುತ್ತದೆ. ತನ್ನ ವೃತ್ತಿಗೆ ಅನುಕೂಲವಾಗುವಂತೆ ಮತ್ತು ತಾನು ಇಷ್ಟಪಟ್ಟ ಅಂಬೇಡ್ಕರರ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸುವುದಕ್ಕೆ ಆ ಚಿತ್ರವನ್ನು ಅಂಗಡಿಯ ಮುಂದೆ ಚಿತ್ರಿಸಿರುವುದು ಎದ್ದು ಕಾಣುತ್ತಿತ್ತು. ಅಂಬೇಡ್ಕರರ ಭಾವಚಿತ್ರ ಉಪಭೋಗ ದೃಷ್ಟಿಯಿಂದಲೂ ಸಾಂಕೇತಿಕವಾಗಿ ಮತ್ತು ಅರ್ಥಪೂರ್ಣವಾಗಿ ಗೋಚರಿಸುತ್ತಿತ್ತು.

ಸಾಮಾನ್ಯವಾಗಿ ಒಂದೇ ಬಗೆಯ, ಏಕದೃಷ್ಟಿಕೋನದ ಮತ್ತು ಒಂದೇ ರೀತಿಯ ಭಾವಚಿತ್ರದಲ್ಲಿ ಕಾಣುವ ಅಂಬೇಡ್ಕರರು ಈ ಟೈಲರ್ ಅಂಗಡಿಯ ಮುಂದೆ ಅಪೂರ್ವವಾದ ಅರ್ಥ ಮತ್ತು ನಾವೀನ್ಯದ ದೃಷ್ಟಿಕೋನವನ್ನು ಹೊಂದಿದ್ದಾರೆ ಎಂದು ನನಗೆ ಅನಿಸಿತು. ಈ ಅಂಗಡಿಯ ಟೈಲರ್‌ಗೆ ಅಂಬೇಡ್ಕರರು ಆಧುನಿಕ ಶೈಲಿಯ, ನೀಟಾಗಿ, ಶಿಸ್ತಾಗಿ ಮತ್ತು ಸುಂದರವಾಗಿ ಕಾಣುವ ವ್ಯಕ್ತಿ. ಅವರ ಉಡುಪು ಮತ್ತು ನಿಂತಿರುವ ಭಂಗಿ ಈಗಿನವರಿಗೆ ಅನುಕರಣೀಯ ಎಂದು ಆ ಟೈಲರ್ ಸಾರಿ, ಸಾರಿ ಹೇಳುವಂತೆ ಅನಿಸಿತು. ಬಹಳ ಇತ್ತೀಚಿನವರೆಗೂ ಅಂಬೇಡ್ಕರರನ್ನು ಸಾರ್ವಜನಿಕ ವಲಯ/ಕಲ್ಪನೆಯಿಂದ ದೂರವಿಟ್ಟಿದ್ದು ಕಟು ವಾಸ್ತವ. ಆದರೆ ಅಶೋಕಪುರಂನ ದರ್ಜಿಗೆ ಶಿಸ್ತಾಗಿ ಹಾಗೂ ಸ್ಟೈಲಾಗಿ ನಿಂತಿರುವ ಅಂಬೇಡ್ಕರರ ಭಾವಚಿತ್ರವು ಆತ್ಮಗೌರವ ಹಾಗೂ ಅಭಿಮಾನದ ಸಂಕೇತ.

ಅಂಬೇಡ್ಕರರನ್ನು ಆ ರೀತಿ ವಾಣಿಜ್ಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅವನು ಹಿಂಜರಿಯುವುದಿಲ್ಲ. ತನ್ನ ಅಂಗಡಿಯ ಮುಂದೆ ಅವರ ಭಾವಚಿತ್ರವನ್ನು ಹಾಕಲು ಅವನಿಗೆ ಆತ್ಮಸ್ಥೈರ್ಯ ತುಂಬಿದ್ದು ಕಳೆದ ಐವತ್ತು ವರ್ಷಗಳಲ್ಲಿ ಅಂಬೇಡ್ಕರರ ಬಗ್ಗೆ ಉಂಟಾದ ಜನಜಾಗೃತಿ ಎಂದು ಹೇಳಬಹುದು.

ಅಂಬೇಡ್ಕರರನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿಕೊಂಡಿದ್ದುದು ಭಿನ್ನ ಅಭಿರುಚಿಯ ಮತ್ತು ಭಿನ್ನ ದೃಷ್ಟಿಕೋನದ ಅಂಶವನ್ನು ತಿಳಿಸುತ್ತದೆ. ಅವರನ್ನು ಭಿನ್ನವಾಗಿ ಚಿತ್ರಿಸಿರುವ ಅಥವಾ ಭಾವಿಸಿಕೊಂಡಿರುವ ನಿದರ್ಶನಗಳು ಇಲ್ಲವೇ ಇಲ್ಲ ಎಂದು ಹೇಳಲು ಅಸಾಧ್ಯ. ಪ್ರಸಿದ್ಧ ದಲಿತ ಚಿಂತಕ ಮತ್ತು ಕಾರ್ಯಕರ್ತರಾದ ಚಂದ್ರಭಾನು ಪ್ರಸಾದರ ಜೀರೋ ಪ್ಲಸ್ ಎಂಬ ಸಂಸ್ಥೆಯು ಅಂಬೇಡ್ಕರರ ಉಡುಪಿನ ತಾತ್ವಿಕ ಚಿಂತನೆಯನ್ನು ಗಂಭೀರವಾಗಿ ತೆಗೆದುಕೊಂಡು ಉತ್ತರ ಪ್ರದೇಶದಲ್ಲಿ ಅನೇಕ ವಾಣಿಜ್ಯ ಉಪಭೋಗದ ವಸ್ತುಗಳನ್ನು ತಯಾರಿಸಿ (ವಿಶೇಷವಾಗಿ ಆಧುನಿಕ ಶರ್ಟ್ ಮತ್ತು ಪ್ಯಾಂಟ್‌ಗಳು), ಮಾರಾಟ ಮಾಡಲು ಸಕ್ರಿಯ ಹೆಜ್ಜೆಗಳನ್ನು ಇಟ್ಟಿದೆ. ವಾಣಿಜ್ಯ ಕ್ಷೇತ್ರದಲ್ಲಿ ಅತಿ ವಿರಳ ಸಂಖ್ಯೆಯಲ್ಲಿರುವ ದಲಿತರನ್ನು ಈ ಕ್ಷೇತ್ರಕ್ಕೆ ತರಲು ಮಾಡುವ ಪ್ರಯತ್ನಗಳಿವು ಎಂದು ಅವರು ಭಾವಿಸುತ್ತಾರೆ. ಅವರು ಕೂಡ ಅಂಬೇಡ್ಕರರ ಭಾವಚಿತ್ರವನ್ನು ಆಧುನಿಕ/ಪಾಶ್ಚಾತ್ಯ ಉಡುಪಿನಲ್ಲೇ ಪ್ರದರ್ಶಿಸಲು ಇಚ್ಛಿಸುತ್ತಾರೆ. ಏಕೆಂದರೆ ಅಂಬೇಡ್ಕರರ ಉಡುಪು ಕೇವಲ ಮಾನ ಮುಚ್ಚಿಕೊಳ್ಳಲು ಇರುವ ವಸ್ತ್ರವಲ್ಲ; ಅದು ಆಧುನಿಕತೆ, ಶಿಸ್ತು , ವಿದ್ಯೆ, ಗೌರವ, ಶಕ್ತಿ, ಸಾಮಾಜಿಕ ಸಮಾನತೆ, ಸೌಂದರ್ಯ ಮತ್ತು ಪ್ರತಿರೋಧದ ಸಂಕೇತವು ಕೂಡ ಹೌದು ಎಂದು ಅವರು ವಾದಿಸುತ್ತಾರೆ. ಪ್ರಸಿದ್ಧ ಇತಿಹಾಸಕಾರ ಮತ್ತು ಚಿಂತಕರಾದ ರಾಮಚಂದ್ರ ಗುಹಾ ಅವರ ಪ್ರಕಾರ ದಲಿತರಿಗೆ ಅಂಬೇಡ್ಕರರನ್ನು ಆಧುನಿಕ/ಪಾಶ್ಚಾತ್ಯ ಉಡುಪಿನಲ್ಲಿ ಕಲ್ಪಿಸಿಕೊಳ್ಳುವುದು ಅಥವಾ ವಿಜೃಂಭಿಸುವುದು ಪ್ರಬಲ ವರ್ಗಗಳ ಜನರ ಸಮಾನಕ್ಕೆ ನಿಲ್ಲುವ ಒಂದು ಪ್ರಯತ್ನವೇ ಆಗಿದೆ. ತಲೆತಲಾಂತರದಿಂದ ಒಂದಿಂಚು ವಸ್ತ್ರವನ್ನೂ ಕೊಡದ ಸಮಾಜದಲ್ಲಿ ಅಂಬೇಡ್ಕರರ ಉಡುಪು ಸಾಮಾಜಿಕ ನ್ಯಾಯದ ಸಂಕೇತ ಎಂದು ಗುಹಾರವರು ಬರೆಯುತ್ತಾರೆ.

ಪ್ರಸಿದ್ಧ ವ್ಯಕ್ತಿ, ದೇವರುಗಳನ್ನು ಅನೇಕ ಕಾಲ್ಪನಿಕ ದೃಷ್ಟಿಕೋನಗಳಿಂದ ಭಿನ್ನ, ಭಿನ್ನವಾಗಿ ಚಿತ್ರಿಸಿರುವ ಭಾರತದಲ್ಲಿ ಅಂಬೇಡ್ಕರರನ್ನು ಇನ್ನೂ ಯಾಕೆ ಆಧುನಿಕ/ಪಾಶ್ಚಾತ್ಯ ಉಡುಪಿನಲ್ಲಿ ನೋಡಲು ಇಚ್ಛಿಸುತ್ತಾರೆ? ಅವರನ್ನು ಭಿನ್ನವಾದ ಗೆಟಪ್‌ನಲ್ಲಿ ಕಲ್ಪಿಸಿಕೊಳ್ಳಲು ಅಥವಾ ಚಿತ್ರಿಸಲು ಪ್ರಯತ್ನಗಳು ನಡೆದಿಲ್ಲವೇ? ಮೇಲೆ ಉಲ್ಲೇಖಿಸಲ್ಪಟ್ಟ ಸಂಕೇತಗಳು ಅಂಬೇಡ್ಕರರ ವ್ಯಕ್ತಿತ್ವ ಮತ್ತು ಸಿದ್ಧಾಂತವನ್ನು ಪ್ರದರ್ಶಿಸುತ್ತವೆ. ಇವು ಅಂಬೇಡ್ಕರರು ನಂಬಿದ ಜೀವನ ತತ್ವವನ್ನು ಪ್ರತಿಬಿಂಬಿಸುವ ಅಂಶಗಳು. ಈ ಅಂಶಗಳನ್ನು ನಂಬಿರುವ ಸಾವಿರಾರು ಭಾರತೀಯರಿಗೆ ಅಂಬೇಡ್ಕರರನ್ನು ಬೇರೆ ಗೆಟಪ್‌ನಲ್ಲಿ ಕಲ್ಪಿಸಿಕೊಳ್ಳುವುದೆಂದರೆ ಅವರ ನೀತಿ, ತತ್ವ, ಸಿದ್ಧಾಂತ ಹಾಗೂ ನಂಬಿಕೆಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಂತೆ. ಅಂಬೇಡ್ಕರರನ್ನು ಆಧುನಿಕ ಡ್ರೆಸ್ ಕೋಡ್‌ನಲ್ಲಿ ಕಲ್ಪಿಸಿಕೊಳ್ಳುವುದು ಅವರಿಗೆ ಒಂದು ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತವನ್ನು ಘೋಷಿಸಿದಂತೆ. ಇಷ್ಟಾದಾಗ್ಯೂ ಅಂಬೇಡ್ಕರರನ್ನು ಬೇರೆ ದೃಷ್ಟಿಕೋನದಿಂದ, ಭಿನ್ನವಾದ ಕಾಲ್ಪನಿಕ ನೆಲೆಯಿಂದ ಯಾರು ಕೂಡ ನೋಡಿಲ್ಲ ಎಂದು ಖಡಾಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ಐತಿಹಾಸಿಕವಾಗಿ ಅಂಬೇಡ್ಕರರನ್ನು ಮತ್ತು ಅವರ ಉಡುಪಿನ ಸಂಕೇತಗಳನ್ನು ಆಮೂಲಾಗ್ರವಾಗಿ ಬದಲಾಯಿಸುವ ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಎರಡು ಉದಾಹರಣೆಗಳು ಮುಖ್ಯ.

ಮೊದಲನೆಯದು ಇತ್ತೀಚೆಗೆ ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಅಂಬೇಡ್ಕರರ ಪುತ್ಥಳಿಯನ್ನು ಸ್ಥಾಪಿಸುವಾಗ ಅಂಬೇಡ್ಕರರ ಉಡುಪಿನ ವಿನ್ಯಾಸವನ್ನು ಬದಲಾಯಿಸಿ, ಪ್ರತಿಗಾಮಿತನವನ್ನು ಸೂಚಿಸುವ ವರ್ಣವನ್ನು ಅದಕ್ಕೆ ಹಚ್ಚುವ ಪ್ರಯತ್ನಗಳು ನಡೆಯುತ್ತಿವೆ. ಆದರೆ, ಇದಕ್ಕೆ ಅನೇಕರಿಂದ (ವಿಶೇಷವಾಗಿ ದಲಿತರಿಂದ) ಪ್ರತಿರೋಧವು ವ್ಯಕ್ತವಾಗಿದೆ. ಅವರ ಉಡುಪಿನ ವಿನ್ಯಾಸವನ್ನು ಬದಲಾಯಿಸುವ ಪ್ರಯತ್ನಗಳು ಸಾಮಾಜಿಕ ಮತ್ತು ರಾಜಕೀಯ ಸಮಾನತೆ-ವಿರೋಧಿಯ ಸಂಕೇತವೆಂದು ಭಾವಿಸಲಾಗಿದೆ. ಹಾಗಾಗಿ ಅಂಬೇಡ್ಕರರನ್ನು ಭಿನ್ನವಾದ ದೃಷ್ಟಿಕೋನದಿಂದ ಕಲ್ಪಿಸಿಕೊಂಡು, ಅದಕ್ಕೊಂದು ಸಾಕಾರ ರೂಪವನ್ನು ಕೊಡುವುದು ಸಾವಿರಾರು ಭಾರತೀಯರಿಗೆ ಅನುಮಾನಾಸ್ಪದ ಸಂಗತಿಯಾಗಿ ಕಾಣುತ್ತದೆ.

ಎರಡನೆಯದು ಅಂಬೇಡ್ಕರರ ಕುರಿತು ಲಭ್ಯವಿರುವ ಕಾರ್ಟೂನ್ ಚಿತ್ರಗಳಲ್ಲಿ ಅವರನ್ನು ಭಿನ್ನವಾಗಿ ಚಿತ್ರಿಸಿರುವ ಉದಾಹರಣೆಗಳು ಸಿಗುತ್ತವೆ. ಅಂಬೇಡ್ಕರರ ಕಾರ್ಟೂನ್ ಚಿತ್ರಗಳನ್ನು ಅಧ್ಯಯನ ಮಾಡಿರುವ ಉನ್ಮತಿ ಶ್ಯಾಮಸುಂದರರ ಪುಸ್ತಕದಲ್ಲಿ (No Laughing Matter) ಅಂಬೇಡ್ಕರರನ್ನು ಸವರ್ಣೀಯರು ಕಲ್ಪಿಸಿಕೊಂಡಿರುವ (ಎಪ್ಪತ್ತು ವರ್ಷಗಳ ಹಿಂದೆ) ಬಗೆಯನ್ನು ಟೀಕಿಸಿದ್ದಾರೆ. ಈ ಕಾರ್ಟೂನ್‌ಗಳು ಸವರ್ಣೀಯರ ಕುಚೋದ್ಯದ ಸಂಕೇತವೆಂದು ಅವರು ವಾದಿಸುತ್ತಾರೆ. ಕಾರ್ಟೂನ್ ಚಿತ್ರಗಳು ಮನರಂಜನೆಗೆ ಮಾತ್ರ ಸೀಮಿತವಲ್ಲ ಎಂದು ವಾದಿಸುತ್ತಾ, ಅಂಬೇಡ್ಕರ್ ಕಾರ್ಟೂನ್‌ಗಳ ಹಿಂದಿನ ಅಸ್ಪೃಶ್ಯತೆ-ಸಿದ್ಧಾಂತ ಮತ್ತು ಆಚರಣೆಗಳನ್ನು (ಸವರ್ಣೀಯರ ನಂಬಿಕೆಗಳಾಧಾರಿತ) ಬಯಲುಗೊಳಿಸಿದ್ದಾರೆ. ಕಲ್ಪನೆ ಮತ್ತು ಚಿತ್ರಕಲೆಯು ಕೂಡ ಸಾಮಾಜಿಕ ಮತ್ತು ಆರ್ಥಿಕ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗುವ ಸಾಧನಗಳೆಂದು, ಹಾಗಾಗಿ ಅವು ಸಾಮಾಜಿಕ ಹುನ್ನಾರವನ್ನು ಒಳಗೊಂಡಿರುತ್ತವೆಯೆಂದು ಈ ಪುಸ್ತಕದಲ್ಲಿ ತೋರಿಸಲಾಗಿದೆ.

ಅಧ್ಯಯನ ಮತ್ತು ಸಂಶೋಧನ ದೃಷ್ಟಿಯಿಂದ ಇದುವರೆಗೆ ಅಂಬೇಡ್ಕರರನ್ನು ಭಾರತೀಯ ಸಮಾಜಗಳು ಯಾವ ರೀತಿಯಲ್ಲಿ ಕಾಲ್ಪನಿಕ ದೃಷ್ಟಿಕೋನದಿಂದ ಪರಿಭಾವಿಸಿವೆ ಎಂದು ತಿಳಿದುಕೊಳ್ಳುವ ಐತಿಹಾಸಿಕ ಜರೂರತ್ತು ಹಿಂದಿಗಿಂತಲೂ ಈಗ ಹೆಚ್ಚಾಗಿದೆ. ಇದರಿಂದ ಭಾರತೀಯ ಸಮಾಜಗಳ ಲಕ್ಷಣಗಳು ಮತ್ತು ಸ್ವಭಾವವನ್ನು ಅರಿತುಕೊಳ್ಳಲು ಅನುಕೂಲವಾಗುತ್ತದೆ. ‘ಲೋಕೋ ಭಿನ್ನ ರುಚಿಃ ಅವರವರ ಕಲ್ಪನೆಗೆ ನಿಲುಕಿದ್ದು’ ಎಂದು ಅನೇಕಾನೇಕ ಭಾವಗಳನ್ನು/ಕಲ್ಪನೆಗಳನ್ನು ನಿರ್ಲಕ್ಷಿಸಿದರೆ ಭಾವಗಳು ಹೊರಸೂಸುವ ಚಿತ್ರಗಳ ಐತಿಹಾಸಿಕ ಮಹತ್ವ ನಮಗೆ ತಿಳಿಯದೇ ಹೋಗುತ್ತದೆ. ಚಿತ್ರಕಾರರ ಮನೋಧೋರಣೆ, ಸಾಮಾಜಿಕ ನಿಲುವು, ರಾಜಕೀಯ ಒಲವು ಹಾಗೂ ಆರ್ಥಿಕ ಸ್ಥಾನಮಾನಗಳನ್ನು ಅರಿಯಲು ಇಂತಹ ‘ಲೋಕೋ ಭಿನ್ನ ರುಚಿಃ’ ಕಲೆಯ ವಿಶ್ಲೇಷಣೆ ಅತ್ಯಗತ್ಯ. ಈ ದಿಸೆಯಲ್ಲಿ ಪ್ರಸ್ತುತ ಲೇಖನ ಒಂದು ಪುಟ್ಟ ಹೆಜ್ಜೆ. ಅಂಬೇಡ್ಕರರ ಜನ್ಮದಿನವನ್ನು ಆಚರಿಸಲು ಇರುವ ಮತ್ತೊಂದು ಮಾರ್ಗ ಅವರೇ ಪ್ರತಿಪಾದಿಸಿದ ಶಿಕ್ಷಣವಲ್ಲದೆ (ಜ್ಞಾನ ಸಂಪಾದನೆ/ಉತ್ಪಾದನೆ, ಸಮಾನತೆ, ಬೌದ್ಧಿಕ ಶಕ್ತಿಗಳಿಗೆ ಸಂಕೇತ) ಮತ್ತೇನು ಇರಲು ಸಾಧ್ಯ?

...ಹಿಂದಿನ ಪುಟದಿಂದ

ಯೂಟ್ಯೂಬ್‌ನಲ್ಲಿ ಇತ್ತೀಚೆಗೆ ಹೊಸ ಸಂಚಲನವನ್ನೇ ಮೂಡಿಸಿರುವ ತಮಿಳು ರ‍್ಯಾಪ್ ಹಾಡು ‘ಎಂಜಾಯ್ ಎಂಜಾಮಿ’ ಜಾಗತಿಕ ಪ್ರತಿರೋಧದ ಸಂಗೀತಕ್ಕೆ ಹೊಸ ಸೇರ್ಪಡೆ. ಈ ಹಾಡು ಅತ್ಯದ್ಭುತ ಸಂಗೀತ ಸಂಯೋಜನೆ ಮತ್ತು ಗುಣಮಟ್ಟದ ನಿರ್ಮಾಣದ ಮೂಲಕ ದೇಸಿ ದಲಿತ ಸಂವೇದನೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದಿದೆ. ಮಾರ್ಚ್ 7ರಂದು ಬಿಡುಗಡೆಯಾದ ಈ ಹಾಡು, ಈ ಲೇಖನ ಬರೆಯುವ ಹೊತ್ತಿಗೆ 12 ಕೋಟಿ ವೀಕ್ಷಣೆ ಪಡೆದುಕೊಂಡು ಮುನ್ನುಗ್ಗುತ್ತಿದೆ.

‘ರೌಡಿ ಬೇಬಿ’ ಖ್ಯಾತಿಯ ಧೀ ಮತ್ತು ತಮಿಳು ರ‍್ಯಾಪರ್ ‘ಅರಿವು’ ಎಂದೇ ಪ್ರಖ್ಯಾತರಾಗಿರುವ ಅರಿವರಸು ಲೈನೇಸನ್ ರಚಿಸಿ, ಹಾಡಿರುವ ‘ಎಂಜಾಯ್ ಎಂಜಾಮಿ’ ಹಾಡಿಗೆ ‘ಕಬಾಲಿ’ ಸಿನಿಮಾ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಸಂಗೀತ ಸಂಯೋಜನೆಯಿದೆ. ಸಮಾನತೆ, ಸಹಬಾಳ್ವೆ, ಸಮಪಾಲು, ಇಂತಹ ಆಶಯಗಳನ್ನಿಟ್ಟುಕೊಂಡು ತಮಿಳಿನ ‘ಒಪ್ಪಾರಿ’ ಮತ್ತು ‘ಗಾನಾ’ (ಚರಮಗೀತೆ/Funeral song) ಪ್ರಭಾವಳಿಯಲ್ಲಿ ಸಂಯೋಜನೆಗೊಂಡಿರುವ ಈ ಹಾಡನ್ನು, ಕೇವಲ ಒಂದು ಪ್ರಯೋಗವಾಗಿ ಅಲ್ಲ, ಒಂದು ಮೌನಕ್ರಾಂತಿಯ ಭಾಗವಾಗಿ ನೋಡಬೇಕಿದೆ.

ನೆಲ, ಜಲ, ಕಾಡು, ಜೀವವೈವಿಧ್ಯ ಎಲ್ಲದರ ಬಗ್ಗೆ ಹಾಡಿನಲ್ಲಿ ಉಲ್ಲೇಖವಿದೆ. ‘ನಾಯಿ, ನರಿ, ತೋಳಗಳಿಗೂ ಈ ಭೂಮಿ, ಕೆರೆಕುಂಟೆಗಳು, ನದಿ ಸಾಗರಗಳ ಮೇಲೆ ಹಕ್ಕಿದೆ’ ಎಂಬ ಸಾಲು ಸಾಕು ಇದು ಸಾಮಾನ್ಯ ರ‍್ಯಾಪ್ ಸಾಂಗ್ ಅಲ್ಲ ಎನ್ನುವುದಕ್ಕೆ. ಹಾಡಿನ ಉದ್ದಕ್ಕೂ ಮಣ್ಣಿನ ಘಮಲು ಅನುಭವಕ್ಕೆ ಬರುತ್ತದೆ. ‘ನಮ್ಮ ಪೂರ್ವಜರು ನಮಗೆ ಬಳುವಳಿಯಾಗಿ ನೀಡಿದ ಭೂಮಿಯಲ್ಲಿ ಮನುಷ್ಯರಿಗೆ, ಪ್ರಾಣಿಪಕ್ಷಿಗಳಿಗೆ, ಸಸ್ಯಸಂಕುಲಕ್ಕೆ ಎಲ್ಲರಿಗೂ ಹಕ್ಕಿದೆ. ಎಲ್ಲರೂ ಸಹಬಾಳ್ವೆಯಿಂದ ಸಂತಸ ಹಂಚಿಕೊಳ್ಳೋಣ’ ಎಂಬ ಆಶಯವಿದೆ. ಎ.ಆರ್. ರೆಹಮಾನ್ ಹುಟ್ಟು ಹಾಕಿರುವ ಮಾಝಾ ಎಂಬ ಸಂಗೀತ ಸಂಸ್ಥೆ ಈ ಹಾಡನ್ನು ನಿರ್ಮಿಸಿದ್ದು, ಅಮಿತ್ ಕೃಷ್ಣನ್ ಮ್ಯೂಸಿಕ್ ವಿಡಿಯೊ ನಿರ್ದೇಶಿಸಿದ್ದಾರೆ.

‘ಕಡಲು, ಮಳೆ, ನೆಲ, ಕೊಳ ಎಲ್ಲವೂ ಎಲ್ಲರಿಗೂ ಸೇರಿದ್ದು’ ಎಂಬ ಆಶಯ ವ್ಯಕ್ತವಾದರೂ, ‘ಇಂತಹ ಸುಂದರವಾದ ತೋಟ ಬೆಳೆಸಿದ ನಮ್ಮ ಗಂಟಲುಗಳು ಈಗಲೂ ಒಣಗಿವೆ’ ಎಂಬ ವಿಷಾದ ಕೂಡ ಇದೆ. ಒಂದು ರೀತಿಯಲ್ಲಿ ಬ್ರಾಹ್ಮಣ್ಯದ ಪ್ರಭಾವಳಿಯಿಂದ ತುಂಬಿಹೋಗಿರುವ ದಕ್ಷಿಣ ಭಾರತದ ಸಾಂಸ್ಕೃತಿಕ ಜಗತ್ತಿನಲ್ಲಿ ಸಂಗೀತ ಮತ್ತು ದೃಶ್ಯಗಳ ಮೂಲಕ ಈ ಸೀಮಿತ ಚೌಕಟ್ಟನ್ನು ಮೀರುವ ಬಂಡಾಯದ ಹೊಸ ಮಾದರಿಯಾಗಿ ರ‍್ಯಾಪ್ ಅನ್ನು ನೋಡಬಹುದು.

ತಮಿಳುನಾಡಿನ ಸಂಗೀತ ಜಗತ್ತಿನಲ್ಲಿ ಇಂತಹ ಪ್ರಯತ್ನಗಳು ದೊಡ್ಡ ಮಟ್ಟದಲ್ಲಿಯೇ ನಡೆಯುತ್ತಿವೆ. ಖ್ಯಾತ ನಿರ್ದೇಶಕ ಪಾ. ರಂಜಿತ್ ಹುಟ್ಟುಹಾಕಿರುವ ‘ಕ್ಯಾಸ್ಟ್‌ಲೆಸ್ ಕಲೆಕ್ಟಿವ್’ ಮ್ಯೂಸಿಕ್ ಬ್ಯಾಂಡ್ ಉತ್ಕೃಷ್ಟ ಗುಣಮಟ್ಟದ ಸಂಗೀತದ ಮೂಲಕ ದಲಿತ ಸಂವೇದನೆಯನ್ನು ಅಭಿವ್ಯಕ್ತಿಸುತ್ತಿದೆ. ‘ಅರಿವು’ ಇದೇ ತಂಡದ ಸದಸ್ಯ. ಜಾಗತಿಕ ಮಟ್ಟಕ್ಕೆ ಸ್ಥಳೀಯ ಸ್ವತಂತ್ರ ಸಂಗೀತ ಕಲಾವಿದರನ್ನು ಪರಿಚಯಿಸಬೇಕೆಂದು ಎ.ಆರ್. ರೆಹಮಾನ್ ಹುಟ್ಟುಹಾಕಿರುವ ಮಾಝಾ ಮ್ಯೂಸಿಕ್ ಲೇಬಲ್ ಗುರುತಿಸಿರುವ ಪ್ರತಿಭೆಗಳಲ್ಲಿ ‘ಕ್ಯಾಸ್ಟ್‌ಲೆಸ್ ಕಲೆಕ್ಟಿವ್’ ತಂಡ ಕೂಡ ಒಂದು.

2008ರಲ್ಲಿ ಕೆ.ಎಂ.ಮ್ಯೂಸಿಕ್ ಕನ್ಸರ್ವೇಟರಿ ಎಂಬ ಸಂಗೀತ ಶಾಲೆ ಪ್ರಾರಂಭಿಸಿರುವ ರೆಹಮಾನ್, ಇದರ ಮೂಲಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಸಂಗೀತ ಪ್ರತಿಭೆಗಳನ್ನು ಒಗ್ಗೂಡಿಸಿ ‘ಸನ್‌ಶೈನ್ ಆರ್ಕೆಸ್ಟ್ರಾ’ ಎಂಬ ಭಾರತದ ಮೊತ್ತಮೊದಲ ಸಿಂಫೊನಿ ಆರ್ಕೆಸ್ಟ್ರಾವನ್ನು ಪ್ರಾರಂಭಿಸಿದ್ದಾರೆ. ಇದಕ್ಕೆ ಹೆಚ್ಚೇನೂ ಪ್ರಚಾರ ದೊರಕಿಲ್ಲ. ಆದರೆ, ಮುಂಬೈನ ಧಾರಾವಿ ಸ್ಲಂನಲ್ಲಿ ಹುಟ್ಟಿ ಬೆಳೆದ ಅಪ್ಪಟ ಪ್ರತಿಭೆ ಡಿವೈನ್ ಮತ್ತು ನೇಸಿ ಡೀ ಎಂದೇ ಖ್ಯಾತರಾದ ನವೇದ್ ಶೇಖ್ ಮಹಾನಗರದ ಹೃದಯಭಾಗದ ಕೊಳಚೆ ಪ್ರದೇಶಗಳಲ್ಲಿನ ಜನಜೀವನದ ಬಗ್ಗೆ ರ‍್ಯಾಪ್ ಹಾಡುಕಟ್ಟಿ ಪ್ರವರ್ಧಮಾನಕ್ಕೆ ಬಂದ ರೋಮಾಂಚಕ ಕಥನ ‘ಗಲ್ಲಿಬಾಯ್’, ಆಸ್ಕರ್ ಪ್ರಶಸ್ತಿಗಾಗಿ ಪೈಪೋಟಿ ನಡೆಸಲು ಭಾರತದಿಂದ ಆಯ್ಕೆಯಾದ ಸಿನಿಮಾ ಎಂದು ವ್ಯಾಪಕ ಪ್ರಚಾರ ಪಡೆದುಕೊಂಡಿತು.

ಸಂಗೀತದ ಮೂಲಕ ಸಾಮಾಜಿಕ ಬದಲಾವಣೆ ತುಡಿತದ ಕ್ಯಾಸ್ಟ್‌ಲೆಸ್ ಕಲೆಕ್ಟಿವ್ ತಂಡ...

ಇನ್ನು ಹಿಪ್ ಹಾಪ್ ಮಾದರಿಯಲ್ಲಿ ಮಲಯಾಳಂನ ಹೊಸ ತಲೆಮಾರಿನ ಯುವ ಪ್ರತಿಭೆಗಳು ಮೌನ ಕ್ರಾಂತಿಯನ್ನೇ ಸೃಷ್ಟಿಸುತ್ತಿದ್ದಾರೆ. ಶ್ರೀನಾಥ್ ಭಸಿ ಮತ್ತು ಶೇಖರ್ ಮೆನನ್ ಅವರ ‘ಕೋಳಿಪಂಕ್’ ಕವಿ ಸಚ್ಚಿದಾನಂದನ್ ಅವರ ಖ್ಯಾತ ವ್ಯಂಗ್ಯ ಕವಿತೆಯ ಆಧುನಿಕ ಮರುಸೃಷ್ಟಿಯಾಗಿ ಗಮನ ಸೆಳೆದಿದೆ. ರೋಹಿತ್ ವೇಮುಲ, ಗೌರಿ ಲಂಕೇಶ್, ದಾದ್ರಿ ಹತ್ಯೆ ಮತ್ತಿತರ ಕಾಡುವ ವಿದ್ಯಮಾನಗಳು ಮ್ಯೂಸಿಕ್ ವಿಡಿಯೊದಲ್ಲಿವೆ.

ಆರಂಭದಲ್ಲಿ ಸಿನಿಮಾವೊಂದಕ್ಕೆ ಜೆಸ್ಸಿ ಗಿಫ್ಟ್ ಸಂಯೋಜಿಸಿದ ‘ಲಜ್ಜಾವತಿಯೇ...’ ಹಾಡಿನ ಮೂಲಕ ಪ್ರಾರಂಭವಾದ ಮಲಯಾಳಂ ಹಿಪ್ ಹಾಪ್ ಸಂಗೀತ ಹೊಸ ತಲೆಮಾರಿನ ಯುವ ಪ್ರತಿಭೆಗಳ ಕೈಯಲ್ಲಿ ಪ್ರತಿಭಟನೆಯ ಮಾದರಿಯಾಗಿ ವಿಕಾಸಗೊಂಡಿದೆ. ಶ್ರೀನಾಥ್ ಭಸಿ, ವೇದನ್‌ರಂತಹ ಸ್ವತಂತ್ರ ಸಂಗೀತಗಾರರು ಪ್ರತಿಭಟನಾ ಸಂಗೀತದ ಹೊಸ ಮಾದರಿಯನ್ನು ಹುಟ್ಟುಹಾಕುತ್ತಿದ್ದಾರೆ. ‘ಧ್ವನಿಯಿಲ್ಲದವರ ಧ್ವನಿ’ ಎಂಬ ಹಾಡಿನಲ್ಲಿ ವೇದನ್ ತಾರತಮ್ಯದ ತಮ್ಮ ಅನುಭವವನ್ನು ಮುಕ್ತವಾಗಿ ಹಂಚಿಕೊಂಡಿದ್ದಾರೆ. ‘ಈ ಭೂಮಿಯ ಮಾಲೀಕರು ಯಾರು, ಗುಲಾಮರು ಯಾರು? ಇದನ್ನು ಸಾವಿರಾರು ತುಂಡುಗಳಾಗಿ ಮಾಡಿ ಬೇಲಿ ಹಾಕಿದವರಾರು? ಇಲ್ಲಿ ಎಷ್ಟು ವಂಶಗಳು ನಿರ್ವಂಶವಾದವೋ? ನಿಮ್ಮ ಬೆನ್ನುಹುರಿಗಳು ಬಾಗಿವೆ, ತಲೆಗಳು ತೂಗುತ್ತಿವೆ, ಇನ್ನೆಷ್ಟು ದಿನ ಬದುಕುವಿರಿ ನೀವು?’ ಇಂಥ ಸಾಲುಗಳು ಸಮಾಜದ ಸಾಕ್ಷಿಪ್ರಜ್ಞೆಗೆ ಸವಾಲೆಸೆಯದೆ ಬಿಡುವುದಿಲ್ಲ.

ಬರೀ ಯುವತಿಯರು, ಪಬ್‌ಗಳ ಸುತ್ತಲೇ ಗಿರಕಿ ಹೊಡೆಯುವ ಹಾಡುಗಳನ್ನೇ ರ‍್ಯಾಪ್ ಎಂದುಕೊಂಡಿರುವ ಬಹಳಷ್ಟು ಮಂದಿ ತಮಿಳಿನ ಅರಿವು, ಹಿಂದಿಯ ಡಿವೈನ್, ಮಲಯಾಳಂನ ವೇದನ್‌ರಂತಹ ರ‍್ಯಾಪರ್‌ಗಳ ಹಾಡುಗಳನ್ನು ಕೇಳಿರಲಿಕ್ಕಿಲ್ಲ. ಕನ್ನಡದಲ್ಲಿ ಇಂತಹ ಪ್ರಯೋಗಗಳು ಕಂಡುಬಂದಿಲ್ಲ.

ಆದರೆ ತಮಿಳು, ಮಲಯಾಳಂ, ಹಿಂದಿ ಮತ್ತು ಪಂಜಾಬಿ ಭಾಷೆಗಳಲ್ಲಿ ಹಿಪ್ ಹಾಪ್ ಮತ್ತು ರ‍್ಯಾಪ್, ಪ್ರತಿರೋಧದ ಹೊಸ ಕಲಾಪ್ರಕಾರಗಳಾಗಿ ಹೊರಹೊಮ್ಮುತ್ತಿವೆ. ಸಿನಿಮಾ, ಆಲ್ಬಂ ಹಾಡುಗಳು, ರ‍್ಯಾಪ್‌ನಂತಹ ಆಧುನಿಕ ಜನಪ್ರಿಯ ಕಲಾ ಮಾದರಿಗಳಲ್ಲಿ ದಲಿತ ಸಂವೇದನೆಯ ಗಂಭೀರ ವಿಚಾರಗಳು, ವ್ಯಾವಹಾರಿಕ ದೃಷ್ಟಿಯಿಂದಲೂ ಗೆಲ್ಲುವ ಶ್ರೇಷ್ಠ ಅಭಿವ್ಯಕ್ತಿಗಳಾಗಿ ಇತ್ತೀಚೆಗೆ ಮುಖ್ಯವಾಹಿನಿಯಲ್ಲಿ ಕಂಡುಬರುತ್ತಿವೆ. ಚಿಂತಕ ರಾಬಿನ್ ಜೆಫ್ರಿ, ಭಾರತೀಯ ಮಾಧ್ಯಮ ರಂಗದಲ್ಲಿ ದಲಿತರ ಪ್ರತಿನಿಧೀಕರಣದ ಬಗ್ಗೆ ಬರೆಯುತ್ತಾ, ‘ದಲಿತರಿಗೆ ಸಂಬಂಧಪಟ್ಟ ವಿಚಾರಗಳು ದೊಡ್ಡಮಟ್ಟದಲ್ಲಿ ಚರ್ಚೆಯಾಗಬೇಕಾದರೆ, ಜಾಗತಿಕ ಗುಣಮಟ್ಟದ ಪತ್ರಿಕೆಗಳು, ಮ್ಯಾಗಜಿನ್‌ಗಳು, ಪುಸ್ತಕ ಪ್ರಕಾಶನ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು ದಲಿತರ ಮಾಲೀಕತ್ವದಲ್ಲಿ ಸೃಷ್ಟಿಯಾಗಬೇಕು’ ಎನ್ನುತ್ತಾರೆ. ಒಟ್ಟಾರೆ ಮಾಧ್ಯಮರಂಗದಲ್ಲಿ ಅಲ್ಲದಿದ್ದರೂ, ಸ್ವತಂತ್ರ ಸಂಗೀತ ಕ್ಷೇತ್ರದಲ್ಲಿ ಇಂಥ ಪ್ರಯತ್ನಗಳಾಗುತ್ತಿರುವುದು ಗಮನಾರ್ಹ.

# ಕನ್ನಡಕ್ಕೆ ಬಂದರು ಸೆಬಾಸ್ಟಿಯನ್ & ಸನ್ಸ್!




ಕಳೆದ ವರ್ಷ ಸಾಕಷ್ಟು ಸದ್ದು, ಸುದ್ದಿ ಮಾಡಿದ ಮಹತ್ವದ ಇಂಗ್ಲಿಷ್ ಕೃತಿ ಎಂದರೆ ಸಂಗೀತಗಾರ, ಚಿಂತಕ, ಟಿ.ಎಂ.ಕೃಷ್ಣರ ಸೆಬಾಸ್ಟಿಯನ್ & ಸನ್ಸ್. ಕರ್ನಾಟಕ ಸಂಗೀತದಲ್ಲಿ, ಮೃದಂಗ ಎಂದರೆ ವಾದ್ಯಗಳ ರಾಜ, ಲಯದ ನಿರ್ಣಾಯಕ ವಾದ್ಯ. ಚರ್ಮ ಸಂಗ್ರಹಿಸಿ, ಒಣಗಿಸಿ, ಹದಮಾಡುವುದರಿಂದ ಹಿಡಿದು ಮುಚ್ಚಿಗೆ ಮಾಡಿ, ಅಂತಿಮವಾಗಿ ವಾದಕರ ಅಗತ್ಯಕ್ಕೆ ತಕ್ಕಂತೆ ಶ್ರುತಿಗೊಳಿಸಿ, ಮೃದಂಗವನ್ನು ಮಾಡುವುದು ಬಹುಹಂತಗಳ ಸಂಕೀರ್ಣ ಪ್ರಕ್ರಿಯೆ. 'ಇಷ್ಟಾಗಿಯೂ ನಾವು ಎಂದಿಗೂ ಈ ಅದ್ಭುತ ತಯಾರಕರ ಕುರಿತು, ಅವರ ಹಸ್ತಕೌಶಲದ ಕುರಿತು ಮಾತಾಡುವುದೇ ಇಲ್ಲ' ಎಂದರಿವಾದ ಕೃಷ್ಣ ಮೂರು ವರ್ಷ ಕ್ಷೇತ್ರ ಅಧ್ಯಯನ, ಸಂಶೋಧನೆ ಮಾಡಿ ಈ ಅಗೋಚರ ಮೃದಂಗ ಶಿಲ್ಪಿಗಳ ಚರಿತೆಯನ್ನು ಅಕ್ಷರಕ್ಕಿಳಿಸಿದ್ದಾರೆ. ಶೀಘ್ರವೇ ಅಹರ್ನಿಶಿ ಪ್ರಕಾಶನದಿಂದ ಕನ್ನಡದಲ್ಲಿ ಪ್ರಕಟಗೊಳ್ಳಲಿರುವ ಕೃತಿಯಿಂದ ಆಯ್ದ ಕಿರುಭಾಗದೊಂದಿಗೆ ಅನುವಾದಿಸುವಾಗಿನ ಲೇಖಕಿಯ ಅನುಸಂಧಾನ, ಪಯಣ ಇಲ್ಲಿದೆ...

ಸುಮಂಗಲಾ

**2019**ರಲ್ಲಿ ಯು.ಆರ್. ಅನಂತಮೂರ್ತಿ ಸ್ಮರಣೆಯ ಉಪನ್ಯಾಸಮಾಲಿಕೆಯಲ್ಲಿ ಟಿ.ಎಂ. ಕೃಷ್ಣ ಮಾತನಾಡುತ್ತ ಮಡಿ-ಮೈಲಿಗೆ, ಶುದ್ಧ-ಅಶುದ್ಧದ ಕುರಿತು ನಮ್ಮ ಗ್ರಹಿಕೆಗಳನ್ನು ಮೃದಂಗ ಮತ್ತು ಅದನ್ನು ತಯಾರಿಸುವವರ ಉದಾಹರಣೆ ಕೊಟ್ಟು ವಿವರಿಸುತ್ತಿದ್ದರು. ಅವರು ಮಾಡಿದ ಕ್ಷೇತ್ರ ಅಧ್ಯಯನದ ವಿವರ ಹಸಿಮಣ್ಣೊಳಗೆ ಊರಿದ ಬೀಜದಂತೆ ನನ್ನೊಳಗೆ ನೆಟ್ಟಿತು. ಅವರು ಅಕ್ಷರಗಳಲ್ಲಿ ಪಡಿಮೂಡಿಸಿದ 'ಸೆಬಾಸ್ಟಿಯನ್ & ಸನ್ಸ್' ಜೊತೆ ನನ್ನ ಪಯಣವೂ ಶುರುವಾಯಿತು.

***



ಕೃಷ್ಣ ಕೃತಿಯಲ್ಲಿ ಬರೆಯುತ್ತಾರೆ: ಮೃದಂಗ ತಯಾರಿಕೆಯಲ್ಲಿ ಪರ್ಲಾಂಡುವಿನ ಸಾಟಿಯಿಲ್ಲದ ನೈಪುಣ್ಯದ ಕುರಿತು ಲೆಕ್ಕವಿಲ್ಲದಷ್ಟು ಕಥೆಗಳಿವೆ. ಅವರ ಮಗ ಸೆಲ್ವರಾಜ ಹೇಳಿದ, ಗಾಢವಾದ ಒಳನೋಟ ಹೊಂದಿದ ಒಂದು ಚಿತ್ರಣದೊಂದಿಗೆ ಶುರು ಮಾಡುವೆ: 'ಆತ ಒಬ್ಬೊಬ್ಬ ಗಾಯಕನನ್ನು ಪ್ರತಿನಿಧಿಸಲು ಒಂದೊಂದು ರಾಗವನ್ನು ತನ್ನೊಳಗೆ ಇಟ್ಟುಕೊಂಡಿದ್ದ.' ಅಂದರೆ ಪರ್ಲಾಂಡು ತಾನು ಸಂಬಂಧವಿಟ್ಟುಕೊಂಡಿದ್ದ ಪ್ರತೀ ಸಂಗೀತಗಾರರ ಗಾಯನ ಅಥವಾ ವಾದನದ ಕೃತಿಯೊಂದನ್ನು ನೆನಪಿಟ್ಟುಕೊಂಡಿದ್ದರು. ಈ ಸಂಗೀತಾತ್ಮಕ ನೆನಪಿನಿಂದ ಅವರು ಕಲಾವಿದರ ಶಾರೀರದ ವ್ಯಾಪ್ತಿ, ಅವರ ಸಂಗೀತದ ವಿಸ್ತಾರ ಮತ್ತು ಶ್ರುತಿ, ಇವುಗಳನ್ನು ಚೆನ್ನಾಗಿ ಗ್ರಹಿಸಿ ಅಂತರ್ಗತಗೊಳಿಸಿಕೊಂಡಿದ್ದರು. 'ತಂಬೂರಾವನ್ನು ಸುಮ್ಮನೆ ಮೀಟಿದರೂ ಸಾಕು, ಆತನ ಮೃದಂಗವು ಪಕ್ಕಾ ಶ್ರುತಿಯಲ್ಲಿರುತ್ತಿತ್ತು' ಎಂದರು ಸೆಲ್ವರಾಜ್. ಪರ್ಲಾಂಡುವಿಗೆ ಕಿವಿ ಅಷ್ಟು ಸರಿಯಾಗಿ ಕೇಳಿಸುತ್ತಿರಲಿಲ್ಲ ಎನ್ನುವುದರ ಹಿನ್ನೆಲೆಯಲ್ಲಿ ಈ ಅಂಶವು ಇನ್ನಷ್ಟು ಬೆಕ್ಕಸಬೆರಗಾಗುವಂತೆ ಮಾಡುತ್ತದೆ. ತಾನು ಕೇಳದಿದ್ದಾಗ ಕೂಡ ಸಂಗೀತ ಸಂಯೋಜನೆ ಮಾಡಿದ ಬೀಥೋವನ್ ಹಾಗೆ, ಪರ್ಲಾಂಡು ತಾನು ಮನಸ್ಸಿನಲ್ಲಿ ಜತನ ಮಾಡಿಟ್ಟುಕೊಂಡಿದ್ದ ಸಂಗೀತಕ್ಕೆ ಲಕ್ಷ್ಯಗೊಡುವ ಮೂಲಕ ಮೃದಂಗಗಳನ್ನು ತಯಾರು ಮಾಡಿದರು.

***

ಮೃದಂಗ ತಯಾರಿಕೆ ಇತಿಹಾಸದಲ್ಲಿ ಅಪ್ರತಿಮ ಪ್ರತಿಭೆಯ ಶ್ರೇಷ್ಠ ತಯಾರಕ ಎಂದರೆ ಎಸ್. ಪರ್ಲಾಂಡು. ತಂಜಾವೂರಿನಲ್ಲಿ ಅವರ ಮನೆಯನ್ನೊಮ್ಮೆ ನೋಡಬೇಕು ಎನ್ನುವುದು ನನ್ನ ಆಳದ ಬಯಕೆಯಾಗಿತ್ತು. ಕಚೇರಿಯ ಕೆಲಸಕ್ಕೆಂದು ತಂಜಾವೂರಿಗೆ ಹೋದಾಗ, ನಾನು, ಸಹೋದ್ಯೋಗಿ ಹೇಮಾ, ಕೀತುಕಾರ ಬೀದಿಯನ್ನು ಹುಡುಕಿ ಹೊರಟೆವು. ತಮಿಳು ಮನೆಮಾತಿನ ಹೇಮಾ ಮತ್ತು ಕಾರಿನ ಚಾಲಕನಿಗೆ ಚೆನ್ನೈಯಲ್ಲಿರುವ ಪರ್ಲಾಂಡು ಮೊಮ್ಮಗ ಸೂಸೈನಾಥನ್ ಸೂಚನೆಗಳನ್ನು ಕೊಡುತ್ತಲೇ ಇದ್ದರು.

ಎ. ಪ್ರಕಾಶ್... ವಾದ್ಯ ಪರಂಪರೆಯ ಈಗಿನ ಕೊಂಡಿ

ಸುಮಾರು ಆರು ದಶಕಗಳ ಹಿಂದೆ ಮಣಿ ಅಯ್ಯರ್, ಪಳನಿ ಸುಬ್ರಮಣ್ಯ ಪಿಳ್ಳೈ, ಇನ್ನಿತರ ಘಟಾನುಘಟಿ ವಾದಕರಿಗೆ ಅದ್ಭುತ ನಾದವೈಭವವನ್ನು ಹೊಮ್ಮಿಸಲು ಸಾಧ್ಯವಾಗುವಂತಹ ಮೃದಂಗಗಳನ್ನು ಸೃಜಿಸಿದ ಪರ್ಲಾಂಡು ಎಂಬ ಅಪ್ರತಿಮ ಪ್ರತಿಭೆಯ ತಯಾರಕ ನಡೆದಾಡಿದ್ದ ಅದೇ ಕೀತುಕಾರ ಬೀದಿಯಲ್ಲಿ ನಾನು ಹೆಜ್ಜೆಯಿಟ್ಟಿದ್ದೆ. ನನ್ನ ಮಟ್ಟಿಗೆ ಅದೊಂದು ಪದಗಳಲ್ಲಿ ಕಟ್ಟಿಕೊಡಲಾಗದ ಅನುಭವ.

ಕೀತುಕಾರ ಬೀದಿಯು ಥಟ್ಟನೆ ಎಡಕ್ಕೆ ತಿರುಗುವಲ್ಲಿ ಪರ್ಲಾಂಡುವಿನ ಮನೆ ಇದೆ. ಕೃಷ್ಣ ಕೃತಿಯಲ್ಲಿ ವಿವರಿಸಿದ್ದಾರೆ: 'ದೊಡ್ಡ ಬೇವಿನ ಮರದ ನೆರಳಿನಲ್ಲಿದ್ದ ಒಂದೇ ಮಹಡಿಯ ಮನೆಯ ಬಾಗಿಲುಗಳಿಗೆ ನೀಲಿ ಬಣ್ಣ ಬಳಿದಿತ್ತು, ಒಂದು ಚಿಕ್ಕ ಕಿಟಕಿ ಬೀದಿಗೆ ಮುಖಮಾಡಿತ್ತು, ಮೇಲಿನ ತಾರಸಿಗೆ ಹುಲ್ಲಿನ ಮಾಡು ಇತ್ತು. ಅಲ್ಲಿ ಇದೊಂದೇ ಮನೆ ಇನ್ನೂ ಹಳೆಯ ಕಾಲದ ಘಮವನ್ನು ತನ್ನೊಡಲಲ್ಲಿ ಬಚ್ಚಿಟ್ಟುಕೊಂಡು ನಿಂತಿತ್ತು. ಮೃದಂಗದ ಕೆಲಸವನ್ನು ಪ್ರಾಯಶಃ ತಾರಸಿಯ ಮೇಲೆ ಮಾಡುತ್ತಿದ್ದಿರಬೇಕು. ಪರ್ಲಾಂಡು ಹುಟ್ಟಿದ ಸಮಯದಲ್ಲಿ ಈ ಬೇವಿನ ಮರವೂ ಸಸಿಯಾಗಿದ್ದಿರಬಹುದು. ಇಂದು ಅದೇ ಮರ ಅದ್ಭುತ ಮೃದಂಗ ತಯಾರಕನ ಮನೆಯನ್ನು ಎತ್ತರದಿಂದ ದಿಟ್ಟಿಸಿ ನೋಡುತ್ತಿದೆ.'

ರಸ್ತೆಯ ಬದಿಯಲ್ಲಿ ಪರ್ಲಾಂಡು ಅವರ ಮಗಳು ಜೆಸಿಂತಮೇರಿ, ಅಳಿಯ ಗೇಬ್ರಿಯಲ್ ನಿಂತಿದ್ದರು. ಇವರೇ ಸೂಸೈನಾಥನ್ ಅಪ್ಪ, ಅಮ್ಮ. ಅವರೊಂದಿಗೆ ಮಾತನಾಡಿ,

ಅಪ್ರತಿಮ ಪ್ರತಿಭೆಯ ವಾದ್ಯ ತಯಾರಕ ಪರ್ಲಾಂಡು ಅವರ 'ಮನೆ' ಇದು...
ಚಿತ್ರ: ವಿಕ್ರಂ ರಾಘವನ್

ನಂತರ ಅಲ್ಲಿಂದ ತುಸು ದೂರದಲ್ಲಿ ಮತ್ತೊಂದು ಬೀದಿಯಲ್ಲಿರುವ ಎಸ್. ಆಂಟನಿಯವರ ಮಗಳು ಸೆಲೆತ್ ಮೇರಿ ಮತ್ತು ಪ್ರಕಾಶ್ ಅವರನ್ನು ನೋಡಲು ಹೋದೆವು. ನಿಜವೆಂದರೆ ಮೊತ್ತಮೊದಲು ನಾನು ಮೃದಂಗವನ್ನು ಮುಟ್ಟಿ, ತಟ್ಟಿ ನೋಡಿದ್ದು ಅಲ್ಲಿಯೇ. ನಗೆಮೊಗದ ಪ್ರಕಾಶ್ ಮೃದಂಗದ ಎಲ್ಲ ಭಾಗಗಳನ್ನು ವಿವರಿಸುತ್ತ, ನುಡಿಸಿಯೂ ತೋರಿಸಿದರು.

ನನಗೆ ಜೆಸಿಂತಮೇರಿಯವರ ಮನೆಯನ್ನು ನೋಡಲೇಬೇಕಿತ್ತು. ಹೀಗಾಗಿ ಕಾರನ್ನು ಮತ್ತೆ ಕೀತುಕಾರ ಬೀದಿಯತ್ತ ತಿರುಗಿಸಿದೆವು. ಅಲ್ಲಿಂದ ಎಡಕ್ಕೆ ತಿರುಗಿ, ಇನ್ನಷ್ಟು ಕಿರಿದಾದ ಬೀದಿಯಲ್ಲಿ ಅವರ ಮನೆಯಿತ್ತು. ಚಿಕ್ಕ ಮನೆಗಳು, ಬೀದಿಯಲ್ಲಿ ಹರಿಯುತ್ತಿದ್ದ ಮೋರಿನೀರು... ಕಾರಿಳಿದು ನಾಕು ಹೆಜ್ಜೆ ಬಂದ ಹೇಮಾ ವಾಪಸು ಹೋಗಿಯಾಗಿತ್ತು. ಜೆಸಿಂತಮೇರಿಯವರ ಹಳೆಯ ಮನೆಯ ಗೋಡೆಯ ಮೇಲೆ ಜೀಸಸ್, ಮೇರಿ ಇನ್ನಿತರ ಸಂತರ ಫೋಟೊಗಳಿದ್ದವು. ಜೊತೆಗೆ ಸೆವಿಟ್ಟಿಯನ್ (ಸೆಬಾಸ್ಟಿಯನ್) ಕುಟುಂಬಕ್ಕೆ ಮೃದಂಗದ ದಾರಿ ತೋರಿದ ಅವರ ದಾಯಾದಿ ಮಧುರೆ ರತ್ನಂ ಫೋಟೊ, ಹರೆಯದ ಸೂಸೈನಾಥನ್ ಪಾಲ್ಘಾಟ್ ರಘು ಜೊತೆ ಮೃದಂಗದೊಂದಿಗೆ ಇದ್ದ ಫೋಟೊ, ಇನ್ನಿತರ ಫೋಟೊಗಳ ಹಳೆಯ ಫ್ರೇಮಿನೊಳಗೆ ಬಂದಿಯಾದ ಮಸುಕಾದ ಚಿತ್ರಗಳಲ್ಲಿ ಯಾವುದೋ ಕಾಲಘಟ್ಟವೊಂದು ಹೆಪ್ಪುಗಟ್ಟಿ ನಿಂತಿತ್ತು. ಜೆಸಿಂತಮೇರಿ ತಮಿಳಿನಲ್ಲಿ ಮಾತನಾಡಿದ್ದು ಅರೆಬರೆ ಅರ್ಥವಾಗುತ್ತಿತ್ತು. ಆದರೆ ಅವರ ಮಾತುಕತೆಯಲ್ಲಿ ತಂದೆಯ ಕಾಲದ ಹೆಸರಾಂತ ಮೃದಂಗವಾದಕರ ಹೆಸರುಗಳು ಹಾದುಹೋಗುತ್ತಿದ್ದವು... ಅರೆ... ಆ ಎಲ್ಲ ಶ್ರೇಷ್ಠ ಕಲಾವಿದರ ಕೈಬೆರಳುಗಳು ಮೈಮರೆಸುವ ನಾದಝೇಂಕಾರವನ್ನು ಅಲೆಅಲೆಯಾಗಿ ಹಬ್ಬಿಸಿದ ಸಂಗೀತ ಕಛೇರಿಗಳ ಝಗಮಗಿಸುವ ವೇದಿಕೆಗಳಿಗೂ ಮತ್ತು ಅದಕ್ಕಾಗಿ ಎಳ್ಳಷ್ಟೂ ಕುಂದಿಲ್ಲದ ಮೃದಂಗಗಳನ್ನು ಸಿದ್ಧಪಡಿಸಿಕೊಟ್ಟ ಈ ಅಪ್ರತಿಮ ಕುಶಲಿಗರಿಗೂ ಸಂಬಂಧದ ತಂತುವೇ ಇಲ್ಲ ಎಂಬಂತೆ ಕಿರಿದಾದ ಕೀತುಕಾರ ಬೀದಿ ಹತ್ತುಹಲವು ಜಂಜಡಗಳಲ್ಲಿ ಬಸವಳಿದು ನಿಂತಿತ್ತು.

***

ಕೃಷ್ಣ ಕೃತಿಯಲ್ಲಿ ತಯಾರಕರೊಬ್ಬರು ಹೇಳಿದ್ದನ್ನು ಬರೆಯುತ್ತಾರೆ: 'ನಾವು ಹಸುಗಳು ಮತ್ತು ಮೇಕೆಗಳ ಕುರಿತು ಮಾತನಾಡುತ್ತೇವೆ. ಬಹುತೇಕ ಕಲಾವಿದರು ಬ್ರಾಹ್ಮಣರು. ಅವರಿಗೆ ವಾಸನೆ ಆಗಿಬರುವುದಿಲ್ಲ. ನಾವು ಚರ್ಮವನ್ನು ಹೇಗೆ ಹದಗೊಳಿಸುತ್ತೇವೆ ಎಂಬ ಬಗ್ಗೆ ಎಳ್ಳಷ್ಟೂ ಗೊತ್ತಿಲ್ಲ. ಆದರೆ ವಾದ್ಯ ಅವರ ದೇವರಕೋಣೆಯಲ್ಲಿರುತ್ತದೆ. ತಯಾರಕರಿಗೆ ಮಾತ್ರ ಆ ಗೌರವವಿಲ್ಲ.'

ಹಿಂದಿನ ಸಂಗತಿಗಳ ಕುರಿತು ಮಾತಾಡುವಾಗ ಅರುಳರಾಜರ ಮಾತುಗಳಲ್ಲಿ ಹೆಚ್ಚಿನ ಪ್ರತಿರೋಧ ವ್ಯಕ್ತವಾಗುತ್ತಿತ್ತು. 'ಒಂದು ದೊಡ್ಡ ಹಾಲ್‌ನಲ್ಲಿ, ನಾವೊಂದು ಮೂಲೆಯಲ್ಲಿ ಕೂತು ಕೆಲಸ ಮಾಡಬೇಕಿತ್ತು. ಅದು ನಿಜಕ್ಕೂ ಅವಮಾನಕಾರಿ, ಅಸಹ್ಯ ಅನ್ನಿಸ್ತಿತ್ತು. ನಮ್ಮನ್ನು ಮೂಲೆಗೆ ದಬ್ಬಿದ್ದರು. ನಮ್ಮ ಪ್ರಯತ್ನ, ಕೆಲಸಗಳಿಂದಾಗಿ ಹೆಸರು, ಕೀರ್ತಿ ಗಳಿಸಿದವರು ನಮ್ಮನ್ನು ತಾರತಮ್ಯದಿಂದ ನಡೆಸಿಕೊಳ್ಳುತ್ತಿದ್ದರು.'

***

ಇದು ದಶಕಗಳ ಹಿಂದೆ ಮಾತ್ರವೇ... ಈಗ ಪರಿಸ್ಥಿತಿ ಬದಲಾಗಿರಬಹುದಲ್ಲವೇ? ನನ್ನೊಳಗೆ ಪ್ರಶ್ನೆಗಳು.

'ಯಲಹಂಕದ ಬಳಿ ಯುವವಾದಕರೊಬ್ಬರಿಗೆ ಮೃದಂಗ ಮಾಡಿಕೊಡಲು ಬಂದಿದ್ದೇನೆ, ನೀವು ಬೇಕಿದ್ದರೆ ಬನ್ನಿ' ಎಂದು ಸೂಸೈನಾಥನ್ ನನಗೆ ಫೋನು ಮಾಡಿದ್ದಾರೆ. ನನಗೆ ಇನ್ನಿಲ್ಲದ ಪುಳಕ. ಅವರು ಹೇಳಿದ ವಿಳಾಸ ಹುಡುಕಿಕೊಂಡು ಹೋದ ನಾನು ನಿಂತಿದ್ದು ದೊಡ್ಡಮನೆಯೊಂದರ ಮುಂದೆ. ಆ ಮನೆಯ ಬೇಸ್ಮೆಂಟಿನಲ್ಲಿ ಸೂಸೈನಾಥನ್ ಮೂರ್ನಾಲ್ಕು ಮೃದಂಗ ಇಟ್ಟುಕೊಂಡು, ಫೈನಲ್ ಟಚ್ ಕೊಡುತ್ತ ಕೂತಿದ್ದರು. ಯಾಕೋ ನಾನು ಕಲ್ಪಿಸಿಕೊಂಡಂತೆ ಕೋಣೆಯೊಂದರಲ್ಲಿ ಅಚ್ಚುಕಟ್ಟಾಗಿ ಕುಳಿತು ಕೆಲಸ ಮಾಡುತ್ತಿರುವ ಸೂಸೈನಾಥನ್ ಚಿತ್ರಕ್ಕೂ, ಇಲ್ಲಿ ಕಾರು ನಿಲ್ಲಿಸಿದ, ಅಷ್ಟೇನೂ ಸ್ವಚ್ಛವಾಗಿಲ್ಲದ ಬೇಸ್ಮೆಂಟಿನಲ್ಲಿ ನೆಲದ ಮೇಲೆ ಕೂತು ಕೆಲಸದಲ್ಲಿ ಮಗ್ನರಾಗಿದ್ದ ಸೂಸೈನಾಥನ್ ಚಿತ್ರಕ್ಕೂ ತಾಳೆಯೇ ಆಗುತ್ತಿರಲಿಲ್ಲ. ಆದರೆ ಅವರು ಮಾತ್ರ ತುಂಬು ಲವಲವಿಕೆಯಿಂದ ಮಾತನಾಡುತ್ತಲೇ, ವಾರುಪಿಡಿ ಎಳೆಯುವುದನ್ನು, ಕರಣೆ ಹಚ್ಚುವುದನ್ನು ತೋರಿಸಿದರು.

ಅಷ್ಟರಲ್ಲಿಯೇ ಅವರಿಗೆ ಫೋನ್ ಬಂತು. ಮಾತಾಡಿ ಮುಗಿಸಿದ ಸೂಸೈನಾಥನ್ ಮುಖ ಕಂದಿಹೋಯಿತು. ಅವರಿಗೆ ಮಾವನಾಗಿದ್ದ ಎ. ಆರೋಗ್ಯಂ ತೀರಿಕೊಂಡಿದ್ದರು.

ಪರ್ಲಾಂಡು ಅವರ ಮಗಳ ಮನೆಯಲ್ಲಿ... ಜೆಸಿಂತಮೇರಿ ಮತ್ತು ಗೇಬ್ರಿಯಲ್

'ನನಗೆ ಕೆಲಸ ಕಲಿಸಿದವನು, ನನ್ನ ಮಾವ' ಎನ್ನುತ್ತ, ತನಗೆ ತಂಜಾವೂರಿಗೆ ಹೋಗಲು ಟಿಕೆಟ್ ವ್ಯವಸ್ಥೆ ಮಾಡುವಂತೆ ಯುವವಾದಕನಿಗೆ ಹೇಳುತ್ತಲೇ, 'ಹೋಗುವ ಅವಸರದಲ್ಲಿ ಹೆಂಗ್ಹೆಂಗೋ ಮಾಡಿದೆ ಎಂದುಕೋಬೇಡಿ. ಎಲ್ಲ ಸರಿಮಾಡಿಯೇ ಹೊರಡ್ತೀನಿ' ಎಂದು ಮತ್ತೆ ಮತ್ತೆ ಹೇಳಿದ ಸೂಸೈನಾಥನ್ ಧ್ವನಿಯಲ್ಲಿ ಮೃದಂಗದ ಕೆಲಸದ ಕುರಿತು ಆಳದ ಬದ್ಧತೆ, ಮಾಡುವ ಕೆಲಸವನ್ನು ಎಂಥದೇ ಸಮಯದಲ್ಲಿಯೂ ಪರಿಪೂರ್ಣವಾಗಿ ಮುಗಿಸಬೇಕೆಂಬ ಕಾಳಜಿ ಒಡೆದು ತೋರುತ್ತಿತ್ತು. ಎಷ್ಟೇ ಆಗಲಿ ಸೂಸೈನಾಥನ್ ಕೂಡ ಆ ಸೆವಿಟ್ಟಿಯನ್ ಕುಟುಂಬದ ಕುಡಿಯಲ್ಲವೇ?

ಹತ್ತು ನಿಮಿಷಗಳ ಮೊದಲಷ್ಟೇ ನನ್ನ ಕೈಯಲ್ಲಿದ್ದ 'ಸೆಬಾಸ್ಟಿಯನ್ಸ್ & ಸನ್ಸ್' ಕೃತಿಯಲ್ಲಿ ಮೃದಂಗದ ಕೆಲಸ ಮಾಡುತ್ತಿದ್ದ ಆರೋಗ್ಯಂ ಫೋಟೊ ತೋರಿಸಿದ ಸೂಸೈನಾಥನ್ 'ನನ್ನ ಗುರು' ಎಂದು ಅಭಿಮಾನದಿಂದ ನೆನೆದಿದ್ದ ವ್ಯಕ್ತಿ ಹೀಗೆ ಥಟ್ಟನೆ 'ತಂಜಾವೂರಿಗೇ ಬಾಡಿ ತೆಗೆದುಕೊಂಡು ಬರ್ತಾರಂತೆ' ಎಂಬ ವಾಕ್ಯದಲ್ಲಿ ಬರಿಯ 'ಬಾಡಿ' ಮಾತ್ರ ಆಗುವುದೆಂದರೆ... ನಾನು ತಲ್ಲಣಿಸಿದೆ. ❖

# ಮರಣದ ಮಹಾನವಮಿಯಲ್ಲಿ ಮನುಷ್ಯತ್ವದ ಅಮೃತಧಾರೆ

ಎಚ್. ದಂಡಪ್ಪ

**ಕಮೂ,** ಸಾರ್ತ್ರೆ, ಕಾಫ್ಕ ಇವರು ಕನ್ನಡದ ನವ್ಯದ ಸಂದರ್ಭದಲ್ಲಿ ಪದೇ ಪದೇ ಚರ್ಚಿತವಾಗುತ್ತಿದ್ದವರು. ಈಗಲೂ ಇವರ ಬಗ್ಗೆ ಚರ್ಚೆಯಾಗುತ್ತಲೇ ಇದೆ. ಇವರ ವಿಚಾರಧಾರೆಗಳು ಕನ್ನಡ ಲೇಖಕರ ಮೇಲೆ ಪ್ರಭಾವ ಬೀರಿವೆ. ಕಮೂನ 'ಅಸಂಗತ', 'ಬಂಡಾಯ', 'ಸಿಸಿಪಸ್ ಕಲ್ಪಿತ ಕಥನ'ದ ವಿಚಾರಗಳು ಬಹಳಷ್ಟು ಕೃತಿಗಳಲ್ಲಿ ಕಾಣಿಸಿಕೊಂಡಿವೆ. ಅವನ ಅನೇಕ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ಪ್ರಕಟವಾಗಿರುವ ಅವನ ಐದು ಕಾದಂಬರಿಗಳಲ್ಲಿ ಎರಡು ಈಗಾಗಲೇ ಅನುವಾದವಾಗಿದ್ದವು. ಈಗ ಎಚ್.ಎಸ್. ರಾಘವೇಂದ್ರರಾವ್ ಅವರು 'ಪ್ಲೇಗ್' ಕಾದಂಬರಿಯನ್ನೂ ಕನ್ನಡಕ್ಕೆ ತಂದಿದ್ದಾರೆ. ಈ ಕಾದಂಬರಿಯು ಮೊದಲು 1947ರಲ್ಲಿ ಪ್ರಕಟವಾಯಿತು. ಅಂದಿನಿಂದ ಇಲ್ಲಿಯವರೆಗೆ ಜಗತ್ತಿನಾದ್ಯಂತ ಚರ್ಚೆಯಾಗುತ್ತಲೇ ಬಂದಿದೆ.

ಓರಾನ್ ಎಂಬ ನಗರದಲ್ಲಿ 'ಪ್ಲೇಗ್' ಕಾಣಿಸಿಕೊಳ್ಳುತ್ತದೆ. ಈ ಕಾಯಿಲೆಯು ದೇವರು ನೀಡುತ್ತಿರುವ ಶಿಕ್ಷೆ ಎಂದು ಪಾದ್ರಿ ಹೇಳುತ್ತಾನೆ. ಆದರೆ ಡಾ.ರಿಯು ಎಂಬ ವೈದ್ಯ ಇದನ್ನು ಒಪ್ಪದೆ ಚಿಕಿತ್ಸೆ ನೀಡುತ್ತಿರುತ್ತಾನೆ. ಸತ್ತವರನ್ನು ಅಮಾನುಷವಾಗಿ, ಸಾಮೂಹಿಕವಾಗಿ ಸಂಸ್ಕಾರ ಮಾಡಲಾಗುತ್ತದೆ. ಒಂಬತ್ತು ತಿಂಗಳ ನಂತರ ಪ್ಲೇಗ್ ನಿಲ್ಲುತ್ತದೆ. ಜನರಲ್ಲಿ ಹೊಸ ಪರಿವರ್ತನೆ ಕಂಡು ಬಂದಿರುತ್ತದೆ. ಇದು ಈ ಕಾದಂಬರಿಯ ಸ್ಥೂಲವಾದ ಕಥಾ ಹಂದರ.

ಕಾದಂಬರಿಯಲ್ಲಿ ಬಳಸಿರುವ ಭಾಷೆ, ರೂಪಕ, ಸಂಕೇತ ಹಾಗೂ ಚಿತ್ರಗಳು ಕಮೂವಿನ ತಾತ್ವಿಕ ವಿಚಾರಗಳನ್ನು ಪ್ರತಿಪಾದಿಸುತ್ತವೆ. ಅದರ ಜೊತೆಗೆ ಮನುಷ್ಯ ಬದುಕಿನ ವಿವಿಧ ಆಯಾಮಗಳನ್ನು ಅನಾವರಣಗೊಳಿಸುವಂತಹ ಆಕೃತಿಯೂ ಇಲ್ಲಿದೆ. ಅನ್ಯೋಕ್ತಿಯ ವಿಧಾನದಲ್ಲಿ ಬರೆಯಲಾಗಿರುವ ಈ ಕಾದಂಬರಿಯಲ್ಲಿ ಎಲ್ಲಾ ಪಾತ್ರಗಳು ಸಾಂಕೇತಿಕ ರೂಪದಲ್ಲಿ ಚಿತ್ರಣಗೊಂಡಿವೆ. ಮುಖ್ಯವಾಗಿ ಡಾ.ರಿಯು ನಾಯಕನಾಗಿ ಓದುಗರ ಪ್ರತಿನಿಧಿಯಂತಿದ್ದಾನೆ. ಓದುಗರ ಮನಸ್ಸು ಮತ್ತು ಕಲ್ಪನೆಯಲ್ಲಿ ಕ್ರಿಯೆ ನಡೆಯುವಂತಹ ರಚನೆ ಅನ್ಯೋಕ್ತಿಯ ಪ್ರಮುಖವಾದ ಲಕ್ಷಣ. ಇಡೀ ಕೃತಿಯೇ ಸಾಂಕೇತಿಕ ರೂಪದಲ್ಲಿ, ಅನ್ಯೋಕ್ತಿ ರೂಪದಲ್ಲಿರುವುದರಿಂದ ಎಲ್ಲಾ ತಾತ್ವಿಕ ವಿಚಾರಗಳು ಕಾದಂಬರಿಯಲ್ಲಿ ಅಂತರ್ಗತವಾಗಿವೆ. ಆದ್ದರಿಂದ ಓದುಗನ ಮನಸ್ಸು ಮತ್ತು ಕಲ್ಪನೆಗಳಲ್ಲಿ ಕ್ರಿಯೆ ನಡೆದು ಕೃತಿಯ ಧ್ವನಿ ಅನಾವರಣಗೊಳ್ಳುತ್ತಾ ಹೋಗುತ್ತದೆ.

ನಿರೂಪಣೆಯಲ್ಲಿ ಒಂದು ಚಲನಶೀಲತೆ ಇರುವುದರಿಂದ ಕಥನದ ಬೆಳವಣಿಗೆ ಹಾಗೂ ಶಿಲ್ಪ ವಿಶಿಷ್ಟವಾಗಿದೆ. ಸಂಕೇತಗಳಂತೆ ಘಟನೆಗಳ ಸಂಬಂಧ ಆಂತರಿಕವಾಗಿದ್ದು ಬೇರೆ ಕಾದಂಬರಿಗಳಲ್ಲಿರುವಂತೆ ಕಾರ್ಯಕಾರಣ ಸಂಬಂಧ, ತರ್ಕಬದ್ಧ ವ್ಯವಸ್ಥೆ ಕಾಣುವುದಿಲ್ಲ. ಡಾ.ರಿಯು ಸುತ್ತ ಸಮಾಜ, ಜನರ ವ್ಯವಸ್ಥೆಯ ಸ್ವರೂಪಗಳು ಬಿಚ್ಚಿಕೊಳ್ಳುತ್ತಾ ಸಾಗುತ್ತವೆ. ಒಂದಕ್ಕೊಂದು ಸಂಬಂಧವಿಲ್ಲದಂತೆ ಹರಡಿಕೊಂಡಿರುವ ಘಟನೆಗಳು ವ್ಯವಸ್ಥಿತವಾಗಿ, ಸೋದ್ದಿಶ್ಯವಾಗಿ ನಿಯೋಜಿಸಲ್ಪಟ್ಟಿರುವುದು ಇಡೀ ಕಾದಂಬರಿಯನ್ನು ಓದಿ ಮುಗಿಸಿದಾಗ ಅನುಭವಕ್ಕೆ ಬರುತ್ತದೆ.

ನೈತಿಕತೆ, ಅರಾಜಕತೆ ಇರುವ ಜಗತ್ತಿನಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದ ಮನುಷ್ಯನ ಅಸಹಾಯಕತೆ, ತನಗೆ ಸಂಬಂಧವಿಲ್ಲದಿದ್ದರೂ ತಾನೇ ಜವಾಬ್ದಾರನಾಗಬೇಕಾದ ಅನಿವಾರ್ಯತೆ, ಅನಿಶ್ಚಯ, ಗೊಂದಲದ ಪರಿಸ್ಥಿತಿಯನ್ನು ಡಾ.ರಿಯು ಮೌನವಾಗಿ ಎದುರಿಸುತ್ತಾನೆ. ರೋಗಗ್ರಸ್ತ ವ್ಯವಸ್ಥೆಯ ವಿರುದ್ಧ 'ಬಂಡಾಯ' ಹೂಡುತ್ತಾನೆ. ಅಂತರ್ಮುಖಿಯಾದ, ಬುದ್ಧಿಜೀವಿಯಾದ ರಿಯು ತನ್ನ ವೈಚಾರಿಕತೆಯನ್ನು ಕಾರ್ಯರೂಪಕ್ಕೆ ತರುವಾಗ ಉಂಟಾಗುವ ತಿಕ್ಕಾಟಗಳೇ ಅವನ ಸಮಸ್ಯೆಗಳಾಗಿವೆ. ಆದರೂ ಅವನು ಸಾಂಕ್ರಾಮಿಕ ರೋಗದ ವಿರುದ್ಧ, ಸ್ಥಗಿತ ಧರ್ಮದ ಕಲ್ಪನೆಗಳ ವಿರುದ್ಧ, ಸಾವಿನ ವಿರುದ್ಧ ಬಂಡಾಯ ಹೂಡುವ ವ್ಯಕ್ತಿತ್ವದವನು.




ಪು: 366
₹380

**ಪ್ಲೇಗ್**
ಲೇ: ಆಲ್ಬರ್ಟ್ ಕಮೂ
ಕನ್ನಡಕ್ಕೆ: ಎಚ್.ಎಸ್. ರಾಘವೇಂದ್ರ ರಾವ್
ಪ್ರ: ಚಿಂತನ ಚಿತ್ತಾರ
ಸಂ: 9945668082

ಒಳನೋಟ

ತನ್ನ ಸಾಂಕೇತಿಕತೆ, ಚತುರ ಸಂವಿಧಾನದ ಮೂಲಕ ಅರ್ಥಗಳನ್ನು ಹಿಗ್ಗಿಸಿಕೊಳ್ಳುವ ಈ ಕಾದಂಬರಿಯು ಬದುಕಿನ ಅಸಂಗತತೆ, ಅತಾರ್ಕಿಕತೆ, ರಹಸ್ಯಮಯ ವಿಚಾರಗಳನ್ನು ಅಂತರ್ಗತವಾಗಿಸಿಕೊಂಡಿದೆ. ಈ ಕಾದಂಬರಿಯಲ್ಲಿ ಧರ್ಮ ಮತ್ತು ವೈಚಾರಿಕತೆಯ ಸಂಘರ್ಷವಿದೆ. ಧರ್ಮ ಎನ್ನುವುದು ಮನುಷ್ಯನ ಸಂತೋಷದ ಬದುಕಿಗೆ ಶಕ್ತಿಯಾಗಬೇಕು, ಜೊತೆಗೆ ಕ್ರಿಯಾಶೀಲತೆಯನ್ನೊದಗಿಸುವ ಮಾಧ್ಯಮದಂತಿರಬೇಕು, ಆಗ ಧರ್ಮಕ್ಕೆ ಅರ್ಥ ಬರುತ್ತದೆ.

ಫಾದರ್ ಪೆನೆಲೊ ಮಾಡುವ ಭಾಷಣದಲ್ಲಿ ಸ್ಥಗಿತಗೊಂಡ ಮತಧರ್ಮದ ದೇವರ ಬಗ್ಗೆ ಹೇಳುತ್ತಾನೆಯೇ ಹೊರತು ಪ್ಲೇಗಿನ ಸಮಸ್ಯೆಗೆ ಪರಿಹಾರ ಸೂಚಿಸುವ ಮಾತುಗಳನ್ನು ಹೇಳುವುದಿಲ್ಲ. ಎರಡನೇ ಭಾಷಣದಲ್ಲಿ ತನ್ನ ಮಾತುಗಳನ್ನು ಸ್ವಲ್ಪಮಟ್ಟಿಗೆ ಬದಲಿಸಿಕೊಂಡರೂ ಅವೂ ಸ್ಥಗಿತಗೊಂಡ ಮತಧರ್ಮದ ವಿಚಾರಗಳೇ ಆಗಿವೆ. ಯಾವುದೇ ಧರ್ಮದ ಬಗ್ಗೆ ಮಾತನಾಡುವಾಗ ಅದರ ಕ್ರಿಯಾಶೀಲತೆಯ ಬಗ್ಗೆ ಮಾತನಾಡಬೇಕು. ಸಮಕಾಲೀನ ಬದುಕಿಗೆ ಮಾರಕವಾದ ಸಾವು, ರೋಗ, ನೋವು, ಯಾತನೆಗಳಿಗೆ ಪರಿಹಾರ ಒದಗಿಸಬೇಕು. ಆತ್ಮ, ಸ್ವರ್ಗಗಳ ಬಗ್ಗೆ ಮಾತನಾಡಿದರೆ ಆ ಧರ್ಮ ಕೊಳೆಯುತ್ತದೆ ಎಂಬ ವಿಚಾರಧಾರೆಯ ಧ್ವನಿ ಈ ಕಾದಂಬರಿಯಲ್ಲಿ ಒಳಧಾರೆಯಾಗಿ ಹರಿಯುತ್ತದೆ.

ಮತಧರ್ಮದ ಅವಶೇಷವಾದ ದೇವರು ಹಾಗೂ ಅಮೂರ್ತವೂ, ಬಲಯುತವೂ ಆದ ಪ್ರಕೃತಿಯ ನಿಷ್ಠುರತೆ ಈ ಎರಡರ ವಿರುದ್ಧ ಹೋರಾಟ ಮಾಡುತ್ತಾ ನೋವು ಸಂಕಟಗಳನ್ನು ಎದುರಿಸುತ್ತಾ ಸಂತೋಷವಾಗಿ ಬದುಕುವುದನ್ನು ಕಲಿಯುವ ಮನುಷ್ಯನ ಸ್ವರೂಪವನ್ನು ವಿವರಿಸುವುದು ಈ ಕಾದಂಬರಿಯ ಮತ್ತೊಂದು ಧ್ವನಿ. ಪ್ಲೇಗ್, ಪ್ರಕೃತಿ ತಂದೊಡ್ಡಿರುವ ದೊಡ್ಡ ರೋಗ. ಎಲ್ಲರನ್ನೂ ಕರುಣೆ ಇಲ್ಲದೆ ಸಾಯಿಸುತ್ತಿದೆ. ಈ ಸಂದರ್ಭದಲ್ಲಿ ದೇವರು ಕೂಡ ಕಾಪಾಡುತ್ತಿಲ್ಲ. ಆದ್ದರಿಂದ ಮನುಷ್ಯನೇ ತನ್ನನ್ನು ತಾನು ಕಾಪಾಡಿಕೊಳ್ಳಬೇಕು. ವಿವೇಕಯುತವಾಗಿ ಸಾವಿನ ವಿರುದ್ಧ ಹೋರಾಡಬೇಕು.

ಮುಗ್ಧ ಮಗು ಸಾಯುವಾಗ ತನ್ನ ಮುಖದಲ್ಲಿ 'ಬಂಡಾಯ'ದ ಭಾವನೆಯನ್ನು ವ್ಯಕ್ತಪಡಿಸುತ್ತದೆ ಎಂದು ನಿರೂಪಣೆಯಾಗಿದೆ. ಇದರ ಅರ್ಥ ಅನಿವಾರ್ಯವಾದ ಸಾವಿನ ವಿರುದ್ಧವೂ ಬಂಡಾಯವೇಳಬೇಕು. ನಿಸರ್ಗವಾಗಲಿ, ದೇವರಾಗಲಿ ಸಾವಿನಿಂದ ಉಳಿಸಲ್ಲ. ಆದ್ದರಿಂದ ಮನುಷ್ಯನಿಗೆ ಎದುರಾಗುವ ಸಮಸ್ಯೆ, ಸಂಕಟ, ನೋವು, ರೋಗ, ಸಾವು ಇತ್ಯಾದಿಗಳ ವಿರುದ್ಧ ಸಾಮೂಹಿಕವಾಗಿ ಬಂಡಾಯ ಹೂಡಬೇಕು. ಓರಾನ್ ನಗರಕ್ಕೆ ಪ್ಲೇಗ್ ಬಂದಾಗ ನಮಗೇನೂ ಬಂದಿಲ್ಲವಲ್ಲ ಅವನಿಗೆ ಬಂದರೆ ಬರಲಿ ಬಿಡು ಎಂದು ಭಾವಿಸಿದ್ದವರು, ಎಲ್ಲರಿಗೂ ಬಂದಾಗ ಅದನ್ನು ಸಾಮೂಹಿಕವಾಗಿ ಎದುರಿಸುತ್ತಾರೆ. ಸಾಮುದಾಯಿಕ ಸಾವಿನ ಪ್ರಶ್ನೆ ಬಂದಾಗ ಅನ್ಯ ಭಾವನೆ ಹೊರಟು ಹೋಗಿ ಒಂದಾಗುತ್ತಾರೆ. ಸಾವು ಮತ್ತು ಯಾತನೆಗಳನ್ನು ಎದುರಿಸುವುದರ ಮೂಲಕ ಜೀವನದ ಅರ್ಥಪೂರ್ಣತೆ ಸಾಧ್ಯ ಎಂಬ ಭಾವನೆ ಬಂದು ಬಿಡುತ್ತದೆ.

ಪ್ಲೇಗ್ ಬಂದಾಗ ಜನ ಕ್ವಾರಂಟೈನ್ ಆಗಿ ಬಂದಿಗಳಾಗಿದ್ದರು. ಅಂದರೆ ಸ್ವಾತಂತ್ರ್ಯ ಕಳೆದುಕೊಂಡರು. ಅದಕ್ಕಿಂತಲೂ ಮೊದಲು ತಮಗೆ ಗೊತ್ತಿಲ್ಲದೆ ಸ್ವಾತಂತ್ರ್ಯ ಕಳೆದುಕೊಂಡಿದ್ದರು. ಪ್ಲೇಗ್ ಬಂದ ನಂತರ ಅವರ ಬದುಕಿಗೆ ಒಂದು ಅರ್ಥ ಬಂದಿತು. ಸ್ನೇಹಿತರು, ಹಿತೈಷಿಗಳು, ಬಂಧುಗಳ ಬೆಲೆ ಗೊತ್ತಾಯಿತು. ಆದ್ದರಿಂದಲೇ ಈ ಕಾದಂಬರಿಯಲ್ಲಿ ಮಾನವ ಸಂಬಂಧಗಳ ಬಗ್ಗೆ, ಮನುಷ್ಯತ್ವದ ಬಗ್ಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರಸ್ತಾಪವಾಗುತ್ತಲೇ ಹೋಗುತ್ತದೆ. 'ಮಾನವತೆ ದೊಡ್ಡದು, ಮನುಷ್ಯ ಜಾತಿ ದೊಡ್ಡದು' ಎಂಬ ಅರ್ಥದ ಮಾತುಗಳು ಅನುರಣಿಸುತ್ತವೆ.

ಕಾದಂಬರಿಯ ಮುಕ್ತಾಯದ ಹಂತದಲ್ಲಿ ಬರುವ 'ಭಯ ಮತ್ತು ಅದರ ಹತ್ತು ಹಲವು ಆಯುಧಗಳ ನಿರಂತರವಾದ ಸೋಲರಿಯದ ಆಕ್ರಮಣಗಳ ವಿರುದ್ಧ ನಮ್ಮ ವೈಯಕ್ತಿಕ ಕಷ್ಟ ಕಾರ್ಪಣ್ಯಗಳು ಏನೇ ಇರಲಿ, ಮತ್ತೆ ಮತ್ತೆ ನಡೆಸಬೇಕಾದ ಹೋರಾಟದ ದಾಖಲೆಯಾಗಿ ಈ ಬರವಣಿಗೆ ಇರುತ್ತದೆ' ಎಂಬ ಮಾತು ಈ ಕಾದಂಬರಿಯ ಸಾರ್ವತ್ರಿಕತೆ, ಸಾರ್ವಕಾಲಿಕತೆ ಮತ್ತು ತತ್ಕಾಲೀನತೆಗಳನ್ನು ಸೂಚಿಸುತ್ತದೆ.

ಅನುವಾದವು ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಪದರುಗಳುಳ್ಳ ರಚನೆ ಎಂಬ ಮಾತಿದೆ. ಎಚ್.ಎಸ್. ರಾಘವೇಂದ್ರ ರಾವ್ ಅವರು ಅನ್ಯೋಕ್ತಿಯಲ್ಲಿ ಸಂಕೇತ ಪ್ರಧಾನವಾದ ನಿರೂಪಣಾ ತಂತ್ರವನ್ನೊಳಗೊಂಡಿರುವ ಈ ಕಾದಂಬರಿಯನ್ನು ಅದರ ಎಲ್ಲಾ ಅರ್ಥ ಸಾಧ್ಯತೆಗಳಿಗೆ ಭಂಗ ಬರದಂತೆ ಅದರ ಎಲ್ಲಾ ಧ್ವನಿ ಸಾಧ್ಯತೆಗಳೊಂದಿಗೆ ಅನುವಾದಿಸಿದ್ದಾರೆ. ❖

ಕಥೆ
ಎಸ್.ಗಂಗಾಧರಯ್ಯ ಬರೆದ ಕಥೆ
ಪಿಕ್ಚರ್ ಅಭೀ ಬಾಕೀ ಹೈ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ
ಹೊರೆಯಾಲ ದೊರೆಸ್ವಾಮಿ ಬರೆದ ಕವಿತೆ
ಬಾ ವಸಂತವೆ ಬಾ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

# ಎದೆಯ ನೋವನ್ನು ಹಾಡುವ ಕವಿತೆ

ಪು: 116
₹100

**ಉರಿವ ಕರುಳ ದೀಪ**
ಲೇ: ಬಿದಲೋಟಿ ರಂಗನಾಥ್
ಪ್ರ: ನಿವೇದಿತ ಪ್ರಕಾಶನ
ಸಂಪರ್ಕ: 9448733323

**ಕಾವ್ಯಜಗತ್ತಿಗೆ** ಪದಾರ್ಪಣೆ ಮಾಡಿರುವ ಹೊಸ ಕವಿಗಳ ಪೈಕಿ ಭರವಸೆ ಮೂಡಿಸಿರುವ ಹೆಸರುಗಳಲ್ಲಿ ಬಿದಲೋಟಿ ರಂಗನಾಥ್ ಅವರದೂ ಒಂದು. ಈಗಾಗಲೇ 'ಮಣ್ಣಿಗೆ ಬಿದ್ದ ಹೂಗಳು', 'ಬದುಕು ಸೂಜಿ ಮತ್ತು ನೂಲು' ಎಂಬ ಎರಡು ಸಂಕಲನಗಳನ್ನು ಕೊಟ್ಟಿರುವ ಈ ಕವಿ, ಈಗ 'ಉರಿವ ಕರುಳ ದೀಪ'ವನ್ನು ಹಿಡಿದು ಓದುಗರ ಮುಂದೆ ಬಂದಿದ್ದಾರೆ.

ಮೊದಲ ಓದು

ಒಡಲಾಳದಲ್ಲಿ ನೋವನ್ನು ತುಂಬಿಕೊಂಡಿದ್ದರೂ ಹೊಸ ಭವಿಷ್ಯದ ಬಗೆಗೆ ಬೆರಗಿನಿಂದ ನೋಡುವ 'ದೀಪ'ದ ಕವಿತೆಗಳು, ನೆಲದ ಸೊಡರನ್ನು ತುಂಬಿಕೊಂಡು ನಳನಳಿಸುತ್ತಿವೆ. ಸಮಕಾಲೀನ ವಿದ್ಯಮಾನಗಳಿಗೂ ಸ್ಪಂದಿಸುತ್ತಿವೆ. ವಿವೇಕವನ್ನು ಸಹ ಕಟ್ಟಿಕೊಡುತ್ತವೆ. ಉರಿಯುವ ಹೃದಯಗಳ ಮೇಲೆ ತಂಗಾಳಿ ಬೀಸುವ ಉಮೇದನ್ನು ಕೂಡ ಅವುಗಳು ಪ್ರಕಟಿಸುತ್ತವೆ.

'ಮೌನದ ಎಳೆ ಬಿಸಿಲ ಮೇಲೆ/ ಒಡಲುರಿಯ ದನಿಯೊಂದು ಕೈ ಚಾಚಿ/ ಭಾವ ಬಿಂದುವಿನ ಹೆಗಲ ಹಕ್ಕಿ/ ಬೆರಳ ಮೇಲೆ ಹಾರಿ ಕುಳಿತು/ ಎದೆಯೊಳಗೆ ಬಲೆ ನೇಯ್ದ ದಾರಿ ಕಂಡಿತು' ಎಂಬ ಸಾಲುಗಳು ಓದುಗನಲ್ಲೂ ಆರ್ದ್ರ ಭಾವವನ್ನು ಮೂಡಿಸುವಷ್ಟು ಸಶಕ್ತವಾಗಿವೆ. ಇಂತಹ ನೋವನ್ನು ನುಂಗಿದ ಕಾರಣಕ್ಕಾಗಿಯೋ ಏನೋ ಒಡಲ ಉರಿ ಸಹ ಹೆಚ್ಚಿದೆ. ಹೀಗಾಗಿ ನಿಂತ ನೆಲದ ತುಂಬ ಕವಿಗೆ ಬೆಂಕಿ ಕಂಡಿದೆ. ಹೀಗಿದ್ದರೂ ದೂರದಲ್ಲಿ ಎಲ್ಲೋ ಒಂದು ಭರವಸೆ ಇದೆ. 'ಸಣ್ಣಗೆ ಬೆಳಗುವ ಚುಕ್ಕಿಗೂ ಒಂದು ಕನಸಿದೆ' ಎಂದು ಸಮಾಧಾನವನ್ನೂ ಇಲ್ಲಿನ ಕಾವ್ಯ ಹೇಳಿಕೊಳ್ಳುತ್ತದೆ. ರೂಪಕ – ಇಲ್ಲಿನ ಕವಿತೆಗಳ ಶಕ್ತಿಯೂ ಹೌದು, ಮಿತಿಯೂ ಕೂಡ. ಕೆಲವು ಕವಿತೆಗಳಲ್ಲಿ ಬಳಕೆಯಾದ ಪ್ರತಿಮೆ–ರೂಪಕಗಳು ಬೆರಗು ಮೂಡಿಸಿದರೆ, ಇನ್ನು ಕೆಲವು ಕವಿತೆಗಳಲ್ಲಿ ಅವುಗಳು ಭಾರ ಎನಿಸುವಷ್ಟು ಅತಿಯಾಗಿ ಬಳಕೆಯಾಗಿವೆ. ಈ ಭಾರದಿಂದ ಹಗುರವಾದರೆ ಬಿದಲೋಟಿ ಅವರ ಕಾವ್ಯ ಇನ್ನೂ ಎತ್ತರಕ್ಕೆ ಹಾರಬಲ್ಲದು. ❖

# ಉಳಿದ ಮಾತುಗಳು ತೆರೆದಿಟ್ಟ ಲೋಕ

**ಸಿನಿಮಾ ರಂಗದ** ಜಾಣ–ಜಾಣೆಯರ ಸುದೀರ್ಘ ಸಂದರ್ಶನಗಳ ಸಂಕಲನ 'ಉಳಿದಾವ ಮಾತು'. ಇಲ್ಲಿನ ಸಂದರ್ಶನಗಳಿಗೆ ಥಳಕು–ಬಳಕು ಜಗತ್ತಿನ ಗ್ಲಾಮರಸ್ ಸಂಗತಿಗಳು ಮುಖ್ಯವಾಗಿಲ್ಲ. ಬದಲಾಗಿ ಸಿನಿಮಾದ ಪ್ರಭಾವಳಿಯಲ್ಲಿ ಇರುವವರ ಬದುಕು, ನಡೆದುಬಂದ ದಾರಿ ಹಾಗೂ ನಂಬಿಕೆಗಳ ಬಗ್ಗೆ ತಿಳಿದುಕೊಳ್ಳುವ ಉಮೇದು ಎದ್ದು ಕಾಣುತ್ತದೆ. ಅದನ್ನು ಲೇಖಕರು ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ ಕೂಡ.

ಸಂದರ್ಶನಕ್ಕೆ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುವಾಗಲೂ ಸಾಕಷ್ಟು ಎಚ್ಚರ ವಹಿಸಲಾಗಿದೆ. ಗಿರೀಶ ಕಾಸರವಳ್ಳಿ, ಭಗವಾನ್, ಜಯಂತಿ ಅವರಂತಹ ಹಿರಿಯರು, ದರ್ಶನ್, ಶ್ರುತಿ ಹರಿಹರನ್ ಅವರಂತಹ ಈಗಿನ ತಲೆಮಾರಿನ ಪ್ರತಿಭಾನ್ವಿತರು, 'ಶೃಂಗಾರದ ಹೊಂಗೆಮರ'ದ ಕುರಿತು ಧೇನಿಸುವ ಯೋಗರಾಜ ಭಟ್ಟರು, ರಿಚರ್ಡ್ ಅಟೆನ್‌ಬರೊ ಅವರ ಗಾಂಧಿ, ಕಾಸರವಳ್ಳಿ ಅವರ ಕೂರ್ಮಾವತಾರ, ಶೇಷಾದ್ರಿ ಅವರ ಮೋಹನ – ಹೀಗೆ, ಗಾಂಧಿ ಬಗೆಗಿನ ಪ್ರಮುಖ ಸಿನಿಮಾಗಳಲ್ಲಿ ಕೆಲಸ ಮಾಡಿದ ಛಾಯಾಗ್ರಹಣ ನಿರ್ದೇಶಕ ಜಿ.ಎಸ್. ಭಾಸ್ಕರರು... ಎಲ್ಲಾ ಇಲ್ಲಿ ಒಂದೆಡೆ ಸೇರಿದ್ದಾರೆ.

ಕೃತಿಯ ಆರಂಭದಲ್ಲಿರುವ ರಾಘವೇಂದ್ರ ರಾಜ್‌ಕುಮಾರ್ ಅವರ ಸಂದರ್ಶನ ಚಂದನವನದ ದಶಕಗಳ ಕಥೆಯನ್ನು ಹೇಳುವ ಜತೆಗೆ ದೊಡ್ಮನೆಯ ಹಲವು ಕುತೂಹಲದ ಸಂಗತಿಗಳನ್ನೂ ಓದುಗರ ಮುಂದೆ ತೆರೆದಿಡುತ್ತದೆ. ಡಿ. ಸತ್ಯಪ್ರಕಾಶ್, ಹೇಮಂತರಾವ್, ಅರವಿಂದ ಶಾಸ್ತ್ರಿ ಅವರಂತಹ ಪ್ರಯೋಗಶೀಲ ಮನೋಭಾವದ ಪ್ರತಿಭಾನ್ವಿತ ನಿರ್ದೇಶಕರ ಜತೆಗಿನ ಸಂವಾದ ಕೂಡ ಇಲ್ಲಿದೆ. ಕನ್ನಡ ಸಿನಿಮಾ ಜಗತ್ತಿನ ಬೆಳವಣಿಗೆಯ ಕಾಲಘಟ್ಟಗಳನ್ನು ಹಿಡಿದಿಡುವಂತಹ ಇಂತಹ ಸಂದರ್ಶನಗಳ ಗುಚ್ಛ ಇದುವರೆಗೆ ಬಂದಿರಲಿಲ್ಲ. ಆ ಕೊರತೆಯನ್ನು ಸಹ ಈ ಕೃತಿ ನೀಗಿಸಿದೆ. ಚಿತ್ರರಂಗದ ಅಧ್ಯಯನಾಸಕ್ತ ವಿದ್ಯಾರ್ಥಿಗಳು ಗಮನಿಸಲೇಬೇಕಾದ ಪಠ್ಯ ಇದಾಗಿದೆ. ❖

ಪು: 205
₹200

**ಉಳಿದಾವ ಮಾತು**
ಲೇ: ರಘುನಾಥ ಚ.ಹ., ಪದ್ಮನಾಭ ಭಟ್ ಶೇವ್ಕಾರ
ಪ್ರ: ಅನ್ನಪೂರ್ಣ
ಸಂ: 8762479216

# ಡೆಸ್ಡೆಮೋನಾ ರೂಪಕಂ

## ಅವಳ ಅಂತರಂಗಕ್ಕೆ ಕನ್ನಡಿ ಹಿಡಿಯುವ ಒಪೆರಾ

ಮಂಜುಶ್ರೀ ಎಂ.ಕಡಕೋಳ

ಪುರಾಣ, ಇತಿಹಾಸ, ವರ್ತಮಾನ – ಕಾಲ ಯಾವುದೇ ಇರಲಿ, ಹೆಣ್ಣು ತನ್ನ ಪಾವಿತ್ರ್ಯವನ್ನು ಗಂಡಿಗೆ ಸಾಬೀತುಪಡಿಸುತ್ತಲೇ ಇರಬೇಕು. ಜಮದಗ್ನಿಯ ರೇಣುಕೆ, ದುಷ್ಯಂತನ ಶಾಕುಂತಲೆ, ರಾಮನ ಸೀತೆ, ಒಥೆಲೊನ ಡೆಸ್ಡೆಮೋನಾಳಿಂದ ಹಿಡಿದು ವರ್ತಮಾನ ಕಾಲದ ಹೆಣ್ಣುಮಕ್ಕಳವರೆಗೆ ಎಲ್ಲರೂ ಪಾವಿತ್ರ್ಯವೆಂಬ ಅಗ್ನಿಕುಂಡದೊಳಗೆ ಬೇಯುತ್ತಲೇ ಇದ್ದಾರೆ.

ಹೀಗೆ ಕಾಲಾತೀತರಾಗಿ, ದೇಶ, ಭಾಷೆ, ಜನಾಂಗ, ವರ್ಗ, ವರ್ಣಗಳಾಚೆ ಇರುವ ಹೆಣ್ಣುಗಳ ಮನದೊಳಗಿನ ಮೌನಬಿಕ್ಕುಗಳು ಅಗ್ನಿಯೊಳಗೇ ಸುಟ್ಟು ಬೂದಿಯಾಗಿವೆ. ಅಂಥ ಬೂದಿಯೊಳಗೂ ಫೀನಿಕ್ಸ್‌ನಂತೆ ಹಾರಿ ಬರುವ ಅವಳ ಅಂತರಂಗಕ್ಕೆ ಕನ್ನಡಿ ಹಿಡಿಯ ಹೊರಟಿದೆ ಅಭಿಷೇಕ್ ಮಜುಂದಾರ್ ನಿರ್ದೇಶನದ 'ಡೆಸ್ಡೆಮೋನಾ ರೂಪಕಂ'. ಕನ್ನಡ, ತಮಿಳು, ಇಂಗ್ಲಿಷ್ ಮೂರು ಭಾಷೆಗಳಲ್ಲಿ ಮೂಡಿಬರುತ್ತಿರುವ 'ರೂಪಕಂ'ನ ಪರಿಕಲ್ಪನೆ, ರಂಗಪಠ್ಯ ಇರಾವತಿ ಕಾರ್ಣಿಕ್, ಅಭಿಷೇಕ್, ಎಂ.ಡಿ. ಪಲ್ಲವಿ, ಬಿಂದುಮಾಲಿನಿ, ವೀಣಾ ಅಪ್ಪಯ್ಯ ಮತ್ತು ನಿಖಿಲ್ ನಾಗರಾಜ್ ಅವರದ್ದು. ಪ್ರಸ್ತುತಿ ನಳಂದ ಆರ್ಟ್ಸ್ ಸ್ಟುಡಿಯೊದ್ದು.

> ಖ್ಯಾತ ಗಾಯಕಿಯರಾದ ಎಂ.ಡಿ. ಪಲ್ಲವಿ ಮತ್ತು ಬಿಂದುಮಾಲಿನಿ 'ಡೆಸ್ಡೆಮೋನಾ ರೂಪಕಂ' ಮೂಲಕ ಬಣ್ಣಹಚ್ಚಿ ರಂಗದ ಮೇಲೇರಿದ್ದಾರೆ. ಗಾಯನದ ಜತೆಜತೆಗೆ ನಟನೆಯ ಸವಾಲಿಗೂ ತಮ್ಮನ್ನು ಒಡ್ಡಿಕೊಂಡಿರುವ ಈ ಜೋಡಿ 'ರೂಪಕಂ' ಮೂಲಕ ಏನು ಹೇಳಲು ಹೊರಟಿದೆ ಅನ್ನುವುದನ್ನು ಇಲ್ಲಿ ಹಂಚಿಕೊಂಡಿದೆ.

### ಏನಿದು ಡೆಸ್ಡೆಮೋನಾ ರೂಪಕಂ?

'ಒಥೆಲೊ ನಾಟಕ ನೋಡಿದಾಗಲೆಲ್ಲ ಡೆಸ್ಡೆಮೋನಾಳ ಅಂತರಂಗ ಏನಿರಬಹುದು ಅನ್ನುವ ಪ್ರಶ್ನೆಗಳು ಮೂಡುತ್ತಿದ್ದವು. ಶೇಕ್ಸ್‌ಪಿಯರ್‌ನ ಡೆಸ್ಡೆಮೋನಾ ಹೇಳದೇ ಉಳಿಸಿಹೋದ ಮಾತುಗಳು ಭಿನ್ನ ಸಂಸ್ಕೃತಿಯ ಸ್ತ್ರೀವಾದಕ್ಕೆ ಕನ್ನಡಿ ಹಿಡಿಯುವಂಥವು. ಅಲ್ಲಿಂದ ಶುರುವಾದ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಮ್ಮ ತಂಡಕ್ಕೆ ಜತೆಯಾದವರು ಗಾಯಕಿಯರಾದ ಎಂ.ಡಿ. ಪಲ್ಲವಿ, ಬಿಂದುಮಾಲಿನಿ, ವೀಣಾ ಅಪ್ಪಯ್ಯ ಮತ್ತಿತರರು. ಪಾಶ್ಚಾತ್ಯರ ಒಥೆಲೊ–ಡೆಸ್ಡೆಮೋನಾಳಿಂದ ಹಿಡಿದು ಭಾರತೀಯರ ದಶರಥ–ಕೈಕೇಯಿ, ಜಮದಗ್ನಿ–ರೇಣುಕೆಯರು ಕೂಡ ನಮ್ಮ ರೂಪಕದೊಳಗೆ ಬರತೊಡಗಿದರು. ಹೀಗಾಗಿ ಪುರಾಣ, ಇತಿಹಾಸ, ವರ್ತಮಾನದಲ್ಲಿ ಮೌನವಾಗಿರುವ ಹೆಣ್ಣು ದನಿಗಳು ರಂಗದ ಮೇಲೆ ತಮ್ಮ ಅಂತರಂಗವನ್ನು ತೆರೆದಿಡಲು 'ಡೆಸ್ಡೆಮೋನಾ ರೂಪಕಂ' ವೇದಿಕೆಯಾಗಿದೆ' ಎನ್ನುತ್ತಾರೆ ನಿರ್ದೇಶಕ ಅಭಿಷೇಕ್ ಮಜುಂದಾರ್.

'ಕೈಕೇಯಿ, ರೇಣುಕಾ, ಶಾಕುಂತಲೆ, ಡೆಸ್ಡೆಮೋನಾಳ ಬಗ್ಗೆ ಇದುವರೆಗೆ ಬರೀ ಪುರುಷರೇ ಮಾತನಾಡಿದ್ದಾರೆ. ಆದರೆ ಅವಳೇ ಮಾತನಾಡಿಲ್ಲ. ಅಂತೆಯೇ ಇವರ ತಾಯಂದಿರು ಕೂಡಾ ನೇಪಥ್ಯದಲ್ಲಿ ಉಳಿದು ಮೌನಕ್ಕೆ ಶರಣಾಗಿದ್ದಾರೆ. ಅವರೆಲ್ಲರ ಮನದೊಳಗೆ ಏನಿದ್ದಿರಬಹುದು ಎಂಬುದನ್ನು ಈ ರೂಪಕಂ ಒಪೆರಾ ಮಾದರಿಯಲ್ಲಿ ತೆರೆದಿಡುತ್ತಾ ಹೋಗುತ್ತದೆ. ಈ ಎಲ್ಲಾ ಪಾತ್ರಗಳಿಗೆ ಜೀವ ತುಂಬುತ್ತಿರುವವರು ಎಂ.ಡಿ. ಪಲ್ಲವಿ ಮತ್ತು ಬಿಂದುಮಾಲಿನಿ' ಎನ್ನುತ್ತಾರೆ ಅವರು.

'ಹೆಣ್ಣುಮಕ್ಕಳಿಗೆ ದನಿಯಿದೆ. ಆದರೆ, ಅದನ್ನು ನಾವು ಯಾವತ್ತೂ ಕೇಳಿಸಿಕೊಂಡಿಲ್ಲ. ಈ ಯೋಚನೆಯೊಂದಿಗೇ ಶೇಕ್ಸ್‌ಪಿಯರ್‌ನ ಒಥೆಲೊ ಹಾಗೂ ಟಿಶಾನಿ ದೋಶಿಯವರ 'ಗರ್ಲ್ಸ್ ಆರ್ ಕಮಿಂಗ್ ಔಟ್ ಆಫ್ ದ ವುಡ್ಸ್' ಅನ್ನು ಮೂಲಪಠ್ಯವಾಗಿಟ್ಟುಕೊಂಡು 'ಡೆಸ್ಡೆಮೋನಾ ರೂಪಕಂ' ರೂಪಿಸಿದೆವು. ಇದನ್ನು ಹಲವೆಡೆ ಪ್ರಯೋಗಿಸಬೇಕೆಂಬ ಯೋಜನೆ ಇದೆ. ಇದನ್ನು ದೊಡ್ಡ ವೇದಿಕೆಯಲ್ಲೂ ಸಣ್ಣ ವೇದಿಕೆಯಲ್ಲೂ ಪ್ರದರ್ಶಿಸುವ ರೀತಿಯಲ್ಲಿ ರೂಪಿಸಲಾಗಿದೆ' ಎಂದು ವಿವರಿಸಿದರು 'ಡೆಸ್ಡೆಮೋನಾ ರೂಪಕಂ'ನ ನಿರ್ಮಾಪಕಿ ವೀಣಾ ಅಪ್ಪಯ್ಯ.

> 'ಡೆಸ್ಡೆಮೋನಾ ರೂಪಕಂ' ಏ. 11ರಂದು ಮಧ್ಯಾಹ್ನ 3 ಮತ್ತು ರಾತ್ರಿ 7.30ಕ್ಕೆ ಬೆಂಗಳೂರಿನ ರಂಗಶಂಕರದಲ್ಲಿ ಪ್ರದರ್ಶನವಾಗಲಿದೆ.

'ಡೆಸ್ಡೆಮೋನಾ ರೂಪಕಂ' ಒಪೆರಾದಲ್ಲಿ ಎಂ.ಡಿ. ಪಲ್ಲವಿ ಮತ್ತು ಬಿಂದುಮಾಲಿನಿ

### ಪರದೆಯ ಹಿಂದಿನ ಹೆಣ್ಣು ದನಿಗಳು...

'ನಾವಿಬ್ಬರೂ (ಪಲ್ಲವಿ-ಬಿಂದುಮಾಲಿನಿ) ಇಲ್ಲಿ ಹೆಣ್ಣು–ಗಂಡು, ಸೂತ್ರಧಾರ, ನಟ ಹೀಗೆ ಹತ್ತು–ಹಲವು ಪಾತ್ರಗಳನ್ನು ನಿಭಾಯಿಸಿದ್ದೇವೆ. ನಿಜಕ್ಕೂ ಇದೊಂದು ಸವಾಲು. ರಂಗದಲ್ಲಿ ಡೆಸ್ಡೆಮೋನಾಳೇ ಕೇಂದ್ರಬಿಂದುವಾದರೂ ಅವಳ ಮೂಲಕ ಬೇರೆ ಬೇರೆ ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಮೇಲ್ನೋಟಕ್ಕೆ ಡೆಸ್ಡೆಮೋನಾಳ ಕಥೆ ಎಲ್ಲರಿಗೂ ಗೊತ್ತಿರುವಂಥದ್ದೇ. ಆದರೆ, ಒಥೆಲೊ ನಾಟಕದಲ್ಲಿ ಇದುವರೆಗೆ ಕೇಳದಿರುವ, ಶೇಕ್ಸ್‌ಪಿಯರ್ ಪರದೆಯ ಹಿಂದೆ ಅಡಗಿಸಿಟ್ಟಿರುವ ಹೆಣ್ಣು ದನಿಗಳು ಇಲ್ಲಿ ಕೇಳಿಸುತ್ತವೆ. ಡೆಸ್ಡೆಮೋನಾ, ಒಥೆಲೊನ ತಾಯಂದಿರು, ಕೈಕೇಯಿ–ದಶರಥ, ಜಮದಗ್ನಿ–ರೇಣುಕೆ, ದುಷ್ಯಂತ–ಶಾಕುಂತಲೆ, ಜೋಗತಿಯರು ಮಾತನಾಡುತ್ತಾರೆ. ಒಥೆಲೊದ ಪಠ್ಯವನ್ನೇ ಮೂಲವಾಗಿಟ್ಟುಕೊಂಡು ನಮ್ಮ ಯಕ್ಷಗಾನ, ಹರಿಕಥೆ, ಎಲ್ಲಮ್ಮ ನಾಟಕದಂಥ ಕಲಾಪ್ರಕಾರಗಳನ್ನು ಅಳವಡಿಸಿಕೊಂಡಿರುವುದು ಆಸಕ್ತಿಕರ ಸಂಗತಿ' ಎಂದು ವಿವರಿಸುತ್ತಾರೆ ಬಿಂದುಮಾಲಿನಿ.

### ಇತಿಹಾಸದ ಪ್ರಶ್ನೆಗಳು ವರ್ತಮಾನಕ್ಕೂ ಸಲ್ಲುತ್ತವೆ

'ಒಥೆಲೊ ಪಾಶ್ಚಿಮಾತ್ಯ ದೃಷ್ಟಿಕೋನ ಎನಿಸಿದರೂ ನಮ್ಮ ಸಂಸ್ಕೃತಿಯಲ್ಲಿನ ಹೆಣ್ಣಿನ ಪಾತ್ರಗಳು ಒಡ್ಡುವ ಪ್ರಶ್ನೆಗಳು ಇಲ್ಲಿವೆ. ಇದೊಂದು ರೀತಿಯಲ್ಲಿ ಭಿನ್ನ ಪಯಣ. ಹಲವು ಪಾತ್ರಗಳು ಕೇಳುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಮ್ಮದು. ಈ ರೂಪಕಂನಲ್ಲಿ ಐತಿಹಾಸಿಕ ಪಾತ್ರಗಳು ಕೇಳುವ ಪ್ರಶ್ನೆಗಳು ವರ್ತಮಾನಕ್ಕೂ ಸಲ್ಲುತ್ತವೆ. ಪಲ್ಲವಿ ಮತ್ತು ನಾನು ವೇದಿಕೆಯ ಮೇಲಿದ್ದರೆ, ಹಿನ್ನೆಲೆಯಲ್ಲಿ ಮೂರನೇ ಪಾತ್ರಧಾರಿಯಾಗಿರುವ ಸಂಗೀತದ ಪಾತ್ರ ಮಹತ್ವದ್ದು (ಸಂಗೀತ: ನಿಖಿಲ್ ನಾಗರಾಜ್)' ಎನ್ನುತ್ತಾರೆ ಅವರು.

'ನಾವಿಬ್ಬರೂ ಗಾಯಕಿಯರು ಆಗಿರುವುದರಿಂದ ರಂಗದ ಮೇಲೆ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತದ ಜತೆಗೆ ದೇಸಿ ಸೊಗಡಿನ ಜನಪದ ಸಂಗೀತವೂ ಮೇಳೈಸಿದೆ. ಹರಿಕಥೆ, ಯಕ್ಷಗಾನ, ಎಲ್ಲಮ್ಮ ನಾಟಕದ ಪದಗಳು ಹೀಗೆ ಹಲವು ಕಲಾಪ್ರಕಾರಗಳ ಕೊಲಾಜ್ ಇಲ್ಲಿದೆ. 'ಡೆಸ್ಡೆಮೋನಾ ರೂಪಕಂ'ಗೆ ಸಿದ್ಧಮಾದರಿಯ ರಂಗಪಠ್ಯವಿರಲಿಲ್ಲ. ಒನ್‌ಲೈನ್ ಸ್ಟೋರಿ ಎಳೆಯನ್ನಿಟ್ಟುಕೊಂಡು ಅದನ್ನು ಬೆಳೆಸುತ್ತಾ ಹೋಗಿದ್ದೇವೆ. ಈ ರೀತಿಯ ಪ್ರಯೋಗ ಭಿನ್ನ ಅನುಭವ ನೀಡಿದೆ' ಎಂದು ಮಾತಿಗೆ ಪೂರ್ಣವಿರಾಮ ಹಾಕಿದರು ಬಿಂದು.



# ಮರಳಿ ನರಳಿದ ಯುಗಾದಿ

...8ನೇ ಪುಟದಿಂದ

ಟೀಕೆ-ಟಿಪ್ಪಣಿಗಳ ಭರಪೂರ ಪ್ರವಾಹದಲ್ಲಿ, ಆಗಬೇಕಿದ್ದ ಕೆಲಸವನ್ನು ಆಗುಮಾಡುತ್ತಿರುವವರ ಶ್ರಮವನ್ನು ಅಲ್ಲಗಳೆಯಲು ಸಾಧ್ಯವೇ? ಧನಾತ್ಮಕ ಧೋರಣೆಯಿಲ್ಲದೇ ಪ್ರಪಂಚ ನಡೆದೀತೇ ಎಂದುಕೊಳ್ಳುತ್ತಿರುವಾಗಲೇ ಮತ್ತೆ ಬಂದಿದೆ ಯುಗಾದಿ.

ಒಟ್ಟಾರೆ ವಿದ್ಯಮಾನಗಳನ್ನು, ವೈಶ್ವಿಕ ವ್ಯಾಪಾರಗಳನ್ನು ಗಮನಿಸಿದರೆ, ವ್ಯಕ್ತಿಗತ ಬದುಕಿನ ಕಷ್ಟ-ನಷ್ಟ-ಏರಿಳಿತಗಳಂತೆಯೇ, ಪ್ರತಿಯೊಂದು ಯುಗವೂ ಕಾಲಘಟ್ಟವೂ ತನ್ನದೇ ಬಿಕ್ಕಟ್ಟುಗಳನ್ನು ಆಗಾಗ ಎದುರಿಸುತ್ತಲೇ ಬಂದಿದೆ. ಭೂಗ್ರಹವನ್ನಷ್ಟೇ ಲೆಕ್ಕಕ್ಕೆ ತೆಗದುಕೊಂಡರೂ ಅದರ ಹುಟ್ಟಿನಿಂದೀಚೆ ಲಕ್ಷಾಂತರ ವರ್ಷಗಳಲ್ಲಿ ಅದೆಷ್ಟೋ ಬದಲಾವಣೆಗಳು ಆಗಿಹೋಗಿವೆ. ಮುಂದೆಯೂ ಆಗಲಿವೆ. ಯಾರ ಅಳುವಿಗೂ ಅಳವಿಗೂ ನಿಲುಕದಂತೆ ಪರಿವರ್ತನೆಯ ಚಕ್ರ ಸುತ್ತುತ್ತಲೇ ಇರುತ್ತದೆ. 2021, ಮಾರ್ಚ್ ಕಾಲಿಟ್ಟು, ಬರಲಿರುವ ಯುಗಾದಿಯ ನಿರೀಕ್ಷೆಯಲ್ಲಿ, ಇನ್ನೇನು ಅಸ್ತವ್ಯಸ್ತವಾಗಿದ್ದ ಜನಜೀವನ ನಿಧಾನಕ್ಕೆ ಸ್ಥಿರತೆಯತ್ತ ವಾಲಿಯೇಬಿಟ್ಟಿತು ಎಂದುಕೊಳ್ಳುತ್ತಿರುವಾಗಲೇ ಕೊರೊನಾದ ಅಲೆ ಹೊರಳಿ ಮೇಲೆದ್ದಿದೆ. ಈ ದಿನಗಳೆರಡರ ನಡುವಿನದೇ ನಿಜಕ್ಕೂ ಪರ್ವಕಾಲ ಎಂಬ ಸತ್ಯವನ್ನು ಒಪ್ಪಿಕೊಳ್ಳುತ್ತಲೇ ಸುಖವೋ ದುಃಖವೋ ಯುಗಾದಿಯನ್ನು ಸ್ವಾಗತಿಸಲೇಬೇಕಿದೆ.

ವ್ಯಕ್ತಿಯಾಗಿ ನಾನೇನೂ ಅಲ್ಲ, ಸಮುದಾಯವಾಗಿ ಮಾತ್ರ ಇಲ್ಲಿ ಮಾನವನ ಬದುಕಿಗೆ ಮಹತ್ವ ಎಂಬುದನ್ನು ಅಡಿಗಡಿಗೆ ಮನದಟ್ಟಾಗಿಸುತ್ತ, 'ಸಂಘೇ ಶಕ್ತಿ ಕಲೌಯುಗೇ' ವಾಕ್ಯ ನಿಜವಾಗುವ ಲಕ್ಷಣಗಳನ್ನು ತೋರುತ್ತ, ನಾನೆಂಬುದು ಈ ಮಹಾಸಾಗರದಲ್ಲಿ ಒಂದು ಬಿಂದು ಮಾತ್ರ ಎಂಬುದನ್ನು ಮತ್ತೆ ಮತ್ತೆ ನೆನಪಿಸುತ್ತಲೇ ಯುಗಾದಿ ಮರಳಿ ಬಂದಿದೆ.

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

## ಗಣಿತದಲ್ಲಿ ಗರ್ದಿ ಗಮ್ಮತ್ತು

Check ಚೌಕ



ಇಲ್ಲಿ ಮೇಲ್ನೋಟಕ್ಕೆ 9 ಚೌಕಗಳು ಕಂಡುಬಂದರೂ ಯೋಚಿಸಿದಾಗ 14 ಚೌಕಗಳು ಕಾಣಸಿಗುತ್ತವೆ. ಚೆಕ್ ಮಾಡಿ ನೋಡಿ

ಮಜ ಮಜ ಮಜಕೂರದ ಏಪ್ರಿಲ್ 4ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಶಬ್ದಗಳಲ್ಲಿ ಸರಸ...

**ವಿನೋದ ವಾಕ್ಯಗಳು**

**1. ಕೂಡಿಸಿ ಓದಿರಿ**

ಖ + ಖ + ಖ ನು ತನ್ನ
ಗೆ + ಗೆ + ಗೆ + ಗೆ + ಗೆ + ಗೆ + ಗೆ
ಗಾಗಿ ತಿ + ತಿ + ತಿಗೆ
ತಿ + ತಿ + ತಿ + ತಿ + ತಿ + ತಿ
ಮಾಡುವಾಗ ಛೆ + ಛೆ + ಛೆ ಹೋದನು.
ಓದುವ ಕ್ರಮ: ಖ + ಖ + ಖ = 3ಖ = ಮೂರ್ಖ

**2. ಏಕಾಕ್ಷರಿ ವಾಕ್ಯ**

ಗೂಗೆಗಾಗಿ ಗೋಗಿ ಗಂಗಾ ಗುಂಗು
(ಗೋಗಿ ಎಂಬುದು ಒಂದು ಊರಿನ ಹೆಸರು)

**3. ಒತ್ತಕ್ಷರ ವಿನೋದ**

ಸುಗ್ಗಿಯ ಹೊತ್ತು ನನ್ನ ಹಳ್ಳಿಯ ಜನ ನಿಶ್ಶಂಕೆಯಾಗಿ ತಮ್ಮ ಬೆಳೆ ಕೊಯ್ಯುವಾಗ ಮೈಮರೆತು ನಿಸರ್ಗದಾನಂದ ಪಡೆಯುವರು.

(ಸ್ವಾರಸ್ಯ: ಇಲ್ಲಿ 1ರಿಂದ 8ರವರೆಗಿನ ಎಲ್ಲ ಕನ್ನಡದ ಅಂಕೆಗಳು ವಾಕ್ಯದಲ್ಲಿ ಬಂದಿವೆ ಗಮನಿಸಿ. ಇಲ್ಲಿ 'ಶ'ದ ಒತ್ತಕ್ಷರವೂ ಕನ್ನಡದ 5 ಅಂಕೆಯಿಂದ ಬಂದಿದೆ ಎಂಬ ಮಾತಿದೆ)

## ದಶ್ಗ ಚಿತ್ರ ಕೇಳ್ರಪ್ಪ ಕಥೆಯ

## ಕನಕದಾಸರು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಬಾಡ ಪಟ್ಟಣದ ಡಣ್ಣಾಯಕರಾಗಿದ್ದ ಬೀರಪ್ಪ ನಾಯಕ–ಬಚ್ಚಮ್ಮ ದಂಪತಿಗೆ ಸಂತಾನಪ್ರಾಪ್ತಿ ಆಗಿರಲಿಲ್ಲ. ಆ ಕೊರಗು ಅವರನ್ನು ಬಹುವಾಗಿ ಕಾಡುತ್ತಿತ್ತು. ಆ ನೋವು ಮರೆಯಲು ತೀರ್ಥಯಾತ್ರೆಯನ್ನೂ ಕೈಗೊಂಡರು



ಮುಂದೆ ಅವರಿಗೆ ಮಗುವಾದಾಗ ತಿಮ್ಮಪ್ಪನಾಯಕ ಎಂದು ಹೆಸರಿಟ್ಟರು. ಗುರುಕುಲದಲ್ಲಿ ವಿದ್ಯಾರ್ಜನೆ ಪೂರೈಸಿ, ಪಾಂಡಿತ್ಯ ಸಂಪಾದಿಸಿದ ಆತ ಮನೆಗೆ ಮರಳಿದ ಮೇಲೂ ಅಧ್ಯಯನ ನಿರತನಾದ



ಕಟ್ಟವೊಂದರ ನಿರ್ಮಾಣಕ್ಕಾಗಿ ತಿಮ್ಮಪ್ಪನಾಯಕ ಭೂಮಿಯನ್ನ ಅಗೆಸುತ್ತಿರುವಾಗ ಧನ, ಕನಕ ತುಂಬಿದ ನಿಧಿ ದೊರೆಯುತ್ತದೆ. ಪ್ರಜೆಗಳ ಕಲ್ಯಾಣಕ್ಕೆ ಬಳಸಿದ್ದರಿಂದ 'ಕನಕ' ಎಂಬ ಬಿರುದು ಬಂತು

ಯುದ್ಧಗಳಿಂದ ತನ್ನ ರಾಜ್ಯ ವಿಸ್ತಾರ ಮಾಡುತ್ತಾನೆ. ಒಮ್ಮೆ ಯುದ್ಧದಲ್ಲಿ ವಿಜಯಯಾಗಿ ಕಳೇಬರಗಳನ್ನ ನೋಡಿ ಯುದ್ಧಭೂಮಿಯಿಂದಲೇ ವಿರಾಗಿಯಾಗಿ ಲೋಕಸಂಚಾರ ಮಾಡುತ್ತಾ ಹೊರಟರು

ಗುರುಗಳನ್ನು ಅರಸುತ್ತಾ ಅಲೆಯುತ್ತಿರುವಾಗ, ವ್ಯಾಸರಾಯರು ಕೋಣದಿಂದ ಬಂಡೆಯನ್ನ ಒಡೆಸುತ್ತಿರುವುದು ಕಣ್ಣಿಗೆ ಬೀಳುತ್ತದೆ. ಅವರನ್ನೇ ಗುರುವಾಗಿ ಸ್ವೀಕರಿಸಿದರು. ಅಧ್ಯಾತ್ಮ ಕ್ಷೇತ್ರದಲ್ಲಿ ಸಾಧನೆ ಮೆರೆದರು



ಜ್ಞಾನಿಯಾದ ಕನಕದಾಸರು ಕೀರ್ತನೆಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದರು. ದೇವರು ಒಲಿಸಿಕೊಂಡು ದೈವತ್ವವನ್ನು ಸಂಪಾದಿಸಿದರು. ಕುಲದ ಹಿರಿಮೆಗೆ ಗುದ್ದಾಡುವವರ ಕಿವಿ ಹಿಂಡಿದರು

## ಟ್ವೆಂಟಿ – 20 ಮ್ಯಾಚ್

ಎಡಭಾಗದ ಪದಕ್ಕೆ ಬಲಭಾಗದ ಪದ ಹೊಂದಿಸಿದರೆ ನಾಲ್ಕಕ್ಷರದ ಹೊಸ ಪದ ರಚನೆ ಆಗುವುದು

| | | | |
|---|---|---|---|
| 1 | ಆಗ | A. | ಬಿಡಿ |
| 2. | ಹರ | B. | ಸ್ಥಾನ |
| 3. | ರಾಜ | C. | ದಾರ |
| 4. | ಸಿಡಿ | D. | ಮನ |
| 5. | ಗಡಿ | E. | ತಾಳ |
| 6. | ಗಜ | F. | ಕೊಡೆ |
| 7. | ನಾಯಿ | G. | ಮಿಡಿ |
| 8. | ಸರ | H. | ಕರ್ಣ |
| 9. | ಕಾರ | I. | ವಾರ |
| 10. | ಮೇಕೆ | J. | ಹರ |
| 11. | ಹರಿ | K. | ದ್ವಾರ |
| 12. | ಕುಂಭ | L. | ಮೇಳ |
| 13. | ಪರ | M. | ಗಿರಿ |
| 14. | ಹರಿ | N. | ಲತೆ |
| 15. | ಬಿಳಿ | O. | ಕಾರ |
| 16. | ಕಕ್ಕು | P. | ಕತೆ |
| 17. | ಮಾದ | Q. | ಕರಿ |
| 18. | ಬಿಡು | R. | ಗಡೆ |
| 19. | ಹಳೇ | S. | ಬೀಡು |
| 20. | ಮದ | T. | ದಾಟು |



## ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

**ಪದ ಪಟ್ಟಿ**

ಹ ಚ ಕೋ ಗಿ ಚ
ಚು ತ ಸ ದ್ರ ಪು

| | | | |
|---|---|---|---|
| ◯ | ಂ | ◯ | ಶಶಿ |
| ◯ | ಂ | ◯ | ಹರತಾಳ |
| ◯ | ಂ | ◯ | ವಿತರಿಸು |
| ◯ | ಂ | ◯ | ಸ್ವಲ್ಪ |
| ◯ | ಂ | ◯ | ಸಹೋದರಿ |

### ಕಳೆದ ಸಂಚಿಕೆಯ ಸರಿ ಉತ್ತರಗಳು

**ಪುಟಾಣಿ ಪದಬಂಧ**

1. ಸಂಚು 2. ಹಿಂದಿ 3. ಬಾಂಗ್ಲಾ 4. ನಂದಿ 5. ಬಿಂಬ

**ಶಬ್ದಗಳಲ್ಲಿ ಸರಸ**

1. ತಳವಾರ 2. ಚಿನಿವಾರ 3. ಪನಿವಾರ 4. ಜನಿವಾರ 5. ಬಿಲವಾರ 6. ಬಡಿವಾರ 7. ಪರಿವಾರ

**ಟ್ವೆಂಟಿ–20 ಮ್ಯಾಚ್**

1-N, 2-O, 3-M, 4-L, 5-K, 6-C, 7-B, 8-P, 9-F, 10-J, 11-S, 12-T, 13-D, 14-A, 15-H, 16- E, 17-R, 18-Q, 19-G, 20-F

### ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

### ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಹೇಮಶ್ರೀ ಟಿ.ಆರ್., ಮೈಸೂರು

ಅಂಕಿತ್ ಪ್ರಭು ಎಂ, ಬೆಂಗಳೂರು



ಬನಶ್ರೀ ಕೂಬಳ್ಳಿ, ಹುಬ್ಬಳ್ಳಿ

ವೈಕುಂಠ ಸಮಾರಾಧನೆ



ಶ್ರೀ ಕೆ.ಸಿ. ಬೆಟ್ಟಸ್ವಾಮಿಗೌಡರು
ನಿಧನ: 02-04-2021
ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಶ್ರೀ ಕೆ. ಚನ್ನಪ್ಪನವರ ಮಗ ಸಂಪಂಗಿರಾಮ ಬಸ್ ಮಾಲೀಕರು, ಅಧ್ಯಕ್ಷರು, ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿ ಲಿಮಿಟೆಡ್.
ತತ್ಸಂಬಂಧಿತ ಉತ್ತರ ಕ್ರಿಯಾದಿಗಳನ್ನು ದಿನಾಂಕ: 12-04-2021 ರಂದು ಸ್ವಗ್ರಾಮ ಕಾಳಿಪಾಳ್ಯ, ಮಾಗಡಿ ತಾಲ್ಲೂಕು ಇಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ ಕುಟುಂಬ ವರ್ಗದವರು ಮತ್ತು ಅಪಾರ ಬಂಧು-ಮಿತ್ರರು. 9844035924

## ದೇಶದ್ರೋಹ ಆರೋಪ: ಮೂವರು ಸೈನಿಕರಿಗೆ ಗಲ್ಲು

ದುಬೈ/ ರಿಯಾದ್ (ರಾಯಿಟರ್ಸ್): ಶತ್ರುಗಳಿಗೆ ಸಹಕರಿಸಿ ಗಂಭೀರ ದೇಶದ್ರೋಹ ಎಸಗಿದ ಆಪಾದನೆಯ ಮೇರೆಗೆ ಮೂವರು ಸೈನಿಕರನ್ನು ಸೌದಿ ಅರೇಬಿಯಾ ಶನಿವಾರ ಗಲ್ಲಿಗೇರಿಸಿದೆ.

ನ್ಯಾಯ ಸಮ್ಮತ ವಿಚಾರಣೆಯ ನಂತರ ವಿಶೇಷ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿತ್ತು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಸಚಿವಾಲಯವು 'ಶತ್ರು'ವಿನ ಹೆಸರು ಉಲ್ಲೇಖಿಸಿಲ್ಲ. ಆದರೆ, ಯೆಮೆನ್ ಗಡಿಯ ದಕ್ಷಿಣ ಪ್ರಾಂತ್ಯದಲ್ಲಿ ಅಪರಾಧಿ ಸೈನಿಕರಿಗೆ ಮರಣದಂಡನೆ ವಿಧಿಸಲಾಯಿತು ಎಂದು ಹೇಳಿದೆ. ದಕ್ಷಿಣ ಪ್ರಾಂತ್ಯದಲ್ಲಿ ಇರಾನ್ ಪ್ರಾಯೋಜಿತ ಹೌತಿ ಹೋರಾಟದ ವಿರುದ್ಧ ಸೌದಿ ಅರೇಬಿಯಾ ಆರು ವರ್ಷಗಳಿಗೂ ಹೆಚ್ಚು ಕಾಲದಿಂದ ಯುದ್ಧ ನಡೆಸುತ್ತಿದೆ.

### ಚೀನಾದ ಸ್ಟೇಟ್ ಅಡ್ಮಿನಿಸ್ಟ್ರೇಷನ್ ಫಾರ್ ಮಾರ್ಕೆಟ್ ರೆಗ್ಯುಲೇಷನ್ ಕ್ರಮ

# ನಂಬಿಕೆದ್ರೋಹ: ಅಲಿಬಾಬಾಗೆ ₹ 20,774 ಕೋಟಿ ದಂಡ

ಬೀಜಿಂಗ್ (ಪಿಟಿಐ/ರಾಯಿಟರ್ಸ್): ಸ್ಪರ್ಧೆಗೆ ತಡೆ ಒಡ್ಡುವ ತಂತ್ರಗಳನ್ನು ಅನುಸರಿಸುತ್ತಿರುವ ಕಾರಣಕ್ಕಾಗಿ ಚೀನಾದ ನಿಯಂತ್ರಣ ಸಂಸ್ಥೆಯಾದ ಸ್ಟೇಟ್ ಅಡ್ಮಿನಿಸ್ಟ್ರೇಷನ್ ಫಾರ್ ಮಾರ್ಕೆಟ್ ರೆಗ್ಯುಲೇಷನ್ (ಎಸ್‌ಎಎಂಆರ್), ಅಲಿಬಾಬಾ ಹೋಲ್ಡಿಂಗ್ಸ್ ಲಿಮಿಟೆಡ್‌ಗೆ ದಾಖಲೆಯ ₹ 20,774 ಕೋಟಿ ದಂಡ ವಿಧಿಸಿದೆ.

ನಂಬಿಕೆದ್ರೋಹಕ್ಕೆ ಸಂಬಂಧಿಸಿದಂತೆ ಜಾಗತಿಕವಾಗಿ ವಿಧಿಸಲಾದ ಗರಿಷ್ಠ ಮಟ್ಟದ ದಂಡಗಳಲ್ಲಿ ಇದೂ ಒಂದಾಗಿದೆ.

ತನ್ನ ಪ್ಲಾಟ್‌ಫಾರ್ಮ್‌ಗಳನ್ನು ಬಳಸುವ ಚಿಲ್ಲರೆ ವ್ಯಾಪಾರಿಗಳು ಬೇರೆ ಪ್ಲಾಟ್‌ಫಾರ್ಮ್ ಬಳಸುವುದನ್ನು ತಡೆಯುವ ಮೂಲಕ ಸ್ಪರ್ಧೆಯನ್ನು ಮಿತಿಗೊಳಿಸುತ್ತಿದ್ದು, ಸರಕುಗಳ ಮುಕ್ತ ಮಾರಾಟಕ್ಕೆ ಅಡ್ಡಿಪಡಿಸುತ್ತಿದೆ. ಇದಕ್ಕಾಗಿ ಮಾರುಕಟ್ಟೆ ಪ್ರಾಬಲ್ಯವನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಅಲಿಬಾಬಾಗೆ ದಂಡ ವಿಧಿಸಲಾಗಿದೆ ಎಂದು ಎಸ್‌ಎಎಂಆರ್ ತಿಳಿಸಿದೆ. ಈ ದಂಡವು 2019ರಲ್ಲಿ ಕಂಪನಿಯ ದೇಶಿ ವರಮಾನದ ಶೇ 4ರಷ್ಟಕ್ಕೆ ಸಮನಾಗಿದೆ ಎಂದೂ ಅದು ತಿಳಿಸಿದೆ.

ಚೀನಾದ ಏಕಸ್ವಾಮ್ಯ ವಿರೋಧಿ ಕಾನೂನಿನ ಅಡಿಯಲ್ಲಿ ಆಡಳಿತಾತ್ಮಕ ದಂಡ ವಿಧಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದೆ. ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸುವಂತೆಯೂ ಅಲಿಬಾಬಾ ಸಮೂಹಕ್ಕೆ ಆದೇಶಿಸಿದೆ.

ದಂಡವನ್ನು ಒಪ್ಪಿಕೊಳ್ಳುವುದಾಗಿ ಮತ್ತು ಪಾಲಿಸುವುದಾಗಿ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ದಂಡದ ಕುರಿತು ಚರ್ಚಿಸಲು ಸೋಮವಾರ ಕಾನ್ಫರೆನ್ಸ್ ಕಾಲ್ ನಡೆಸಲು ನಿರ್ಧರಿಸಿದೆ.

ಕಾನೂನಿಗೆ ಅನುಗುಣವಾಗಿ ತನ್ನ ಕಾರ್ಯಾಚರಣೆಯನ್ನು ಬಲಪಡಿಸುವುದಾಗಿ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವುದಾಗಿ ಕಂಪನಿಯು ವಾಗ್ದಾನ ಮಾಡಿದೆ ಎಂದು ಸಿಜಿಟಿಎನ್ ಟಿವಿಯು ವರದಿ ಮಾಡಿದೆ.

ಅಲಿಬಾಬಾ ಸ್ಥಾಪಕ ಜಾಕ್ ಮಾ ಅವರು ಅಕ್ಟೋಬರ್‌ನಲ್ಲಿ ಚೀನಾದ ಹಣಕಾಸು ವ್ಯವಸ್ಥೆಯ ಬಗ್ಗೆ ಕಟು ವಿಮರ್ಶೆಯ ಮಾತುಗಳನ್ನು ಆಡಿದ್ದರು. ಆ ಬಳಿಕ ಮಾ ಅವರ 'ಆ್ಯಂಟ್' ಕಂಪನಿ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ (ಐಪಿಒ) ಪ್ರಕ್ರಿಯೆಯನ್ನು ಚೀನಾದ ಅಧಿಕಾರಿಗಳು ರದ್ದು ಮಾಡಿದ್ದರು. ನಂತರ ಇದೀಗ ಕಂಪನಿಯ ವಿರುದ್ಧ ಈ ಕ್ರಮ ಜರುಗಿಸಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಹೂಡಿಕೆದಾರರ ಸಂಪತ್ತು ವೃದ್ಧಿ

ಬೆಂಗಳೂರು: ಮುಂಬೈ ಷೇರುಪೇಟೆ ಸೂಚ್ಯಂಕವು ವಾರದ ವಹಿವಾಟಿನಲ್ಲಿ 438 ಅಂಶ ಹೆಚ್ಚಾಗಿ 49,591 ಅಂಶಗಳಿಗೆ ತಲುಪಿದೆ.

ಹೂಡಿಕೆದಾರರ ಸಂಪತ್ತು ಮೌಲ್ಯ ₹ 2.37 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ. ಇದರಿಂದ ಷೇರುಪೇಟೆಯ ಬಂಡವಾಳ ಮೌಲ್ಯವು ₹ 209.63 ಲಕ್ಷ ಕೋಟಿಗಳಿಗೆ ತಲುಪಿದೆ.

## ಭಾರತದ ಮೀನುಗಾರರ ಹತ್ಯೆ: ಪರಿಹಾರ ನೀಡಲಿರುವ ಇಟಲಿ

ನವದೆಹಲಿ (ಎಎಫ್‌ಪಿ): ಕೇರಳದ ಕರಾವಳಿಯಲ್ಲಿ 2012ರಲ್ಲಿ ಇಟಲಿಯ ನೌಕಾಪಡೆಯ ಇಬ್ಬರು ಸಿಬ್ಬಂದಿ ಗುಂಡಿಟ್ಟು ಕೊಂದಿದ್ದ ಭಾರತದ ಇಬ್ಬರು ಮೀನುಗಾರರ ಕುಟುಂಬಗಳಿಗೆ ಇಟಲಿಯು 1.1 ಮಿಲಿಯನ್ ಯುರೊ (ಸುಮಾರು ₹ 10 ಕೋಟಿ) ಪರಿಹಾರ ನೀಡಲಿದೆ.

ಪರಿಹಾರ ಮೊತ್ತ ಸ್ವೀಕರಿಸಲು ಭಾರತ ಒಪ್ಪಿದೆ. ಈ ಮೂಲಕ ಉಭಯ ರಾಷ್ಟ್ರಗಳ ನಡುವಿನ ಸಂಬಂಧದಲ್ಲಿ ಬಿರುಕಿಗೆ ಕಾರಣವಾಗಿದ್ದ ಸುದೀರ್ಘ ಪ್ರಕರಣಕ್ಕೆ ಅಂತ್ಯ ಸಿಕ್ಕಂತಾಗಿದೆ.

ರೋಮ್, ಭಾರತ ಸರ್ಕಾರದೊಂದಿಗೆ ಸುದೀರ್ಘ ಮಾತುಕತೆ ನಡೆಸಿದ ನಂತರ ಸಂತ್ರಸ್ಥ ಮೀನುಗಾರರ ಕುಟುಂಬಗಳಿಗೆ ಮತ್ತು ಗುಂಡಿನ ದಾಳಿಯಿಂದ ಹಾನಿಗೊಳಗಾದ ದೋಣಿಯ ಮಾಲೀಕರಿಗೆ ಒಟ್ಟು ₹10 ಕೋಟಿ ಪರಿಹಾರ ನೀಡಲು ಸಿದ್ಧವಾಗಿದೆ ಎಂದು ಇಟಲಿ ಪ್ರತಿನಿಧಿಸುತ್ತಿರುವ ವಕೀಲ ಸುಹೇಲ್ ದತ್ ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

'ನಿರ್ಧರಿತ ಪರಿಹಾರ ಮೊತ್ತ' ಸ್ವೀಕರಿಸಲು ಸಂತ್ರಸ್ಥ ಕುಟುಂಬಗಳು ಒಪ್ಪಿವೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕೂಡ ಹೇಳಿದ್ದಾರೆ.

ಇಟಲಿಯಿಂದ ಹಣ ಸ್ವೀಕರಿಸಿದ ಒಂದು ವಾರದೊಳಗೆ ಸುಪ್ರೀಂ ಕೋರ್ಟ್ ಖಾತೆಗೆ ಜಮಾ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದ ಪೀಠವು, ಈ ಪ್ರಕರಣವನ್ನು ಏಪ್ರಿಲ್ 19ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಹೇಳಿದೆ.

ಹೇಗ್‌ನಲ್ಲಿರುವ ಶಾಶ್ವತ ಮಧ್ಯಸ್ಥಿಕೆ ನ್ಯಾಯಮಂಡಳಿ (ಪಿಸಿಎ) ಇಟಲಿಯ ನೌಕಾಪಡೆಯ ಇಬ್ಬರು ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಜರುಗಿಸಬಹುದಾಗಿದೆ ಎಂದು ಕಳೆದ ಜುಲೈನಲ್ಲಿ ಆದೇಶ ಹೊರಡಿಸಿದ ನಂತರ ಈ ಬೆಳವಣಿಗೆ ನಡೆದಿದೆ.

ಸುದ್ದಿ 2 ನಿಮಿಷ

## ರಾಜಸ್ಥಾನ: ವ್ಯಾಟ್ ಏರಿಕೆ ವಿರೋಧಿಸಿ ಪೆಟ್ರೋಲ್ ವಿತರಕರ ಮುಷ್ಕರ

ಜೈಪುರ (ಪಿಟಿಐ): ರಾಜ್ಯದಲ್ಲಿ ಇಂಧನದ ಮೇಲಿನ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ದರ ಹೆಚ್ಚಳವನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ರಾಜಸ್ಥಾನ ಪೆಟ್ರೋಲಿಯಂ ವಿತರಕರ ಒಕ್ಕೂಟವು ಶನಿವಾರ ಮುಷ್ಕರ ನಡೆಸಿದರು.

ಮುಷ್ಕರದಿಂದಾಗಿ ರಾಜ್ಯದಲ್ಲಿ ಸುಮಾರು 7 ಸಾವಿರಕ್ಕೂ ಅಧಿಕ ಪೆಟ್ರೋಲ್ ಬಂಕ್‌ಗಳು ಮುಚ್ಚಿದ್ದವು. ಇದರಿಂದ ಜನರು ತೊಂದರೆ ಎದುರಿಸುವಂತಾಯಿತು. ಸರ್ಕಾರಿ ಸ್ವಾಮ್ಯದ ಕಂಪನಿಗಳ ಒಡೆತನದ ಮತ್ತು ಕಂಪನಿಗಳು ನಡೆಸುವ ಪೆಟ್ರೋಲ್ ಬಂಕ್‌ಗಳು ಮಾತ್ರವೇ ತೆರೆದಿದ್ದವು.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ವ್ಯಾಟ್ ಹೆಚ್ಚಿಸಿದ್ದು ಹೆಚ್ಚುವರಿ ವರಮಾನ ಸಂಗ್ರಹಿಸಿದೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಇಂಧನ ದರಗಳು ಕಡಿಮೆ ಇರುವುದರಿಂದ ಮಾರಾಟದ ಪ್ರಮಾಣವು ಶೇ 34ರಷ್ಟು ಇಳಿಕೆ ಆಗಿದೆ ಎಂದು ಒಕ್ಕೂಟದ ಅಧ್ಯಕ್ಷ ಸುನೀತ್ ಬಗಾಯ್ ತಿಳಿಸಿದ್ದಾರೆ.

ಸರ್ಕಾರಕ್ಕೆ ಈಗಾಗಲೇ ನಮ್ಮ ಬೇಡಿಕೆ ಸಲ್ಲಿಸಿದ್ದೇವೆ. ಸರ್ಕಾರದಿಂದ ಸಕಾರಾತ್ಮಕ ನಿರ್ಧಾರ ಹೊರಬೀಳದೇ ಇದ್ದರೆ ಏಪ್ರಿಲ್ 25ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

## ಐಪಿಒ: ಸೆಬಿಗೆ ಕರಡು ದಾಖಲೆ ಸಲ್ಲಿಸಿದ ಶ್ರೀರಾಮ್ ಪ್ರಾಪರ್ಟೀಸ್

ನವದೆಹಲಿ (ಪಿಟಿಐ): ಬೆಂಗಳೂರಿನ ಶ್ರೀರಾಮ್ ಪ್ರಾಪರ್ಟೀಸ್ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಕರಡು ದಾಖಲೆಪತ್ರಗಳನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯ ಪ್ರಸ್ತಾವಕ್ಕೆ 'ಸೆಬಿ'ಯು ಮುಂದಿನ ತಿಂಗಳು ಒಪ್ಪಿಗೆ ನೀಡಲಿದ್ದು, ಆ ಬಳಿಕ ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ ಎಂದೂ ಹೇಳಿವೆ.

ಐಪಿಒ ಮೂಲಕ ₹ 800 ಕೋಟಿ ಸಂಗ್ರಹಿಸಲು ಕಂಪನಿಯು ಉದ್ದೇಶಿಸಿದೆ. ಇದರಲ್ಲಿ ₹ 250 ಕೋಟಿ ಮೊತ್ತದ ಹೊಸ ಷೇರುಗಳು ಹಾಗೂ ₹ 550 ಕೋಟಿ ಮೊತ್ತದ ಆಫರ್ ಫರ್ ಸೇಲ್ (ಒಎಫ್‌ಸಿ) ಸೇರಿವೆ ಎಂದು ಮೂಲಗಳು ಹೇಳಿವೆ.

ಶ್ರೀರಾಮ್ ಪ್ರಾಪರ್ಟೀಸ್ ಕಂಪನಿಯು ತನ್ನ ಹಾಲಿ ಹೂಡಿಕೆದಾರರಾದ ಟಿಪಿಜಿ ಕ್ಯಾಪಿಟಲ್, ಟಾಟಾ ಕ್ಯಾಪಿಟಲ್, ವಾಲ್ಟನ್ ಸ್ಟ್ರೀಟ್ ಕ್ಯಾಪಿಟಲ್ ಮತ್ತು ಸ್ಟಾರ್‌ವುಡ್ ಕ್ಯಾಪಿಟಲ್ ಭಾಗಶಃ ನಿರ್ಗಮನದ ಪ್ರಸ್ತಾವವನ್ನು ನೀಡಿದೆ.

ಹೊಸ ಷೇರುಗಳ ಮಾರಾಟದಿಂದ ಬರುವ ಮೊತ್ತವನ್ನು ಸಾಲ ಮರುಪಾವತಿ ಅಥವಾ ಪೂರ್ವ ಪಾವತಿ ಹಾಗೂ ಕಾರ್ಪೊರೇಟ್ ಉದ್ದೇಶಗಳಿಗೆ ಬಳಸಲು ಕಂಪನಿ ಆಲೋಚಿಸಿದೆ.

ಸವಿನೆನಪು



ಯಲ್ಲಮ್ಮ
ಜನನ: 20.06.1928 ನಿಧನ: 11.04.2003
ಟಿ.ನಾರಾಯಣ ರೆಡ್ಡಿ
ಜನನ: 15.04.1920 ನಿಧನ: 21.03.2008
ಜಮೀನ್ದಾರರು, ಮುತ್ಸಂದ್ರ, ಹೊಸಕೋಟೆ ತಾ|| ಬೆಂಗಳೂರು ಗ್ರಾಮಾಂತರ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

Hospital & Medical Jobs
CHIEF MEDICAL OFFICER
MEDICAL OFFICER
LAB TECHINICIANS
RADIOLOGY TECHINICIAN(RT)
PHARMACIST
NURSES
RECEPTIONIST
99621 - 82221
0422- 3513451

Drivers

Part-Time Jobs

HEALTH SPECIAL
ಶ್ರವಣ ಸಮಸ್ಯೆಯೇ??
ನಿಮಗೆ ಇಲ್ಲಿ ಶ್ರವಣ ಸಾಧನ ಗೋಚರಿಸುತ್ತಿದೆಯೆ?
ಹೌದು. ನಿಮಗೆ ಗೋಚರಿಸುವುದಿಲ್ಲ.
ಇದು 100% ಅಗೋಚರ ಶ್ರವಣ ಸಾಧನ.
ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್
99456 11100
www.hearingc.com

ಭವಿಷ್ಯ
Astrology
ವ್ಯಾಪಾರ
Business Offers
Finance
ಇತರೆ
Medical
ಬಿಲ್ಡರ್ ಎಸ್ಟೇಟ್
Water Proofing Materials
ರಿಯಲ್ ಎಸ್ಟೇಟ್ ಸೆಲ್ಲಿಂಗ್
Electronic City
RAJA SANNIDHI 902 SFT 2BHK semifurnished vaastu carpark 29.7 lakhs 9739020102
ವೈವಾಹಿಕ
Grooms Wanted
Kannada
ಶಿಕ್ಷಣ
Special Courses
IN SHIVAMOGGA, 2-year course for PUC, CET, JEE with proper guidance All those appearing for these exams, For admission, Contact Siddharth Anantram Bhat, MSc, IIT Roorkee. Cell: 9324336949.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

| PUBLICATION | TEXT AD RATE PER INS FOR 15 WORDS | CLASSIFIEDS DISPLAY RATE PER SQCM |
|---|---|---|
| DH ALL KARNATAKA+ PV BENGALURU | 1020/- | 480/- |
| PV ALL KARNATAKA | 900/- | 430/- |

*GST applicable

SPECIAL SCHEMES ALL CATEGORY

| | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details
Contact: 9880856233 | 9731810277
9901641752 | 9845114560 | 9886213331

## ಡಾಲರ್ ಕಳ್ಳಸಾಗಣೆ: ಸ್ಪೀಕರ್ ಹೇಳಿಕೆ ದಾಖಲು

ತಿರುವನಂತಪುರ (ಪಿಟಿಐ): ಡಾಲರ್ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿ ಕಸ್ಟಮ್ಸ್ ಅಧಿಕಾರಿಗಳು, ರಾಜ್ಯ ವಿಧಾನಸಭೆ ಸ್ಪೀಕರ್ ಪಿ. ಶ್ರೀರಾಮ ಕೃಷ್ಣನ್ ಅವರ ಹೇಳಿಕೆಯನ್ನು ಶನಿವಾರ ಅವರ ನಿವಾಸದಲ್ಲಿ ದಾಖಲಿಸಿದರು.

ಅನಾರೋಗ್ಯದ ಕಾರಣ ನಾನು ಬರಲಾಗದು ಎಂದು ಸ್ಪೀಕರ್ ತನಿಖಾ ಅಧಿಕಾರಿಗಳಿಗೆ ತಿಳಿಸಿದ್ದರು.

'ಡಾಲರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಕೆಲ ವಿವರಣೆ ಬಯಸಿದ್ದು, ಎರಡು ಗಂಟೆ ಕಾಲ ನಿವಾಸದಲ್ಲಿ ಇದ್ದರು. ಸ್ಪೀಕರ್ ನೀಡಿದ ಉತ್ತರದಿಂದ ಸಮಾಧಾನಗೊಂಡಿದ್ದಾರೆ' ಎಂದು ಕಚೇರಿಯ ಮೂಲಗಳು ತಿಳಿಸಿವೆ.

ಅಧಿಕಾರಿಗಳು ಹಿಂದೆ ಮೂರು ಬಾರಿ ನೋಟಿಸ್ ನೀಡಿದ್ದರು. ಆದರೆ, ಸ್ಪೀಕರ್ ಹಾಜರಾಗಿರಲಿಲ್ಲ. ತಿರುವನಂತಪುರ ದಲ್ಲಿರುವ ಯುಎಇ ಕಾನ್ಸುಲೇಟ್‌ನ ಮಾಜಿ ಹಣಕಾಸು ಅಧಿಕಾರಿಯು ಮಸ್ಕಟ್‌ನಿಂದ ಒಮನ್‌ಗೆ 1.9 ಲಕ್ಷ ಡಾಲರ್ (ಸುಮಾರು ₹ 1.30 ಕೋಟಿ) ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ.

### ಮುಂಬೈ ಧಾರಣೆ

**ಶೇಂಗಾ**

10-4-2021

| | |
|---|---|
| ಜಾವಾ 70/80(ಹೊಸ) | 10250-10300 |
| ಜಾವಾ 80/90(ಹೊಸ) | 9750-9800 |
| ದಪ್ಪ ಮಧ್ಯಪ್ರದೇಶ(ಹೊಸ) | 10000-11100 |
| ದಪ್ಪ ಗುಜರಾತ್(ಹೊಸ) | 8800-8900 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1630 (1630) |
| ಒಂದು ವಾರದ ಡೆಲಿವರಿ | 1625 (1625) |
| ಸೋಯಾ ಕಚ್ಚಾ | 1298 (1300) |
| ಪಾಮ್ ವಾರದ ಡೆಲಿವರಿ | 1238 (1238) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1650 (1650) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ
46,300 (46,100)
ಬೆಳ್ಳಿ ಕೆ.ಜಿ 67,200 (66,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹470
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹476

### ಮೂರು ಹೊಸ ಕೃಷಿ ಕಾಯ್ದೆಗಳಿಗೆ ವಿರೋಧ

# ಹರಿಯಾಣ: ರೈತರಿಂದ ಹೆದ್ದಾರಿ ತಡೆದು ಪ್ರತಿಭಟನೆ

ಚಂಡೀಗಡ (ಪಿಟಿಐ): ಕೇಂದ್ರದ ಹೊಸ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಶನಿವಾರ ಹರಿಯಾಣದಲ್ಲಿ ಕುಂಡ್ಲಿ- ಮನೇಸರ್- ಪಾಲ್ವಾಲ್ (ಕೆಎಂಪಿ) ತಡೆರಹಿತ ಹೆದ್ದಾರಿಯನ್ನು ಅಲ್ಲಲ್ಲಿ ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ಪೆರಿಫೆರಲ್ ಎಕ್ಸ್‌ಪ್ರೆಸ್ ವೇ ಎಂದೂ ಕರೆಯುವ 136 ಕಿ.ಮೀ ಉದ್ದದ ತಡೆರಹಿತ ಹೆದ್ದಾರಿಯನ್ನು ಪ್ರತಿಭಟನಕಾರರು ಬೆಳಿಗ್ಗೆ 8 ಗಂಟೆಯಿಂದಲೇ ಬಂದ್ ಮಾಡಿದ್ದು, ಈ ಬಂದ್ 24 ತಾಸು ಮುಂದುವರಿಯಲಿದೆ ಎಂದು ಭಾರತೀಯ ಕಿಸಾನ್ ಯೂನಿಯನ್ (ಲಖೋವಾಲ್) ಪ್ರಧಾನ ಕಾರ್ಯದರ್ಶಿ ಹರಿಂದರ್ ಸಿಂಗ್ ಲಖೋವಾಲ್ ಹೇಳಿದ್ದಾರೆ.

ಕೇಂದ್ರದ ಕೃಷಿ ಸಂಬಂಧಿತ ಕಾಯ್ದೆಗಳ ವಿರುದ್ಧ ಆಂದೋಲನ ನಡೆಸುತ್ತಿರುವ ರೈತ ಸಂಘಟನೆಗಳ ನೇತೃತ್ವ ವಹಿಸಿರುವ ಸಂಯುಕ್ತಾ ಕಿಸಾನ್ ಮೋರ್ಚಾ, ಕೆಎಂಪಿ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು 24 ಗಂಟೆಗಳ ಕಾಲ ಬಂದ್ ಮಾಡಲು ಶುಕ್ರವಾರ ಕರೆ ನೀಡಿತ್ತು. ರಸ್ತೆ ಸಂಪೂರ್ಣ ಬಂದ್ ಮಾಡಿದ್ದರೂ, ತುರ್ತು ಸೇವೆಯ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ ಎಂದು ಪ್ರತಿಭಟನಾ ರೈತರು ಹೇಳಿದ್ದಾರೆ.

ಹರಿಯಾಣದ ಸೋನಿಪತ್ ಜಿಲ್ಲೆಯ ಕುಂಡ್ಲಿ ಗಡಿಯಲ್ಲಿ ರೈತರು ಶನಿವಾರ ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕೆಎಂಪಿ ಎಕ್ಸ್‌ಪ್ರೆಸ್‌ವೇ ಬಂದ್ ಮಾಡಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

### ಪ್ರತಿಭಟನೆ ಕೈಬಿಡಲು ಕೇಂದ್ರದ ಮನವಿ

ನವದೆಹಲಿ: ಕೃಷಿ ಕಾಯ್ದೆ ವಿರೋಧಿಸಿ ದೆಹಲಿ ಗಡಿಯಲ್ಲಿ ನಡೆಸುತ್ತಿರುವ ಪ್ರತಿಭಟನೆಯನ್ನು ಅಂತ್ಯಗೊಳಿಸುವಂತೆ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ರೈತರಿಗೆ ಮನವಿ ಮಾಡಿದ್ದಾರೆ.

'ದೇಶದಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚುತ್ತಿವೆ. ಹೀಗಾಗಿ, ಪ್ರತಿಭಟನೆಯನ್ನು ಅಂತ್ಯಗೊಳಿಸಬೇಕು. ಸರ್ಕಾರ ಮಾತುಕತೆಗೆ ಸದಾ ಸಿದ್ಧವಿದೆ' ಎಂದು ತಿಳಿಸಿದ್ದಾರೆ.

'ನಮಗೆ ರೈತರ ಜೀವನ ಮುಖ್ಯ. ಇಡೀ ಜಗತ್ತು ಕೋವಿಡ್-19ಗೆ ಸಂಬಂಧಿಸಿದ ನಿಯಮಾವಳಿಗಳನ್ನು ಪಾಲಿಸುತ್ತಿದೆ. ಪ್ರತಿಭಟನೆ ನಡೆಸುತ್ತಿರುವ ರೈತರು ಸಹ ಪಾಲಿಸಬೇಕು' ಎಂದು ತಿಳಿಸಿದ್ದಾರೆ.

## ಲಕ್ಷದ್ವೀಪದಲ್ಲಿ ಅಭ್ಯಾಸ: ಅಮೆರಿಕ ಸಮರ್ಥನೆ

ವಾಷಿಂಗ್ಟನ್ (ಪಿಟಿಐ): ಭಾರತ ಅನುಮತಿ ಪಡೆಯದೇ, ಆ ದೇಶದ ವಿಶೇಷ ಆರ್ಥಿಕ ವಲಯದಲ್ಲಿ ಅಭ್ಯಾಸ ನಡೆಸಿದ ತಮ್ಮ ನೌಕಾಪಡೆಗಳ ಕ್ರಮವನ್ನು ಅಮೆರಿಕದ ರಕ್ಷಣಾ ಇಲಾಖೆ (ಪೆಂಟಗನ್) ಸಮರ್ಥಿಸಿಕೊಂಡಿದೆ.

'ಇದು ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿದೆ' ಎಂದು ಪ್ರತಿಪಾದಿಸಿದೆ.

'ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿಯೇ ಯುದ್ಧವಿಮಾನಗಳ ಹಾರಾಟ, ನೌಕೆಗಳ ಸಂಚಾರವನ್ನು ಮುಂದುವರಿಸಲಾಗುವುದು' ಎಂದು ಇಲಾಖೆಯ ವಕ್ತಾರ ಜಾನ್ ಕಿರ್ಬಿ ಹೇಳಿದ್ದಾರೆ.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**
**ಸಕಲೇಶಪುರ**

| | |
|---|---|
| ಕೂಳೆ | 900-9050 |
| ನಡುಗೋಲು | 1000-1050 |
| ರಾಶಿ | 1200-1300 |
| ರಾಶಿ ಉತ್ತಮ | 1300-1400 |
| ಜರಡಿ | 1500-1550 |
| ಹೆರಕಿದ್ದು | 1900-2000 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1700-1750 |
| ಹಸಿರು ಅತಿ ಉತ್ತಮ | 1900-2000 |

| | | | |
|---|---|---|---|
| ಕಾಳು ಮೆಣಸು | 375 | ದ್ವಿತಳಿ | 250-452 |

**ರಾಮನಗರ ರೇಷ್ಮೆ**
ಮಿಶ್ರತಳಿ 244-378

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | --- | 9800 | 9800 | 127.25 ಸೆಂಟ್ಸ್ |
| ಎಸಿ | --- | 3800 | 3775 | |
| ಆರ್‌ಪಿ | --- | 5050 | 5100 | |
| ಆರ್‌ಸಿ | --- | 2900 | 2875 | 1346 ಡಾಲರ್ಸ್ |

## ಕಿರಿಯ ಎಂಜಿನಿಯರ್ ಹುದ್ದೆ ಉನ್ನತ ಪದವಿ ಅನರ್ಹತೆಯ ಮಾನದಂಡ ಅಲ್ಲ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉನ್ನತ ಪದವಿಯು ಕಿರಿಯ ಎಂಜಿನಿಯರ್ ಹುದ್ದೆಗೆ (ಜೆಇ) ಅನರ್ಹತೆ ಎಂಬುದನ್ನು ಪರಿಗಣಿಸಲಾಗದು' ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಉದಯ್ ಉಮೇಶ್ ಲಲಿತ್ ಮತ್ತು ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ನ್ಯಾಯಪೀಠವು ಬಿ.ಇ ಮತ್ತು ಬಿ.ಟೆಕ್ ಪದವಿ ಗಳಿಸಿದವರು ಜೂನಿಯರ್ ಎಂಜಿನಿಯರ್ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರು ಎಂದು ತೀರ್ಪು ನೀಡಿದೆ.

ಹಿಮಾಚಲ ಪ್ರದೇಶದ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಜೂನಿಯರ್ ಎಂಜಿನಿಯರ್‌ಗಳ ನೇಮಕಾತಿಗೆ ಸಂಬಂಧಪಟ್ಟಂತೆ ಅಭ್ಯರ್ಥಿಗಳಾದ ಪುನೀತ್ ಶರ್ಮಾ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ತೀರ್ಪು ನೀಡಿದೆ.

ಅರ್ಜಿದಾರರು ಹಿಮಾಚಲ ಪ್ರದೇಶದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

'ಜೆ.ಇ ಹುದ್ದೆಗೆ ಉನ್ನತ ಪದವೀಧರರೂ ಅರ್ಜಿ ಸಲ್ಲಿಸಬಹುದು. ವಿದ್ಯುಚ್ಛಕ್ತಿ ಮಂಡಳಿಯ ನೇರ ನೇಮಕಾತಿ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ



ಪರಿಶೀಲಿಸಿದರೆ ಇದರಲ್ಲಿ ಜೆ.ಇ ಮಟ್ಟದ ಹುದ್ದೆಗಳದ್ದೇ ಸಿಂಹಪಾಲು ಇದೆ' ಎಂದೂ ನ್ಯಾಯಪೀಠವು ಹೇಳಿದೆ.

'ಇದರಲ್ಲಿ ಉನ್ನತ ಹುದ್ದೆಯಾಗಿರುವ ಸಹಾಯಕ ಎಂಜಿನಿಯರ್ ಮಟ್ಟದ ಹುದ್ದೆಗಳು ಒಟ್ಟು ಹುದ್ದೆಗಳ ಪೈಕಿ ಶೇ 36ರಷ್ಟು ಮಾತ್ರ ಇವೆ. ಇನ್ನುಳಿದ ಶೇ 64 ಹುದ್ದೆಗಳು ಫೀಡರ್ ಮಟ್ಟದವು ಹಾಗೂ ಕಿರಿಯ ಎಂಜಿನಿಯರ್ ಮಟ್ಟದ್ದಾಗಿವೆ. ಅಂದರೆ, ಕೆಳಹಂತದ ಎಂಜಿನಿಯರ್ ಹುದ್ದೆಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಕಿರಿಯ ಎಂಜಿನಿಯರ್‌ನಂಥ ಕೆಳಹುದ್ದೆಗೆ ಉನ್ನತ ಪದವೀಧರರನ್ನು ಉದ್ದೇಶಪೂರ್ವಕವಾಗಿಯೇ ಪರಿಗಣಿಸದಿರುವ ನಿಯಮ ತಯಾರಕರ ಮನಸ್ಥಿತಿಯನ್ನು ಇದು ತೋರಿಸುತ್ತದೆ' ಎಂದೂ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

'ಜೆ.ಇ ಹುದ್ದೆಗೆ ಪದವೀಧರರಷ್ಟೇ ಅಲ್ಲ ಉನ್ನತ ಪದವೀಧರರು ಅರ್ಜಿ ಸಲ್ಲಿಸಲು ಅರ್ಹರು. ಹಾಗೆಂದು ಪದವೀಧರರು ಉನ್ನತ ಪದವಿ ಪಡೆಯಬೇಕೆಂಬ ಕರಾರು ಇಲ್ಲ' ಎಂಬುದನ್ನು ನ್ಯಾಯಪೀಠವನ್ನು ಸ್ಪಷ್ಟಪಡಿಸಿದೆ.

## ಸಂಕ್ಷಿಪ್ತ ಸುದ್ದಿ

### ಸಚಿವ ಕೋಟ ಶ್ರೀನಿವಾಸ ಪೂಜಾರಿಗೆ ಕೋವಿಡ್

ಉಡುಪಿ: ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಶನಿವಾರ ಕೋವಿಡ್ ದೃಢಪಟ್ಟಿದೆ. ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್ ತಗುಲಿರುವ ಬಗ್ಗೆ ಟ್ವಿಟ್ಟರ್‌ನಲ್ಲಿ ಖಚಿತಪಡಿಸಿರುವ ಸಚಿವರು, 'ಒಂದೆರಡು ದಿನಗಳಿಂದ ನನ್ನ ಸಂಪರ್ಕಕ್ಕೆ ಬಂದವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ' ಎಂದು ಸಲಹೆ ಮಾಡಿದ್ದಾರೆ.

### ನಾರ್ವೆ: ನಿಯಮ ಉಲ್ಲಂಘಿಸಿದ ಪ್ರಧಾನಿಗೆ ದಂಡ

ಒಸ್ಲೊ(ಎಎಫ್‌ಪಿ): ಕೋವಿಡ್-19 ನಿಯಂತ್ರಣಕ್ಕಾಗಿ ಅಂತರ ಕಾಯ್ದುಕೊಳ್ಳುವ ನಿಯಮ ಉಲ್ಲಂಘಿಸಿದ್ದಕ್ಕಾಗಿ ನಾರ್ವೆ ಪ್ರಧಾನಿ ಎರ್ನಾ ಸೋಲ್‌ಬರ್ಗ್ ಅವರಿಗೆ ಅಲ್ಲಿನ ಪೊಲೀಸರು ದಂಡ ವಿಧಿಸಿದ್ದಾರೆ.

ಜನ್ಮ ದಿನದ ಆಚರಣೆಗಾಗಿ ಕೌಟುಂಬಿಕ ಕಾರ್ಯಕ್ರಮ ಆಯೋಜಿಸಿದ್ದಕ್ಕಾಗಿ ಪ್ರಧಾನಿ ಸೋಲ್‌ಬರ್ಗ್ ಅವರಿಗೆ ₹ 1.75 ಲಕ್ಷ (20,000 ನಾರ್ವೆ ಕ್ರೋನ್ಸ್) ದಂಡ ವಿಧಿಸಿರುವುದಾಗಿ ಪೊಲೀಸ್ ಇಲಾಖೆ ಮುಖ್ಯಸ್ಥ ಓಲೆ ಸವೆರುಡ್ ಅವರು ತಿಳಿಸಿದ್ದಾರೆ.

### ಪಾಕಿಸ್ತಾನ: ಚೀನಾದ ಲಸಿಕೆಯ ತುರ್ತು ಬಳಕೆಗೆ ಒಪ್ಪಿಗೆ

ಇಸ್ಲಾಮಾಬಾದ್ (ಪಿಟಿಐ): ಚೀನಾದ ಸಿನೋವಾಕ್ ಬಯೋಟೆಕ್ ಅಭಿವೃದ್ಧಿಪಡಿಸಿರುವ 'ಕೊರೊನಾವ್ಯಾಕ್' ಲಸಿಕೆಯ ತುರ್ತುಬಳಕೆಗೆ ಪಾಕಿಸ್ತಾನ ಔಷಧಿ ನಿಯಂತ್ರಣ ಪ್ರಾಧಿಕಾರವು(ಡಿಆರ್‌ಎಪಿ) ಅನುಮತಿ ನೀಡಿದೆ.

'ಪಾಕ್‌ನಲ್ಲಿ ಒಟ್ಟು ಐದು ಕೋವಿಡ್ ಲಸಿಕೆಗೆ ಅನುಮೋದನೆ ನೀಡಲಾಗಿದೆ' ಎಂದು ಡಿಆರ್‌ಎಪಿಯ ಅಧಿಕಾರಿಯೊಬ್ಬರು ತಿಳಿಸಿದರು.

ಬರಿದಾಗುತ್ತಿದೆ ದಾಸ್ತಾನು; ಕೋವಿಡ್– 19 ಲಸಿಕೆ ಪೂರೈಕೆಯಲ್ಲಿ ತಾರತಮ್ಯ ಆರೋಪ

# ಕೆಲವು ರಾಜ್ಯಗಳಲ್ಲಿ ಲಸಿಕೆ ಅಭಾವ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಎರಡನೇ ಅಲೆಯ ಹೊಡೆತ ಬಿರುಸಾಗಿದೆ. ಆದರೆ ಲಸಿಕೆ ಅಭಿಯಾನಕ್ಕೆ ಅಡ್ಡಿ ಎದುರಾಗಿದೆ. ಪಂಜಾಬ್, ಮಹಾರಾಷ್ಟ್ರ, ಛತ್ತೀಸಗಡ, ರಾಜಸ್ಥಾನ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಕೋವಿಡ್ ತಡೆ ಲಸಿಕೆ ಕೊರತೆ ಎದುರಾಗಿರುವುದು ಆತಂಕ ಮೂಡಿಸಿದೆ.

ಬೃಹತ್ ಲಸಿಕಾ ಅಭಿಯಾನ ಹಮ್ಮಿಕೊಂಡಿರುವ ಕೇಂದ್ರ ಸರ್ಕಾರವು ಕೋವಿಡ್ ವಿರುದ್ಧ ಹೋರಾಟಕ್ಕೆ ಪಣ ತೊಟ್ಟಿದೆ. ಆದರೆ ರಾಜ್ಯಗಳಿಗೆ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದು ಈ ಹೋರಾಟಕ್ಕೆ ಹಿನ್ನಡೆ ತಂದಿದೆ.

ಪಂಜಾಬ್‌ನಲ್ಲಿ ಐದು ದಿನಗಳಲ್ಲಿ ಹಾಗೂ ಛತ್ತೀಸಗಡದಲ್ಲಿ ಮೂರು ದಿನಗಳಲ್ಲಿ ಲಸಿಕೆ ದಾಸ್ತಾನು ಖಾಲಿಯಾಗುತ್ತದೆ ಎಂದು ಆಯಾ ರಾಜ್ಯಗಳ ಮುಖ್ಯಮಂತ್ರಿಗಳು ಮಾಹಿತಿ ನೀಡಿದ್ದಾರೆ.

ರಾಜ್ಯಗಳಿಗೆ ಲಸಿಕೆ ಪೂರೈಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಕೇಂದ್ರ ಸರ್ಕಾರವು ಬಿಜೆಪಿಯೇತರ ಸರ್ಕಾರಗಳನ್ನು ತಾರತಮ್ಯದ ದೃಷ್ಟಿಯಲ್ಲಿ ನೋಡಬಾರದು ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹೇಳಿದ್ದಾರೆ.

ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಸಚಿವರ ಸಭೆಯಲ್ಲೂ ಲಸಿಕೆಯ ಕೊರತೆಯ ವಿಚಾರ ಪ್ರಸ್ತಾಪವಾಯಿತು. 'ಭಾರತದ ಲಸಿಕಾ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಆದ್ಯತೆ ನೀಡಬೇಕು. ಉಚಿತವಾಗಿ ಅಥವಾ ಉಡುಗೊರೆ ರೂಪದಲ್ಲಿ ಇತರ ದೇಶಗಳಿಗೆ ನೀಡುವುದು ನಂತರದ ಕೆಲಸ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹೇಳಿದ್ದಾರೆ.

ರಫ್ತು ಮಾಡಿದ್ದರಿಂದ ದೇಶದಲ್ಲಿ ಕೋವಿಡ್ ಲಸಿಕೆ ಕೊರತೆ ಎದುರಾಗಿದೆ. ರಾಜ್ಯಗಳಲ್ಲಿ ಲಸಿಕೆ ಕೊರತೆ ಇದ್ದರೂ ಸರ್ಕಾರವು ಲಸಿಕೆ ರಫ್ತು ಮಾಡುವುದು ಸರಿಯಲ್ಲ ಎಂದರು.

ಸಭೆಯಲ್ಲಿ ಭಾಗಿಯಾಗಿದ್ದ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ತಮ್ಮ ರಾಜ್ಯಗಳಲ್ಲಿ ಲಸಿಕೆ ಕೊರತೆ ಉಂಟಾಗಿರುವ ಬಗ್ಗೆ ಪ್ರಸ್ತಾಪಿಸಿದರು.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ನೇತೃತ್ವದಲ್ಲಿ ಶನಿವಾರ ನಡೆದ ವರ್ಚುವಲ್ ಸಭೆಯಲ್ಲಿ ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾಗಿಯಾಗಿದ್ದರು

### ಮಾನದಂಡ ರೂಪಿಸಿ: ಮನವಿ

ಮುಂಬೈ: ಲಸಿಕೆ ಹಂಚಿಕೆಗೆ ಮಾನದಂಡ ಆಧರಿಸಿದ ನೀತಿ ರೂಪಿಸಿ ಎಂದು ಮಹಾರಾಷ್ಟ್ರ ಒತ್ತಾಯಿಸಿದೆ. ರಾಜ್ಯಗಳ ಜನಸಂಖ್ಯೆ ಮತ್ತು ಕೋವಿಡ್ ಸಕ್ರಿಯ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು ಲಸಿಕೆ ಹಂಚಿಕೆ ಮಾಡಬೇಕು ಎಂದು ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಕೇಂದ್ರಕ್ಕೆ ಮನವಿ ಮಾಡಿದ್ದಾರೆ.

ಮಹಾರಾಷ್ಟ್ರಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರು ರಾಜ್ಯಗಳು ಹೆಚ್ಚಿನ ಪ್ರಮಾಣದ ಲಸಿಕೆ ಪಡೆದುಕೊಂಡಿವೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರವು ಇತ್ತೀಚೆಗೆ ಪೂರೈಸಿದ 3.5 ಕೋಟಿ ಲಸಿಕೆ ಡೋಸ್ ಪೈಕಿ ಮಹಾರಾಷ್ಟ್ರಕ್ಕೆ ಸಿಕ್ಕಿರುವುದು ಕೇವಲ 7 ಲಕ್ಷ ಡೋಸ್ ಎಂದು ಅವರು ಹೇಳಿದ್ದಾರೆ. ಆದರೆ ಕೇಂದ್ರದ ಮನವೊಲಿಸಿದ ಬಳಿಕ ಹೆಚ್ಚುವರಿಯಾಗಿ 10 ಲಕ್ಷ ಡೋಸ್ ಪೂರೈಕೆಯಾಯಿತು ಎಂದಿದ್ದಾರೆ.

**1.10 ಕೋಟಿ ಡೋಸ್:** ಮಹಾರಾಷ್ಟ್ರಕ್ಕೆ ಈವರೆಗೆ 1.10 ಕೋಟಿ ಡೋಸ್ ಲಸಿಕೆ ಪೂರೈಸಲಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ. ರಾಜ್ಯವು ಲಸಿಕೆ ಕೊರತೆ ಎದುರಿಸುತ್ತಿದೆ ಎಂಬ ವರದಿಗಳಿಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ ರಾಜ್ಯಗಳು ಒಂದು ಕೋಟಿಗೂ ಹೆಚ್ಚು ಡೋಸ್ ಲಸಿಕೆ ಪಡೆದುಕೊಂಡಿವೆ ಎಂದಿದ್ದಾರೆ. ಮಹಾರಾಷ್ಟ್ರಕ್ಕೆ 1,100 ವೆಂಟಿಲೇಟರ್‌ಗಳನ್ನು ಒದಗಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

### ನಿರ್ವಹಣೆಯಲ್ಲಿ ಎಡವಿದ ಸರ್ಕಾರ: ಸೋನಿಯಾ

ಕೇಂದ್ರ ಸರ್ಕಾರವು ಕೋವಿಡ್ ನಿರ್ವಹಣೆಯಲ್ಲಿ ಎಡವಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಶನಿವಾರ ಆರೋಪಿಸಿದ್ದಾರೆ.

ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಸಚಿವರ ಜೊತೆ ವರ್ಚುವಲ್ ಸಭೆಯಲ್ಲಿ ಅವರು ಮಾತನಾಡಿದರು. ಈ ರಾಜ್ಯಗಳಲ್ಲಿ ಕೋವಿಡ್ ಎರಡನೇ ಅಲೆ ನಿರ್ವಹಣೆ ಬಗ್ಗೆ ಮಾಹಿತಿ ಪಡೆದುಕೊಂಡ ಅವರು, ಸೋಂಕಿತರ ಪರೀಕ್ಷೆ, ಪತ್ತೆ ಹಾಗೂ ಲಸಿಕೆ ನೀಡಿಕೆಗೆ ಆದ್ಯತೆ ಕೊಡಬೇಕು ಎಂದರು.

ಕೋವಿಡ್ ಪ್ರಸರಣ ಹೆಚ್ಚುತ್ತಿರುವ ಕಾರಣ ಚುನಾವಣಾ ರ್‍ಯಾಲಿಗಳೂ ಸೇರಿದಂತೆ ಎಲ್ಲ ಸಾರ್ವಜನಿಕ ಸಮಾರಂಭಗಳನ್ನು ನಿರ್ಬಂಧಿಸಬೇಕು ಎಂದು ಸೋನಿಯಾ ಗಾಂಧಿ ಅವರು ಸಭೆಯಲ್ಲಿ ಅಭಿಪ್ರಾಯಪಟ್ಟರು.

'ಚುನಾವಣಾ ರ್‍ಯಾಲಿಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳು ಕೋವಿಡ್ ಪ್ರಸರಣಕ್ಕೆ ವೇಗ ನೀಡಿವೆ. ನಾವೆಲ್ಲರೂ ಜವಾಬ್ದಾರರು. ರಾಷ್ಟ್ರದ ಹಿತಾಸಕ್ತಿ ನಮ್ಮೆಲ್ಲರ ಆದ್ಯತೆಯಾಗಿರಬೇಕು' ಎಂದು ಸೋನಿಯಾ ಹೇಳಿದರು.

'ಪ್ರಕರಣಗಳು ಏರುಗತಿಯಲ್ಲಿರುವಾಗ ಪ್ರಮುಖ ಪ್ರತಿಪಕ್ಷವಾಗಿ ದನಿ ಎತ್ತುವುದು ಕಾಂಗ್ರೆಸ್‌ನ ಕರ್ತವ್ಯ. ಜನರ ಪರವಾಗಿ ಕೆಲಸ ಮಾಡುವಂತೆ ಸರ್ಕಾರವನ್ನು ಎಚ್ಚರಿಸುವ ಕೆಲಸವನ್ನು ಪಕ್ಷ ಮಾಡುತ್ತಿದೆ' ಎಂದು ಸೋನಿಯಾ ಹೇಳಿದರು.

ಸಾಂಕ್ರಾಮಿಕ ರೋಗವು ನಿಯಂತ್ರಣ ತಪ್ಪಿ ದೊಡ್ಡ ಅನಾಹುತ ಸೃಷ್ಟಿಸುವುದನ್ನು ತಡೆಯಲು ಕಾಂಗ್ರೆಸ್ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆಯಿದೆ ಎಂದು ಸೋನಿಯಾ ಗಾಂಧಿ ಹೇಳಿದರು.

**ರೈತರ ಸಿಟ್ಟು:** ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ಬಗ್ಗೆ ರೈತರು ಆಕ್ರೋಶಗೊಂಡಿದ್ದು, ಲಸಿಕಾ ಕಾರ್ಯಕ್ರಮದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಹೇಳಿದ್ದಾರೆ. 'ಕೃಷಿ ಕಾಯ್ದೆಗಳ ಬಗ್ಗೆ ಜನರಿಗೆ ಸಿಟ್ಟು ಇರುವ ಕಾರಣ ಅವರು ಲಸಿಕಾ ಕೇಂದ್ರಗಳಿಗೆ ಬರುತ್ತಿಲ್ಲ. ಆದಾಗ್ಯೂ ಇವರೆಗೆ 16 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ' ಎಂದರು.

### ಬಿಜೆಪಿ ಕಚೇರಿಯಲ್ಲಿ ಉಚಿತ ರೆಮ್‌ಡಿಸಿವಿರ್ ಹಂಚಿಕೆ

ಅಹಮದಾಬಾದ್: ಗುಜರಾತ್‌ನಲ್ಲಿ ಕೊರೊನಾ ವೈರಸ್ ಪ್ರಕರಣಗಳು ಉಲ್ಬಣಗೊಳ್ಳುತ್ತಿರುವ ಮಧ್ಯೆಯೇ ಹೊಸ ವಿವಾದವೊಂದು ಶನಿವಾರ ಸ್ಫೋಟಗೊಂಡಿದೆ. ಭಾರಿ ಬೇಡಿಕೆಯಿರುವ ಆ್ಯಂಟಿ ವೈರಲ್ ಇಂಜೆಕ್ಷನ್ ರೆಮೆಡಿಸಿವಿರ್ ಅನ್ನು ಸೂರತ್‌ನ ಬಿಜೆಪಿ ಕಚೇರಿಯಲ್ಲಿ ವಿತರಣೆ ಮಾಡಲಾಗುತ್ತಿದೆ.

ಕೋವಿಡ್ ಲಸಿಕೆ ಕೊರತೆ ಹಿನ್ನೆಲೆಯಲ್ಲಿ ಪಕ್ಷವು ಈ ಕ್ರಮಕ್ಕೆ ಮುಂದಾಗಿದೆ ಎನ್ನಲಾಗಿದೆ. ಕೋವಿಡ್ ಬಾಧಿತರು ಹೆಚ್ಚು ಕಂಡುಬಂದಿರುವ ಸೂರತ್‌ನಲ್ಲಿ ಸುಮಾರು 5 ಸಾವಿರ ಇಂಜೆಕ್ಷನ್ ವಿತರಿಸಲು ಪಕ್ಷ ನಿರ್ಧರಿಸಿದೆ. ಕಚೇರಿ ಮುಂದೆ ಜನರು ಸಾಲುಗಟ್ಟಿ ಇಂಜೆಕ್ಷನ್ ಪಡೆದುಕೊಂಡರು.

ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಈ ಇಂಜೆಕ್ಷನ್ ಸಿಗುತ್ತಿಲ್ಲ. ಹಾಗಿರುವಾಗ ರಾಜಕೀಯ ಪಕ್ಷವೊಂದು ಈ ಇಂಜೆಕ್ಷನ್‌ಗಳನ್ನು ಪಡೆದುಕೊಂಡಿದ್ದು ಹೇಗೆ ಎಂದು ಹಲವರು ಪ್ರಶ್ನಿಸಿದ್ದಾರೆ.

### 'ಬಡವರ ಕೈಗೆ ದುಡ್ಡುಕೊಡಿ'

ಕೋವಿಡ್ ಎರಡನೇ ಅಲೆಯ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆತಂಕ ವ್ಯಕ್ತಪಡಿಸಿದರು. ಎರಡನೇ ಅಲೆಗೆ ಕಾರಣವಾಗಿರುವ ಹೊಸ ರೂಪಾಂತರ ತಳಿಗಳ ಬಗ್ಗೆ ಸರ್ಕಾರ ಗಮನ ಹರಿಸಬೇಕು ಎಂದರು ಸಲಹೆ ನೀಡಿದರು.

'ಸೋಂಕು ಹರಡುವಿಕೆ, ಪೌಷ್ಟಿಕತೆ ಮತ್ತು ಜೀವನೋಪಾಯದ ನಡುವೆ ನೇರ ಸಂಪರ್ಕವಿದೆ. ಸೋಂಕು ಬಡವರ ಮೇಲೆ ದಾಳಿ ಮಾಡಿ ಅವರಿಗೆ ಇನ್ನಷ್ಟು ಕಷ್ಟ ತಂದಿಡುತ್ತದೆ. ಹೀಗಾಗಿ ಸರ್ಕಾರವು ಕನಿಷ್ಠ ಆದಾಯದ ಖಾತರಿ ನೀಡಬೇಕು. ಸಂಕಷ್ಟದ ಸಮಯದಲ್ಲಿ ಬಡವರ ಕೈಗೆ ಹಣ ಕೊಡಬೇಕು' ಎಂದು ರಾಹುಲ್ ಹೇಳಿದರು.

ದೇಶದ ಜನರಿಗೆ ಉದ್ಯೋಗ ಮತ್ತು ಲಸಿಕೆ ಬೇಕೇ ಹೊರತು ಬಿಜೆಪಿ ಸರ್ಕಾರದ ಸುಳ್ಳುಗಳು ಅಲ್ಲ ಎಂದಿದ್ದಾರೆ.




# ಐಸಿಯು ದಾಖಲಾತಿ 405ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಾದ ಕೆಲವರಲ್ಲಿ ಗಂಭೀರ ಸ್ವರೂಪದ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇದರಿಂದಾಗಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಏರುಗತಿ ಪಡೆದಿದ್ದು, ರಾಜ್ಯದ ವಿವಿಧ ಆಸ್ಪತ್ರೆಗಳ ಐಸಿಯುನಲ್ಲಿ 405 ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸೋಂಕಿತರಲ್ಲಿ ಮತ್ತೆ 36 ಮಂದಿ ಸಾವಿಗೀಡಾಗಿರುವುದು ಶನಿವಾರ ದೃಢಪಟ್ಟಿದೆ. ಬೆಂಗಳೂರಿನಲ್ಲಿ 19 ಮಂದಿ, ಮೈಸೂರಿನಲ್ಲಿ 5 ಮಂದಿ, ತುಮಕೂರು, ಕಲಬುರ್ಗಿ ಹಾಗೂ ಬೀದರ್‌ನಲ್ಲಿ ತಲಾ ಇಬ್ಬರು, ಬಳ್ಳಾರಿ, ಚಾಮರಾಜನಗರ, ಹಾಸನ ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇವರಲ್ಲಿ ಐವರನ್ನು ಹೊರತುಪಡಿಸಿ ಉಳಿದವರು 50 ವರ್ಷ ಮೇಲ್ಪಟ್ಟವರಾಗಿದ್ದಾರೆ. ಮರಣ ಹೊಂದಿದವರಲ್ಲಿ ಬಹುತೇಕರು ಕೋವಿಡೇತರ ಅನಾರೋಗ್ಯ ಸಮಸ್ಯೆಗಳನ್ನು ಕೂಡ ಎದುರಿಸಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,849ಕ್ಕೆ ಏರಿಕೆಯಾಗಿದೆ. ಈ ತಿಂಗಳಲ್ಲಿಯೇ 282 ಮಂದಿ ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ ಒಂದು ದಿನದ ಅವಧಿಯಲ್ಲಿ 98 ಸಾವಿರ ಪರೀಕ್ಷೆಗಳನ್ನು ನಡೆಸಲಾಗಿದೆ. 6,955 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 7.04ಕ್ಕೆ ಏರಿಕೆಯಾಗಿದೆ. ಬೆಂಗಳೂರು (4,384), ಕಲಬುರ್ಗಿ (276), ಮೈಸೂರು (266), ಬೀದರ್ (215), ತುಮಕೂರು (206), ಬೆಂಗಳೂರು ಗ್ರಾಮಾಂತರ (152), ದಕ್ಷಿಣ ಕನ್ನಡ (137), ಕೋಲಾರ (121), ಮಂಡ್ಯ (119) ಹಾಗೂ ಹಾಸನ (100) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಈ ತಿಂಗಳು 10 ದಿನಗಳಲ್ಲಿ 58,036 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 10.55 ಲಕ್ಷ ದಾಟಿದೆ.

## ರಾತ್ರಿ ಕರ್ಫ್ಯೂ: ಗುರುತಿನ ಚೀಟಿ ಕಡ್ಡಾಯ

ಬೆಂಗಳೂರು: ರಾತ್ರಿ ಕರ್ಫ್ಯೂ ವಿಧಿಸಿರುವ ಏಳು ಜಿಲ್ಲೆಗಳ ನಗರಗಳು ಮತ್ತು ಮಣಿಪಾಲದ ಕೈಗಾರಿಕೆಗಳ ನೌಕರರು ಕರ್ಫ್ಯೂ ಅವಧಿಯಲ್ಲಿ (ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆ) ಓಡಾಡುವ ಸಂದರ್ಭದಲ್ಲಿ ತಮ್ಮ ಕಂಪನಿ ನೀಡಿದ ಗುರುತಿನ ಚೀಟಿ ಹೊಂದಿರಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕೈಗಾರಿಕೆಗಳ ಸುಗಮ ಕಾರ್ಯನಿರ್ವಹಣೆ ಮತ್ತು ನೌಕರರ ಓಡಾಟಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ಈ ಆದೇಶ ಹೊರಡಿಸಿದ್ದಾರೆ.

ನೌಕರರನ್ನು ಕರೆದೊಯ್ಯುವ ವಾಹನಗಳು ಆಯಾ ಕಂಪನಿಯ ಅಧಿಕೃತ ಪತ್ರ ಹೊಂದಿರಬೇಕು. ಅಲ್ಲದೆ, ಸಂಚಾರದ ವೇಳೆ ನೌಕರರು ಮತ್ತು ವಾಹನಗಳಲ್ಲಿ ಕೋವಿಡ್ ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು.

ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ- ಮಣಿಪಾಲ, ಬೀದರ್, ಕಲಬುರ್ಗಿ ಮತ್ತು ತುಮಕೂರು ನಗರದಲ್ಲಿ ಏ.10ರಿಂದ 20ರವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿ ಇರಲಿದೆ.

## 'ದೆಹಲಿಯಲ್ಲಿ ಪಾಳೆಗಾರ, ರಾಜ್ಯದಲ್ಲಿ ಮಾಂಡಲಿಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರಗಳಲ್ಲಿ ರಾತ್ರಿ ಕರ್ಫ್ಯೂ ಹೇರಿರುವ ರಾಜ್ಯ ಬಿಜೆಪಿ ಸರ್ಕಾರದ ತೀರ್ಮಾನ, ಕೊರೊನಾ ಓಡಿಸಲು ತಟ್ಟೆ ಬಡಿಯಲು ಪ್ರಧಾನಿ ನರೇಂದ್ರ ಮೋದಿ ನೀಡಿದ್ದ ಕರೆಯಷ್ಟೇ ಬಾಲಿಶ. ದೆಹಲಿಯಲ್ಲೊಬ್ಬರು ಪಾಳೆಗಾರ, ಕರ್ನಾಟಕದಲ್ಲೊಬ್ಬರು ಮಾಂಡಲಿಕ, ಭಲೇ ಜೋಡಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವ್ಯಂಗ್ಯವಾಡಿದ್ದಾರೆ.

'ರಾತ್ರಿ ತೆರೆದಿರುವ ಹೋಟೆಲ್, ಚಿತ್ರಮಂದಿರ ಮತ್ತು ಅಂಗಡಿ-ಮುಂಗಟ್ಟುಗಳನ್ನು ಮುಚ್ಚಿದರೆ ಸಾಲದೇ. ಕೊರೊನಾ ನಿಯಂತ್ರಣಕ್ಕೆ ಯಾವ ರೀತಿಯಲ್ಲಿಯೂ ಉಪಯೋಗವಾಗದ ಆಯ್ದ ನಗರಗಳಲ್ಲಿ ರಾತ್ರಿ ಕರ್ಫ್ಯೂ ನಾಟಕ ಯಾಕೆ' ಎಂದು ಪ್ರಶ್ನಿಸಿದ್ದಾರೆ.

'ಕೊರೊನಾ ನಿಯಂತ್ರಿಸುವ ಪ್ರಾಮಾಣಿಕ ಇಚ್ಛೆಯನ್ನು ಮುಖ್ಯಮಂತ್ರಿ ಹೊಂದಿದ್ದರೆ, ಮೊದಲು ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು, ಕೋವಿಡ್ ಪರೀಕ್ಷೆ ಹೆಚ್ಚಿಸಬೇಕು. ಸೋಂಕಿತರಿಗೆ ತಕ್ಷಣ ಚಿಕಿತ್ಸೆ ಲಭ್ಯವಿರುವಂತೆ ನೋಡಿಕೊಳ್ಳಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಕೋವಿಡ್ ಲಸಿಕೆ ಆರಂಭಿಸಿ 80 ದಿನಗಳು ಕಳೆದರೂ ಕೇವಲ ಶೇ 1ರಷ್ಟು ಜನರಿಗೆ ನೀಡಲು ಸಾಧ್ಯವಾಗಿದೆ. ರಾಜ್ಯದಲ್ಲಿ ಈಗಾಗಲೇ ಲಸಿಕೆ ಕೊರತೆಯ ದೂರು ಕೇಳಿಬರುತ್ತಿದೆ. ಗಿಮಿಕ್‌ಗಳನ್ನು ಬಿಟ್ಟು ಈ ಕಡೆ ಗಮನಹರಿಸಿ' ಎಂದೂ ಸಲಹೆ ನೀಡಿದ್ದಾರೆ

'ಪ್ರಧಾನಿಯ ಅಂಧಾ ದರ್ಬಾರ್‌ನಿಂದ ರಾಜ್ಯದ ಮುಖ್ಯಮಂತ್ರಿ ಸ್ಫೂರ್ತಿ ಪಡೆದರೆ, ಮುಖ್ಯಮಂತ್ರಿಯಿಂದ ಪ್ರೇರಣೆ ಪಡೆದು ಕೆಲವು ಜಿಲ್ಲಾಧಿಕಾರಿಗಳು ಕೊರೊನಾ ನಿಯಂತ್ರಣದ ಹೆಸರಲ್ಲಿ ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ನೀವು ಸ್ವಲ್ಪ ಬುದ್ಧಿ ಕಲಿಯಿರಿ, ಅವರಿಗೂ ಸ್ವಲ್ಪ ಬುದ್ಧಿ ಹೇಳಿ' ಎಂದೂ ಮುಖ್ಯಮಂತ್ರಿ ಅವರಿಗೆ ಸಿದ್ದರಾಮಯ್ಯ ಕುಟುಕಿದ್ದಾರೆ.

## ಹ್ಯೂಸ್ಟನ್: ನವಜಾತ ಶಿಶುವಿನ ಮೇಲೆ ಗುಂಡು ಹಾರಿಸಿದ 3 ವರ್ಷದ ಮಗು

ಹ್ಯೂಸ್ಟನ್ (ಎಪಿ): ಮೂರು ವರ್ಷದ ಮಗು, ನವಜಾತ ಶಿಶುವಿನ ಮೇಲೆ ಆಕಸ್ಮಿಕವಾಗಿ ಗುಂಡು ಹಾರಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಶಿಶು ಮೃತಪಟ್ಟ ಘಟನೆ ಹ್ಯೂಸ್ಟನ್‌ನಲ್ಲಿ ನಡೆದಿದೆ.

'3 ವರ್ಷದ ಬಾಲಕನ ಕೈಗೆ ಗನ್ ಸಿಕ್ಕಿದ್ದು, ಆತ ತಿಳಿಯದೇ ತನ್ನ ತಮ್ಮನ ಮೇಲೆ ಗುಂಡು ಹಾರಿಸಿದ್ದಾನೆ. 8 ತಿಂಗಳ ಮಗುವಿನ ಹೊಟ್ಟೆಗೆ ಗುಂಡು ತಗುಲಿದೆ. ಪೋಷಕರು ಮಗುವನ್ನು ಆಸ್ಪತ್ರೆಗೆ ದಾಖಲಿಸಿದ್ದರೂ, ಚಿಕಿತ್ಸೆ ಫಲಕಾರಿಯಾಗದೇ ಮಗು ಮೃತಪಟ್ಟಿತು' ಎಂದು ಹ್ಯೂಸ್ಟನ್ ಪೊಲೀಸ್ ಇಲಾಖೆ ಸಹಾಯಕ ಮುಖ್ಯಸ್ಥ ವೆಂಡಿ ಬೇಂಬ್ರಿಡ್ಜ್ ತಿಳಿಸಿದರು.

'ನಿಮ್ಮ ಮನೆಯಲ್ಲಿರುವ ಯಾವುದೇ ಗನ್ ಅಥವಾ ಇತರೆ ಶಸ್ತ್ರಾಸ್ತ್ರಗಳನ್ನು ಮಕ್ಕಳ ಕೈಗೆ ಸಿಗುವ ರೀತಿಯಲ್ಲಿ ಇಡಬೇಡಿ' ಎಂದು ಅವರು ಮನವಿ ಮಾಡಿದ್ದಾರೆ.

ಏಷ್ಯನ್ ಅರ್ಹತಾ ಕುಸ್ತಿ ಟೂರ್ನಿ: ನನಸಾಗದ ಸಾಕ್ಷಿ ಕನಸು; ಸೀಮಾ ಬಿಸ್ಲಾ, ನಿಶಾಗೆ ನಿರಾಸೆ

# ಒಲಿಂಪಿಕ್ಸ್‌ಗೆ ಅನ್ಶು, ಸೋನಂ ಮಲಿಕ್

ಅಲ್ಮಾಟಿ, ಕಜಕಸ್ತಾನ: ಅಮೋಘ ಸಾಮರ್ಥ್ಯ ತೋರಿದ ಭಾರತದ ಅನ್ಶು ಮಲಿಕ್ ಹಾಗೂ ಸೋನಂ ಮಲಿಕ್ ಅವರು ಟೋಕಿಯೊ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿದ್ದಾರೆ. ಇಲ್ಲಿ ನಡೆಯುತ್ತಿರುವ ಏಷ್ಯನ್ ಒಲಿಂಪಿಕ್ ಅರ್ಹತಾ ಕುಸ್ತಿ ಟೂರ್ನಿಯಲ್ಲಿ ಶನಿವಾರ ಫೈನಲ್ ತಲುಪುವ ಮೂಲಕ ಅವರು ಈ ಸಾಧನೆ ಮಾಡಿದರು.

ಇದುವರೆಗೆ ಭಾರತದ ಮೂವರು ಮಹಿಳಾ ಕುಸ್ತಿಪಟುಗಳು ಈ ಬಾರಿಯ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಂತಾಗಿದೆ. ವಿನೇಶಾ ಫೋಗಟ್ (53 ಕೆಜಿ ವಿಭಾಗ) ಅವರು 2019ರ ವಿಶ್ವಚಾಂಪಿಯನ್‌ಷಿಪ್ ಮೂಲಕ ಈಗಾಗಲೇ ಪ್ರವೇಶ ಪಡೆದಿದ್ದಾರೆ.

ಪುರುಷರ ವಿಭಾಗದಲ್ಲಿ ಬಜರಂಗ್ ಪೂನಿಯಾ (65 ಕೆಜಿ), ರವಿ ದಹಿಯಾ (57 ಕೆಜಿ) ಹಾಗೂ ದೀಪಕ್ ಪೂನಿಯಾ (86 ಕೆಜಿ) ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅನ್ಶು ಸಂಪೂರ್ಣ ಪ್ರಾಬಲ್ಯ ಮೆರೆದರೆ, 62 ಕೆಜಿ ವಿಭಾಗದಲ್ಲಿ ಸೋನಂ ಅವರು ಸಾಕ್ಷಿ ಮಲಿಕ್ ಅವರ ಒಲಿಂಪಿಕ್ಸ್ ಪ್ರವೇಶದ ಕನಸು ಭಗ್ನಗೊಳ್ಳುವಂತೆ ಮಾಡಿದರು. ಫೈನಲ್ ತಲುಪುವ ಹಾದಿಯಲ್ಲಿ ಅನ್ಶು, ತಾವು ಆಡಿದ ಕಣಕ್ಕಿಳಿದ ಮೂರು ಬೌಟ್‌ಗಳಲ್ಲಿ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಗೆಲುವು ಸಾಧಿಸಿದರು. ಮೊದಲ ಹಣಾಹಣಿಯಲ್ಲಿ ಕೊರಿಯಾದ ಜಿಯುನ್ ಉಮ್, ಬಳಿಕ ಕಜಕಸ್ತಾನದ ಎಮ್ಮಾ ಟಿಸ್ಸಿನಾ ಅವರನ್ನು ಪರಾಭವಗೊಳಿಸಿದ ಅವರು, ಸೆಮಿಫೈನಲ್‌ನಲ್ಲಿ ಉಜ್ಬೆಕಿಸ್ತಾನದ ಶೋಕಿದಾ ಅಖ್ಮೆದೊವಾ ಅವರನ್ನು ಮಣಿಸಿದರು. ಸೋನಂ ಅವರು ತಮ್ಮ ಮೊದಲ ಎದುರಾಳಿ ಚೀನಾದ ಜಿಯಾ ಲಾಂಗ್ ಎದುರು 5–2ರಿಂದ ಗೆದ್ದರೆ, ನಂತರ ತೈಪೇಯ ಸಿನ್ ಪಿಂಗ್ ಪಾಯ್ ಎದುರು ತಾಂತ್ರಿಕ ಶ್ರೇಷ್ಠತೆಯಿಂದ ಜಯಿಸಿ ಸೆಮಿಫೈನಲ್ ತಲುಪಿದರು.

ನಾಲ್ಕರ ಘಟ್ಟದ ಬೌಟ್‌ನಲ್ಲಿ ಆರಂಭದಲ್ಲಿ 0–6ರಿಂದ ಹಿನ್ನಡೆಯಲ್ಲಿದ್ದರೂ ಸತತ ಒಂಬತ್ತು ಪಾಯಿಂಟ್ಸ್ ಗಳಿಸಿ ಜಯಭೇರಿ ಮೊಳಗಿಸಿದರು.

ಸೀಮಾ ಬಿಸ್ಲಾ (50 ಕೆಜಿ) ತಾವು ಕಣಕ್ಕಿಳಿದಿದ್ದ ಮೂರು ಬೌಟ್‌ಗಳಲ್ಲಿ ಸೋಲು ಅನುಭವಿಸಿದರು.

68 ಕೆಜಿ ವಿಭಾಗದಲ್ಲಿ ನಿಶಾ ಸ್ವಲ್ಪದರಲ್ಲೇ ಒಲಿಂಪಿಕ್ಸ್ ಟಿಕೆಟ್ ತಪ್ಪಿಸಿಕೊಂಡರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ 3–1ರ ಮುನ್ನಡೆಯಲ್ಲಿದ್ದರೂ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಕಿರ್ಗಿಸ್ತಾನದ ಮೀರಿಮ್ ಜುಮಾನ ಜರೋಯಾ ಎದುರು ಮಣಿದರು.

ಸೋನಂ ಮಲಿಕ್ (ಕೆಂಪು ಪೋಷಾಕು)—ಪಿಟಿಐ ಸಂಗ್ರಹ ಚಿತ್ರ



ಅನ್ಶು ಮಲಿಕ್ –ಫೇಸ್‌ಬುಕ್ ಚಿತ್ರ

## ಬೆರಗು ಮೂಡಿಸಿದ ರಾಹುಲ್ ದ್ರಾವಿಡ್ 'ಗೂಂಡಾ' ಅವತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಳ–ಸೌಮ್ಯ ಸ್ವಭಾವದ ಕ್ರಿಕೆಟಿಗ ರಾಹುಲ್ ದ್ರಾವಿಡ್ ಹೊಸಬಗೆಯ ಅವತಾರದಲ್ಲಿ ಕಾಣಿಸಿಕೊಂಡಿದ್ದು ಸಾಮಾಜಿಕ ತಾಣಗಳಲ್ಲಿ ಗಮನ ಸೆಳೆದಿದ್ದಾರೆ.

ಕ್ರೆಡಿಟ್ ಕಾರ್ಡ್ ಬಿಲ್ ಪಾವತಿಸುವ ಆನ್‌ಲೈನ್ ಅಪ್ಲಿಕೇಷನ್ ಒಂದರ ಜಾಹೀರಾತು ಇದಾಗಿದ್ದು ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಳ್ಳುವ ದ್ರಾವಿಡ್ ಕುಪಿತರಾಗಿ ಕಾರೊಂದರ ಗಾಜು ಒಡೆದು ಹಾಕುವ ಸನ್ನಿವೇಶ ಅದರಲ್ಲಿದೆ.

ಭಾರತ ತಂಡದ ಮಾಜಿ ಆಟಗಾರ, 'ಗೋಡೆ' ಖ್ಯಾತಿಯ ದ್ರಾವಿಡ್ ಈ ಜಾಹೀರಾತಿನಲ್ಲಿ 'ಇಂದಿರಾನಗರ್ ಕಾ ಗೂಂಡಾ' ಎಂಬ ಶೀರ್ಷಿಕೆಯೊಂದಿಗೆ ತೆರೆದ ಕಾರಿನಲ್ಲಿ ಬ್ಯಾಟ್ ಎತ್ತಿ ಹಿಡಿದು 'ನಾನು ಇಂದಿರಾ ನಗರದ ಗೂಂಡಾ' ಎಂದು ಹೇಳುವ ದೃಶ್ಯ ಇದೆ. ಇದರಲ್ಲಿ ದ್ರಾವಿಡ್ ನಟನೆ ಅನೇಕರನ್ನು ಅಚ್ಚರಿಗೊಳಿಸಿದೆ. ವಿರಾಟ್ ಕೊಹ್ಲಿ ಸೇರಿದಂತೆ ಹಲವು ಕ್ರಿಕೆಟಿಗರು ಪ್ರತಿಕ್ರಿಯಿಸಿದ್ದಾರೆ. ವಿವಿಧ ಕಂಪನಿಗಳು ಮತ್ತು ಕ್ರಿಕೆಟ್ ಪ್ರಿಯರು ಬಗೆಬಗೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. #IndiraNagarkaGunda ಮತ್ತು #Rahuldravid ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಟ್ರೆಂಡ್ ಆಗಿವೆ.

ಜಾಹೀರಾತಿನಲ್ಲಿ ರಾಹುಲ್ ದ್ರಾವಿಡ್ –ಟ್ವಿಟರ್ ಚಿತ್ರ

'ನನಗೆ ಸಾಕಷ್ಟು ಸ್ನೇಹಿತರಿದ್ದಾರೆ, ಇಂದಿರಾನಗರದಲ್ಲಿ ಅಪಾಯಕಾರಿ ಸ್ನೇಹಿತರೂ ಇದ್ದಾರೆ' ಎಂದು ಫುಟ್‌ಬಾಲ್ ಆಟಗಾರ ಗುರುಪ್ರೀತ್ ಸಿಂಗ್ ಟ್ವೀಟ್ ಮಾಡಿದ್ದಾರೆ.

'ದ್ರಾವಿಡ್ ಅವರ ಇಂತಹ ಮುಖ ವನ್ನು ನಾನು ಎಂದಿಗೂ ನೋಡಿಲ್ಲ' ಎಂದು ವಿರಾಟ್ ಕೊಹ್ಲಿ ಟ್ವೀಟ್ ಮಾಡಿದ್ದು 'ಈ ವ್ಯಕ್ತಿ ವಿಭಿನ್ನ ಮಟ್ಟದ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಒಂದೇ ಒಂದು ಜಾಹೀರಾತಿನಿಂದ ಅಂತರ್ಜಾಲ ಜಗತ್ತನ್ನೇ ತಲ್ಲಣಗೊಳಿಸಿದ್ದಾರೆ. ಸಿಟ್ಟಿನಿಂದ ಕೂಡದ ಅವರ ಭಂಗಿ ನೋಡಲು ಚೆನ್ನಾಗಿದೆ' ಎಂದು ಧ್ರುವ ಚೌಧರಿ ಎಂಬ ವ್ಯಕ್ತಿ ಅಭಿಪ್ರಾಯ ಪಟ್ಟಿದ್ದಾರೆ.

## ಬಾರ್ಟಿಗೆ ಸೋಲು

ಮಿಯಾಮಿ (ಎಎಫ್‌ಪಿ): ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ, ಆಸ್ಟ್ರೇಲಿಯಾದ ಆ್ಯಷ್ಲೆ ಬಾರ್ಟಿ ಅವರು ಚಾರ್ಲ್‌ಸ್ಟನ್ ಡಬ್ಲ್ಯುಟಿಎ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಲು ಅನುಭವಿಸಿದ್ದಾರೆ.

### ನಿಧನ ವಾರ್ತೆ

## ಹಾಕಿ ಕ್ರೀಡಾಪಟು ಮೆಹಬೂಬಸಾಬ್



ಗದಗ: ರಾಷ್ಟ್ರೀಯ ಮಾಜಿ ಹಾಕಿ ಆಟಗಾರ ಮೆಹಬೂಬಸಾಬ್ ದಸ್ತಗೀರಸಾಬ್ ಹುಲ್ಲೂರ (86) ಶನಿವಾರ ನಿಧನರಾದರು.

ಚಪ್ಪರಬಂಧ್ ಸಮಾಜದ ಹಿರಿಯರು ಹಾಗೂ ರೈಲ್ವೆ ಇಲಾಖೆಯ ನಿವೃತ್ತ ನೌಕರರಾಗಿದ್ದ ಮೆಹಬೂಬಸಾಬ್ ಅವರು 1972ರಿಂದ 80ರ ವರೆಗೆ ಸದರ್ನ್ ರೈಲ್ವೆ ಮತ್ತು ಸೌತ್ ಸೆಂಟ್ರಲ್ ರೈಲ್ವೆ ತಂಡದಿಂದ ರಾಷ್ಟ್ರಮಟ್ಟದ ಹಾಕಿ ಟೂರ್ನಿಗಳಲ್ಲಿ ಆಡಿದ್ದರು.

ಮೃತರಿಗೆ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 10.30ಕ್ಕೆ ಗದಗ ನಗರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಎಟಿಕೆಎಂಬಿ ಸೇರಿದ ಲಿಸ್ಟನ್ ಕೊಲ್ಯಾಕೊಗೆ ದಾಖಲೆ ಮೊತ್ತ

ಲಿಸ್ಟನ್

ಹೈದರಾಬಾದ್ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಎಟಿಕೆ ಮೋಹನ್ ಬಾಗನ್ ತಂಡ ಫಾರ್ವರ್ಡ್ ಆಟಗಾರ ಲಿಸ್ಟನ್ ಕೊಲ್ಯಾಕೊ ಅವರನ್ನು ದಾಖಲೆ ಮೊತ್ತ ನೀಡಿ ಬರಮಾಡಿಕೊಂಡಿದೆ. ಅವರು ಈ ವರೆಗೆ ಹೈದರಾಬಾದ್ ಎಫ್‌ಸಿಯಲ್ಲಿ ಆಡುತ್ತಿದ್ದರು.

ಕೊಲ್ಯಾಕೊ ಅವರನ್ನು ಎಟಿಕೆ ಮೋಹನ್ ಬಾಗನ್‌ಗೆ ಬಿಟ್ಟುಕೊಡಲು ಹೈದರಾಬಾದ್ ಎಫ್‌ಸಿ ಒಪ್ಪಿಕೊಂಡಿದೆ. ಆದರೆ ಈ ವರ್ಗಾವಣೆಗಾಗಿ ನಿಗದಿ ಮಾಡಿರುವ ಮೊತ್ತ ಎಷ್ಟು ಎಂಬುದನ್ನು ಬಹಿರಂಗಪಡಿಸಿಲ್ಲ. 22 ವರ್ಷದ ಈ ಆಟಗಾರ ಜೂನ್ ಒಂದರಂದು ಎಟಿಕೆ ಸೇರಲಿದ್ದಾರೆ.

'ಸುದೀರ್ಘ ಕಾಲದ ಸುಸ್ಥಿರತೆಯನ್ನು ಗಮನದಲ್ಲಿರಿಸಿಕೊಂಡು ಲಿಸ್ಟನ್ ಅವರನ್ನು ಬಿಟ್ಟುಕೊಡಲು ನಿರ್ಧರಿಸಿದ್ದೇವೆ. ಐಎಸ್‌ಎಲ್ ಇತಿಹಾಸದಲ್ಲೇ ದಾಖಲೆ ಮೊತ್ತಕ್ಕೆ ಅವರನ್ನು ಎಟಿಕೆ ಎಂಬಿ ಪಡೆದುಕೊಂಡಿದೆ' ಎಂದು ಹೈದರಾಬಾದ್ ಎಫ್‌ಸಿ ಫ್ರಾಂಚೈಸ್ ಪ್ರಕಟಣೆಯಲ್ಲಿ ತಿಳಿಸಿದೆ.

2020ರ ಜನವರಿಯಲ್ಲಿ ಲಿಸ್ಟನ್ ಅವರು ಹೈದರಾಬಾದ್ ಎಫ್‌ಸಿ ಸೇರಿದ್ದರು. ಈ ವರೆಗೆ ಒಟ್ಟು 23 ಪಂದ್ಯಗಳನ್ನು ಆಡಿದ್ದು ನಾಲ್ಕು ಗೋಲು ಗಳಿಸಿದ್ದಾರೆ. ಮೂರು ಗೋಲುಗಳಿಗೆ ಅವಕಾಶವನ್ನೂ ಮಾಡಿಕೊಟ್ಟಿದ್ದಾರೆ. ರಾಷ್ಟ್ರೀಯ ತಂಡದಲ್ಲೂ ಇದ್ದಾರೆ.

## ಟಿ20: ಪಾಕಿಸ್ತಾನ ತಂಡಕ್ಕೆ ಜಯ

ಜೊಹಾನ್ಸ್‌ಬರ್ಗ್ (ಎಎಫ್‌ಪಿ): ಪಾಕಿಸ್ತಾನ ತಂಡ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ಉತ್ತಮ ಆರಂಭ ಕಂಡಿದೆ. ಶನಿವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ನಾಲ್ಕು ವಿಕೆಟ್‌ಗಳಿಂದ ಆತಿಥೇಯರನ್ನು ಮಣಿಸಿದೆ.

**ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ:** 20 ಓವರ್‌ಗಳಲ್ಲಿ 6ಕ್ಕೆ 188 (ಏಡನ್ ಮರ್ಕರಂ 51, ಹೆನ್ರಿಕ್ ಕ್ಲಾಸೆನ್ 50, ಪೀಟ್ ವ್ಯಾನ್ ಬಿಲ್ಜಾನ್ 34; ಮೊಹಮ್ಮದ್ ನವಾಜ್ 21ಕ್ಕೆ2, ಹಸನ್ ಅಲಿ 28ಕ್ಕೆ2); **ಪಾಕಿಸ್ತಾನ:** 19.5 ಓವರ್‌ಗಳಲ್ಲಿ 6ಕ್ಕೆ 189 (ಮೊಹಮ್ಮದ್ ರಿಜ್ವಾನ್ 74, ಫಖರ್ ಜಮಾನ್ 27, ಫಹೀಂ ಅಶ್ರಫ್ 30; ಬ್ಯೂರನ್ ಹೆನ್ರಿಕ್ಸ್ 32ಕ್ಕೆ3, ತಬ್ರೇಜ್ ಸಂಶಿ 29ಕ್ಕೆ2). **ಫಲಿತಾಂಶ:** ಪಾಕಿಸ್ತಾನಕ್ಕೆ 4 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ:** ರಿಜ್ವಾನ್.

### ಸುರೇಶ್ ರೈನಾ ಅರ್ಧಶತಕ ವ್ಯರ್ಥ; ‘ಗುರು’ಗೆ ತಿರುಮಂತ್ರ ಹಾಕಿದ ರಿಷಭ್

# ಧವನ್–ಪೃಥ್ವಿ ಜೊತೆಯಾಟಕ್ಕೆ ಜಯ

ಮುಂಬೈ (ಪಿಟಿಐ): ಅನುಭವಿ ಶಿಖರ್ ಧವನ್ ಮತ್ತು ಯುವ ಆಟಗಾರ ಪೃಥ್ವಿ ಶಾ ಶತಕದ ಜೊತೆಯಾಟದ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ಬೌಲರ್‌ಗಳ ಆಟ ನಡೆಯಲಿಲ್ಲ.

ಮೊದಲ ವಿಕೆಟ್ ಜೊತೆಯಾಟದಲ್ಲಿ 138 ರನ್ ಗಳಿಸಿದ ಶಿಖರ್–ಪೃಥ್ವಿ ಆಟದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಗೆದ್ದಿತು. ಡೆಲ್ಲಿ ತಂಡದ ನಾಯಕನಾಗಿ ಮೊದಲ ಪಂದ್ಯವಾಡಿದ ರಿಷಭ್ ಪಂತ್ ಉತ್ತಮ ತಂತ್ರಗಾರಿಕೆಯಿಂದ ‘ಗುರು’ ಮಹೇಂದ್ರಸಿಂಗ್ ಧೋನಿ ಬಳಗದ ವಿರುದ್ಧ ಜಯಿಸಿದರು.

ವಾಂಖೆಡೆ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ರಿಷಭ್ ಫೀಲ್ಡಿಂಗ್ ಆಯ್ಕೆ ಮಾಡಿ ಕೊಂಡರು. ಚೆನ್ನೈ ತಂಡಕ್ಕೆ ಉತ್ತಮ ಆರಂಭ ಲಭಿಸಲಿಲ್ಲ. ಆದರೆ ಸುರೇಶ್ ರೈನಾ (54; 36ಎಸೆತ, 3 ಬೌಂಡರಿ, 4 ಸಿಕ್ಸರ್) ಅರ್ಧಶತಕದ ಬಲದಿಂದ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 188 ರನ್ ಗಳಿಸಿತು. 2019ರ ನಂತರ ಅವರು ಆಡುತ್ತಿರುವ ಐಪಿಎಲ್ ಟೂರ್ನಿಯ ಮೊದಲ ಪಂದ್ಯ ಇದು. ಹೋದ ವರ್ಷದ ಟೂರ್ನಿಯಲ್ಲಿ ಅವರು ಆಡಿರಲಿಲ್ಲ. ತಂಡವು ಏಳು ರನ್‌ಗಳಿಗೆ 2 ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಹಂತದಲ್ಲಿ ಕ್ರೀಸ್‌ಗೆ ಬಂದ ರೈನಾ ಇನಿಂಗ್ಸ್‌ಗೆ ಬಲ ತುಂಬಿದರು. ಆದರೆ, ಹೋರಾಟದ ಮೊತ್ತ ಬೆನ್ನತ್ತಿದ ಡೆಲ್ಲಿ ತಂಡವು 18.4 ಓವರ್‌ಗಳಲ್ಲಿ3 ವಿಕೆಟ್‌ಗಳಿಗೆ 190 ರನ್ ಗಳಿಸಿತು. ಶಿಖರ್ (85; 54ಎಸೆತ, 10ಬೌಂಡರಿ, 2ಸಿಕ್ಸರ್) ಮತ್ತು ಪೃಥ್ವಿ (72; 38ಎಸೆತ, 9ಬೌಂಡರಿ, 3ಸಿಕ್ಸರ್) ಜಯದ ಮುನ್ನುಡಿ ಬರೆದರು.

ಚೆನ್ನೈ ಫೀಲ್ಡಿಂಗ್ ಕೂಡ ಅಷ್ಟೇನೂ ಚುರುಕಾಗಿರಲಿಲ್ಲ.14ನೇ ಓವರ್‌ನಲ್ಲಿ ಪೃಥ್ವಿ ಔಟಾದಾಗ ರಿಷಭ್ ಪಂತ್ ತಮ್ಮ ಕ್ರಮಾಂಕ ಬದಲಿಸಿ ಕ್ರೀಸ್‌ಗೆ ಬಂದರು. ಅಜೇಯ 15 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

**ರೈನಾ ಅರ್ಧಶತಕ:** ಎಡಗೈ ಬ್ಯಾಟ್ಸ್‌ಮನ್ ಸುರೇಶ್ ರೈನಾ ದೀರ್ಘ ಕಾಲದಿಂದ ಕ್ರಿಕೆಟ್‌ನಿಂದ ದೂರವಿದ್ದರೂ, ಅಂತರರಾಷ್ಟ್ರೀಯ ಕ್ರಿಕೆಟ್ ನಿವೃತ್ತಿ ಪಡೆದಿದ್ದರೂ ತಮ್ಮ ಕೌಶಲ ಮತ್ತು ಸಾಮರ್ಥ್ಯ ಮಂಕಾಗಿಲ್ಲವೆಂಬುದನ್ನು ತೋರಿಸಿಕೊಟ್ಟರು.

ಅವರು ಮೊಯಿನ್ ಅಲಿಯೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು. ಎರಡು ಸಿಕ್ಸರ್, ನಾಲ್ಕು ಬೌಂಡರಿ ಬಾರಿಸಿದ ಅಲಿ, 24 ಎಸೆತಗಳಲ್ಲಿ 36 ರನ್ ಗಳಿಸಿದರು.

ಸುರೇಶ್ ರೈನಾ –ಪಿಟಿಐ ಚಿತ್ರ

**ಮೊದಲ ಪಂದ್ಯದಲ್ಲೇ ಜಯ ಗಳಿಸಿದ್ದರಿಂದ ತಂಡಕ್ಕೆ ನೈತಿಕ ಬಲ ಬಂದಿದೆ. ಮಧ್ಯದಲ್ಲಿ ಸ್ವಲ್ಪ ಆತಂಕ ಕಾಡಿತ್ತು. ಆದರೆ ಆವೇಶ್ ಖಾನ್ ಅದನ್ನು ನಿವಾರಿಸಿದರು.**

**ರಿಷಭ್ ಪಂತ್** ಡೆಲ್ಲಿ ತಂಡದ ನಾಯಕ

ಮೋಯಿನ್ ಅಲಿ ಔಟಾದ ನಂತರ ರೈನಾ ಮತ್ತು ಅಂಬಟಿ ರಾಯುಡು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 63 ರನ್‌ಗಳು ಸೇರಿಸಿದರು.

ರೈನಾ 32 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅದರಲ್ಲಿ ನಾಲ್ಕು ಅಮೋಘ ಸಿಕ್ಸರ್ ಮತ್ತು ಮೂರು ಬೌಂಡರಿಗಳಿದ್ದವು. ಅಂಬಟಿ 14ನೇ ಓವರ್‌ನಲ್ಲಿ ಟಾಮ್ ಕರನ್ ಎಸೆತವನ್ನು ಆಡುವಲ್ಲಿ ತಪ್ಪು ಮಾಡಿದರು. ಅವರು ಶಿಖರ್ ಧವನ್‌ಗೆ ಕ್ಯಾಚಿತ್ತರು. 16ನೇ ಓವರ್‌ನಲ್ಲಿ ರೈನಾ ರನ್‌ಔಟ್ ಆದರು. ನಾಯಕ ಮಹೇಂದ್ರಸಿಂಗ್ ಧೋನಿ ತಾವೆದುರಿಸಿದ ಎರಡನೇ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಸೊನ್ನೆ ಸುತ್ತಿದರು.

**ಜಡೇಜ–ಸ್ಯಾಮ್ ಅಬ್ಬರ:** ಸಾಧಾರಣ ಮೊತ್ತಕ್ಕೆ ಕುಸಿಯುವ ಭೀತಿಯಲ್ಲಿದ್ದ ತಂಡಕ್ಕೆ ಆಲ್‌ರೌಂಡರ್‌ಗಳಾದ ಜಡೇಜ , (ಔಟಾಗದೇ 26; 17ಎ) ಮತ್ತು ಸ್ಯಾಮ್ ಕರನ್ (34; 15 ಎಸೆತ) ಜೀವ ತುಂಬಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದರು.

ಶಿಖರ್ ಧವನ್ (ಬಲ) ಮತ್ತು ಪೃಥ್ವಿ ಶಾ –ಪಿಟಿಐ ಚಿತ್ರ

## ಸ್ಕೋರ್‌ಕಾರ್ಡ್

**ಚೆನ್ನೈ ಸೂಪರ್ ಕಿಂಗ್ಸ್ 7ಕ್ಕೆ 188 (20 ಓವರ್‌ಗಳಲ್ಲಿ)**

| | |
|---|---|
| ಋತುರಾಜ್ ಗಾಯಕವಾಡ್ ಸಿ ಶಿಖರ್ ಧವನ್ ಬಿ ಕ್ರಿಸ್ ವೋಕ್ಸ್ | 5 |
| ಫಾಫ್ ಡುಪ್ಲೆಸಿ ಎಲ್‌ಬಿಡಬ್ಲ್ಯು ಆವೇಶ್ ಖಾನ್ | 0 |
| ಮೋಯಿನ್ ಅಲಿ ಸಿ ಶಿಖರ್ ಧವನ್ ಬಿ ಆರ್.ಅಶ್ವಿನ್ | 36 |
| ಸುರೇಶ್ ರೈನಾ ರನೌಟ್ (ವೋಕ್ಸ್/ಪಂತ್) | 54 |
| ಅಂಬಟಿ ರಾಯುಡು ಸಿ ಶಿಖರ್ ಧವನ್ ಬಿ ಟಾಮ್ ಕರನ್ | 23 |
| ರವೀಂದ್ರ ಜಡೇಜ ಔಟಾಗದೆ | 26 |
| ಮಹೇಂದ್ರ ಸಿಂಗ್ ಧೋನಿ ಬಿ ಆವೇಶ್ ಖಾನ್ | 0 |
| ಸ್ಯಾಮ್ ಕರನ್ ಬಿ ಕ್ರಿಸ್ ವೋಕ್ಸ್ | 34 |
| ಇತರೆ (ಲೆಗ್‌ಬೈ 7, ನೋಬಾಲ್ 1, ವೈಡ್ 2) | 10 |

**ವಿಕೆಟ್ ಪತನ:** 1–7 (ಫಾಫ್‌ಡುಪ್ಲೆಸಿ, 1.4), 2–7 (ಋತುರಾಜ್‌ಗಾಯಕವಾಡ್, 2.1), 3–60 (ಮೋಯಿನ್‌ಅಲಿ, 8.3), 4–123 (ಅಂಬಟಿ ರಾಯುಡು, 13.5), 5–137 (ಸುರೇಶ್‌ರೈನಾ, 15.1), 6–137 (ಮಹೇಂದ್ರಸಿಂಗ್‌ಧೋನಿ, 15.3), 7–188 (ಸ್ಯಾಮ್‌ಕರನ್, 19.6)

**ಬೌಲಿಂಗ್:** ಕ್ರಿಸ್‌ವೋಕ್ಸ್3–0–18–2, ಆವೇಶ್‌ಖಾನ್4–0–23–2, ಆರ್.ಅಶ್ವಿನ್4–0–47–1, ಟಾಮ್‌ಕರನ್4–0–40–1, ಅಮಿತ್‌ಮಿಶ್ರಾ3–0–27–0, ಮಾರ್ಕಸ್‌ಸ್ಟೋಯಿನಿಸ್2–0–26–0

**ಡೆಲ್ಲಿ ಕ್ಯಾಪಿಟಲ್ಸ್ 3ಕ್ಕೆ 190 (18.4 ಓವರ್‌ಗಳಲ್ಲಿ)**

| | |
|---|---|
| ಪೃಥ್ವಿ ಶಾ ಸಿ ಮೋಯಿನ್ ಅಲಿ ಬಿ ಡ್ವೇನ್ ಬ್ರಾವೊ | 72 |
| ಶಿಖರ್ ಧವನ್ ಎಲ್‌ಬಿಡಬ್ಲ್ಯು ಶಾರ್ದೂಲ್ ಠಾಕೂರ್ | 85 |
| ರಿಷಭ್ ಪಂತ್ ಔಟಾಗದೆ | 15 |
| ಮಾರ್ಕಸ್ ಸ್ಟೋಯಿನಿಸ್ ಸಿ ಸ್ಯಾಮ್ ಕರನ್ ಬಿ ಶಾರ್ದೂಲ್ ಠಾಕೂರ್ | 14 |
| ಶಿಮ್ರಾನ್ ಹೆಟ್ಮೆಯರ್ ಔಟಾಗದೆ | 0 |
| ಇತರೆ (ನೋಬಾಲ್ 1, ವೈಡ್ 3) | 4 |

**ವಿಕೆಟ್ ಪತನ:** 1–138 (ಪೃಥ್ವಿ ಶಾ, 13.3), 2–167 (ಶಿಖರ್ ಧವನ್, 16.3), 3–186 (ಮಾರ್ಕಸ್ ಸ್ಟೋಯಿನಿಸ್, 18.3)

**ಬೌಲಿಂಗ್:** ದೀಪಕ್ ಚಾಹರ್ 4–0–36–0, ಸ್ಯಾಮ್ ಕರನ್ 2–0–24–0, ಶಾರ್ದೂಲ್ ಠಾಕೂರ್ 3.4–0–53–2, ರವೀಂದ್ರ ಜಡೇಜ 2–0–16–0, ಮೋಯಿನ್ ಅಲಿ 3–0–33–0, ಡ್ವೇನ್ ಬ್ರಾವೊ 4–0–28–1

**ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಏಳು ವಿಕೆಟ್‌ಗಳ ಗೆಲುವು

# ಮಾರ್ಗನ್‌ಗೆ ವಾರ್ನರ್ ಸವಾಲು

ಚೆನ್ನೈ (ಪಿಟಿಐ): ಏಯಾನ್ ಮಾರ್ಗನ್ ನಾಯಕತ್ವದಲ್ಲಿ ಹೊಸ ಹುರುಪಿನಲ್ಲಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಭಾನುವಾರ ಐಪಿಎಲ್ ಟೂರ್ನಿಯಲ್ಲಿ ತನ್ನ ಅಭಿಯಾನ ಆರಂಭಿಸಲಿದೆ. ಇಲ್ಲಿಯ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಹಣಾಹಣಿಯಲ್ಲಿ ಆ ತಂಡಕ್ಕೆ ಸನ್‌ರೈಸರ್ಸ್ ಹೈದರಾಬಾದ್ ಸವಾಲು ಎದುರಾಗಿದೆ.

ಕಳೆದ ವರ್ಷ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ನಡೆದ ಟೂರ್ನಿಯ ಮಧ್ಯದ ಅವಧಿಯಲ್ಲಿ ಇಂಗ್ಲೆಂಡ್‌ನ ಮಾರ್ಗನ್ ಅವರು ದಿನೇಶ್ ಕಾರ್ತಿಕ್ ಅವರಿಂದ ನಾಯಕತ್ವ ವಹಿಸಿಕೊಂಡಿದ್ದರು. ಆ ಆವೃತ್ತಿಯ ಲೀಗ್‌ನ ಕೊನೆಯಲ್ಲಿ ಕೋಲ್ಕತ್ತ ತಂಡವು ಹೈದರಾಬಾದ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳಷ್ಟೇ ಪಾಯಿಂಟ್ಸ್ ಗಳಿಸಿದ್ದರೂ ರನ್‌ರೇಟ್ ಕೊರತೆಯಿಂದ ಪ್ಲೇ ಆಫ್ ತಲುಪಿರಲಿಲ್ಲ.

ಈಗ ಪೂರ್ಣಪ್ರಮಾಣದಲ್ಲಿ ತಂಡದ ಸಾರಥ್ಯ ವಹಿಸಿರುವ ಮಾರ್ಗನ್, ಐಪಿಎಲ್‌ನಲ್ಲಿ ಎರಡು ಬಾರಿ ಚಾಂಪಿಯನ್ ಆಗಿರುವ ತಂಡದ ವೈಭವದ ದಿನಗಳನ್ನು ಮರಳಿಸುವ ವಿಶ್ವಾಸದಲ್ಲಿದ್ದಾರೆ.

ಅಗ್ರಶ್ರೇಯಾಂಕದ ಶುಭಮನ್ ಗಿಲ್, ರಾಹುಲ್ ತ್ರಿಪಾಠಿ, ನಿತೀಶ್ ರಾಣಾ, ದಿನೇಶ್ ಕಾರ್ತಿಕ್ ಮೇಲೆ ಕೋಲ್ಕತ್ತ ಭರವಸೆ ಇಟ್ಟುಕೊಂಡಿದೆ. ನಾಯಕ ಮಾರ್ಗನ್, ವೆಸ್ಟ್ ಇಂಡೀಸ್‌ನ ಆ್ಯಂಡ್ರೆ ರಸೆಲ್ ಸ್ಫೋಟಕ ಆಟವಾಡುವ ಸಾಮರ್ಥ್ಯ ಉಳ್ಳವರು. ಆಲ್‌ರೌಂಡರ್ ಸುನಿಲ್ ನಾರಾಯಣ್ ಅವರಿಂದಲೂ ತಂಡವು ಉತ್ತಮ ಸಾಮರ್ಥ್ಯ ನಿರೀಕ್ಷಿಸುತ್ತಿದೆ.

ನಿಧಾನಗತಿಯ ಚೆಪಾಕ್ ಪಿಚ್‌ನಲ್ಲಿ 40ರ ಹರೆಯದ ಸ್ಪಿನ್ನರ್ ಹರಭಜನ್ ಸಿಂಗ್ ತೋರುವ ಸಾಮರ್ಥ್ಯದ ಮೇಲೂ ಎಲ್ಲರ ಕಣ್ಣು ನೆಟ್ಟಿದೆ. ಇನ್ನೊಬ್ಬ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರ ಫಿಟ್‌ನೆಸ್ ಕಳವಳಕ್ಕೆ ಕಾರಣವಾಗಿದೆ.

ಸ್ಥಿರ ಆಟದ ಮೂಲಕ ಗಮನಸೆಳೆಯುವ ಸನ್‌ರೈಸರ್ಸ್ ಹೈದರಾಬಾದ್, ಕಳೆದ ವರ್ಷ ಟೂರ್ನಿಯ ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಡೆಲ್ಲಿ ಎದುರು ಸೋತಿತ್ತು. ಈಗ ಅನುಭವಿ ವೇಗಿ ಭುವನೇಶ್ವರ್ ಕುಮಾರ್ ಮರಳಿರುವುದು ತಂಡದ ಬಲ ವೃದ್ಧಿಸಿದೆ. ಯುಎಇಯಲ್ಲಿ ನಡೆದ ಟೂರ್ನಿಯಲ್ಲಿ ಗಾಯಗೊಂಡಿದ್ದ ಅವರು ಕೇವಲ ನಾಲ್ಕು ಪಂದ್ಯಗಳಲ್ಲಿ ಮಾತ್ರ ಕಣಕ್ಕಿಳಿದಿದ್ದರು.

‘ಭುವಿ’ ಅವರಿಗೆ ಯಾರ್ಕರ್ ಪರಿಣಿತ ಟಿ.ನಟರಾಜನ್ ಬೆಂಬಲ ನೀಡಲಿದ್ದಾರೆ. ಇವರೊಂದಿಗೆ ಅಫ್ಗಾನಿಸ್ತಾನದ ರಶೀದ್ ಖಾನ್ ಅವರ ಸ್ಪಿನ್ ಕೂಡ ಜೊತೆಯಾಗಲಿದ್ದು, ಬೌಲಿಂಗ್ ವಿಭಾಗ ಸಮತೋಲನದಿಂದ ಕೂಡಿದಂತಿದೆ. ಬ್ಯಾಟಿಂಗ್‌ನಲ್ಲಿ ನಾಯಕ ವಾರ್ನರ್, ಅದ್ಭುತ ಲಯದಲ್ಲಿರುವ ಜಾನಿ ಬೆಸ್ಟೊ ತಂಡದ ಭರವಸೆಯಾಗಿದ್ದು, ಕೇನ್ ವಿಲಿಯಮ್ಸನ್, ಕನ್ನಡಿಗ ಮನೀಷ್ ಪಾಂಡೆ ಮಿನುಗುವ ನಿರೀಕ್ಷೆ ಇದೆ.

ಏಯಾನ್ ಮಾರ್ಗನ್–ಪಿಟಿಐ ಚಿತ್ರ




**ಆರಂಭ:** ರಾತ್ರಿ7.30
**ಸ್ಥಳ:** ಎಂ.ಎ.ಚಿದಂಬರಂ ಕ್ರೀಡಾಂಗಣ, ಚೆನ್ನೈ,
**ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

## ‘ಎಬಿಡಿ ಬ್ಯಾಟಿಂಗ್ ಶೈಲಿಯಲ್ಲಿ ಐಪಿಎಲ್ ಲೋಗೊ’

ಚೆನ್ನೈ: ಐಪಿಎಲ್ ಟೂರ್ನಿಯ ಲೋಗೊವನ್ನು ದಕ್ಷಿಣ ಆಫ್ರಿಕಾದ ಬ್ಯಾಟ್ಸ್‌ಮನ್ ಎಬಿ ಡಿವಿಲಿಯರ್ಸ್ ಅವರಿಗಾಗಿಯೇ ವಿನ್ಯಾಸಗೊಳಿಸಿದಂತಿದೆ ಎಂದು ಭಾರತ ತಂಡದ ಮಾಜಿ ಆಟಗಾರ ವೀರೇಂದ್ರ ಸೆಹ್ವಾಗ್ ಅಭಿಪ್ರಾಯಪಟ್ಟಿದ್ದಾರೆ.

ಐಪಿಎಲ್ ಲೋಗೊ, ಡಿ ವಿಲಿಯರ್ಸ್ ಅವರ ಹೊಡೆತದ ಭಂಗಿಯನ್ನು ಹೋಲುತ್ತದೆ. ಇದೇ ಕಾರಣಕ್ಕಾಗಿ ವೀರೂ ಇಂತಹ ಹೇಳಿಕೆಯನ್ನು ನೀಡಿದ್ದಾರೆ.

ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ಗೆಲುವಿನಲ್ಲಿ ಎಬಿಡಿ ನಿರ್ಣಾಯಕ ಪಾತ್ರ ವಹಿಸಿದ್ದರು. ಕೇವಲ 27 ಎಸೆತಗಳಲ್ಲಿ ಬಿರುಸಿನ 48 ರನ್ ಗಳಿಸಿ ತಂಡದ ಗೆಲುವನ್ನು ಸುಲಭಗೊಳಿಸಿದ್ದರು. ಈ ಕುರಿತು ಟ್ವೀಟ್ ಮಾಡಿರುವ ಸೆಹ್ವಾಗ್, ‘ಸಂಕಲ್ಪ ಶಕ್ತಿ ಎಂಬುದು ಡಿ ವಿಲಿಯರ್ಸ್ ಸಾಮರ್ಥ್ಯಕ್ಕೆ ಸಮಾನವಾಗಿದೆ. ಐಪಿಎಲ್ ಲೋಗೊವನ್ನು ಎಬಿ ಡಿ ಅವರಿಗಾಗಿ ಪರೋಕ್ಷವಾಗಿ ವಿನ್ಯಾಸಗೊಳಿಸಿರುವುದರಲ್ಲಿ ಅಚ್ಚರಿಯಿಲ್ಲ. ಅವರದ್ದು ಚಾಂಪಿಯನ್ ಆಟ‘ ಎಂದು ಹೊಗಳಿಕೆಯ ಮಾತುಗಳನ್ನಾಡಿದ್ದಾರೆ.



ಡಿವಿಲಿಯರ್ಸ್

## ಖಡ್ಗಮೃಗಗಳ ರಕ್ಷಣೆಗೆ ರೋಹಿತ್ ಸಂದೇಶ

ಚೆನ್ನೈ: ಮುಂಬೈ ಇಂಡಿಯನ್ಸ್ ನಾಯಕ ರೋಹಿತ್ ಶರ್ಮಾ ಅಳಿವಿನಂಚಿನಲ್ಲಿರುವ ಖಡ್ಗಮೃಗಗಳ ರಕ್ಷಣೆಗೆ ಬೆಂಬಲ ಸೂಚಿಸಿದ್ದಾರೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಅವರು ವಿಶೇಷ ರೀತಿಯಲ್ಲಿ ವಿನ್ಯಾಸಗೊಳಿಸಿದ ಶೂಗ ಳನ್ನು ಧರಿಸಿದ್ದರು. ಅಲ್ಲದೆ ‘ಸೇವ್ ದ ರೈನೋ‘ ಎಂಬ ಸಂದೇಶವನ್ನು ಸಾರಿದ್ದರು.

ಹರ್ಷಲ್ ಪಟೇಲ್ ಅವರ ಬೌಲಿಂಗ್ ಶೈಲಿ –ಪಿಟಿಐ ಚಿತ್ರ

## ಡೆತ್ ಓವರ್ ಜವಾಬ್ದಾರಿ ವಹಿಸಲಾಗಿತ್ತು: ಹರ್ಷಲ್

ಚೆನ್ನೈ (ಪಿಟಿಐ): ‘ತಂಡದ ಅಂತಿಮ 11 ಆಟಗಾರರನ್ನು ಆಯ್ಕೆ ಮಾಡುವಾಗಲೇ ಡೆತ್ ಓವರ್ ಬೌಲಿಂಗ್ ಮಾಡುವ ಜವಾಬ್ದಾರಿ ನನ್ನದು ಎಂದು ತಿಳಿಸಲಾಗಿತ್ತು. ಈ ಯೋಜನೆ ಯಶಸ್ಸಿಗೆ ಕಾರಣವಾಯಿತು’ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಮಧ್ಯಮ ವೇಗಿ ಹರ್ಷಲ್ ಪಟೇಲ್ ಹೇಳಿದರು.

ಶುಕ್ರವಾರ ನಡೆದ ಐಪಿಎಲ್ 14ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ರೋಚಕ ಜಯಕ್ಕೆ ಕಾರಣರಾದವರಲ್ಲಿ ಹರ್ಷಲ್ ಪಟೇಲ್ ಒಬ್ಬರು. ಬ್ಯಾಟ್ಸ್‌ಮನ್ ಎಬಿ ಡಿವಿಲಿಯರ್ಸ್ ಅವರ ಸ್ಫೋಟಕ ಬ್ಯಾಟಿಂಗ್ ಕೂಡ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ಜೀವನಶ್ರೇಷ್ಠ 27ಕ್ಕೆ5 ವಿಕೆಟ್ ಉರುಳಿಸಿದ ಹರ್ಷಲ್ ಪಟೇಲ್ ಪಂದ್ಯದ ನಂತರ ಮಾತನಾಡಿ ‘ಕೊನೆಯಲ್ಲಿ ಎರಡು ಓವರ್‌ಗಳನ್ನು ನಾನು ಹಾಕಬೇಕು ಎಂದು ಮೊದಲೇ ತಿಳಿಸಲಾಗಿತ್ತು. ಯಾವ ಆಟಗಾರನಿಗೆ ಯಾವ ರೀತಿಯಲ್ಲಿ ಬೌಲಿಂಗ್ ಮಾಡಬೇಕು ಎಂದು ತಂತ್ರಗಳನ್ನು ಹೆಣೆದು ಸಿದ್ಧನಾಗಿರಲು ಈ ಯೋಜನೆ ನೆರವಾಯಿತು’ ಎಂದು ಹೇಳಿದರು.

ಇನಿಂಗ್ಸ್‌ನ 18 ಮತ್ತು 20ನೇ ಓವರ್‌ಗಳನ್ನು ಹಾಕಿದ ಹರ್ಷಲ್ ಪಟೇಲ್ ‘ಪೇಸ್‌ನಲ್ಲಿ ಬದಲಾವಣೆ ಮಾಡಿದ್ದು ಮತ್ತು ನಿಧಾನಗತಿಯ ಯಾರ್ಕರ್‌ಗಳನ್ನು ಹಾಕಿದ್ದು ನನ್ನ ಯಶಸ್ಸಿನ ಗುಟ್ಟು.

ಇನಿಂಗ್ಸ್‌ನ ಒಂದು ಹಂತದಲ್ಲಿ ಚೆಂಡು ರಿವರ್ಸ್ ಸ್ವಿಂಗ್ ಆಗತೊಡಗಿತ್ತು. ಆದ್ದರಿಂದ ಯಾರ್ಕರ್ ಮತ್ತು ನಿಧಾನಗತಿಯ ಬೌಲಿಂಗ್ ಮಾಡಲು ಅನುಕೂಲವಾಯಿತು’ ಎಂದು ಹೇಳಿದರು.

‘ಹರ್ಷಲ್ ಪಟೇಲ್ ತಮಗೆ ವಹಿಸಿದ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ಅವರು ತಂಡದ ಡೆತ್ ಬೌಲರ್ ಆಗಿಯೇ ಮುಂದುವರಿಯಲಿದ್ದಾರೆ’ ಎಂದು ನಾಯಕ ವಿರಾಟ್ ಕೊಹ್ಲಿ ಹೇಳಿದರು.

### 6ನೇ ಬೌಲರ್ ಇರಬೇಕಾಗಿತ್ತು: ಲಿನ್

ಆರನೇ ಬೌಲರ್ ಇಲ್ಲದ್ದು ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು ಎಂದು ಮುಂಬೈ ಇಂಡಿಯನ್ಸ್ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಕ್ರಿಸ್ ಲಿನ್ ಅಭಿಪ್ರಾಯಪಟ್ಟರು. ತಂಡದ ಪರವಾಗಿ 35 ಎಸೆತಗಳಲ್ಲಿ 49 ರನ್ ಗಳಿಸಿದ್ದ ಲಿನ್, ಭುಜದ ನೋವಿನಿಂದಾಗಿ ಹಾರ್ದಿಕ್ ಪಾಂಡ್ಯ ಅವರಿಗೆ ಬೌಲಿಂಗ್ ಜವಾಬ್ದಾರಿ ವಹಿಸಲಿಲ್ಲ ಎಂದರು. ನಾಯಕ ರೋಹಿತ್ ಶರ್ಮಾ ಅವರ ರನ್ ಔಟ್‌ಗೆ ಸಂಬಂಧಿಸಿ ಮಾತನಾಡಿದ ಅವರು ‘ಆಟದಲ್ಲಿ ಇವೆಲ್ಲ ಸಾಮಾನ್ಯ. ಸ್ವಲ್ಪ ಗೊಂದಲಕ್ಕೆ ಒಳಗಾದ ಕಾರಣ ರೋಹಿತ್ ಅವರ ರನ್ ಔಟ್‌ಗೆ ನಾನು ಕಾರಣವಾಗಬೇಕಾಯಿತು’ ಎಂದರು.